ಗುರುವಾರ, ಡಿಸೆಂಬರ್ 5, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 336 | ಪುಟ 16


• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಕೋಕೋ ಉತ್ಪಾದನೆ, ಚಾಕೊಲೇಟ್ ಉದ್ಯಮದ ಇತಿ–ಮಿತಿ



ಆಳ–ಅಗಲ
ಕಿರಾಣಿ ಅಂಗಡಿಗಳಿಗೆ ಕ್ವಿಕ್ ಕಾಮರ್ಸ್ ಸವಾಲು

ಅಂಗವಿಕಲರ ಸೌಲಭ್ಯ: ಅಂಗೈನಲ್ಲೇ ದರ್ಶನ 4

ಎಸ್ಎಡಿ ನಾಯಕ ಬಾದಲ್ ಹತ್ಯೆಗೆ ಯತ್ನ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,956	24,467	₹80,230 (ಬೆಂಗಳೂರು)	₹95,800 (ಬೆಂಗಳೂರು)	84.75

ಮುಡಾ: ಕಿಡಿ ಹಚ್ಚಿದ ಇ.ಡಿ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಜಾರಿ ನಿರ್ದೇಶನಾಲಯವು ಲೋಕಾಯುಕ್ತಕ್ಕೆ ಬರೆದ ಪತ್ರ, ಮತ್ತೆ ರಾಜಕೀಯ ಸಮರದ ಕಿಡಿ ಹಚ್ಚಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಸರ್ಕಾರದ ಸಚಿವರು ಇ.ಡಿ. ವಿರುದ್ಧ ತಿರುಗಿಬಿದ್ದಿದ್ದರೆ, ವಿಪಕ್ಷ ನಾಯಕರು ಕೇಂದ್ರದ ತನಿಖಾ ಸಂಸ್ಥೆಯ ಬೆಂಬಲಕ್ಕೆ ನಿಂತಿದ್ದಾರೆ.

ನ್ಯಾಯಾಲಯದ ಮೇಲೆ ಪ್ರಭಾವ ಬೀರಲು 'ಇ.ಡಿ' ಪತ್ರ: ಸಿಎಂ



ಸಿದ್ದರಾಮಯ್ಯ

ಕೆ.ಆರ್.ಪೇಟೆ (ಮಂಡ್ಯ): 'ಹೈಕೋರ್ಟ್‌ನಲ್ಲಿ ನಮ್ಮ ಅರ್ಜಿ ವಿಚಾರಣೆಗೆ ಬರುವ ಹಿಂದಿನ ದಿನವೇ ಜಾರಿ ನಿರ್ದೇಶನಾಲಯದವರು ಲೋಕಾಯುಕ್ತಕ್ಕೆ ಪತ್ರ ಬರೆದಿದ್ದಾರೆ. ನ್ಯಾಯಾಲಯದ ಮೇಲೆ ಪ್ರಭಾವ ಬೀರುವ ಉದ್ದೇಶ ಇದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಇಲ್ಲಿನ ಕೋಡಿಮಾರನಹಳ್ಳಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇ.ಡಿ.ಯವರಿಗೆ ತನಿಖೆ ಮಾಡಲು ಅಧಿಕಾರವೇ ಇಲ್ಲ. ತನಿಖೆ ಬಳಿಕ ವರದಿಯನ್ನು ಲೋಕಾಯುಕ್ತಕ್ಕೆ ನೀಡಬಹುದಿತ್ತು. ಅದನ್ನು ಬಿಟ್ಟು, ಲೋಕಾಯುಕ್ತಕ್ಕೆ ಪತ್ರ ಬರೆಯುವುದು ಮತ್ತು ಮಾಧ್ಯಮಗಳಿಗೆ ಸೋರಿಕೆ ಮಾಡುವುದರ ಹಿಂದೆ ರಾಜಕೀಯ ದುರುದ್ದೇಶವಿದೆ' ಎಂದು ದೂರಿದರು.

'ಈ ವಿಚಾರಕ್ಕೆ ಸಂಬಂಧಿಸಿ ನಾಳೆ (ಡಿ.5) ನಮ್ಮ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬರುತ್ತಿದೆ. ಇದಕ್ಕೆ ಒಂದು ದಿನ ಮೊದಲು ಮಾಧ್ಯಮಗಳಲ್ಲಿ ಪ್ರಚಾರ ಮಾಡಿರುವುದರ ಹಿಂದೆ, ನ್ಯಾಯಾಲಯವನ್ನು ಪೂರ್ವಗ್ರಹದ ನಿಲುವಿಗೆ ತರುವ ದುರುದ್ದೇಶವಿದೆ. ಈ ಪ್ರಕರಣದಲ್ಲಿ ಯಾವುದೇ ಸತ್ಯಾಂಶವಿಲ್ಲ' ಎಂದು ಪ್ರತಿಪಾದಿಸಿದರು.

'ಮಂತ್ರಿಮಂಡಲ ಪುನರ್‌ರಚನೆ ಮಾಡ್ತೀವಿ ಅಂತ ನಾನು ಹೇಳಿದ್ನಾ? ನೀವೇ ನಿಮ್ಮ ಪಾಡಿಗೆ ಕಲ್ಪಿಸಿಕೊಂಡು ಸುದ್ದಿ ಮಾಡಿದ್ರಿ. ಈಗ ನನ್ನ ಬಳಿ ಉತ್ತರ ಕೇಳಿದರೆ ಹೇಗೆ? ಈ ಬಗ್ಗೆ ಹೈಕಮಾಂಡ್ ಕೂಡ ಸೂಚನೆ ಕೊಟ್ಟಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

'ಅಕ್ರಮ: ಮರೀಗೌಡ, ದಿನೇಶ ಭಾಗಿ'

ಬೆಂಗಳೂರು: ಭೂಮಾಲೀಕರಿಗೆ 50:50ರ ಅನುಪಾತದಲ್ಲಿ ಪರಿಹಾರ ನಿವೇಶನ ನೀಡುವ ನಿಯಮವನ್ನು ರದ್ದುಪಡಿಸಿದ ಹಲವು ತಿಂಗಳ ನಂತರವೂ ಮುಡಾ 252 ನಿವೇಶನಗಳನ್ನು ಅಕ್ರಮವಾಗಿ ಮಂಜೂರು ಮಾಡಿದೆ ಎಂಬುದನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಪತ್ತೆ ಮಾಡಿದೆ.

'ಆ ಅವಧಿಯಲ್ಲಿ ಮುಡಾ ಅಧ್ಯಕ್ಷರಾಗಿದ್ದ ಕೆ.ಮರೀಗೌಡ ಮತ್ತು ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ಈ ಅಕ್ರಮದಲ್ಲಿ ನೇರವಾಗಿ ಭಾಗಿಯಾಗಿದ್ದಾರೆ' ಎಂದು ಇ.ಡಿ ಹೇಳಿದೆ. ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಮುಡಾ 14 ನಿವೇಶನ ಹಂಚಿಕೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿಯು ಕರ್ನಾಟಕ ಲೋಕಾಯುಕ್ತಕ್ಕೆ ನೀಡಿರುವ ವರದಿಯಲ್ಲಿ, ಇದನ್ನು ಉಲ್ಲೇಖಿಸಿದೆ.

'ಭೂಸ್ವಾಧೀನ ಮಾಡಿಕೊಳ್ಳಲಾದ ಜಮೀನುಗಳಿಗೆ 50:50ರ ಅನುಪಾತದಲ್ಲಿ ಪರಿಹಾರ ನಿವೇಶನಗಳನ್ನು ನೀಡುವ ಸಂಬಂಧ 'ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಿಯಮಗಳು–2009'ಕ್ಕೆ 2015ರಲ್ಲಿ ತಿದ್ದುಪಡಿ ತರಲಾಗಿತ್ತು. ಈ ನಿಯಮದ ಅನ್ವಯವೇ ಸಾವಿರಾರು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. 2023ರ ಅಕ್ಟೋಬರ್‌ನಲ್ಲಿ 50:50ರ ಅನುಪಾತವನ್ನು ರದ್ದುಪಡಿಸಲಾಗಿತ್ತು' ಎಂದು ಇ.ಡಿ ವಿವರಿಸಿದೆ. 'ಹಿಂದಿನ ವರ್ಷವೇ ನಿಯಮ ರದ್ದಾಗಿದ್ದರೂ, 2024ರ ಮಾರ್ಚ್ ಅಂತ್ಯದವರೆಗೆ 252 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಆದರೆ ಈ ಹಂಚಿಕೆಗಳಿಗೆ ಯಾವುದೇ ಅನುಮತಿ ಪಡೆದಿಲ್ಲ. ಮರೀಗೌಡ ಮತ್ತು ದಿನೇಶ್ ಕುಮಾರ್ ಅವರ ಮೌಖಿಕ ಸೂಚನೆಯಂತೆ ಈ ಪ್ರಕ್ರಿಯೆ ನಡೆಸಲಾಗಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದೆ.

4ನೇ ಪುಟ ನೋಡಿ

'ಭಯದಿಂದ ನಿವೇಶನ ವಾಪಸ್'

ಬೀದರ್: 'ಮುಡಾ ಹಗರಣ ಅಲ್ಲ, ಅಕ್ರಮವೂ ನಡೆದಿಲ್ಲ ಎಂದು ಹೇಳುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ಕುತ್ತು ಬರುತ್ತದೆ ಎಂಬ ಭಯದಿಂದ 14 ನಿವೇಶನಗಳನ್ನು ವಾಪಸ್ ಮಾಡಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ವಕ್ಫ್ ಸಂಬಂಧಿಸಿದ ಹೋರಾಟದಲ್ಲಿ ಭಾಗವಹಿಸಿದ್ದ ಅವರು, 'ಮುಡಾದಲ್ಲಿ ತಮ್ಮ ಪತ್ನಿಯ 14 ನಿವೇಶನಗಳನ್ನು ವಾಪಸ್ ಮಾಡಲು ₹62 ಕೋಟಿ ಕೊಡಬೇಕು ಎಂದು ಹೇಳಿದ್ದರು. ಒಂದು ರೂಪಾಯಿ ಪಡೆಯದೇ ಅಕ್ರಮ ನಿವೇಶನಗಳನ್ನು ವಾಪಸ್ ಮಾಡಿದ್ದಾರೆ. ಅವರ ಪಾಪದ ಕೊಡ ತುಂಬಿದೆ. ರಾಜೀನಾಮೆಗೆ ಕಾಲ ಸನ್ನಿಹಿತವಾಗಿದೆ' ಎಂದರು.

'ಆಲಿಬಾಬಾ–40 ಕಳ್ಳರ ರೀತಿ'

'ಮುಡಾದಲ್ಲಿ ಏನೆಲ್ಲಾ ನಡೆದಿದೆ ಎಂಬುದು ಹಾದಿಬೀದಿಯಲ್ಲಿ ಚರ್ಚೆ ನಡೆಯುತ್ತಿದೆ. ಆದರೆ, ಸರ್ಕಾರ ಮತ್ತು ಸಚಿವರು ಮಾತ್ರ ಆಲಿಬಾಬಾ ಮತ್ತು 40 ಕಳ್ಳರ ರೀತಿ ಇದ್ದಾರೆ. ಪ್ರಕರಣದಲ್ಲಿ ಸಿದ್ದರಾಮಯ್ಯ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ' ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ತಪ್ಪನ್ನು ಖಂಡಿಸುವ ಬದಲು ಅವರ ಸಂಪುಟದ ಸಚಿವರು ರಿಲೆಯಲ್ಲಿ ನಿಂತವರಂತೆ ಒಬ್ಬರಾದ ಮೇಲೆ ಒಬ್ಬರು ಇ.ಡಿಯನ್ನು ಬಯ್ಯುತ್ತಿದ್ದಾರೆ. ಹತಾಶೆಯಿಂದ ನಿಂದನೆ ಮಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

4ನೇ ಪುಟ ನೋಡಿ



ಕಸರತ್ತು...

ನೌಕಾಪಡೆ ದಿನಾಚರಣೆ ಅಂಗವಾಗಿ ಭಾರತೀಯ ನೌಕಾಪಡೆ ಯೋಧರು ಮುಂಬೈನ ಗೇಟ್ ವೇ ಆಫ್ ಇಂಡಿಯಾ ಬಳಿ ಬುಧವಾರ ಮೈನವಿರೇಳಿಸುವ 'ಫೈರ್ ಡ್ರಿಲ್' ಕಸರತ್ತು ಪ್ರದರ್ಶಿಸಿದರು –ಪಿಟಿಐ ಚಿತ್ರ

ಇಂದು ಹಾಸನದಲ್ಲಿ ಸಮಾವೇಶ: ಮುಂದುವರಿದ ಗೊಂದಲ

ಸ್ವಾಭಿಮಾನಿಯೋ, ಜನಕಲ್ಯಾಣವೋ

ಪ್ರಜಾವಾಣಿ ವಾರ್ತೆ

ಹಾಸನ: 'ಸ್ವಾಭಿಮಾನಿ ಸಮಾವೇಶವೋ' ಅಥವಾ 'ಜನಕಲ್ಯಾಣ ಸಮಾವೇಶವೋ' ಎಂಬ ಗೊಂದಲದ ನಡುವೆಯೇ ಇಲ್ಲಿನ ಎಸ್.ಎಂ. ಕೃಷ್ಣ ಬಡಾವಣೆಯ ಮೈದಾನವು ಬೃಹತ್ ಸಭೆಗೆ ಸಜ್ಜಾಗಿದೆ.

ಕೆಪಿಸಿಸಿ ಹಾಗೂ ಸ್ವಾಭಿಮಾನಿ ಸಂಘಟನೆಗಳ ಆಶ್ರಯದಲ್ಲಿ ಜೆಡಿಎಸ್ 'ನೆಲ'ದಲ್ಲಿ ನಡೆಯಲಿರುವ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆದಿಯಾಗಿ ಸಚಿವ ಸಂಪುಟವೇ ಪಾಲ್ಗೊಳ್ಳಲಿದ್ದು, ಕಾಂಗ್ರೆಸ್ ಶಕ್ತಿ ಪ್ರದರ್ಶನ ನಡೆಯಲಿದೆ. ಹಾಸನವಷ್ಟೇ ಅಲ್ಲದೆ ಹಳೇ ಮೈಸೂರು ಭಾಗದ ವಿವಿಧ ಜಿಲ್ಲೆಗಳ ಸಾವಿರಾರು ಕಾರ್ಯಕರ್ತರು ಮತ್ತು ಸಿದ್ದರಾಮಯ್ಯ ಅಭಿಮಾನಿಗಳು ಭಾಗಿಯಾಗಲಿದ್ದಾರೆ.

ಮುಡಾ ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ಸಿದ್ದರಾಮಯ್ಯ ವಿರುದ್ಧ ಅಪಪ್ರಚಾರಕ್ಕೆ ತಿರುಗೇಟು ನೀಡಲು ಸಿದ್ದರಾಮಯ್ಯ ಬೆಂಬಲಿತ ಸಚಿವರು, ಸ್ವಾಭಿಮಾನಿ ಸಮಾವೇಶ ಆಯೋಜಿಸಲಾಗುವುದು' ಎಂದು ಹೇಳಿದ್ದರು.

4ನೇ ಪುಟ ನೋಡಿ

ಸಿ.ಎಂ ಸ್ಥಾನ ಹಂಚಿಕೆ: ಆಗಿದೆಯೇ 'ಒಪ್ಪಂದ'?

ಬೆಂಗಳೂರು: ಕೆಲವು ತಿಂಗಳುಗಳಿಂದ ತೆರೆಮರೆಗೆ ಸರಿದಿದ್ದ ಮುಖ್ಯಮಂತ್ರಿ ಸ್ಥಾನದ 'ಅಧಿಕಾರ ಹಂಚಿಕೆ' ವಿಚಾರ ಮತ್ತೆ ಮುಂಚೂಣಿಗೆ ಬಂದಿದೆ.


ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಖಾಸಗಿ ಸುದ್ದಿವಾಹಿನಿಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ, ಅಧಿಕಾರ ಹಂಚಿಕೆ ಕುರಿತಂತೆ ನೀಡಿರುವ ಹೇಳಿಕೆಯು ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

'ನಾವು ಒಂದು ಒಪ್ಪಂದಕ್ಕೆ (ಅಂಡರ್‌ಸ್ಟ್ಯಾಂಡಿಂಗ್) ಬಂದಿದ್ದೇವೆ. ಅದೇನೆಂದು ಈಗ ಬಹಿರಂಗಪಡಿಸುವುದಿಲ್ಲ. ನನಗೂ ಒಳ್ಳೆಯ ದಿನ ಸದ್ಯವೇ ಬರಲಿದೆ' ಎಂದು ಸಂದರ್ಶನದ ವೇಳೆ ಶಿವಕುಮಾರ್ ಹೇಳಿದ್ದರು. ಅವರ ಈ ಮಾತು, ಮುಖ್ಯಮಂತ್ರಿ ಹುದ್ದೆಗೆ ಪಟ್ಟು ಹಿಡಿದು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಹಿಂದೆ ನಡೆದಿದ್ದ ತಿಕ್ಕಾಟದ ಸಂದರ್ಭವನ್ನು ಮುನ್ನೆಲೆಗೆ ತಂದಿದೆ.

4ನೇ ಪುಟ ನೋಡಿ

ಇಂದು ಪ್ರಮಾಣ ವಚನ: ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಗಣ್ಯರು ಭಾಗಿ

ದೇವೇಂದ್ರ ಫಡಣವೀಸ್ 'ಮಹಾ' ಸಿ.ಎಂ



ಪ್ರಜಾವಾಣಿ ವಾರ್ತೆ

ಮುಂಬೈ: 'ಒಂದಾಗಿದ್ದರೆ ಸುರಕ್ಷಿತ', 'ಮೋದಿ ಇದ್ದರೆ ಸಾಧ್ಯ' ಎಂಬ ಘೋಷಣೆಗಳೊಂದಿಗೆ ಬಿಜೆಪಿಯ ನಾಯಕ ದೇವೇಂದ್ರ ಫಡಣವೀಸ್ ಅವರು ಮಹಾರಾಷ್ಟ್ರದ 31ನೆಯ ಮುಖ್ಯಮಂತ್ರಿಯಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಲು ಅಣಿಯಾಗಿದ್ದಾರೆ.

ಎನ್‌ಸಿಪಿ ಅಧ್ಯಕ್ಷ ಅಜಿತ್ ಪವಾರ್ ಅವರು ಫಡಣವೀಸ್ ನೇತೃತ್ವದ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಆಗಲಿದ್ದಾರೆ, ಅವರಿಗೆ ಹಣಕಾಸು ಖಾತೆಯನ್ನು ನೀಡಲಾಗುತ್ತದೆ. ಆದರೆ, ಹಂಗಾಮಿ ಮುಖ್ಯಮಂತ್ರಿ ಹಾಗೂ ಶಿವಸೇನಾ ಮುಖ್ಯಸ್ಥ ಏಕನಾಥ ಶಿಂದೆ ಅವರು ಉಪ ಮುಖ್ಯಮಂತ್ರಿ ಆಗಿ ಸಂಪುಟ ಸೇರಲಿದ್ದಾರೆಯೇ ಎಂಬುದು ಇನ್ನೂ ಖಚಿತವಾಗಿಲ್ಲ.

ಮುಂದಿನ ಕೆಲವು ದಿನಗಳಲ್ಲಿ ನಮ್ಮ ಇಚ್ಛೆಗೆ ಅನುಗುಣವಾದ ಸಂಗತಿಗಳು ನಡೆಯಲಿವೆ. ಹಾಗೆಯೇ, ನಮ್ಮ ಇಚ್ಛೆಗೆ ವಿರುದ್ಧವಾದ ಕೆಲವು ಸಂಗತಿಗಳೂ ಇರಲಿವೆ. ಆದರೆ ರಾಜ್ಯ ಹಾಗೂ ದೇಶದ ಹಿತಾಸಕ್ತಿಯಿಂದ ನಾವೆಲ್ಲ ಕೆಲಸ ಮಾಡಬೇಕಿದೆ
ದೇವೇಂದ್ರ ಫಡಣವೀಸ್, ಮಹಾರಾಷ್ಟ್ರದ ಬಿಜೆಪಿ ಶಾಸಕಾಂಗ ಪಕ್ಷದ ನಾಯಕ

ಫಡಣವೀಸ್ ಅವರು ಎರಡೂವರೆ ವರ್ಷಗಳ ಹಿಂದೆ ಮುಖ್ಯಮಂತ್ರಿ ಹುದ್ದೆಗೆ ನನ್ನ ಹೆಸರು ಸೂಚಿಸಿದ್ದರು. ಈ ಬಾರಿ ನಾವು (ಶಿವಸೇನಾ ಮತ್ತು ಎನ್‌ಸಿಪಿ) ಮುಖ್ಯಮಂತ್ರಿ ಹುದ್ದೆಗೆ ಫಡಣವೀಸ್ ಹೆಸರು ಸೂಚಿಸುತ್ತಿದ್ದೇವೆ
ಏಕನಾಥ ಶಿಂದೆ, ಶಿವಸೇನಾ ನಾಯಕ

ಶಿಂದೆ ಅವರು ತಮಗೆ ಗೃಹ ಖಾತೆಯೇ ಬೇಕು ಎಂಬ ಪಟ್ಟು ಹಿಡಿದಿದ್ದಾರೆ ಎನ್ನಲಾಗಿದ್ದು, ಇದೇ ಬಿಕ್ಕಟ್ಟಿಗೆ ಕಾರಣವಾಗಿದೆ ಎಂದು ಮೂಲಗಳು ಹೇಳಿವೆ. ಆದರೆ, ಗೃಹ ಖಾತೆಯನ್ನು ಶಿವಸೇನಾ ಪಕ್ಷಕ್ಕೆ ಬಿಟ್ಟುಕೊಡಲು ಬಿಜೆಪಿ ವರಿಷ್ಠರು ಹಾಗೂ ಫಡಣವೀಸ್ ಅವರು ಸಿದ್ಧರಿಲ್ಲ.

ಗೃಹ ಖಾತೆಯ ಬದಲಿಗೆ, ನಗರಾಭಿವೃದ್ಧಿ ಖಾತೆಯನ್ನು ನೀಡುವುದಾಗಿ ಬಿಜೆಪಿಯು ಶಿವಸೇನಾ ಪಕ್ಷಕ್ಕೆ ಹೇಳಿದೆ. ಉಪ ಮುಖ್ಯಮಂತ್ರಿ ಸ್ಥಾನವನ್ನು ಒಪ್ಪಿಕೊಳ್ಳುವಂತೆ ಮನವೊಲಿಸಲು ಫಡಣವೀಸ್ ಅವರು ಶಿಂದೆ ಜೊತೆ ಎರಡು ಸಭೆ ನಡೆಸಿದ್ದಾರೆ. ಪತ್ರಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಸಿಕ್ಕ ಮಾಹಿತಿ ಪ್ರಕಾರ, ಬಿಜೆಪಿಯ ಪ್ರಸ್ತಾವವನ್ನು ಶಿಂದೆ ಅವರು ಒಪ್ಪಿಕೊಳ್ಳುವ ಸಾಧ್ಯತೆ ಇದೆ.

ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳು ಭಾಗಿಯಾಗಲಿದ್ದಾರೆ.

288 ಸದಸ್ಯ ಬಲದ ಮಹಾರಾಷ್ಟ್ರ ವಿಧಾನಸಭೆ ಯಲ್ಲಿ ಮಹಾಯುತಿ ಮೈತ್ರಿಕೂಟವು ಭಾರಿ ಬಹುಮತ ಪಡೆದಿದೆ.

4A ಪುಟ ನೋಡಿ

ಶಿಸ್ತು ಸಮಿತಿಗೆ ವಿವರಣೆ ಕೊಟ್ಟ ಯತ್ನಾಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಕ್ಷದ ನಾಯಕರು ಹಾಗೂ ಆಂತರಿಕ ವಿಚಾರಗಳ ಕುರಿತು ಯಾವುದೇ ಹೇಳಿಕೆ ನೀಡದಂತೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಪಕ್ಷದ ಕೇಂದ್ರೀಯ ಶಿಸ್ತು ಸಮಿತಿ ತಾಕೀತು ಮಾಡಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಪಕ್ಷದ ನಾಯಕ ಬಿ.ಎಸ್. ಯಡಿಯೂರಪ್ಪ ವಿರುದ್ಧ ಬಂಡಾಯ ಸಾರಿರುವ ಕಾರಣಕ್ಕೆ ಷೋಕಾಸ್ ನೋಟಿಸ್ ಪಡೆದಿರುವ ಅವರು ಶಿಸ್ತು ಸಮಿತಿಯ ಸದಸ್ಯ ಕಾರ್ಯದರ್ಶಿ ಓಂ ಪಾಠಕ್ ಅವರನ್ನು ಬುಧವಾರ ಭೇಟಿ ಮಾಡಿ ಆರು ಪುಟಗಳ ವಿವರಣೆ ನೀಡಿದರು.

4ನೇ ಪುಟ ನೋಡಿ

ಪಕ್ಷ ವಂಶಪಾರಂಪರ್ಯ, ಭ್ರಷ್ಟಾಚಾರ ಮುಕ್ತ ಆಗಬೇಕು ಎಂಬುದು ನಮ್ಮ ಬೇಡಿಕೆ. ಕಾರ್ಯಕರ್ತರ ಭಾವನೆ ತಿಳಿದು ವರಿಷ್ಠರು ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕು. ನಾವು ರಾಷ್ಟ್ರ, ಹಿಂದುತ್ವದ ಪರ ಇರುವವರು. ಬಿಜೆಪಿ ವಿರುದ್ಧ ಯಾವತ್ತೂ ಕೆಲಸ ಮಾಡುವುದಿಲ್ಲ
ಬಸನಗೌಡ ಪಾಟೀಲ ಯತ್ನಾಳ, ವಿವರಣೆ ಕೊಟ್ಟ ಬಳಿಕ

ಯತ್ನಾಳ ನಮ್ಮವರೇ. ಅವರೇನು ಹೊರಗಡೆಯವರಲ್ಲ. ಏನೇ ತಪ್ಪು ಆಗಿದ್ದರೂ ಮುಖಾಮುಖಿ ಕುಳಿತು ಮಾತನಾಡಿ ಬಗೆಹರಿಸಿಕೊಳ್ಳಬೇಕು. ಎಲ್ಲವನ್ನೂ ಸರಿಪಡಿಸುವ ಕೆಲಸ ಮಾಡುತ್ತೇವೆ
ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಕೆಪಿಎಸ್‌ಸಿ ಅವ್ಯವಹಾರ ಪ್ರಾಸಿಕ್ಯೂಷನ್‌ಗೆ ತಯಾರಿ

• ರಾಜೇಶ್ ರೈ ಚಟ್ಲ

ಬೆಂಗಳೂರು: 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಆಯ್ಕೆ ಪ್ರಕ್ರಿಯೆಯಲ್ಲಿ ನಡೆದ ಅವ್ಯವಹಾರಗಳಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಅಂದಿನ ಕೆಪಿಎಸ್‌ಸಿ ಅಧ್ಯಕ್ಷ ಗೋನಾಳ್ ಭೀಮಪ್ಪ ಮತ್ತು ಒಂಬತ್ತು ಸದಸ್ಯರ ಪ್ರಾಸಿಕ್ಯೂಷನ್‌ಗೆ ರಾಷ್ಟ್ರಪತಿಯಿಂದ ಮಂಜೂರಾತಿ ಪಡೆಯಲು ಸರ್ಕಾರ ತಯಾರಿ ನಡೆಸಿದೆ.

ಈ ಕುರಿತ ಪ್ರಸ್ತಾವವನ್ನು ಮತ್ತೆ ಸಚಿವ ಸಂಪುಟ ಸಭೆಗೆ ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಅನುಮೋದನೆ ನೀಡಿದ್ದಾರೆ.

ಅಕ್ರಮದ ಕಾರಣಕ್ಕೆ ಹೈಕೋರ್ಟ್, ಸುಪ್ರೀಂ ಕೋರ್ಟ್‌ನಿಂದ ರದ್ದುಗೊಂಡಿದ್ದ ಈ ಸಾಲಿನ ಆಯ್ಕೆ ಪಟ್ಟಿಯನ್ನು 2022ರಲ್ಲಿ ಕಾಯ್ದೆ ರೂಪಿಸಿ 'ಸಕ್ರಮ'ಗೊಳಿಸಿದ್ದ ಸರ್ಕಾರ, ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿತ್ತು. 2021ರ ಮೇ 27 ಮತ್ತು ಜೂನ್ 21ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯದಂತೆ, ಗೋನಾಳ್ ಭೀಮಪ್ಪ ಮತ್ತು ಸದಸ್ಯರನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988ರ ಕಲಂ 19ರಡಿ ಪ್ರಾಸಿಕ್ಯೂಷನ್ ನಡೆಸಿ, ಕ್ರಮ ತೆಗೆದುಕೊಳ್ಳಲು ರಾಜ್ಯಪಾಲರ ಅನುಮೋದನೆ ಪಡೆಯಬೇಕು. ಬಳಿಕ ರಾಷ್ಟ್ರಪತಿಯಿಂದ ಮಂಜೂರಾತಿ ಪಡೆಯಲು ರಾಜ್ಯ ಸರ್ಕಾರಕ್ಕೆ 2021ರ ಆಗಸ್ಟ್ 10ರಂದು ಸಿಐಡಿ ಪತ್ರ ಬರೆದಿತ್ತು.



ಅದರಂತೆ, ಅನುಮೋದನೆಗಾಗಿ ರಾಜ್ಯಪಾಲರಿಗೆ ಕಡತ ಸಲ್ಲಿಕೆ ಆಗಿತ್ತು. ಆದರೆ, ಪ್ರಾಸಿಕ್ಯೂಷನ್‌ಗೆ ರಾಷ್ಟ್ರಪತಿಯಿಂದ ಅನುಮತಿ ಕೋರಲು ಮಂಡಿಸಿದ್ದ ಪ್ರಸ್ತಾವವನ್ನು ಸಚಿವ ಸಂಪುಟವು ತಿರಸ್ಕರಿಸಿದೆ ಎಂದು 'ಪರಿ ಭಾವಿಸಿ'ದ್ದ ರಾಜ್ಯಪಾಲರು, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರಲಿಲ್ಲ. ಹೀಗಾಗಿ, ಮತ್ತೆ ಹೊಸತಾಗಿ ಸಚಿವ ಸಂಪುಟದ ಮುಂದೆ ಮಂಡಿಸಿ ಅನುಮೋದನೆ ಪಡೆಯಲು ಕಡತ ಮಂಡಿಸುವಂತೆ ಇದೇ ಏಪ್ರಿಲ್ 23ರಂದು ಡಿಪಿಎಆರ್ ಕಾರ್ಯದರ್ಶಿಗೆ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಸೂಚಿಸಿದ್ದರು.

10ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಒಳಪುಟಗಳಲ್ಲಿ

₹300 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಸೌಲಭ್ಯ

ಆಸ್ಪತ್ರೆ ನಿರ್ಮಾಣ: ಶಿಲಾನ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಆವರಣದಲ್ಲಿ ₹300 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ 500 ಹಾಸಿಗೆಗಳ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ನೆರವೇರಿಸಿದರು.

ಹತ್ತು ಅಂತಸ್ತಿನ ಕಟ್ಟಡ ಇದಾಗಿದ್ದು, ಆಸ್ಪತ್ರೆಯು ಅತ್ಯಾಧುನಿಕ ತುರ್ತುಚಿಕಿತ್ಸಾ ಘಟಕ ಸೇರಿ ಹಲವು ಸೌಲಭ್ಯವನ್ನು ಹೊಂದಿರಲಿದೆ. ಮೂರು ಹಂತದಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯಲಿದೆ. ಆಸ್ಪತ್ರೆಯು 60 ತೀವ್ರ ನಿಗಾ ಘಟಕ ಹಾಸಿಗೆಯನ್ನು (ಐಸಿಯು) ಒಳಗೊಳ್ಳಲಿದೆ.

ಶಂಕುಸ್ಥಾಪನೆ ಬಳಿಕ ಮಾತನಾಡಿದ ಸಿದ್ದರಾಮಯ್ಯ, 'ನಮ್ಮ ಅವಧಿಯಲ್ಲಿಯೇ ಆಸ್ಪತ್ರೆ ಉದ್ಘಾಟನೆಯನ್ನೂ ನೆರವೇರಿಸಲಾಗುವುದು. ಆಸ್ಪತ್ರೆಯ ನಿರ್ವಹಣೆ, ಸ್ವಚ್ಛತೆ ಉತ್ತಮವಾಗಿರಬೇಕು. ಉತ್ತಮ ಆರೋಗ್ಯ ಸೇವೆ ದೊರೆಯುವಂ ತಾಗಬೇಕು. ಆಸ್ಪತ್ರೆಗೆ ಸಾರ್ವಜನಿಕರಿಂದ ದೇಣಿಗೆಯೂ ದೊರೆತಾಗ, ಗುಣಮಟ್ಟದ ಸೇವೆಗಳನ್ನು ಆಸ್ಪತ್ರೆ ನೀಡಲು ಸಹಾಯವಾಗುತ್ತದೆ. ಬೌರಿಂಗ್ ಆಸ್ಪತ್ರೆಯು ಸುದೀರ್ಘ ಇತಿಹಾಸವನ್ನು ಹೊಂದಿದ್ದು, ಸಾವಿರಾರು ಜನರಿಗೆ ಆರೋಗ್ಯ ಸೇವೆಯನ್ನು ಒದಗಿಸಿದೆ' ಎಂದು ಹೇಳಿದರು.

'ಸಾಮಾನ್ಯವಾಗಿ ಬಡವರು, ಕೆಳವರ್ಗದವರು ಮಾತ್ರ ಸರ್ಕಾರಿ ಆಸ್ಪತ್ರೆಗೆ ಬರುತ್ತಾರೆ. ಬಡವರು ದುಬಾರಿ ವೆಚ್ಚವನ್ನು ಕೊಟ್ಟು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಸಾಧ್ಯವಿಲ್ಲ. ಅದಕ್ಕಾಗಿಯೇ ಸರ್ಕಾರಿ ಆಸ್ಪತ್ರೆಗಳ ಅಗತ್ಯವಿದೆ. ನನ್ನನ್ನೂ ಒಳಗೊಂಡಂತೆ ಬಹುತೇಕ ರಾಜಕಾರಣಿಗಳು ಸರ್ಕಾರಿ ಆಸ್ಪತ್ರೆಗೆ ಹೋಗುವುದಿಲ್ಲ' ಎಂದು ಅವರು ಹೇಳಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ, ಶಾಸಕ ರಿಜ್ವಾನ್ ಅರ್ಷದ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಶೀನ್, ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದ ಕುಲಪತಿ ರಮೇಶ್, ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಮನೋಜ್ ಕುಮಾರ್ ಉಪಸ್ಥಿತರಿದ್ದರು.



ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಿದರು. ಡಾ. ಶರಣಪ್ರಕಾಶ್ ಪಾಟೀಲ, ರಿಜ್ವಾನ್ ಅರ್ಷದ್, ನಸೀರ್ ಅಹ್ಮದ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಸಭೆ ಮುಂದೂಡಲು ಸಂಘಟನೆಗಳ ಆಗ್ರಹ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಮಹಾಪರಿನಿರ್ವಾಣ ದಿನದಂದೇ (ಡಿ.6) ಸಮಾಜ ಕಲ್ಯಾಣ ಇಲಾಖೆ ಕರೆದಿರುವ ರಾಜ್ಯಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯನ್ನು ಮುಂದೂಡಬೇಕು ಎಂದು ವಿವಿಧ ಸಂಘಟನೆಗಳು ಆಗ್ರಹಿಸಿವೆ.

ಡಿ.6ರಂದು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲು ನಿರ್ಧರಿಸುವ ಮೂಲಕ ದಲಿತ ಸಮುದಾಯದ ಜನರ ಭಾವನೆಗೆ ಘಾಸಿ ಉಂಟು ಮಾಡಲಾಗಿದೆ. ಅಂಬೇಡ್ಕರ್‌ಗೆ ಅವಮಾನ ಮಾಡಿದಂತಾಗಿದೆ. ಹಾಗಾಗಿ ಡಿ. 6ರ ಬದಲು ಮರುದಿನ ಅಥವಾ ಬೇರೆ ಯಾವುದಾದರೂ ದಿನ ಸಭೆ ನಡೆಸಬೇಕು ಎಂದು ಕರ್ನಾಟಕ ನವ ಜಾಗೃತಿ ವೇದಿಕೆ ಅಧ್ಯಕ್ಷ ಅನಂತರಾಯಪ್ಪ, ಕರ್ನಾಟಕ ಮೂಲ ನಿವಾಸಿಗಳ ಮಹಾಸಭಾ ಅಧ್ಯಕ್ಷ ಚಳವಳಿ ರಾಜಣ್ಣ, ದಲಿತ ಸಂಘರ್ಷ ಸಮಿತಿ (ಸಮತಾವಾದ) ಎಚ್. ಮಾರಪ್ಪ, ಆದಿಜಾಂಬವ ಸಂಘದ ಅಧ್ಯಕ್ಷ ಜಂಬೂದ್ವೀಪ ಸಿದ್ದರಾಜು, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಘಟಕದ ಅಧ್ಯಕ್ಷ ಆರ್. ಮೋಹನ್‌ರಾಜು, ಕರ್ನಾಟಕ ಸಮತಾ ಸೈನಿಕ ದಳದ ಹಿರಿಯ ಉಪಾಧ್ಯಕ್ಷ ಸಿದ್ದಪ್ಪ, ಕರ್ನಾಟಕ ಭೋವಿ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಬಿ.ಜಿ. ವೆಂಕಟರಾಜು ಒತ್ತಾಯಿಸಿದ್ದಾರೆ.

ಕರ್ತವ್ಯದಿಂದ ಬಿಡುಗಡೆ: ಆದೇಶ ಹಿಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕ ಹುದ್ದೆಗೆ ಹೆಚ್ಚುವರಿ ಪ್ರಭಾರದಲ್ಲಿದ್ದ ಮಂಜುನಾಥ್.ಬಿ ಅವರನ್ನು ಮಂಗಳವಾರ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿತ್ತು. ಆದರೆ, ಬುಧವಾರ ಮತ್ತೊಂದು ಆದೇಶ ಹೊರಡಿಸಿ ಅದೇ ಹುದ್ದೆಯಲ್ಲಿ ಮುಂದುವರಿಸಲಾಗಿದೆ.

ಮಂಜುನಾಥ್ ಅವರು ಸದ್ಯ ಮೈಸೂರು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಡಿ.7ರಂದು ಹವ್ಯಾಸಿ ಯಕ್ಷಗಾನ ಕಲಾವಿದರ ಹಬ್ಬ

ಬೆಂಗಳೂರು: ನಗರದ 80ಕ್ಕೂ ಹೆಚ್ಚು ಹವ್ಯಾಸಿ ಕಲಾವಿದರನ್ನು, 20ಕ್ಕೂ ಹೆಚ್ಚು ತಂಡಗಳನ್ನು, 25ಕ್ಕೂ ಅಧಿಕ ಯಕ್ಷಗುರುಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸಿ 'ಬೆಂಗಳೂರಿನ ಯಕ್ಷ ತಂಡಗಳ ಸ್ನೇಹ ಕೂ(ಡಾ)ಟ' ಹೆಸರಿನಲ್ಲಿ ಶನಿವಾರ (ಡಿ.7) ರವೀಂದ್ರ ಕಲಾಕ್ಷೇತ್ರದಲ್ಲಿ ಇಡೀ ರಾತ್ರಿಯ ಕಾರ್ಯಕ್ರಮವನ್ನು 'ಟೀಮ್ ತಿತ್ತಿತ್ತೈ' ತಂಡ ಆಯೋಜಿಸಿದೆ.

ಇದು ಬೆಂಗಳೂರಿನ ಮಟ್ಟಿಗೆ ಹೊಸ ಪ್ರಯತ್ನ. ಇಲ್ಲಿ ಪೂರ್ವರಂಗ (ತೆಂಕು), ಧರ್ಮಾಂಗದ ದಿಗ್ವಿಜಯ, ಸೇತು ಬಂಧನ, ಕರ್ಣಾರ್ಜುನ ಕಾಳಗ, ದಕ್ಷಯಜ್ಞ, ಭಕ್ತ ಸುಧನ್ವ ಮತ್ತು ಮೀನಾಕ್ಷಿ ಕಲ್ಯಾಣ ಎಂಬ ಒಟ್ಟು ಆರು ಪೌರಾಣಿಕ ಆಖ್ಯಾನಗಳನ್ನು ತೆಂಕು, ಬಡಗಿನ ಹವ್ಯಾಸಿ ಕಲಾವಿದರು ಪ್ರಸ್ತುತ ಪಡಿಸಲಿದ್ದಾರೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲಾವಿದರಾಗಿ ಎ.ಪಿ ಫಾಟಕ್, ಶಂಕರ್ ಬಾಳ್ಕುದ್ರು, ಸುಬ್ರಾಯ ಹೆಬ್ಬಾರ್, ನಾಗಶ್ರೀ ಗೀಜಗಾರ್, ಪ್ರಿಯಾಂಕಾ ಮೋಹನ್, ನಿಹಾರಿಕಾ ಭಟ್, ರವೀಶ್ ಹೆಗಡೆ, ಶಶಿರಾಜ ಸೋಮಯಾಜಿ, ಅಂಬರೀಷ್ ಭಟ್, ರವಿ ಮಡೋಡಿ, ನವೀನ್ ಶೆಟ್ಟಿ, ಪ್ರಶಾಂತ್ ವರ್ಧನ ಮುಂತಾದವರು ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಶಿವಕುಮಾರ್ ಬೇಗಾರ್ , ಕೃಷ್ಣಮೂರ್ತಿ ತುಂಗ, ರಾಧಾಕೃಷ್ಣ ಉರಾಳ, ಶಂಕರ್ ಬಾಳ್ಕುದ್ರು ಸೇರಿ ಹಲವು ಯಕ್ಷ ಗುರುಗಳನ್ನು ಗೌರವಿಸಲಾಗುತ್ತಿದೆ.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 6362673283 ಸಂಪರ್ಕಿಸಬಹುದು.

16ರಿಂದ ಚಾಲನಾ ವೃತ್ತಿ ಪರೀಕ್ಷೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಚಾಲಕ ಕಂ ನಿರ್ವಾಹಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ಚಾಲನಾ ವೃತ್ತಿ ಪರೀಕ್ಷೆಗೆ ಅರ್ಹ-ರಾದವರಿಗೆ ಹಾಸನ ತರಬೇತಿ ಕೇಂದ್ರದಲ್ಲಿ ಡಿ. 16ರಿಂದ ಚಾಲನಾ ವೃತ್ತಿ ಪರೀಕ್ಷೆ ನಡೆಯಲಿದೆ.

ಹಾಸನದಲ್ಲಿ ಪರೀಕ್ಷೆ ಬರೆಯಲು ನಿರ್ಧರಿಸಿರುವ ಅಭ್ಯರ್ಥಿಗಳು ಡಿ.10ರಂದು ಮಧ್ಯಾಹ್ನ 1ರಿಂದ ನಿಗಮದ ಅಧಿಕೃತ ವೆಬ್‌ಸೈಟ್ ksrtcjobs. karnataka.gov.in ನಿಂದ ಕರೆಪತ್ರವನ್ನು ಡೌನ್‌ಲೋಡ್ ಮಾಡಿ-ಕೊಳ್ಳಬಹುದು. ಕರೆ-ಪತ್ರದಲ್ಲಿ ತಿಳಿಸಿರುವ ದಾಖಲೆಗಳೊಂದಿಗೆ ನಿಗದಿತ ದಿನಾಂಕ ಹಾಗೂ ಸಮಯಕ್ಕೆ ಹಾಜರಾಗಬೇಕೆಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಪುನರ್ವಸತಿ ಕೇಂದ್ರ ಉದ್ಘಾಟನೆ

ಕೆ.ಆರ್.ಪುರ: ಆರೈಕೆ, ಚೇತರಿಕೆ ಮತ್ತು ಪುನರ್ವಸತಿಯಲ್ಲಿ ಬದಲಾವಣೆ ತರುವ ಉದ್ದೇಶದಿಂದ ಐಷಾರಾಮಿ ಪರಿವರ್ತನಾ ಆರೈಕೆ ಕೇಂದ್ರ 'ಹೆಜ್ಜೆ' ಎಂ.ಎಸ್.ರಾಮಯ್ಯ ಸಮೂಹ ಸಂಸ್ಥೆಗಳ ಸಹಯೋಗದಲ್ಲಿ ಥಣಿಸಂದ್ರದಲ್ಲಿ ಉದ್ಘಾಟನೆಗೊಂಡಿತು.

ಎಂ.ಎಸ್. ರಾಮಯ್ಯ ಸಮೂಹ ಸಂಸ್ಥೆಗಳ ನಿರ್ದೇಶಕ ರಕ್ಷಾರಾಮಯ್ಯ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿ, 'ಹೆಜ್ಜೆ' ದೇಶದಲ್ಲಿ ಮೊದಲ ಐಷಾರಾಮಿ ಆತಿಥ್ಯ, ಸಕ್ರಿಯಗೊ-ಳಿಸುವ ಉದ್ಯಾನ, ಬಹುಸಂವೇದನಾ ಪರಿಸರ, ಸಮಗ್ರ ಕಲೆ ಮತ್ತು ಪರಿವರ್ತನಾ ಆರೈಕೆ ಸೌಲಭ್ಯವನ್ನು ಹೊಂದಿದೆ ಎಂದರು.



ಮಾಗಡಿ ರಸ್ತೆಯಲ್ಲಿರುವ ಗುರುಕುಲ ಅಂತರಾಷ್ಟ್ರೀಯ ಶಾಲೆಯ ಪ್ರಾಂಶುಪಾಲ ನಂಜುಂಡಯ್ಯ ಎಸ್. ಅವರಿಗೆ ಚಂಡಿಗಢ ವಿವಿ ಹಾಗೂ ಕ್ಯಾಮ್ಸ್ ಸಹಯೋಗದಲ್ಲಿ ಆಯೋಜಿಸಲಾದ ಎಫ್‌ಎಪಿ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಅಕಾಡೆಮಿಕ್ ಅಚೀವ್ಮೆಂಟ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು ಈ ವೇಳೆ ಕ್ಯಾಮ್ಸ್ ಗೌರವಾಧ್ಯಕ್ಷ ಪುಟ್ಟಣ್ಣ ಕ್ಯಾಮ್ಸ್ ಕಾರ್ಯದರ್ಶಿ ಡಿ ಶಶಿಕುಮಾರ್ ಡಾ॥ ಜಗತ್‌ಸಿಂಗ್ ಇದ್ದರು

ಹೆಬ್ಬಾಳ ರಸ್ತೆಯಲ್ಲಿ ನಿತ್ಯವೂ ಸಂಕಟ: ಈ ಮಾರ್ಗದಲ್ಲಿ ಸಂಚರಿಸಲು ಚಾಲಕರಿಗೆ ಭಯ

‘ಆಮೆವೇಗ’ದ ಕಾಮಗಾರಿ: ಜನರ ಪ್ರಾಣಕ್ಕೆ ಸಂಚಕಾರ

● ಆದಿತ್ಯ ಕೆ.ಎ.



ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೆಬ್ಬಾಳ ರಸ್ತೆಯಲ್ಲಿ ಪಿಲ್ಲರ್ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿದೆ

ಬೆಂಗಳೂರು: ನಗರದಿಂದ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬಳ್ಳಾರಿ ಹಾಗೂ ನೆರೆಯ ರಾಜ್ಯ ಆಂಧ್ರಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಕೊಂಡಿಯಂತಿರುವ ‘ಹೆಬ್ಬಾಳ ರಸ್ತೆ’ಯಲ್ಲಿ ಸಂಚಾರ ದಟ್ಟಣೆ ಸಮಸ್ಯೆ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಲೇ ಇದೆ.

ಮಂದಗತಿಯಲ್ಲಿ ಸಾಗುತ್ತಿರುವ ಮೇಲ್ಸೇತುವೆ ಕಾಮಗಾರಿ, ಅಲ್ಲಲ್ಲಿ ಕೆಟ್ಟು ನಿಂತಿರುವ ಬೀದಿ ದೀಪಗಳಿಂದ ರಾತ್ರಿ ವೇಳೆ ಕಾಡುವ ಕತ್ತಲು, ಗುಂಡಿಗಳ ಹಾವಳಿಯಿಂದ ಈ ಮಾರ್ಗ ‘ಅಪಘಾತ ವಲಯ’ವಾಗಿ ಬದಲಾಗಿದೆ. ಆಗಾಗ ಸಂಭವಿಸುತ್ತಿರುವ ಅಪಘಾತಗಳು ಪ್ರಯಾಣಿಕರ ಪ್ರಾಣಕ್ಕೆ ಸಂಚಕಾರ ತರುತ್ತಿವೆ.

ಕಳೆದೆರಡು ತಿಂಗಳಲ್ಲಿ ಈ ಮಾರ್ಗದಲ್ಲಿ ಹಲವು ಅಪಘಾತಗಳು ಸಂಭವಿಸಿ ಸಾವು–ನೋವಿಗೆ ಕಾರಣವಾಗಿವೆ. ಈ ಮಾರ್ಗದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಲವು ಕಡೆಗಳಲ್ಲಿ ಕೈಗೆತ್ತಿಕೊಂಡಿರುವ ಪಿಲ್ಲರ್ ಹಾಗೂ ಅಪ್ ರ್‍ಯಾಂಪ್ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವುದೇ ಅನಾಹುತಕ್ಕೆ ಕಾರಣವಾಗುತ್ತಿದೆ ಎಂಬ ದೂರುಗಳಿವೆ.

‘ಹೆಬ್ಬಾಳ ರಸ್ತೆಯಲ್ಲಿ ವಾಹನ ಚಾಲನೆ ಮಾಡುವುದಕ್ಕೆ ಭಯವಾಗುತ್ತದೆ. ಬೇಗನೆ ಕಾಮಗಾರಿ ಪೂರ್ಣಗೊಳಿಸಬೇಕು’ ಎಂದು ವಾಹನ ಚಾಲಕರು ಆಗ್ರಹಿಸಿದ್ದಾರೆ.

ರಸ್ತೆಯ ಅಧ್ವಾನ ಪರಿಸ್ಥಿತಿ ತೀವ್ರ ಸಮಸ್ಯೆ ತಂದೊಡ್ಡುತ್ತಿದೆ. ಕಳೆದ ಅಕ್ಟೋಬರ್‌ನಲ್ಲಿ ಬೃಹತ್ ಕಂಟೈನರ್ ಒಂದು ಚಾಲಕನ ನಿಯಂತ್ರಣ ತಪ್ಪಿ ಅಡ್ಡಲಾಗಿ ನಿಂತಿದ್ದರಿಂದ ಹಲವರು ವಿಮಾನ ನಿಲ್ದಾಣಕ್ಕೆ ತಡವಾಗಿ ತಲುಪಿದ್ದರು. ಬೆಳಿಗ್ಗೆ ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ತೆರಳುವುದಕ್ಕೂ ಹಲವು ಉದ್ಯೋಗಿಗಳಿಗೆ ಸಾಧ್ಯ ಆಗಿರಲಿಲ್ಲ.

ಯಲಹಂಕ ಸಮೀಪದ ಮೇಲ್ಸೇತುವೆ ಬಳಿ ನವೆಂಬರ್ 12ರಂದು ಇನೋವಾ ಕಾರು, ಕಾಂಕ್ರೀಟ್ ಮಿಶ್ರಣದ ಲಾರಿ ಹಾಗೂ ಬಿಎಂಟಿಸಿ ಬಸ್ ಮಧ್ಯೆ ಸಂಭವಿಸಿದ ಸರಣಿ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದರು. ಹೀಗೆ ಈ ಮಾರ್ಗದಲ್ಲಿ ವಾರಕ್ಕೆ ಎರಡರಿಂದ ಮೂರು ಬಾರಿ ಸರಣಿ ಅಪಘಾತಗಳು ಸಂಭವಿಸುತ್ತಿವೆ. ನಿಗದಿತ ಸ್ಥಳಕ್ಕೆ ಬೇಗನೆ ತೆರಳುವುದಕ್ಕಾಗಿ ವೇಗವಾಗಿ ವಾಹನ ಚಲಾಯಿಸುತ್ತಿರುವುದರಿಂದ ಅನಾಹುತಗಳು ಸಂಭವಿಸುತ್ತಿವೆ ಎಂದು ಸವಾರರು ನೋವು ತೋಡಿಕೊಂಡಿದ್ದಾರೆ.

ಹಲವು ಜಂಕ್ಷನ್‌ಗಳಲ್ಲಿ ಸಮಸ್ಯೆ: ಹೆಬ್ಬಾಳ ವೃತ್ತದಲ್ಲಿ ಬಿಡಿಎಯಿಂದ ನಡೆಯುತ್ತಿರುವ ಮೇಲ್ಸೇತುವೆಯ ಪಿಲ್ಲರ್ ಅಳವಡಿಕೆ ಹಾಗೂ ಬಿಎಂಆರ್‌ಸಿಎಲ್‌ನಿಂದ ನಡೆಯುತ್ತಿರುವ ಮೆಟ್ರೊ ಕಾಮಗಾರಿ ಆಮೆ ವೇಗದಲ್ಲಿ ಸಾಗುತ್ತಿವೆ. ಇದರಿಂದ ಸುಗಮ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ವಿಮಾನ ನಿಲ್ದಾಣಕ್ಕೆ ತೆರಳುವವರು ಅಲ್ಲದೇ ಹೆಬ್ಬಾಳ ರಸ್ತೆಯ ಅಕ್ಕಪಕ್ಕದ ಬಡಾವಣೆಗಳಿಗೆ ತೆರಳುವವರ ತಾಪತ್ರಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಕಾಮಗಾರಿಗೋಸ್ಕರ ಪದೇ ಪದೇ ಸಂಚಾರ ಮಾರ್ಗ ಬದಲಾವಣೆ ಮಾಡಲಾಗುತ್ತಿದ್ದು ಕೆ.ಆರ್.ಪುರ, ನಾಗವಾರ, ಲಿಂಗರಾಜಪುರ, ಭದ್ರಪ್ಪ ಲೇಔಟ್, ದೇವಿನಗರ ಕ್ರಾಸ್, ಹೆಣ್ಣೂರು, ಯಲಹಂಕ ನ್ಯೂಟೌನ್, ಹೆಗಡೆನಗರ–ಥಣಿಸಂದ್ರ ಸೇರಿದಂತೆ ಹತ್ತಾರು ಕಡೆಗೆ ತೆರಳುವವರು ನಿತ್ಯವೂ ಸಮಸ್ಯೆ ಎದುರಿಸುತ್ತಿದ್ದಾರೆ. ಸಾಲುಗಟ್ಟಿ ನಿಲ್ಲುವ ವಾಹನಗಳಿಂದ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಸಾಫ್ಟ್‌ವೇರ್ ಕಂಪನಿಗಳ ನೌಕರರು ಸಮಸ್ಯೆಗೆ ಸಿಲುಕುತ್ತಿದ್ದಾರೆ.

ವೇಗದ ಮಿತಿ: ಮೆಜೆಸ್ಟಿಕ್‌ನಿಂದ ವಿಮಾನ ನಿಲ್ದಾಣಕ್ಕೆ ಸುಮಾರು 35 ಕಿ.ಮೀ ದೂರವಿದೆ. ಈ ರಸ್ತೆಯಲ್ಲಿ ವೇಗದ ಮಿತಿ ನಿಯಮ ಜಾರಿಗೆ ತರಲಾಗಿದೆ. ಪ್ರತಿ ಗಂಟೆಗೆ 80 ಕಿ.ಮೀ–ಗಿಂತ ಹೆಚ್ಚಿನ ವೇಗದಲ್ಲಿ ಚಲಿಸುವ ವಾಹನಗಳ ಮಾಲೀಕರ ವಿರುದ್ಧ ಅತಿವೇಗದ ಚಾಲನೆ ಪ್ರಕರಣಗಳನ್ನು ಸಂಚಾರ ವಿಭಾಗದ ಪೊಲೀಸರು ದಾಖಲಿಸಿಕೊಳ್ಳುತ್ತಿದ್ದಾರೆ. ವೇಗದ ಮಿತಿ ಇದ್ದರೂ ದಟ್ಟಣೆಯಿಲ್ಲದ ಅವಧಿಯಲ್ಲಿ ಚಾಲಕರು ವೇಗವಾಗಿ ವಾಹನಗಳನ್ನು ಚಲಾಯಿಸುತ್ತಿದ್ದಾರೆ. ಇದರಿಂದ ಅಪಘಾತಗಳು ಸಂಭವಿಸುತ್ತಿವೆ.

ಹೆಬ್ಬಾಳ ರಸ್ತೆಯಲ್ಲಿ ಸಂಭವಿಸಿದ ಅಪಘಾತಗಳ ವಿವರ

ವರ್ಷ	ಅಪಘಾತ ಪ್ರಕರಣಗಳು
2021	245
2022	280
2023	320
2024 (ನವೆಂಬರ್ ವರೆಗೆ)	200



ಹೆಬ್ಬಾಳ ರಸ್ತೆಯಲ್ಲಿ ವಾರಾಂತ್ಯದಲ್ಲಿ ಕಂಡುಬರುವ ವಾಹನ ದಟ್ಟಣೆ

‘ವೇಗದ ಮಿತಿ ಇರಲಿ’

ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿರುವವರ ಪತ್ತೆಗಾಗಿ ನಗರದ ಒಳಗೆ ಹಾದು ಹೋಗಿರುವ ಹೆದ್ದಾರಿಗಳಲ್ಲಿ ಅತ್ಯಾಧುನಿಕ ಕ್ಯಾಮೆರಾ ಅಳವಡಿಸಲಾಗಿದೆ. ಅತಿವೇಗದಿಂದಲೇ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿರುವುದು ಪತ್ತೆ ಆಗಿದೆ. ವೇಗದ ಮಿತಿ ಅಳವಡಿಸಿಕೊಂಡರೆ ಅಮೂಲ್ಯವಾದ ಜೀವ ಉಳಿಸಿಕೊಳ್ಳಲು ಸಾಧ್ಯ ಆಗಲಿದೆ. ಕಳೆದ ವರ್ಷ ಬೆಂಗಳೂರು ನಗರದಲ್ಲಿ ಅತಿ ವೇಗದಿಂದ ವಾಹನ ಚಲಾಯಿಸಿ, 873 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್ ಹೇಳಿದರು.

ಅನಧಿಕೃತ ಕಟ್ಟಡ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ವಲಯದಲ್ಲಿ ನಿರ್ಮಾಣವಾಗಿರುವ ಅನಧಿಕೃತ ಕಟ್ಟಡಗಳ ತೆರವಿಗೆ ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ವಲಯ ಅಧಿಕಾರಿಗಳಿಗೆ ಸೂಚಿಸಿದರು.

‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಕಾರ್ಯಕ್ರಮದಲ್ಲಿ ಬುಧವಾರ ನಾಗರಿಕರಿಂದ ಕುಂದುಕೊರತೆಯನ್ನು ಆಲಿಸಿ, ಪರಿಹಾರ ನೀಡುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಅನಧಿಕೃತ ಕಟ್ಟಡಗಳ ಬಗ್ಗೆ ದೂರು ಬಂದಿದ್ದರಿಂದ ವಲಯ ಆಯುಕ್ತರಿಗೆ ಕ್ರಮ ಕೈಗೊಳ್ಳಲು ಆದೇಶಿಸಿದರು.

ಸಿ.ವಿ. ರಾಮನ್ ನಗರದ ಕಸ್ತೂರಿ ನಗರ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿಯನ್ನು ತೆರವುಗೊಳಿಸಿ, ಶಾಶ್ವತವಾಗಿ ನಿರ್ಮಿಸಿರುವ ಪೆಟ್ಟಿಗೆಗಳನ್ನೂ ತೆಗೆದುಹಾಕಬೇಕು. ಮತ್ತೆ ಒತ್ತುವರಿಯಾಗದಂತೆ ನಿಗಾವಹಿಸಬೇಕು ಎಂದರು.

ನ್ಯೂ ತಿಪ್ಪಸಂದ್ರ ವೆಂಕಟೇಶ್ವರ ಕಾಲೊನಿ ರಸ್ತೆಯಲ್ಲಿ ಒಳಚರಂಡಿಯ ಕಾಮಗಾರಿಗಾಗಿ ರಸ್ತೆ ಮಧ್ಯದ ಭಾಗ ಅಗೆದಿದ್ದು, ಕಾಮಗಾರಿ ಪೂರ್ಣಗೊಂಡು ಆರು ತಿಂಗಳಾದರೂ ರಸ್ತೆ ದುರಸ್ತಿ ಮಾಡಿಲ್ಲ ಎಂದು ನಾಗರಿಕರು ದೂರಿದರು. ಜಲಮಂಡಳಿ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಕಾಕ್ಸ್ ಟೌನ್‌ನಲ್ಲಿ ಹೊಸ ಮಾರುಕಟ್ಟೆಗೆ ಶೀಘ್ರ ಚಾಲನೆ ನೀಡಲಾಗುವುದು. ಪೂರ್ವ ವಲಯ ವ್ಯಾಪ್ತಿಯಲ್ಲಿ ಅಪಘಾತ ಸ್ಥಳಗಳನ್ನು ಗುರುತಿಸಿ, ಆ ಸ್ಥಳಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿಗಳ ಸಲಹೆ ಮೇರೆಗೆ ರಸ್ತೆ ಉಬ್ಬುಗಳನ್ನು ಹಾಕಿ ಅಪಘಾತಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳುವುದಾಗಿ ನಾಗರಿಕರಿಗೆ ಭರವಸೆ ನೀಡಿದರು.

ಸದಾನಂದ ನಗರದಲ್ಲಿ ರಸ್ತೆ ಡಾಂಬರೀಕರಣ ಮಾಡಬೇಕು, ಇ-ಖಾತಾ ಸಮಸ್ಯೆ ಪರಿಹರಿಸಬೇಕು, ಬೀದಿ ದೀಪಗಳನ್ನು ಅಳವಡಿಸಬೇಕು, ಸಾರ್ವಜನಿಕ ಶೌಚಾಲಯ ನಿರ್ಮಿಸಬೇಕು, ಖಾಲಿ ಜಾಗದಲ್ಲಿ ತ್ಯಾಜ್ಯ ಹಾಕುವುದನ್ನು ನಿಯಂತ್ರಿಸಬೇಕು, ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಬೇಕು, ರಸ್ತೆ ಬದಿ ಚರಂಡಿಗಳಲ್ಲಿ ಹೂಳೆತ್ತಿ ಸ್ವಚ್ಛತೆ ಕಾಪಾಡಬೇಕು, ರಿಚರ್ಡ್ಸ್ ಟೌನ್‌ನಲ್ಲಿ ರಸ್ತೆಗುಂಡಿಗಳನ್ನು ಮುಚ್ಚಬೇಕು, ಸ್ಕೈವಾಕ್‌ಗಳನ್ನು ನಿರ್ವಹಣೆ ಮಾಡಬೇಕು ಎಂದು ನಾಗರಿಕರು ಮನವಿ ಮಾಡಿದರು.

ವಲಯ ಆಯುಕ್ತೆ ಪ್ರೀತಿ ಗೆಹ್ಲೋಟ್, ವಲಯ ಜಂಟಿ ಆಯುಕ್ತೆ ಸರೋಜಾ, ಮುಖ್ಯ ಎಂಜಿನಿಯರ್ ಸುಗುಣಾ, ಉಪ ಆಯುಕ್ತ ರಾಜು ಉಪಸ್ಥಿತರಿದ್ದರು.

ಎನ್‌ಐಎ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಶರಣಾಗತರಾದ ನಕ್ಸಲ್ ಬೆಂಬಲಿಗರು ಮುಖ್ಯವಾಹಿನಿಯಲ್ಲಿ ಸೇರಿಕೊಂಡೇ ದೇಶವಿರೋಧಿ ಚಟುವಟಿಕೆಗಳಿಗೆ ಬೆಂಬಲ ನೀಡುವ ಕುರಿತು ಸರ್ಕಾರ ಎಚ್ಚರ ವಹಿಸಬೇಕಾಗಿದೆ. ಈ ಕುರಿತು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಸಮಗ್ರ ತನಿಖೆ ಕೈಗೊಳ್ಳಬೇಕು ಎಂದು ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಆಗ್ರಹಿಸಿದರು.

ರಾಜ್ಯಸಭೆ ಕಲಾಪದಲ್ಲಿ ವಿಶೇಷ ಪ್ರಸ್ತಾಪ ಸಲ್ಲಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿನ ನಕ್ಸಲ್ ಎನ್‌ಕೌಂಟರ್ ಕುರಿತು ಉಲ್ಲೇಖಿಸಿದರು.

‘ರೈಲುಗಳನ್ನು ಗುರಿಯಾಗಿಸಿಕೊಂಡ ವಿಧ್ವಂಸಕ ಘಟನೆಗಳಿಗೆ ಕಾರಣವಾಗುವ ದೇಶವಿರೋಧಿ ಕೃತ್ಯಗಳನ್ನು ತಡೆಯಲು ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳಬೇಕು’ ಎಂದು ಒತ್ತಾಯಿಸಿದರು.

ಇಂತಹ ದುಷ್ಕೃತ್ಯಗಳಿಂದಾಗಿ ಸಾರ್ವಜನಿಕ ಸುರಕ್ಷತೆ ಮತ್ತು ರಾಷ್ಟ್ರದ ಭದ್ರತೆಗೆ ಅಪಾಯ ಉಂಟಾಗಿದೆ. ಇಂತಹ ವಿಧ್ವಂಸಕ ಕೃತ್ಯಗಳಿಗೆ ಕಡಿವಾಣ ಅತ್ಯಗತ್ಯ ಎಂದು ಅವರು ಪ್ರತಿಪಾದಿಸಿದರು.

ದೇಶ ಜಾಗರೂಕವಾಗಿಯೇ ಇರಬೇಕಾದ ತುರ್ತು ಅಗತ್ಯ ಹಿಂದೆಂದಿಗಿಂತಲೂ ಅಧಿಕವಾಗಿದೆ ಎಂದರು.

ಕೆಜಿಎಫ್: ‘ಇಂಟಿಗ್ರೇಟೆಡ್ ಟೌನ್‌ಶಿಪ್’ ಡಿಪಿಆರ್‌ಗೆ ಸೂಚನೆ

ಬೆಂಗಳೂರು: ಕೆಜಿಎಫ್‌ನಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಬಿ. ಎಸ್. ಸುರೇಶ್ ತಿಳಿಸಿದರು.

ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ, ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಅಧಿಕಾರಿಗಳು, ಕೆಜಿಎಫ್ ಮತ್ತು ಬಂಗಾರಪೇಟೆ ತಹಶೀಲ್ದಾರ್ ಹಾಗೂ ಕೆಜಿಎಫ್ ನಗರಾಭಿವೃದ್ಧಿ ಆಯುಕ್ತರು ಹಾಗೂ ನಗರ ಯೋಜನಾ ಆಯುಕ್ತರ ಜೊತೆ ಸಚಿವರು ಸಭೆ ನಡೆಸಿದರು.

ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಾಣಕ್ಕೆ ಕೆಜಿಎಫ್ ತಾಲ್ಲೂಕಿನಲ್ಲಿ ಬಂಗಾರದ ಗಣಿ ಗ್ರಾಮದ ಸರ್ವೆ ನಂ. 3 ರಲ್ಲಿ 294 ಎಕರೆ ಜಾಗ ಗುರುತಿಸಲಾಗಿದೆ. ಇದರಲ್ಲಿ ಕೆಲವು ಎಕರೆ ಜಾಗವನ್ನು ನಗರಾಭಿವೃದ್ಧಿ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಉಳಿದ ಜಮೀನನ್ನು ಪಡೆಯಲು ಕ್ರಮ ವಹಿಸುವಂತೆ ಸಚಿವರು ಸೂಚಿಸಿದರು.

ಟೌನ್‌ಶಿಪ್ ನಿರ್ಮಾಣ ಮಾಡಲು ಉದ್ದೇಶಿಸಿರುವ ಜಾಗದಿಂದ ಚೆನ್ನೈ-ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿ 2.5 ಕಿ.ಮೀ ಅಂತರದಲ್ಲಿದ್ದು, ನೇರ ಸಂಪರ್ಕ ಕಲ್ಪಿಸಲು ಸಾಧ್ಯವೇ ಎಂಬುವುದನ್ನು ಪರಿಶೀಲಿಸಬೇಕು. ಟೌನ್‌ಶಿಪ್ ನಿರ್ಮಾಣಕ್ಕೆ ಎಷ್ಟು ವೆಚ್ಚ ತಗಲಬಹುದು ಎನ್ನುವುದರ ಬಗ್ಗೆ ವಿಸ್ತೃತ ವರದಿ ನೀಡುವಂತೆಯೂ ಅವರು ಸೂಚಿಸಿದರು.

ವಸತಿ ಯೋಜನೆ, ಕೈಗಾರಿಕೆಗಳು, ಆರೋಗ್ಯ, ಶೈಕ್ಷಣಿಕ ಸಂಸ್ಥೆಗಳು, ವಾಣಿಜ್ಯ ಮುಂಗಟ್ಟುಗಳು, ಬ್ಯಾಂಕ್‌ಗಳು, ಉದ್ಯಾನವನ ಸೇರಿದಂತೆ ಮೂಲಸೌಕರ್ಯಗಳನ್ನು ಒಳಗೊಂಡಂತೆ ಟೌನ್‌ಶಿಪ್ ನಿರ್ಮಿಸಲು ಇಲಾಖೆ ಮುಂದಾಗಿದೆ.



ತಟ್ಟಗುಪ್ಪೆಯಲ್ಲಿ ಮಲ್ಲಿಗವಾಡ್ ಮತ್ತು ವಿಭಿನ್ನ ಫೌಂಡೇಷನ್ ವತಿಯಿಂದ ಕೈಗೊಳ್ಳಲಾಗಿರುವ ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್‌.ಟಿ. ಸೋಮಶೇಖರ್ ಚಾಲನೆ ನೀಡಿದರು

ದಾನಿಗಳಿಂದ ಕೆರೆ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ತರಳುಕೆರೆ, ಗುಳಕ ಮಲೆಯ ಅಣ್ಣಯ್ಯ ಶೆಟ್ಟಿಕೆರೆ, ತಟ್ಟಗುಪ್ಪೆಯ ಜಂಬುನಕುಂಟೆ ಕೆರೆಗಳನ್ನು ಮಲ್ಲಿಗವಾಡ್ ಮತ್ತು ಕೆಲವು ಫೌಂಡೇಷನ್‌ಗಳಿಂದ ₹3.20 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಮಾಡುವ ಕಾರ್ಯ ಆರಂಭಗೊಂಡಿದೆ.

ಶಾಸಕ ಎಸ್‌.ಟಿ. ಸೋಮಶೇಖರ್ ಅವರು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಬುಧವಾರ ಚಾಲನೆ ನೀಡಿದರು.

ಎಸ್‌.ಟಿ. ಸೋಮಶೇಖರ್ ಮಾತನಾಡಿ, ‘ದಾನಿಗಳ ನೆರವಿನಿಂದ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಕೆರೆಗಳ ಅಭಿವೃದ್ಧಿಪಡಿಸಲಾಗುತ್ತಿದೆ. ಈ ಮೂಲಕ ಅಂತರ್ಜಲವೃದ್ಧಿಗೆ ಸಹಕಾರಿಯಾಗಲಿದೆ. ಉಳ್ಳವರು ಸಹ ತಮ್ಮ ಗ್ರಾಮಗಳು, ಬಡಾವಣೆಗಳಲ್ಲಿ ಕೆರೆಗಳ ಅಭಿವೃದ್ಧಿ ಮಾಡಬೇಕು’ ಎಂದು ಅಭಿಪ್ರಾಯಪಟ್ಟರು.

ಸಮಾಜ ಸೇವಕ ಆನಂದ್ ಮಾತನಾಡಿ, ‘ಕೆರೆಗಳು ಉಳಿದರೆ ಮನುಷ್ಯ, ಪ್ರಾಣಿ ಪಕ್ಷಿಗಳು, ಪಶುಗಳಿಗೆ ಬೇಸಿಗೆ ಕಾಲದಲ್ಲಿ ನೀರಿನ ದಾಹ ನೀಗುತ್ತದೆ. ಮಲ್ಲಿಗವಾಡ್ ಮತ್ತು ವಿಭಿನ್ನ ಫೌಂಡೇಷನ್‌ಗಳ ಕೆರೆಗಳ ಅಭಿವೃದ್ಧಿ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ತರಳು ಗ್ರಾಮ ಪಂಚಾಯಿತಿ ವತಿಯಿಂದ ಅಂಗವಿಕಲರಿಗೆ ನೀಡಿದ 126 ಫಲಾನುಭವಿಗಳಿಗೆ ತಲಾ ತಲಾ ₹11 ಸಾವಿರ ಸಹಾಯ ಧನ, ಶುದ್ಧ ಕುಡಿಯುವ ನೀರಿನ ಘಟಕ, ₹2 ಕೋಟಿ ವೆಚ್ಚದಲ್ಲಿ ತರಳು, ಕುಂಚಿಟಿಗರ ಪಾಳ್ಯದಲ್ಲಿ ಮನೆಮನೆಗೆ ನೀರಿನ ವ್ಯವಸ್ಥೆ, ಗುಂಡಾಜನೇಯ ಸ್ವಾಮಿ ದೇವಸ್ಥಾನ ಬಳಿ ಸಿಸಿ ರಸ್ತೆ ಕಾಮಗಾರಿ, ₹4.5 ಕೋಟಿ ವೆಚ್ಚದಲ್ಲಿ ಮೈಸೂರು ರಸ್ತೆಯಿಂದ ರಾಮೋಹಳ್ಳಿ, ಚಂದ್ರಪ್ಪ ಸರ್ಕಲ್, ಚಿಕ್ಕನಹಳ್ಳಿ, ತಾವರೆಕೆರೆ ರಸ್ತೆ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಡಿ. ಹನುಮಂತಯ್ಯ, ದಾನಿ ಡೇವಿಡ್, ವಿವಿಧ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಪಿ.ಬಾಲರಾಜ್, ಆರ್.ಸಂಪತ್‌ರಾಜು, ಬಿ.ಎಚ್.ಪ್ರಭು, ವಿ.ವೇಣುಗೋಪಾಲ್, ಡಿ.ಆನಂದಸ್ವಾಮಿ, ಪಟೇಲ್ ಕೆ.ಎನ್. ದೇವರಾಜು, ಉಪಾಧ್ಯಕ್ಷರಾದ ರೂಪಾ ವೆಂಕಟೇಶ್, ನಾಗಮ್ಮ, ಸದಸ್ಯರಾದ ಶಿಲ್ಪ ಷಣ್ಮುಖ, ಪಿ.ನಾರಾಯಣಪ್ಪ, ಜಯಣ್ಣ, ಲೋಕೇಶ್, ಪವಿತ್ರ ಸೋಮಶೇಖರ್ ರೆಡ್ಡಿ, ಕೆ.ಎನ್. ವಿನಯ್, ನಾಗರಾಜು, ಷಣ್ಮುಖ, ಜಾಕಪ್, ಗಾಯಿತ್ರಿ ವೆಂಕಟರಮಣಪ್ಪ, ಲಕ್ಷ್ಮಿ ಸುರೇಶ್ ಇದ್ದರು.

ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಆಶಯ

‘ಕಾರ್ಪೊರೇಟ್ ಸಂಸ್ಥೆಗಳು ಐಟಿಐ ದತ್ತು ಪಡೆಯಲಿ’

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಡಾ. ಶರಣಪ್ರಕಾಶ್ ಪಾಟೀಲ ಹಾಗೂ ಸಿಸ್ಕೋ ಇಂಡಿಯಾದ ಯೋಜನಾ ವ್ಯವಸ್ಥಾಪಕಿ ಶ್ರೇಯಾ ಅರೋರಾ ಒಪ್ಪಂದದ ಪತ್ರವನ್ನು ವಿನಿಮಯ ಮಾಡಿಕೊಂಡರು. ಆರ್. ರಾಗಪ್ರಿಯಾ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಕಾರ್ಪೊರೇಟ್ ಸಂಸ್ಥೆಗಳು ಕೂಡ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು (ಐಟಿಐ) ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಬೇಕು. ಉದ್ಯೋಗ ಆಧಾರಿತ ಕೌಶಲ ತರಬೇತಿ ಕೊಡಿಸಲು ಮುಂದಾಗಬೇಕು’ ಎಂದು ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಆಶಯ ವ್ಯಕ್ತಪಡಿಸಿದರು.

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ನಗರದಲ್ಲಿ ಬುಧವಾರ ಆಯೋಜಿಸಿದ್ದ ವಿವಿಧ ಸಂಸ್ಥೆಗಳೊಂದಿಗೆ ಒಪ್ಪಂದಕ್ಕೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

‘ಯುವ ಸಮೂಹಕ್ಕೆ ಕೌಶಲದ ತರಬೇತಿ ನೀಡಿ, ಸಬಲೀಕರಣ ಮಾಡಲು ಸರ್ಕಾರ ಈಗಾಗಲೇ ಹಲವು ಯೋಜನೆ ಕೈಗೊಂಡಿದೆ. ಕಾರ್ಪೊರೇಟ್ ಸಂಸ್ಥೆಗಳು ಕೂಡ ಈ ಕಾರ್ಯಕ್ಕೆ ಕೈ ಜೋಡಿಸಬೇಕಿದೆ. ರಾಜ್ಯದ ಹತ್ತು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಆಧುನೀಕರಣಕ್ಕೆ ನಮ್ಮ ಸರ್ಕಾರ ಮುಂದಾಗಿದೆ. ಈ ನಿಟ್ಟಿನಲ್ಲಿ ಕೆಲವು ಸಂಸ್ಥೆಗಳ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಐಟಿಐ ಸಂಸ್ಥೆಗಳ ಉನ್ನತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದರು.

‘ಐಟಿಐಗಳಲ್ಲಿರುವ ಹಳೆಯ ಉಪಕರಣಗಳನ್ನು ಬದಲಾವಣೆ ಮಾಡಿ, ಹೊಸ ಉಪಕರಣಗಳನ್ನು ಅಳವಡಿಸಲು ಮುಂದಾಗಿದ್ದೇವೆ. ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಬೆಂಗಳೂರು, ಕಲಬುರಗಿ ಸೇರಿ ವಿವಿಧ ಜಿಲ್ಲೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ’ ಎಂದರು.

‘ಪ್ರಧಾನಮಂತ್ರಿ ಸೂರ್ಯ ಘರ್–ಮುಫ್ತ್ ಬಿಜ್ಲಿ ಯೋಜನೆಯಡಿ ರಾಜ್ಯದ 252 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ, ಐದು ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಸೌರ ಚಾವಣಿ ಅಳವಡಿಕೆ ಮತ್ತು ನಿರ್ವಹಣೆಯ ಬಗ್ಗೆ ಒಂದು ವಾರದ ತರಬೇತಿ ಪಡೆದಿದ್ದಾರೆ’ ಎಂದು ಸಚಿವರು ತಿಳಿಸಿದರು.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್, ಉದ್ಯೋಗ ಮತ್ತು ತರಬೇತಿ ಇಲಾಖೆಯ ಆಯುಕ್ತೆ ಆರ್. ರಾಗಪ್ರಿಯಾ ಉಪಸ್ಥಿತರಿದ್ದರು.

ಇಲಾಖೆಯ ನೂತನ ಒಪ್ಪಂದಗಳು

- ರಾಜ್ಯದ 10 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ‘ಬ್ರಿಡ್ಜ್’ ಕಾರ್ಯಕ್ರಮ ಅನುಷ್ಠಾನಕ್ಕೆ ಬಾಷ್ ಲಿಮಿಟೆಡ್ ಮತ್ತು ಫಂಕ್ಷನಲ್ ವೊಕೇಷನಲ್ ಟ್ರೇನಿಂಗ್ ರಿಸರ್ಚ್ ಸೊಸೈಟಿ (ಎಫ್‌ವಿಟಿಆರ್‌ಎಸ್) ಜತೆಗೆ ಒಪ್ಪಂದ
- ಬೆಂಗಳೂರು ಮತ್ತು ಕಲಬುರಗಿ ವಿಭಾಗಗಳಲ್ಲಿರುವ 126 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ತರಬೇತುದಾರರು, ಕಿರಿಯ ತರಬೇತಿ ಅಧಿಕಾರಿಗಳಿಗೆ ಉದ್ಯೋಗಾರ್ಹತಾ ಕೌಶಲಗಳ ತರಬೇತಿಗೆ ವಾಧ್ವಾನಿ ಫೌಂಡೇಶನ್ ಜತೆಗೆ ಒಪ್ಪಂದ
- ಮೈಸೂರು, ಬೆಳಗಾವಿ ವಿಭಾಗಗಳ 144 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ತರಬೇತುದಾರರು, ಕಿರಿಯ ತರಬೇತಿ ಅಧಿಕಾರಿಗಳಿಗೆ ಉದ್ಯೋಗಾರ್ಹತಾ ಕೌಶಲಗಳ ತರಬೇತಿ ನೀಡಲು ಕ್ವೆಸ್ಟ್ ಅಲಯನ್ಸ್ ಜತೆಗೆ ಒಪ್ಪಂದ
- 20 ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಸೌರ, ವಿದ್ಯುತ್ ಮತ್ತು ಕೈಗಾರಿಕಾ ಸ್ವಯಂಚಾಲನ ವ್ಯಾಪಾರಗಳಿಗೆ ಪ್ರಯೋಗಾಲಯಗಳನ್ನು ಸ್ಥಾಪಿಸಲು ಶ್ನೈಡರ್ ಎಲೆಕ್ಟ್ರಿಕ್ ಇಂಡಿಯಾ ಫೌಂಡೇಷನ್ ಜತೆಗೆ ಒಪ್ಪಂದ

ಮೇಕೆದಾಟಿಗೆ ಅನುಮತಿ ಕೊಡಿ: ಎಚ್‌ಡಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಮೇಕೆದಾಟು ಯೋಜನೆಗೆ ಅನುಮತಿ ನೀಡಬೇಕು ಎಂದು ರಾಜ್ಯಸಭೆಯ ಜೆಡಿಎಸ್ ಸದಸ್ಯ ಎಚ್.ಡಿ.ದೇವೇಗೌಡ ಒತ್ತಾಯಿಸಿದರು.

ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆ ಕುರಿತು ರಾಜ್ಯಸಭೆಯಲ್ಲಿ ಬುಧವಾರ ಪ್ರಸ್ತಾಪಿಸಿದ ಅವರು, ‘ರಾಜ್ಯದಲ್ಲಿ ಆಡಳಿತ ನಡೆಸಿದ ಎಲ್ಲ ಸರ್ಕಾರಗಳು ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಪ್ರಯತ್ನಿಸಿವೆ. ಆದರೆ, ಯಶಸ್ಸು ಸಿಕ್ಕಿಲ್ಲ. ಈ ಯೋಜನೆಗೆ ಅನುಮೋದನೆ ನೀಡುವಂತೆ ರಾಜ್ಯ ಸರ್ಕಾರ ಪ್ರಸ್ತಾವನೆ ಸಲ್ಲಿಸಿದೆ. ಎಲ್ಲ ರಾಜಕೀಯಗಳನ್ನು ಬದಿಗಿಟ್ಟು ಈ ಯೋಜನೆಗೆ ಒಪ್ಪಿಗೆ ನೀಡಬೇಕು’ ಎಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

‘ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. ನಗರದಲ್ಲಿ 1.45 ಕೋಟಿ ಜನರು ಇದ್ದಾರೆ. ಪ್ರಸ್ತುತ 19 ಟಿಎಂಸಿ ಅಡಿ ಕಾವೇರಿ ನೀರನ್ನು ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ. ಆದರೆ, ನಗರದ ಬೇಡಿಕೆ ಪೂರೈಸಲು ಸಾಲುತ್ತಿಲ್ಲ. ಟ್ಯಾಂಕರ್ ಮಾಫಿಯಾ ಜನರನ್ನು ಲೂಟಿ ಮಾಡುತ್ತಿದೆ. ನೀರಿನ ಒಂದು ಟ್ಯಾಂಕರ್‌ಗೆ ₹3 ಸಾವಿರ ನೀಡಬೇಕಿದೆ. ನಾಲ್ಕು ಜನರು ಇರುವ ಒಂದು ಕುಟುಂಬವು ತಿಂಗಳಿಗೆ ಕುಡಿಯುವ ನೀರಿಗೆ ₹20 ಸಾವಿರ ಖರ್ಚು ಮಾಡಬೇಕಾದ ದಯನೀಯ ಸ್ಥಿತಿಯಿದೆ. ಮೇಕೆದಾಟು ಯೋಜನೆ ಅನುಷ್ಠಾನದಿಂದ ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಬಹುದು’ ಎಂದು ಗಮನ ಸೆಳೆದರು.

ಯಾರೇ ಬಂದರೂ ಸಂತೋಷ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾಸನ ಸಮಾವೇಶವನ್ನು ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ನಡೆಸಲಾಗುತ್ತಿದೆ. ನಾವು ಈ ಕಾರ್ಯಕ್ರಮಕ್ಕೆ ಎಲ್ಲರನ್ನು ಆಹ್ವಾನಿಸಿದ್ದೇವೆ. ಯಾರೇ ಬಂದರೂ ಸಂತೋಷ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ಹಾಸನದ ಸಮಾವೇಶಕ್ಕೆ ಸ್ವಾಭಿಮಾನಿ ಒಕ್ಕೂಟದಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನ ಬರಲಿದ್ದಾರೆ’ ಎಂಬ ಮುಖ್ಯಮಂತ್ರಿ ಹೇಳಿಕೆ ಬಗ್ಗೆ ಸುದ್ದಿಗಾರರು ಕೇಳಿದಾಗ, ‘ಬಹಳ ಸಂತೋಷ. ಅವರು ಬರಲಿ. ಎಲ್ಲ ವರ್ಗದ ಜನ ಬೆಂಬಲದಿಂದಾಗಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ’ ಎಂದರು.

ಸಮಾವೇಶದ ಸಿದ್ಧತೆ ಬಗ್ಗೆ ಕೇಳಿದಾಗ, ‘ಮಳೆ ಬಂದರೆ ಏನೂ ಮಾಡಲು ಸಾಧ್ಯವಿಲ್ಲ. ಅದು ಪ್ರಕೃತಿ. ಸಮಾವೇಶಕ್ಕೆ ನಮ್ಮವರು ಎಲ್ಲ ಸಿದ್ಧತೆ ಮಾಡಿಕೊಂಡಿದ್ದಾರೆ’ ಎಂದು ಅವರು ಹೇಳಿದರು.

ನಗರದ ಡ್ಯಾಫೋಡಿಲ್ ಆಂಗ್ಲ ಶಾಲೆ ವಿದ್ಯಾರ್ಥಿಗಳ ಕಾರ್ಯ

₹3 ಲಕ್ಷ ದೇಣಿಗೆ ಸಂಗ್ರಹಿಸಿ ಪ್ರಾಣಿ ದತ್ತು ಪಡೆದ ಮಕ್ಕಳು

ಪ್ರಜಾವಾಣಿ ವಾರ್ತೆ

ಆನೇಕಲ್: ಬೆಂಗಳೂರಿನ ಡ್ಯಾಫೋಡಿಲ್ ಆಂಗ್ಲ ಶಾಲೆ ವಿದ್ಯಾರ್ಥಿಗಳು ₹3.15 ಲಕ್ಷ ದೇಣಿಗೆ ಸಂಗ್ರಹಿಸಿ ಬನ್ನೇರುಘಟ್ಟ ಜೈವಿಕ ಉದ್ಯಾನದ ವಿವಿಧ ಪ್ರಾಣಿಗಳನ್ನು ಸೋಮವಾರ ದತ್ತು ಸ್ವೀಕರಿಸಿದ್ದಾರೆ.

‘ವಾತ್ಸಲ್ಯ ಆನಂದ: ಬದುಕಿ ಮತ್ತು ಬದುಕಲು ಬಿಡಿ’ ಧ್ಯೇಯ ವಾಕ್ಯದಡಿ ಶಾಲೆಯ ವಿದ್ಯಾರ್ಥಿಗಳು ವಿವಿಧ ಕಡೆಯಿಂದ ದೇಣಿಗೆ ಸಂಗ್ರಹಿಸಿದ್ದರು.

ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ಪೋಷಕರು ಒಗ್ಗೂಡಿ ಬನ್ನೇರುಘಟ್ಟ ಜೈವಿಕ ಉದ್ಯಾನದ ಹಿಮಾಲಯದ ಕಪ್ಪು ಕರಡಿ, ಘರಿಯಲ್ (ಉದ್ದನೆಯ ಬಾಯಿಯ ಮೊಸಳೆ) ಅನ್ನು ಎರಡು ವರ್ಷ ಮತ್ತು ಮುಳ್ಳುಹಂದಿಯನ್ನು ಒಂದು ವರ್ಷ ಅವಧಿಗೆ ದತ್ತು ಸ್ವೀಕರಿಸಿದರು. ಈ ಸಂಬಂಧ ವಿದ್ಯಾರ್ಥಿಗಳು ₹3.15 ಲಕ್ಷ ಮೊತ್ತದ ಚೆಕ್ ಅನ್ನು ಸಿಬ್ಬಂದಿಗೆ ಹಸ್ತಾಂತರಿಸಿದರು.

ಸಂಗ್ರಹಿಸಿದ ದೇಣಿಗೆ ಮೊತ್ತವನ್ನು ಉದ್ಯಾನದ ಪಶು ವೈದ್ಯಾಧಿಕಾರಿ ಡಾ.ಆನಂದ್ ಅವರಿಗೆ ಮಕ್ಕಳು ಹಸ್ತಾಂತರಿಸಿದರು. ದತ್ತು ಸ್ವೀಕಾರ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಪ್ರಮಾಣ ಪತ್ರ ಸ್ವೀಕರಿಸಿದರು.

‘ಇತ್ತೀಚಿನ ದಿನಗಳಲ್ಲಿ ಪ್ರಾಣಿಗಳ ದತ್ತು ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ದೊರೆಯುತ್ತಿದೆ. ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ವಿವಿಧ ಕಂಪನಿಗಳ ಉದ್ಯೋಗಿಗಳು ದತ್ತು ಪಡೆಯಲು ಮುಂದಾಗುತ್ತಿದ್ದಾರೆ’ ಎಂದು ಉದ್ಯಾನದ ಸಿಬ್ಬಂದಿ ತಿಳಿಸಿದರು.



ಬೆಂಗಳೂರಿನ ಡ್ಯಾಫೋಡಿಲ್ ಆಂಗ್ಲ ಶಾಲೆಯ ವಿದ್ಯಾರ್ಥಿಗಳು ಬನ್ನೇರುಘಟ್ಟ ಜೈವಿಕ ಉದ್ಯಾನದದಲ್ಲಿ ಪ್ರಾಣಿಗಳ ದತ್ತು ಸ್ವೀಕರಿಸಲು ₹3.15 ಲಕ್ಷ ಚೆಕ್ ಅನ್ನು ಉದ್ಯಾನ ಸಿಬ್ಬಂದಿಗೆ ಹಸ್ತಾಂತರಿಸಿದರು



ಹಿಮಾಲಯದ ಕಪ್ಪು ಕರಡಿ

‘ಝೂ ಕ್ಲಬ್’ಗೆ ಉತ್ತಮ ಸ್ಪಂದನೆ

ಯುವ ಮನಸ್ಸುಗಳನ್ನು ಪ್ರಕೃತಿಯತ್ತ ಸೆಳೆಯಲು ಮತ್ತು ವನ್ಯಪ್ರಾಣಿಗಳ ಬಗ್ಗೆ ಜಾಗೃತಿ ಮೂಡಿಸಲು ಬನ್ನೇರುಘಟ್ಟ ಜೈವಿಕ ಉದ್ಯಾನ ರೂಪಿಸಿರುವ ಝೂ ಕ್ಲಬ್‌ಗೆ ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ.

ಪರಿಸರ ಸಂರಕ್ಷಣೆಯಲ್ಲಿ ಯುವಕರನ್ನು ತೊಡಗಿಸಿಕೊಳ್ಳಲು ಮತ್ತು ಪ್ರಕೃತಿ, ವನ್ಯಜೀವಿಗಳ ಸಂರಕ್ಷಣೆಗೆ ಯುವ ಮನಸ್ಸುಗಳನ್ನು ಝೂ ಕ್ಲಬ್ ಪ್ರೇರೆಪಿಸುತ್ತಿದೆ.

ಝೂ ಕ್ಲಬ್ 15 ವಾರಗಳ ಕಾರ್ಯಕ್ರಮವಾಗಿದ್ದು ಸದ್ಯ 60 ವಿದ್ಯಾರ್ಥಿಗಳು ಸದಸ್ಯರಾಗಿದ್ದಾರೆ. ಪ್ರತಿ ಭಾನುವಾರ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನಡೆಯುವ ವಿವಿಧ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದಾರೆ.

ಪ್ರಾಣಿಗಳ ವೀಕ್ಷಣೆ, ಪ್ರಾಣಿಗಳಆರೈಕೆ, ವರ್ತನೆ ಮತ್ತು ಚಲನವಲನದ ಬಗ್ಗೆ ಮಾಹಿತಿಯನ್ನು ವಿದ್ಯಾರ್ಥಿಗಳು ಅರಿಯುತ್ತಿದ್ದಾರೆ.

ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದ್ದು, ಖಾಸಗಿ ಶಾಲಾ ಮಕ್ಕಳಿಗೆ ₹1,000 ಶುಲ್ಕ ವಿಧಿಸಲಾಗಿದೆ.

ಸೇನೆ ಕುಟುಂಬ ಭೇಟಿ

ಭಾರತೀಯ ಸೇನೆ, ವಾಯು ಪಡೆ ಮತ್ತು ನೌಕಾಪಡೆ ಸಿಬ್ಬಂದಿಯ 200ಕ್ಕೂ ಹೆಚ್ಚು ಕುಟುಂಬ ಸದಸ್ಯರನ್ನು ಕಳೆದ ವಾರ ಜೈವಿಕ ಉದ್ಯಾನಕ್ಕೆ ಬರ ಮಾಡಿಕೊಂಡು ಉದ್ಯಾನ ಪರಿಚಯ ಮಾಡಿಕೊಡಲಾಯಿತು. ಪ್ರಕೃತಿಯ ಬಗ್ಗೆ ಸೇನೆಯ ಕುಟುಂಬಗಳಿಗೆ ಮಾಹಿತಿ ನೀಡಲಾಯಿತು ಎಂದು ಸಿಬ್ಬಂದಿ ತಿಳಿಸಿದರು.

ಸಾಸ್ಟ್ ಅಡಿ ಸಿಟಿ ಸ್ಕ್ಯಾನ್, ಎಂಆರ್‌ಐ ವ್ಯವಸ್ಥೆ

ಬೆಂಗಳೂರು: ಜಿಲ್ಲಾ ಆಸ್ಪತ್ರೆಗಳಲ್ಲಿ ಸಿಟಿ ಸ್ಕ್ಯಾನ್, ಎಂಆರ್‌ಐ ವ್ಯವಸ್ಥೆಯ ಸುಧಾರಣೆಗೆ ಮುಂದಾಗಿರುವ ಆರೋಗ್ಯ ಇಲಾಖೆ, ಈ ವ್ಯವಸ್ಥೆಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ಅಡಿ ತಂದಿದೆ.

ಈ ವ್ಯವಸ್ಥೆಯು ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದಡಿ ಸೇವೆ ಒದಗಿಸುತ್ತಿತ್ತು. ಅನಗತ್ಯವಾಗಿ ರೋಗಿಗಳನ್ನು ಸ್ಕ್ಯಾನ್‌ಗೆ ಒಳಪಡಿಸುತ್ತಿರುವುದು, ಅಗತ್ಯ ಇಲ್ಲದಿದ್ದರೂ ಹಲವು ಬಾರಿ ಸ್ಕ್ಯಾನ್ ಮಾಡಿಸುವುದು, ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆಸದೆ ರೆಫರಲ್ ನೀಡಿರುವುದು ಸೇರಿ ವಿವಿಧ ದೂರುಗಳ ಕಾರಣ, ತಜ್ಞರ ಸಲಹೆ ಅನುಸಾರ ಈ ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದ 15 ಜಿಲ್ಲಾ ಆಸ್ಪತ್ರೆಗಳಲ್ಲಿ ಸಿಟಿ ಸ್ಕ್ಯಾನ್ ಯಂತ್ರ ಮತ್ತು ಐದು ಜಿಲ್ಲಾ ಆಸ್ಪತ್ರೆಗಳಲ್ಲಿ ಎಂಆರ್‌ಐ ಯಂತ್ರ ಸಾರ್ವಜನಿಕ– ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) 2017–18ರಿಂದ ಕಾರ್ಯನಿರ್ವಹಿಸುತ್ತಿದೆ ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ತಿಳಿಸಿದ್ದಾರೆ.

‘ವರಿಷ್ಠರಿಂದ ನಿರ್ದಾಕ್ಷಿಣ್ಯಕ್ರಮ’

ಕಲಬುರಗಿ: ‘ಎಷ್ಟೇ ದೊಡ್ಡವರಿದ್ದರೂ ಪಕ್ಷ ವಿರೋಧಿ ಚಟುವಟಿಕೆಯನ್ನು ಯಾರು ಮಾಡ್ತಾರೋ ಅವರ ವಿರುದ್ಧ ವರಿಷ್ಠರು ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳುತ್ತಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ವಾಸ ವ್ಯಕ್ತ ಪಡಿಸಿದರು.


ಬಿ.ವೈ. ವಿಜಯೇಂದ್ರ

ಪಕ್ಷದಲ್ಲಿನ ಭಿನ್ನಮತದ ಕುರಿತು ಸುದ್ದಿಗಾರರು ಬುಧವಾರ ಇಲ್ಲಿ ಕೇಳಿದ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದರು.

‘ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ವರಿಷ್ಠರ ಭೇಟಿಗೆ ದೆಹಲಿಗೆ ಹೋಗಿರಬಹುದು. ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಎಸ್.ಟಿ. ಸೋಮಶೇಖರ್ ಬಗ್ಗೆ ದಿನ ಬೆಳಗಾದರೆ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ಡಿಸೆಂಬರ್ 7ರಂದು ಕೋರ್ ಕಮಿಟಿ ಸಭೆ ಇದೆ. ಅಂದು ಎಲ್ಲವೂ ಸರಿ ಹೋಗಲಿದೆ’ ಎಂದು ಹೇಳಿದರು.

ಮುಖ್ಯಮಂತ್ರಿ ಪತ್ನಿಗೆ ನಿವೇಶನ ಹಂಚಿಕೆ ಪ್ರಕರಣ • ಮುಡಾ ಮಾಜಿ ಅಧ್ಯಕ್ಷರ ವಿಚಾರಣೆ

ಪ್ರಭಾವ ಬೀರಿಲ್ಲ; ತೇಜೋವಧೆ ಸಲ್ಲ

ಪ್ರಜಾವಾಣಿ ವಾರ್ತೆ

ಮೈಸೂರು: ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ 14 ಬದಲಿ ನಿವೇಶನ ಸೇರಿದಂತೆ 50:50 ಅನುಪಾತದಲ್ಲಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಚ್. ವಿ. ರಾಜೀವ್ ಬುಧವಾರ ಇಲ್ಲಿನ ಲೋಕಾಯುಕ್ತ ಎಸ್.ಪಿ. ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು. ಮಧ್ಯಾಹ್ನ 4ರಿಂದ ಸಂಜೆ 7ರವರೆಗೆ ಅವರನ್ನು ತನಿಖಾಧಿಕಾರಿಗಳ ತಂಡವು ವಿಚಾರಣೆಗೆ ಒಳಪಡಿಸಿತು.

ವಿಚಾರಣೆ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ರಾಜೀವ್, ‘ಲೋಕಾಯುಕ್ತ ಅಧಿಕಾರಿಗಳ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಮಾಡುವಂತೆ ಅಧಿಕಾರಿಗಳು ಶಿಫಾರಸು ಮಾಡಿದ್ದರು. ಅದನ್ನು ಮುಡಾ ಸಾಮಾನ್ಯ ಸಭೆಯಲ್ಲಿಟ್ಟು ನಿರ್ಣಯ ಕೈಗೊಳ್ಳಲಾಗಿತ್ತು. ಈ ಸಂಬಂಧ ಸಿದ್ದರಾಮಯ್ಯ ನನಗೆ ಕರೆ ಮಾಡಿರಲಿಲ್ಲ. ಯಾರೂ ಪ್ರಭಾವ ಬೀರಿರಲಿಲ್ಲ. ಅನವಶ್ಯಕವಾಗಿ ಸಿದ್ದರಾಮಯ್ಯ ಕುಟುಂಬವನ್ನು ತೇಜೋವಧೆ ಮಾಡುವುದು ಸರಿಯಲ್ಲ’ ಎಂದರು.

‘ಮುಡಾದಲ್ಲಿ ನಾನು ಅಧ್ಯಕ್ಷನಾಗಿದ್ದಾಗ ಮಾತ್ರವಲ್ಲ, ಹಿಂದಿನಿಂದಲೂ 50:50 ಅನುಪಾತದಲ್ಲಿ ಬದಲಿ ನಿವೇಶನಗಳನ್ನು ನೀಡಲಾಗಿದೆ. ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯದಿಂದ ನಿರ್ದೇಶನ ಬಂದಿತ್ತು. ಬದಲಿ ನಿವೇಶನ ಹಂಚಿಕೆ ಸರಿಯೋ ತಪ್ಪೋ ಎಂಬುದನ್ನು ನ್ಯಾಯಲಯವೇ ನಿರ್ಧರಿಸಬೇಕು. ಯಾರೋ ಹೇಳಿದರೆ ಒಪ್ಪಲಾಗದು’ ಎಂದರು.

‘ನನಗೆ ಜಾರಿ ನಿರ್ದೇಶನಾಲಯದಿಂದ (ಇ.ಡಿ) ನೋಟಿಸ್ ಬಂದಿಲ್ಲ. ಅದು ಕೂಡ ಲೋಕಾಯುಕ್ತದಂತೆಯೇ ಒಂದು ಸಂಸ್ಥೆ. ನೋಟಿಸ್ ಕೊಟ್ಟರೆ ವಿಚಾರಣೆಗೆ ಹಾಜರಾಗುತ್ತೇನೆ’ ಎಂದರು.


ಎಚ್.ವಿ.ರಾಜೀವ್

ಪುರಾವೆ ಇಲ್ಲದೇ ಮಾತನಾಡುವರೇ?


ಬಿ.ಎಸ್. ಯಡಿಯೂರಪ್ಪ

ಶಿವಮೊಗ್ಗ: ಮೈಸೂರಿನ ಮುಡಾದ ಲ್ಲಿ ಸಾವಿರಾರು ನಿವೇಶನಗಳನ್ನು ಕಾನೂನು ಬಾಹಿರವಾಗಿ ಹಂಚಿಕೆ ಮಾಡಲಾಗಿದೆ. ಜಾರಿ ನಿರ್ದೇಶನಾಲಯದವರು (ಇ.ಡಿ) ಪುರಾವೆ ಇಲ್ಲದೇ ಮಾತನಾಡುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಹೇಳಿದರು.

‘ಈ ಬಗ್ಗೆ ಮಾಧ್ಯಮಗಳಲ್ಲೂ ವರದಿಯಾಗುತ್ತಿದೆ. ಒಮ್ಮೆ ತಪ್ಪು ಮಾಡಿದರೆ ಅದು ತಪ್ಪೇ. ನಿವೇಶನ ಮರಳಿಸುವುದು ಬಿಡುವುದು ಬೇರೆ ವಿಷಯ’ ಎಂದು ಮಾರ್ಮಿಕವಾಗಿ ನುಡಿದರು.

‘ಜಾರಿ ನಿರ್ದೇಶನಾಲಯ ಎಂಬುದು ಸೀಳು ನಾಯಿ’

ಗದಗ: ‘ಕೇಂದ್ರ ಸರ್ಕಾರದ ಕೈಗೊಂಬೆಯಾಗಿರುವ ಇ.ಡಿ (ಜಾರಿ ನಿರ್ದೇಶನಾಲಯ) ಸೀಳು ನಾಳಿ ಇದ್ದಂತೆ. ಅದು ಬಿಜೆಪಿಯ ಅಂಗಸಂಸ್ಥೆಯಾಗಿದೆ. ವಿರೋಧ ಪಕ್ಷಗಳನ್ನು ಗುರಿಪಡಿಸಿ, ಅಲ್ಲಿನ ನಾಯಕರನ್ನು ಬಲಿ ಹಾಕುವುದೇ ಅದರ ಉದ್ಯೋಗ. ಒಂದರ್ಥದಲ್ಲಿ ವಿಚ್ ಹಂಟಿಂಗ್ ಏಜೆನ್ಸಿ (ಬೇಟೆಯಾಡುವ ಮಾಟಗಾರರ ಏಜೆನ್ಸಿ)’ ಎಂದು ಸಚಿವ ಕೃಷ್ಣ ಬೈರೇಗೌಡ ಹರಿಹಾಯ್ದರು.


ಕೃಷ್ಣ ಬೈರೇಗೌಡ

ಇಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕೇವಲ ರಾಜಕೀಯ ವಿರೋಧಿಗಳ ಮೇಲೆ ಮಾತ್ರ ಕೇಸ್ ಹಾಕಿದ್ದಾರೆ. ಸ್ವಿಸ್ ಬ್ಯಾಂಕ್‌ನಲ್ಲಿ ಹಣ ಇಟ್ಟವರ ಮೇಲೆ ಪ್ರಕರಣ ದಾಖಲಿಸಿದ್ದಾರಾ’ ಎಂದರು.

‘ಈವರೆಗೆ ಇ.ಡಿ ಎಷ್ಟು ಪ್ರಕರಣ ದಾಖಲಿಸಿದೆಯೋ, ಅದರಲ್ಲಿ ಶೇ 90ರಷ್ಟು ಪ್ರಕರಣಗಳು ವಿರೋಧ ಪಕ್ಷಗಳ ಮೇಲೆಯೇ ಇವೆ. ಆ ಪೈಕಿ ಶೇ 1.5ರಷ್ಟು ಪ್ರಕರಣಗಳಲ್ಲಿ ಮಾತ್ರ ಶಿಕ್ಷೆ ಆಗಿದೆ. ಉಳಿದ ವು ಗಳನ್ನು ಅವರಿಗೆ ಸಾಬೀತುಪಡಿಸಲು ಆಗಿಲ್ಲ. ಹಿಟ್ ಆ್ಯಂಡ್ ರನ್ ಮಾಡುವುದೇ ಇದರ ಕೆಲಸ’ ಎಂದು ಅವರು ಆರೋಪಿಸಿದರು. ‘ಜಾರಿ ನಿರ್ದೇಶನಾಲಯದವರು ದೇಶದಲ್ಲಿ ಒಬ್ಬ ಬಿಜೆಪಿ ನಾಯಕನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆಯೇ? ಇದು ರಾಜಕೀಯ ಪ್ರೇರಿತ ದಾಳಿ. ಬಿಜೆಪಿ ಸೋತು ನಿರಾಸೆಯಾಗಿ ಇ.ಡಿಯನ್ನು ಛೂ ಬಿಟ್ಟಿದೆ. ಅದನ್ನು ನಾವು ಕಾನೂನಾತ್ಮಕವಾಗಿ ಹಾಗೂ ಜನತಾ ನ್ಯಾಯಾಲಯದಲ್ಲೂ ಎದುರಿಸುತ್ತೇವೆ’ ಎಂದರು.

ಸುದ್ದಿ 2 ನಿಮಿಷ

‘ಹಾಳು ಬಾವಿಗೆ ನೂಕುವುದು ಗೊತ್ತಿದೆ’

ದಾವಣಗೆರೆ: ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಬಸವಣ್ಣನವರ ಕುರಿತು ನೀಡಿರುವ ಹೇಳಿಕೆಯನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಖಂಡಿಸಿದೆ.

‘ಕೀಳುಮಟ್ಟದ ಹೇಳಿಕೆ ನೀಡುವುದನ್ನು ತಕ್ಷಣ ನಿಲ್ಲಿಸಬೇಕು. ಇಲ್ಲವಾದರೆ, ನಿಮ್ಮನ್ನು ಹಾಳು ಬಾವಿಗೆ ನೂಕುವುದು ಸಮಾಜಕ್ಕೆ ಗೊತ್ತಿದೆ’ ಎಂದು ಎಚ್ಚರಿಕೆ ನೀಡಿದೆ.

‘ಸಮುದಾಯ ಬಾಂಧವರು ಎಂಬ ಕಾರಣಕ್ಕೆ ನಿಮ್ಮ ಹುಚ್ಚಾಟಗಳನ್ನು ಸಹಿಸಿಕೊಂಡಿದ್ದೆವು. ಇಂತಹ ಹುಚ್ಚಾಟಗಳಿಗೆ ಇತಿಶ್ರೀ ಹಾಡುತ್ತೀರೆಂದು ಭಾವಿಸುತ್ತೇವೆ. ಇಲ್ಲವಾದರೆ, ಸಮಾಜವೇ ಇದಕ್ಕೆ ಕಡಿವಾಣ ಹಾಕುತ್ತದೆ’ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಸಮುದಾಯ ಒಡೆಯುವ ಕೃತ್ಯವನ್ನು ಸಹಿಸುವುದಿಲ್ಲ. ಮಹಾಸಭೆಯ ಗೌರವಾಧ್ಯಕ್ಷ ಭೀಮಣ್ಣ ಖಂಡ್ರೆ, ಜನನಾಯಕ ಬಿ.ಎಸ್.ಯಡಿಯೂರಪ್ಪ ಮತ್ತು ನಾನು ಸಮಾಜಕ್ಕೆ ನೀಡಿರುವ ಕೊಡುಗೆಗಳನ್ನು ಅರಿತುಕೊಳ್ಳದೆ ಟೀಕೆ ಮಾಡುವುದು ಸರಿಯಲ್ಲ. ಮಹಾಸಭಾವನ್ನು ಟೀಕಿಸುವ ನೀವು ಸಮಾಜಕ್ಕೆ ನೀಡಿರುವ ಕೊಡುಗೆ ಏನು’ ಎಂದು ಪ್ರಶ್ನಿಸಿದ್ದಾರೆ.



ಐವಿ ದ್ರಾವಣ: ಪ್ರಕರಣ ದಾಖಲಿಸಿ

ಬೆಂಗಳೂರು: ಪಶ್ಚಿಮ ಬಂಗಾಳದ ‘ಪಶ್ಚಿಮ್ ಬಂಗಾ ಫಾರ್ಮಾಸ್ಯುಟಿಕಲ್ಸ್’ ಕಂಪನಿ ಪೂರೈಸಿರುವ ‘ರಿಂಗರ್ಸ್ ಲ್ಯಾಕ್ಟೇಟ್’ ಐವಿ ದ್ರಾವಣವು ಪ್ರಮಾಣಿತ ಗುಣಮಟ್ಟ ಹೊಂದಿರದ ಕಾರಣ ಕಂಪನಿ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಬಾಣಂತಿಯರ ಸಾವಿಗೆ ಕಾರಣವಾಗಿದೆ ಎನ್ನಲಾದ ಈ ದ್ರಾವಣದ ಬಗ್ಗೆ ಬುಧವಾರ ಇಲ್ಲಿ ರಾಜ್ಯ ಔಷಧ ನಿಯಂತ್ರಣ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಈ ವೇಳೆ ಮಾಹಿತಿ ನೀಡಿದ ಅಧಿಕಾರಿಗಳು, ‘ರಾಜ್ಯದ ಔಷಧ ನಿಯಂತ್ರಕರು ನಡೆಸಿದ ಪರೀಕ್ಷೆಯಲ್ಲಿ ದ್ರಾವಣದ 22 ಬ್ಯಾಚ್‌ಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ ಎಂಬ ವರದಿ ಬಂದಿದೆ. ಇದಕ್ಕೆ ಸಂಬಂಧಿಸಿದಂತೆ 13 ಬ್ಯಾಚ್‌ಗಳ ವರದಿ ಪ್ರಶ್ನಿಸಿ, ಕಂಪನಿಯವರು ಕೇಂದ್ರೀಯ ಔಷಧ ಪ್ರಯೋಗಾಲಯದ ಮೆಟ್ಟಿಲೇರಿದ್ದಾರೆ. ಅವುಗಳಲ್ಲಿ ನಾಲ್ಕು ಬ್ಯಾಚ್‌ಗಳು ಗುಣಮಟ್ಟ ಹೊಂದಿವೆಯೆಂದು ಕೇಂದ್ರೀಯ ಔಷಧ ಪ್ರಯೋಗಾಲಯ ವರದಿ ನೀಡಿದೆ’ ಎಂದು ವಿವರಿಸಿದರು. ‘ಉಳಿದ 9 ಬ್ಯಾಚ್‌ಗಳ ವಿಚಾರವಾಗಿ ಕಂಪನಿಯವರನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸಬಹುದಲ್ಲ’ ಎಂದು ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದರು.

‘ರಾಜ್ಯದ ಔಷಧ ನಿಯಂತ್ರಣ ಪ್ರಯೋಗಾಲಯದ ಪರೀಕ್ಷೆಯಲ್ಲಿ ಪ್ರಮಾಣಿತ ಗುಣಮಟ್ಟ ಹೊಂದಿಲ್ಲ ಎಂಬ ವರದಿ ಬಂದಾಗ, ಕೇಂದ್ರೀಯ ಔಷಧ ಪ್ರಯೋಗಾಲಯದಲ್ಲಿ ಗುಣಮಟ್ಟ ಹೊಂದಿದೆ ಎಂದು ವರದಿ ಬರಲು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದ ಸಚಿವರು, ‘ಈ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ವರದಿ ನೀಡಬೇಕು’ ಎಂದು ರಾಜ್ಯ ಔಷಧ ನಿಯಂತ್ರಣ ಅಧಿಕಾರಿಗೆ ಸೂಚಿಸಿದರು.



ಗ್ರಂಥ ಬಿಡುಗಡೆ

ಗದುಗಿನ ತೋಂಟದಾರ್ಯ ಮಠದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಡಾ. ಎಂ.ಎಂ.ಕಲಬುರ್ಗಿ ಅಧ್ಯಯನ ಸಂಸ್ಥೆಯಿಂದ ಹೊರತಂದಿರುವ ‘ಸಂತ ರಾಜಕಾರಣಿ ಡಿ.ಆರ್.ಪಾಟೀಲ’ ಗ್ರಂಥವನ್ನು ಕರ್ನಾಟಕ ಗಾಂಧೀ ಸ್ಮಾರಕನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಬಿಡುಗಡೆ (ಎಡದಿಂದ ಎರಡನೆ ಯವರು) ಮಾಡಿದರು. ಮಾಜಿ ಶಾಸಕ ಡಿ.ಆರ್.ಪಾಟೀಲ, ಸಚಿವ ಕೃಷ್ಣಬೈರೇಗೌಡ, ಸಿದ್ಧರಾಮ ಸ್ವಾಮೀಜಿ, ನಿರ್ಭಯಾನಂದ ಸರಸ್ವತಿ ಸ್ವಾಮೀಜಿ, ಜಗನ್ನಾಥ ಮಹಾರಾಜ್, ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಎಚ್.ಕೆ.ಪಾಟೀಲ ಇದ್ದರು

ಕುಲಪತಿ ನೇಮಕ: ರಾಜ್ಯಪಾಲರ ಅಧಿಕಾರ ಮೊಟಕು– ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಲಪತಿಗಳ ನೇಮಕವೂ ಸೇರಿದಂತೆ ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ರಾಜ್ಯ ಸರ್ಕಾರಕ್ಕೆ ಪರಮಾಧಿಕಾರ ನೀಡುವ ‘ಗುಜರಾತ್ ಮಾದರಿ’ ಕಾಯ್ದೆ ಜಾರಿಗೆ ತರಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ವಿಶ್ವವಿದ್ಯಾಲಯಗಳ ಮೇಲೆ ರಾಜ್ಯಪಾಲರು ಹೊಂದಿರುವ ಅಧಿಕಾರವನ್ನು ಮೊಟಕುಗೊಳಿಸಲು ನಿರ್ಧರಿಸಲಾಗಿದೆ. ಅದಕ್ಕಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000ಕ್ಕೆ ತಿದ್ದುಪಡಿ ಮಾಡಲಾಗುವುದು. ಸಿದ್ಧಗೊಂಡಿರುವ ಕರಡು ಮಸೂದೆಯನ್ನು ಕಾನೂನು ಇಲಾಖೆಯ ಅಭಿಪ್ರಾಯಕ್ಕೆ ಕಳುಹಿಸುತ್ತಿದ್ದೇವೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಸೇರಿದಂತೆ ಕಾಯ್ದೆ ವ್ಯಾಪ್ತಿಗೆ ಒಳಪಡುವ ಎಲ್ಲ ವಿಶ್ವವಿದ್ಯಾಲಯಗಳಿಗೂ ತಿದ್ದುಪಡಿ ಅನ್ವಯವಾಗಲಿದೆ’ ಎಂದರು.

‘ಜಿ. ಪರಮೇಶ್ವರ ಅವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಕಾಯ್ದೆಗೆ ತಿದ್ದುಪಡಿ ತರಲು ಪ್ರಯತ್ನಿಸಿದ್ದರು. ಆದರೆ, ಅಂದಿನ ರಾಷ್ಟ್ರಪತಿಯವರು ಮಸೂದೆಗೆ ಒಪ್ಪಿಗೆ ನೀಡಲಿಲ್ಲ. ಗುಜರಾತ್ ಸರ್ಕಾರ ಈಗ ಹೊಸ ಕಾಯ್ದೆ ಜಾರಿಗೆ ತಂದಿದೆ. ಅಲ್ಲಿನ ಕಾಯ್ದೆ ಪ್ರಕಾರ, ಕುಲಪತಿ, ಪ್ರಭಾರ ಕುಲಪತಿ, ನೇಮಕಾತಿಯಲ್ಲಿ ರಾಜ್ಯಪಾಲರಿಗಿಂತ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಅಧಿಕಾರವಿದೆ. ಕುಲಸಚಿವ, ಮೌಲ್ಯಮಾಪನ ಕುಲಸಚಿವ, ಹಣಕಾಸು ಅಧಿಕಾರಿ, ಸಿಂಡಿಕೇಟ್ ಸದಸ್ಯರ ನೇಮಕಾತಿಯನ್ನೂ ರಾಜ್ಯ ಸರ್ಕಾರವೇ ಮಾಡುತ್ತದೆ’ ಎಂದರು.


ಡಾ.ಎಂ.ಸಿ. ಸುಧಾಕರ್

‘ಗುಜರಾತ್‌ನಲ್ಲಿ ತಿದ್ದುಪಡಿ ತಂದಾಗ, ಅದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಆ ಸರ್ಕಾರದ ನಿರ್ಧಾರವನ್ನು ಕೋರ್ಟ್ ಎತ್ತಿಹಿಡಿದಿತ್ತು. ಹೀಗಾಗಿ, ಗುಜರಾತ್ ಮಾದರಿ ಅನುಸರಿಸುವುದು ಸೂಕ್ತ ಎಂಬ ನಿರ್ಧಾರಕ್ಕೆ ಬರಲಾಗಿದೆ. ಸಂಪುಟ ಸಭೆಯ ಅನುಮೋದನೆ ಪಡೆದ ನಂತರ ಮಸೂದೆಯನ್ನು ಸದನದಲ್ಲಿ ಮಂಡಿಸಲಾಗುವುದು. ವಿಶ್ವವಿದ್ಯಾಲಯಗಳ ಕುಲಪತಿಗಳ ಅಧಿಕಾರಾವಧಿ ಹಾಗೂ ಜವಾಬ್ದಾರಿಗಳ ಕುರಿತ ಅಂಶಗಳನ್ನೂ ಮಸೂದೆಯಲ್ಲಿ ಸೇರಿಸಲಾಗಿದೆ. ಹೊಸ ಕಾಯ್ದೆ ಜಾರಿಗೆ ಬಂದರೆ ರಾಜ್ಯಪಾಲರು ಘಟಿಕೋತ್ಸವಗಳಿಗೆ ಮಾತ್ರ ಸೀಮಿತರಾಗುತ್ತಾರೆ’ ಎಂದರು.

ಶಿಸ್ತು ಸಮಿತಿಗೆ ವಿವರಣೆ ಕೊಟ್ಟ ಯತ್ನಾಳ

ಒಂದನೇ ಪುಟದಿಂದ...


ತಾವು ಪ್ರಸ್ತಾಪಿಸಿರುವ ವಿಷಯಗಳ ಕುರಿತು ನಾಯಕರು ಹಾಗೂ ಕಾರ್ಯಕರ್ತರ ಅಭಿಪ್ರಾಯಗಳನ್ನು ಪಡೆಯಲು ಪ್ರತಿನಿಧಿಗಳನ್ನು ಕಳುಹಿಸಬೇಕು ಎಂದು ಯತ್ನಾಳ ಒತ್ತಾಯಿಸಿದರು. ಶಿಸ್ತು ಸಮಿತಿಯ ಭೇಟಿಯ ಬಳಿಕ ನಾನು ಸಮಾಧಾನ ಆಗಿದ್ದೇನೆ ಎಂದೂ ಹೇಳಿಕೊಂಡರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಯತ್ನಾಳ, ‘ರಾಜ್ಯದಲ್ಲಿ ಯಡಿಯೂರಪ್ಪ ಕುಟುಂಬದ ಹೊಂದಾಣಿಕೆ ರಾಜಕಾರಣದ ಬಗ್ಗೆ ವಿವರಗಳನ್ನು ನೀಡಿದ್ದೇನೆ’ ಎಂದರು.

‘ರಾಜ್ಯದಲ್ಲಿ ಪಕ್ಷದಲ್ಲಿನ ಬೆಳವಣಿಗೆಗಳು, ಹೊಂದಾಣಿಕೆ ರಾಜಕಾರಣ, ವಂಶವಾದದ ಕುರಿತು ಸುಮಾರು 75 ನಿಮಿಷಗಳ ಕಾಲ ಸವಿಸ್ತಾರವಾಗಿ ವಿವರಣೆ ನೀಡಿದ್ದೇನೆ. ನನ್ನ ಹೇಳಿಕೆಗಳನ್ನು ಅವರು ಸ್ವೀಕಾರ ಮಾಡಿದ್ದಾರೆ. ನಿಮ್ಮ ಭಾವನೆಗಳನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಗಮನಕ್ಕೆ ತರುತ್ತೇನೆ ಎಂದು ಭರವಸೆ ನೀಡಿದ್ದಾರೆ. ಪಕ್ಷದ ಹಿತದೃಷ್ಟಿಯಿಂದ ಏನೆಲ್ಲ ಆಗಬೇಕು ಎಂಬ ಬಗ್ಗೆ ಸಲಹೆಗಳನ್ನು ನೀಡಿದ್ದಾರೆ’ ಎಂದರು.

ರಾಜ್ಯ ನಾಯಕರ ಕಿತ್ತಾಟವನ್ನು ಸಣ್ಣಪುಟ್ಟ ಜಗಳವೆಂದು ಬಣ್ಣಿಸಿದ ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಪಾಪ ಅವರಿಗೆ ಸಣ್ಣಪುಟ್ಟ ವಿಚಾರವೆಂದು ಅನಿಸಿರಬೇಕು. ಅವರು ಅಲ್ಲೇ ಕುಳಿತುಕೊಳ್ಳುವವರು ಅಲ್ವಾ’ ಎಂದು ವ್ಯಂಗ್ಯವಾಗಿ ಹೇಳಿದರು.

ಜೆಪಿಸಿಗೆ 2,500 ದಾಖಲೆ: ಕುಮಾರ್ ಬಂಗಾರಪ್ಪ



ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ರಾಜ್ಯದ 2,500 ದಾಖಲೆಗಳನ್ನು ನೀಡಲಾಗಿದೆ ಎಂದು ಬಿಜೆಪಿ ಮುಖಂಡ ಕುಮಾರ್ ಬಂಗಾರಪ್ಪ ತಿಳಿಸಿದರು.

ಯತ್ನಾಳ ನೇತೃತ್ವದ ನಿಯೋಗವು ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್ ಅವರನ್ನು ಭೇಟಿಯಾದ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಯತ್ನಾಳ ನೇತೃತ್ವದಲ್ಲಿ ಏಳು ಜಿಲ್ಲೆಗಳ ಪ್ರವಾಸ ಮಾಡಲಾಗುತ್ತಿದೆ. ರಾಜ್ಯದಲ್ಲಿ ಯತ್ನಾಳ ಮಾಡಿರುವ ಹೋರಾಟದ ಕಿಡಿ ದೊಡ್ಡ ಜ್ವಾಲೆಯಾಗಿ ಹರಡಿ ದೇಶದಲ್ಲಿ ಸಾಕಷ್ಟು ಬದಲಾವಣೆಗೆ ಕಾರಣ ಆಗಿದೆ. 65 ಸಾವಿರ ಆಸ್ತಿಗಳು ದುರುಪಯೋಗ ಆಗಿರುವುದನ್ನು ಪತ್ತೆ ಹಚ್ಚಿದ್ದೇವೆ. ನಮ್ಮ ಅಧ್ಯಯನಕ್ಕೆ ಜೆಪಿಸಿ ಅಧ್ಯಕ್ಷರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ’ ಎಂದರು.

ಆಂಧ್ರ ಪ್ರದೇಶದ ಮಾದರಿಯಲ್ಲೇ ವಕ್ಫ್ ಮಂಡಳಿಯನ್ನು ದೇಶದಾದ್ಯಂತ ರದ್ದು ಮಾಡಬೇಕು ಎಂದು ಒತ್ತಾಯಿಸಿದ್ದೇವೆ ಎಂದರು.

ಸಿಬಿಐ ಎಸ್‌ಪಿ ನೇತೃತ್ವದ ತಂಡ ರಚಿಸಲು ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

ಜೀವಾ ಆತ್ಮಹತ್ಯೆ ತನಿಖೆಗೆ ಎಸ್‌ಐಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ರೂಪಾಯಿಗಳ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಆರೋಪಿಯಾಗಿದ್ದ ವಕೀಲೆ ಎಸ್. ಜೀವಾ ಅವರ ಆತ್ಮಹತ್ಯೆ ಪ್ರಕರಣದ ತನಿಖೆಗೆ ಸಿಬಿಐ ಎಸ್‌ಪಿ ನೇತೃತ್ವದಲ್ಲಿ ಎಸ್‌ಐಟಿ ರಚಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

‘ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು’ ಎಂಬ ಮನವಿಯನ್ನು ಪೂರ್ಣ ಪ್ರಮಾಣದಲ್ಲಿ ಮಾನ್ಯ ಮಾಡುವ ಬದಲಿಗೆ, ರಿಟ್ ಅರ್ಜಿ ವಿಚಾರಣೆ ವ್ಯಾಪ್ತಿಯಲ್ಲಿನ ಪರಮಾಧಿಕಾರ ಬಳಸಿರುವ ಹೈಕೋರ್ಟ್, ದೇಶದ ಹೈಕೋರ್ಟ್ ಗಳಲ್ಲೇ ಅಪರೂಪ ಎನ್ನಬಹುದಾದ ತೀರ್ಪೊಂದನ್ನು ಪ್ರಕಟಿಸಿದೆ.

ಈ ಕುರಿತಂತೆ, ‘ಬೆಂಗಳೂರು ವಕೀಲರ ಸಂಘ’ ಸಲ್ಲಿಸಿದ್ದ ಮಧ್ಯಂತರ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

‘ಪ್ರಕರಣದ ತನಿಖೆಯನ್ನು ಬೆಂಗಳೂರು ಸಿಬಿಐ, ಎಸ್‌ಪಿ ವಿನಾಯಕ ವರ್ಮಾ ನೇತೃತ್ವದ ಮೂವರು ಅಧಿಕಾರಿಗಳ ವಿಶೇಷ ತನಿಖಾ ತಂಡ (ಎಸ್‌ಐಟಿ) ನಡೆಸಬೇಕು. ಕರ್ನಾಟಕ ಗೃಹ ರಕ್ಷಕ ದಳದ ಎಸ್‌ಪಿ ಹಕಾಯ ಅಕ್ಷಯ್ ಮಛ್ಚೀಂದ್ರ, ಆಂತರಿಕ ಭದ್ರತಾ ವಿಭಾಗದ ಎಸ್‌ಪಿ ನಿಶಾ ಜೇಮ್ಸ್ ಈ ಎಸ್‌ಐಟಿ ಸದಸ್ಯರಾಗಿ ಇರಲಿದ್ದಾರೆ. ತಂಡವು ಮೂರು ತಿಂಗಳಲ್ಲಿ ವರದಿ ಸಲ್ಲಿಸಬೇಕು’ ಎಂದು ಗಡುವು ವಿಧಿಸಿದೆ. ‘ತನಿಖೆಯನ್ನು ತಕ್ಷಣವೇ ಆರಂಭಿಸಬೇಕು. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನೂ ಸಂಬಂಧಿಸಿದ ಅಧಿಕಾರಿಗಳು ಎಸ್‌ಐಟಿಗೆ ಒದಗಿಸಬೇಕು. ಅಗತ್ಯವಿದ್ದರೆ ಎಸ್‌ಐಟಿ ಇತರೆ ಪೊಲೀಸ್ ಅಧಿಕಾರಿಗಳನ್ನು ತನ್ನ ನೆರವಿಗೆ ಪಡೆಯಬಹುದು. ಎಸ್‌ಐಟಿಗೆ ಅಗತ್ಯವಾದ ಕಚೇರಿ ಮತ್ತಿತರ ಮೂಲ ಸೌಲಭ್ಯಗಳನ್ನು ರಾಜ್ಯ ಸರ್ಕಾರ ಒದಗಿಸಬೇಕು’ ಎಂದು ನ್ಯಾಯಪೀಠ ಆದೇಶಿಸಿದೆ.

‘ಕನಕಲಕ್ಷ್ಮಿ ಅವರು ಹಗರಣದ ಆರೋಪಿಯೊಬ್ಬರಿಂದ ₹25 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಇದನ್ನು ಹೊರತುಪಡಿಸಿ ಬೇರಾವುದೇ ದಾಖಲೆಯಿಲ್ಲ. ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್‌ಎಸ್) ಕಲಂ 108ರ (ಭಾರತೀಯ ದಂಡ ಸಂಹಿತೆ–1860ರ ಕಲಂ 306) ಅಡಿ ಎಸ್‌ಐಟಿ ತನಿಖೆ ಮಾಡುವಾಗ ಲಂಚಕ್ಕೆ ಬೇಡಿಕೆ ಇಟ್ಟಿರುವ ವಿಚಾರ ಗಮನಕ್ಕೆ ಬಂದರೆ ಭ್ರಷ್ಟಾಚಾರ ನಿವಾರಣಾ ಕಾಯ್ದೆ–1988ರ ಕಲಂ 17ಎ ಅಡಿ ಕಾನೂನಿನ ಅನುಸಾರ ಸೂಕ್ತ ತನಿಖೆ ನಡೆಸಬೇಕು’ ಎಂದು ನ್ಯಾಯಪೀಠ ವಿವರಿಸಿದೆ.

‘ನನ್ನ ವಿರುದ್ಧ ಬನಶಂಕರಿ ಠಾಣೆಯಲ್ಲಿ ದಾಖಲಾಗಿರುವ ಬಿಎನ್‌ಎಸ್ ಕಾಯ್ದೆಯ ಕಲಂ 108 ಮತ್ತು ಭ್ರಷ್ಟಾಚಾರ ನಿವಾರಣಾ ಕಾಯ್ದೆಯ ಕಲಂ 17(ಎ) ಅಡಿ ದಾಖಲಿಸಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಕನಕಲಕ್ಷ್ಮಿ ಸಲ್ಲಿಸಿದ್ದ ಅರ್ಜಿಯನ್ನು ಪೀಠ ವಜಾಗೊಳಿಸಿದೆ. ಡಿಎಸ್‌ಪಿ ಕನಕಲಕ್ಷ್ಮಿ ಅವರು ಜೀವಾ ಆತ್ಮಹತ್ಯೆಗೆ ಕುಮ್ಮಕ್ಕು ನೀಡಿದ ಆರೋಪ ಎದುರಿಸುತ್ತಿದ್ದಾರೆ. ಕನಕಲಕ್ಷ್ಮಿ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ ಹಾಜರಿದ್ದರು.

ಅಕ್ರಮ ಮದ್ಯ: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಬೆಂಗಳೂರು: ‘ರಾಜ್ಯದ ವಿವಿಧೆಡೆ ಅಕ್ರಮ ಮದ್ಯ ಮಾರಾಟ ನಡೆಯುತ್ತಿದ್ದು ಇದಕ್ಕೆ ಕಡಿವಾಣ ಹಾಕಲು ಈ ಮೊದಲು ನೀಡಿದ್ದ ಹೈಕೋರ್ಟ್ ಆದೇಶವನ್ನು ಸರ್ಕಾರ ಪಾಲನೆ ಮಾಡುತ್ತಿಲ್ಲ’ ಎಂದು ಆರೋಪಿಸಲಾದ ನ್ಯಾಯಾಂಗ ನಿಂದನೆ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, ‘ಕರ್ನಾಟಕ ಮದ್ಯ ನಿಷೇಧ ಆಂದೋಲನ’ದ ಸದಸ್ಯೆ ಸುಧಾ ಕಾಟ್ವಾ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಪ್ರಕರಣದ ಆರೋಪಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಎ.ಹನುಮನರಸಯ್ಯ, ಅಬಕಾರಿ ಆಯುಕ್ತ ಜೆ.ರವಿಶಂಕರ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು 2025ರ ಜನವರಿ 9ಕ್ಕೆ ಮುಂದೂಡಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಅಮಿತ್ ನಾಯಕ್ ವಾದ ಮಂಡಿಸಿದರು.



ಪ್ರಕರಣವೇನು?: ‘ರಾಜ್ಯದ ವಿವಿಧೆಡೆ ಅದರಲ್ಲೂ, ಗ್ರಾಮೀಣ ಭಾಗಗಳಲ್ಲಿ ಮನೆ-ಅಂಗಡಿಗಳಲ್ಲಿ ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡಲಾಗುತ್ತಿದೆ’ ಎಂಬ ಮಹಿಳಾ ಸಂಘಟನೆಗಳ ದೂರುಗಳನ್ನು ಆಧರಿಸಿ, ಸುಧಾ ಕಾಟ್ವಾ 2020ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ‘ಅಕ್ರಮ ಮದ್ಯ ಮಾರಾಟಕ್ಕೆ ಸಂಬಂಧಿಸಿದ ದೂರುಗಳು ಬಂದಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕು. ಮುಖ್ಯವಾಗಿ ಮಹಿಳೆಯರು ಅಥವಾ ಮಹಿಳಾ ಸಂಘಟನೆಗಳಿಂದ ದೂರುಗಳು ಬಂದಲ್ಲಿ ಆದ್ಯತೆಯ ಮೇರೆಗೆ ಮುಂದಾಗಬೇಕು’ ಎಂದು 2020ರ ಡಿಸೆಂಬರ್ 1ರಂದು ಆದೇಶಿಸಿತ್ತು.

‘ಹೈಕೋರ್ಟ್ ನೀಡಿರುವ ಈ ಆದೇಶ ಪರಿಪಾಲಿಸುವಂತೆ ರಾಜ್ಯ ಸರ್ಕಾರಕ್ಕೆ 2021ರಿಂದ 2023ರವರೆಗೆ ಹಲವು ಮನವಿಗಳನ್ನು ಸಲ್ಲಿಸಲಾಗಿದೆ. ಆದರೆ, ಸರ್ಕಾರ ಹೈಕೋರ್ಟ್ ಆದೇಶ ಪಾಲನೆ ಮಾಡುತ್ತಿಲ್ಲ ಮತ್ತು ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕುವಲ್ಲಿ ಸಂಪೂರ್ಣ ವಿಫಲವಾಗಿದೆ’ ಎಂದು ಆರೋಪಿಸಿ ಈ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲಾಗಿದೆ.

ಮುಡಾ ಅಕ್ರಮ: ಮರೀಗೌಡ, ದಿನೇಶ ಭಾಗಿ– ಇ.ಡಿ

ಒಂದನೇ ಪುಟದಿಂದ..

‘ಇದೊಂದು ದೊಡ್ಡ ಪ್ರಮಾಣದ ದಂಧೆಯಾಗಿದ್ದು, ರಿಯಲ್ ಎಸ್ಟೇಟ್ ಉದ್ಯಮಿಗಳು ಕೇಳಿದ ನಿವೇಶನಗಳನ್ನೇ ಹಂಚಿಕೆ ಮಾಡಲಾಗಿದೆ. 252 ನಿವೇಶನಗಳನ್ನೂ ಒಳಗೊಂಡು ಒಟ್ಟು 1,094 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ. ಜಮೀನಿನ ಮಾಲೀಕರೇ ಅಲ್ಲದವರಿಗೆ ಪರಿಹಾರ ನಿವೇಶನ ನೀಡಲಾಗಿದೆ. ಅವು ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ವರ್ಗಾವಣೆಯಾಗಿದ್ದು, ಅವರು ಅವುಗಳನ್ನು ಮಾರುಕಟ್ಟೆ ದರದಲ್ಲಿ ಮಾರಾಟ ಮಾಡಿದ್ದಾರೆ’ ಎಂದಿದೆ. ‘ಈ ಎಲ್ಲ ಅಂಶಗಳ ಬಗ್ಗೆ ತನಿಖೆ ಪ್ರಗತಿಯಲ್ಲಿದೆ. ಇಲ್ಲಿ ಸೂಚಿಸಲಾದ ಅಂಶಗಳ ಬಗ್ಗೆ ಕ್ರಮ ತೆಗೆದುಕೊಳ್ಳಲು ಈ ವರದಿಯನ್ನು ನಿಮಗೆ ಸಲ್ಲಿಸಲಾಗಿದೆ’ ಎಂದು ಲೋಕಾಯುಕ್ತ ಎಡಿಜಿಪಿಗೆ ಬರೆದ ಪತ್ರದಲ್ಲಿ ಇ.ಡಿ ಹೇಳಿದೆ.

ಆಲಿಬಾಬಾ–40 ಕಳ್ಳರ ರೀತಿ

ಒಂದನೇ ಪುಟದಿಂದ..

‘ಅಕ್ರಮದ ಬಗ್ಗೆ ಜಾರಿ ನಿರ್ದೇಶನಾಲಯವು ಲೋಕಾಯುಕ್ತಕ್ಕೆ ಪತ್ರ ಬರೆದಿದೆ. ಪತ್ರಕ್ಕೂ, ಕೇಂದ್ರ ಸರ್ಕಾರಕ್ಕೂ ಸಂಬಂಧವಿಲ್ಲ. ಹೈಕೋರ್ಟ್ ಸೂಚನೆಯಂತೆ ತನಿಖೆ ನಡೆಯುತ್ತಿದೆ’ ಎಂದರು.

‘ಮುಡಾ’ ಪ್ರಕರಣದಲ್ಲಿ ರಾಜ್ಯಪಾಲರಿಗೆ ದೂರು ನೀಡಿದವರೇ, ಇ.ಡಿಗೂ ಕೊಟ್ಟಿದ್ದಾರೆ. ಹಾಗಾಗಿ, ಇ.ಡಿ ಮಧ್ಯ ಪ್ರವೇಶ ಮಾಡಿದೆ. ಪರಿಹಾರವೆಂದು 14 ನಿವೇಶನ ಪಡೆದಿರುವುದೇ ಕಾನೂನುಬಾಹಿರ. ಬಾಮೈದ ಖರೀದಿಸಿದ್ದೂ ಕಾನೂನುಬಾಹಿರ. ಕಾನೂನು ಎಲ್ಲರಿಗೂ ಒಂದೇ. ತಪ್ಪು ಮಾಡಿದವರು ಕಾನೂನು ಪ್ರಕಾರ ಶಿಕ್ಷೆ ಅನುಭವಿಸಬೇಕು’ ಎಂದರು.

ಸ್ವಾಭಿಮಾನಿಯೋ, ಜನಕಲ್ಯಾಣವೋ

ಒಂದನೇ ಪುಟದಿಂದ..

ಆದರೆ, ನಂತರ ‘ಪಕ್ಷ ಹಾಗೂ ಸರ್ಕಾರವನ್ನು ಹೊರತುಪಡಿಸಿ ಸಮಾವೇಶ ನಡೆಸಿದರೆ, ತಪ್ಪು ಸಂದೇಶ ಹೋಗಲಿದೆ’ ಎಂದು ಪ್ರತಿಪಾದಿಸಿ ಅನಾಮಧೇಯ ಪತ್ರವೊಂದು ಎಐಸಿಸಿಗೆ ರವಾನೆಯಾಗಿತ್ತು.

ಅದನ್ನು ಗಂಭೀರವಾಗಿ ಪರಿಗಣಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚರ್ಚಿಸಿ, ಪಕ್ಷದ ನೇತೃತ್ವದಲ್ಲಿಯೇ ಸಮಾವೇಶ ಆಯೋಜಿಸಲು ಸೂಚಿಸಿದ್ದರು.

ಅದರಂತೆ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಅವರ ಉಸ್ತುವಾರಿಯಲ್ಲೇ ಸಮಾವೇಶ ನಡೆಯುತ್ತಿದೆ. ‘ಇದು ಸ್ವಾಭಿಮಾನಿ ಅಲ್ಲ, ಜನಕಲ್ಯಾಣ ಸಮಾವೇಶ’ ಎಂದು ಅವರು ಕೆಲವು ದಿನಗಳ ಹಿಂದೆ ಹಾಸನದಲ್ಲಿಯೇ ಘೋಷಿಸಿದ್ದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಿಂದ ಜನಕಲ್ಯಾಣಕ್ಕಾಗಿ ಆರಂಭಿಸಿರುವ ಯೋಜನೆಗಳ ಕುರಿತು ಜನರಿಗೆ ಮನವರಿಕೆ ಮಾಡಲು ಹಾಗೂ ಜನರಿಂದ ಸಲಹೆಗಳನ್ನು ಸ್ವೀಕರಿಸಲು ಆಯೋಜಿಸಲಾಗುತ್ತಿದೆ’ ಎಂದಿದ್ದರು.

ಎಷ್ಟು ಮಂದಿ ಭಾಗಿ?: ಆರಂಭದಲ್ಲಿ ‘ಹಳೆ ಮೈಸೂರು ಭಾಗದ ಎಲ್ಲ ಜಿಲ್ಲೆಗಳಿಂದ ಸುಮಾರು 2 ಲಕ್ಷ ಜನರನ್ನು ಸೇರಿಸುವುದಾಗಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದ್ದರು. ಆದರೆ, ನಗರಕ್ಕೆ ಭೇಟಿ ನೀಡಿದ್ದ ಡಿ.ಕೆ. ಶಿವಕುಮಾರ್, ‘ಸಮಾವೇಶ ಹಾಸನಕ್ಕಷ್ಟೇ ಸೀಮಿತವಾಗಿದ್ದು, ಅಕ್ಕಪಕ್ಕದ ಜಿಲ್ಲೆಗಳಿಂದ ಜನ ಬರಬಹುದು’ ಎಂದಿದ್ದರು.

ಇದೀಗ ‘ನೆರೆಯ ತುಮಕೂರು, ಮೈಸೂರು, ಮಂಡ್ಯ ಸೇರಿದಂತೆ ಇತರ ಜಿಲ್ಲೆಗಳಿಂದಲೂ ಜನ ಬರುವ ನಿರೀಕ್ಷೆ ಇದೆ. ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವದ ಮಾದರಿಯಲ್ಲಿಯೇ ಕಾರ್ಯಕ್ರಮ ಆಯೋಜಿಸುತ್ತಿದ್ದೇವೆ’ ಎಂಬುದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಅವರ ನುಡಿ.

ಈ ನಡುವೆಯೇ, ‘ಇದು ಹಳೆಯ ಮೈಸೂರು ಭಾಗದ ಸಮಾವೇಶವೋ, ಹಾಸನ ಜಿಲ್ಲೆಯ ಸಮಾವೇಶವೋ, ಸ್ವಾಭಿಮಾನಿ ಸಮಾವೇಶವೋ, ಜನಕಲ್ಯಾಣ ಸಮಾವೇಶವೋ’ ಎಂದು ಪಕ್ಷದ ಕಾರ್ಯಕರ್ತರ ನಡುವೆ ಚರ್ಚೆ ನಡೆದಿದೆ.

ಸಮಾವೇಶದ ಫ್ಲೆಕ್ಸ್ ಹಾಗೂ ಬ್ಯಾನರ್‌ಗಳಲ್ಲಿ ಯಾರ ಹೆಸರು ಹಾಕಬೇಕು? ಹಾಕಬಾರದು? ಎಂಬ ಬಗ್ಗೆಯೂ ಸ್ಥಳೀಯ ಮುಖಂಡರಲ್ಲಿ ಗೊಂದಲವೂ ಏರ್ಪಟ್ಟಿದೆ.


ಪ್ರಿಯಾಂಕಾ ಗಾಂಧಿ, ಸೋನಿಯಾ ಗಾಂಧಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿಯವರ ಕಟೌಟ್‌ಗಳನ್ನು ಹಾಕಲಾಗಿದೆ.

ಸಿ.ಎಂ ಸ್ಥಾನ ಹಂಚಿಕೆ: ಆಗಿದೆಯೇ ‘ಒಪ್ಪಂದ’?

ಒಂದನೇ ಪುಟದಿಂದ..

ಡಿ.ಕೆ. ಶಿವಕುಮಾರ್ ಹೇಳಿಕೆ ಬಗ್ಗೆ ಕೆ.ಆರ್. ಪೇಟೆಯಲ್ಲಿ (ಮಂಡ್ಯ) ಸುದ್ದಿಗಾರರು ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಯಾವ ಒಪ್ಪಂದವೂ ಆಗಿಲ್ಲ. ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನದಂತೆ ನಡೆದುಕೊಳ್ಳುತ್ತೇವೆ’ ಎಂದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಮುಖ್ಯಮಂತ್ರಿ ಹೇಳಿದ ಮೇಲೆ ಅದೇ ಅಂತಿಮ. ಅದರ ಬಗ್ಗೆ ಮರುಪ್ರಶ್ನೆಯೇ ಇಲ್ಲ’ ಎಂದರು. ಅಷ್ಟೇ ಅಲ್ಲ, ‘ನಾನು ಮುಖ್ಯಮಂತ್ರಿಯವರ ಕುರ್ಚಿ ಹಾಗೂ ಪಕ್ಷಕ್ಕೆ ಸದಾ ನಿಷ್ಠ’ ಎಂದೂ ಹೇಳಿದರು.

‘ಮುಖ್ಯಮಂತ್ರಿ ಹೇಳಿದ ಮೇಲೆ ನನ್ನ ಯಾವುದೇ ತಕರಾರು ಇಲ್ಲ. ಅವರು ಹೇಳಿದ್ದೇ ಅಂತಿಮ. ಅವರ ಹೇಳಿಕೆ ನಂತರ ಈ ವಿಚಾರವಾಗಿ ಯಾವುದೇ ವಾದ, ಚರ್ಚೆ ಇಲ್ಲ’ ಎಂದು ಸ್ಪಷ್ಟಪಡಿಸಿದರು.

ಆದರೆ, ಸಂದರ್ಶನದಲ್ಲಿ ಪ್ರಸ್ತಾಪಿಸಲಾಗಿದ್ದ ವಿಷಯದ ಕುರಿತು ಒಂದಕ್ಷರವನ್ನೂ ಶಿವಕುಮಾರ್ ಮಾತನಾಡಲಿಲ್ಲ.

ಒಪ್ಪಂದ ಹೈಕಮಾಂಡ್‌ಗಷ್ಟೇ ಗೊತ್ತು: ಜಾರಕಿಹೊಳಿ

‘ಮುಖ್ಯಮಂತ್ರಿ ಕುರ್ಚಿ ಕುರಿತ ಒಪ್ಪಂದ ದೆಹಲಿಯಲ್ಲಿ ಹೈಕಮಾಂಡ್ ಮಟ್ಟದಲ್ಲಿ ನಡೆದಿರಬಹುದು. ಅವರಿಗಷ್ಟೇ ಗೊತ್ತು ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಐದು ವರ್ಷ ಇರುತ್ತಾರೆ ಎಂದು ಡಿ.ಕೆ. ಸುರೇಶ್ ಅವರೇ ಹೇಳಿದ್ದಾರೆ. ಆದರೆ, ಮುಖ್ಯಮಂತ್ರಿ ವಿಚಾರದ ಒಪ್ಪಂದದ ಬಗ್ಗೆ ಗೊತ್ತಿಲ್ಲ. ಆ ವಿಚಾರವನ್ನು ಹೈಕಮಾಂಡ್ ನಿರ್ಧರಿಸುತ್ತದೆ’ ಎಂದರು.

‘2028ಕ್ಕೆ ನಾನು ಮುಖ್ಯಮಂತ್ರಿ ಆಕಾಂಕ್ಷಿ ಎಂದಷ್ಟೆ ಹೇಳುತ್ತಿದ್ದೇನೆ. ನನ್ನಂತೆ ಆಕಾಂಕ್ಷಿಗಳು ಇರುತ್ತಾರೆ’ ಎಂದರು.

ಎಐ ತಂತ್ರಜ್ಞಾನ ಆಧಾರಿತ ಆ್ಯಪ್ ಅಭಿವೃದ್ಧಿಪಡಿಸಿದ ಎಪಿಡಿ

ಅಂಗವಿಕಲರ ಸೌಲಭ್ಯ: ಅಂಗೈನಲ್ಲೇ ದರ್ಶನ

• ವರುಣ ಹೆಗಡೆ

ಬೆಂಗಳೂರು: ಸಾರ್ವಜನಿಕ ಸ್ಥಳಗಳು ಹಾಗೂ ಕಟ್ಟಡಗಳಲ್ಲಿ ಅಳವಡಿಸಿಕೊಳ್ಳಲಾದ ರ‍್ಯಾಂಪ್‌ಗಳು, ಶೌಚಾಲಯ ಸೇರಿ ವಿವಿಧ ಸೌಲಭ್ಯಗಳ ವಿವರಗಳನ್ನು ಅಂಗವಿಕಲರು ಮತ್ತು ವೃದ್ಧರು ಅಂಗೈನಲ್ಲೇ ಪಡೆಯುವ ಕಾಲ ಸನ್ನಿಹಿತವಾಗಿದೆ.

ಅಸೋಸಿಯೇಷನ್ ಆಫ್ ಪೀಪಲ್ಸ್ ವಿತ್ ಡಿಸೆಬಿಲಿಟಿ (ಎಪಿಡಿ) ಸಂಸ್ಥೆಯು ಈ ವರ್ಗದವರಿಗಾಗಿ ‘ಯೆಸ್ ಟು ಆ್ಯಕ್ಸಸ್’ (YesToAccess) ಆ್ಯಪ್ ಅಭಿವೃದ್ಧಿಪಡಿಸಿದೆ. ಈ ಆ್ಯಪ್ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧಾರಿತವಾಗಿದೆ. ಬಸ್ ನಿಲ್ದಾಣ, ರೈಲು ನಿಲ್ದಾಣ, ಮೆಟ್ರೊ ನಿಲ್ದಾಣ, ಮಾಲ್‌ಗಳು, ಆಸ್ಪತ್ರೆಗಳು, ಸರ್ಕಾರಿ ಕಚೇರಿಗಳು, ಹೋಟೆಲ್‌ಗಳು, ಶಿಕ್ಷಣ ಸಂಸ್ಥೆಗಳು ಸೇರಿ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಅಂಗವಿಕಲರು ಹಾಗೂ ವೃದ್ಧರಿಗೆ ಇರುವ ಸೌಲಭ್ಯಗಳ ಮಾಹಿತಿ ಆ್ಯಪ್ ನೆರವಿನಿಂದ ದೊರೆಯಲಿದೆ. ಇದರಿಂದಾಗಿ ಸ್ಥಳಕ್ಕೆ ತೆರಳುವ ಮೊದಲೇ ಅಗತ್ಯ ಸೌಲಭ್ಯಗಳ ಬಗ್ಗೆ ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿದೆ.



ಈ ಆ್ಯಪ್‌ಗಾಗಿ ಕಟ್ಟಡಗಳ ಮೌಲ್ಯಮಾಪನ ಈಗಾಗಲೇ ಪ್ರಾರಂಭವಾಗಿದೆ. ರಾಷ್ಟ್ರಮಟ್ಟದಲ್ಲಿ ಈ ಆ್ಯಪ್‌ನ ನೆರವಿನಿಂದ ಅಂಗವಿಕಲರಿಗೆ ಸೇವೆ ಒದಗಿಸಲು ಸಂಸ್ಥೆಯು ಕೇಂದ್ರ ಅಂಗವಿಕಲರ ಸಬಲೀಕರಣ ಇಲಾಖೆ ಜತೆಗೆ ಒಪ್ಪಂದ ಮಾಡಿಕೊಂಡಿದೆ. ಇದರಿಂದಾಗಿ ರಾಜ್ಯದಾಚೆಗೂ ಈ ಆ್ಯಪ್‌ನ ನೆರವಿನಿಂದ ಸಾರ್ವಜನಿಕ ಸ್ಥಳಗಳು ಹಾಗೂ ವಿವಿಧ ಕಟ್ಟಡಗಳ ಮೌಲ್ಯಮಾಪನ ನಡೆಯಲಿದೆ.

ಹೇಗೆ ಕಾರ್ಯನಿರ್ವಹಣೆ?: ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಆ್ಯಪ್ ಲಭ್ಯವಿದೆ. ಇದರಲ್ಲಿ ಕಟ್ಟಡಗಳು ಹಾಗೂ ಸಾರ್ವಜನಿಕ ಸ್ಥಳಗಳು ಅಳವಡಿಸಿಕೊಳ್ಳಬೇಕಾದ ಮಾನದಂಡವನ್ನು ಅಳವಡಿಸಲಾಗಿದೆ. ರ‍್ಯಾಂಪ್ ವಿಸ್ತೀರ್ಣ, ಲಿಫ್ಟ್ ಸೌಲಭ್ಯ, ಬಾಗಿಲಿನ ಅಗಲ, ಗಾಲಿಕುರ್ಚಿ, ಮೆಟ್ಟಿಲುಗಳು ಸೇರಿ ವಿವಿಧ ಆಯ್ಕೆಗಳು ಇರಲಿವೆ. ಸಾರ್ವಜನಿಕರು ಈ ಆ್ಯಪ್‌ನ ನೆರವಿನಿಂದ ಅಲ್ಲಿನ ಸೌಲಭ್ಯವನ್ನು ಮೌಲ್ಯಮಾಪನಕ್ಕೆ ಒಳಪಡಿಸಲು ನೆರವಾಗಬಹುದು. ಜಿಪಿಎಸ್ ತಂತ್ರಜ್ಞಾನದ ನೆರವಿನಿಂದ ನಿಗದಿತ ಸ್ಥಳ ಆಯ್ಕೆ ಮಾಡಿಕೊಂಡು, ಆ್ಯಪ್‌ನಲ್ಲಿನ ಆಯ್ಕೆಗಳ ಅನುಸಾರ ಕಟ್ಟಡದೊಳಗಿನ ಸೌಲಭ್ಯಗಳ ಬಗ್ಗೆ ಫೋಟೊ ಕ್ಲಿಕ್ಕಿಸಿದಲ್ಲಿ, ಎಐ ತಂತ್ರಜ್ಞಾನದ ನೆರವಿನಿಂದ ಆ್ಯಪ್ ವಿಶ್ಲೇಷಣೆ ನಡೆಸಲಿದೆ. ಮಾನದಂಡದ ಅನುಸಾರ ಕಟ್ಟಡಗಳಲ್ಲಿ ಸೌಲಭ್ಯ ಅಳವಡಿಸಿಕೊಳ್ಳಲಾಗಿದೆಯೇ? ಇಲ್ಲವೇ? ಎನ್ನುವುದನ್ನು ತಿಳಿಸಿ, ಅಂಕಗಳನ್ನು ನೀಡಲಿದೆ. ಇದು ಆ್ಯಪ್‌ನಲ್ಲಿ ದಾಖಲಾಗಿರಲಿದೆ.

ಅಂಗವಿಕಲರು ಹಾಗೂ ವೃದ್ಧರು ಆ್ಯಪ್‌ನ ನೆರವಿನಿಂದ ನಿರ್ದಿಷ್ಟ ಕಟ್ಟಡವನ್ನು ಹುಡುಕಬಹುದಾಗಿದೆ. ಆ ಸ್ಥಳದ ಮೌಲ್ಯಮಾಪನ ಈಗಾಗಲೇ ನಡೆದಿದ್ದಲ್ಲಿ ಅಲ್ಲಿನ ವ್ಯವಸ್ಥೆಯ ವಿವರ ಆ್ಯಪ್‌ನಲ್ಲಿ ಫೋಟೊ ಸಹಿತ ಕಾಣಿಸಲಿದೆ. ಯಾವುದೇ ಒಂದು ಕಟ್ಟಡದ ಮೌಲ್ಯಮಾಪನವನ್ನು ಹಲವು ಬಾರಿ ನಡೆಸಲು ಅವಕಾಶವಿದೆ.

ಸ್ವಯಂ ಸೇವಕರ ಬಳಕೆ

ಈ ಆ್ಯಪ್‌ನಲ್ಲಿ ನಿಗದಿತ ಕಟ್ಟಡದಲ್ಲಿನ ಸೌಲಭ್ಯಗಳ ವಿವರವನ್ನು ಪರಿಷ್ಕರಿಸಲೂ ಅವಕಾಶ ಇರುವುದರಿಂದ ಕಾಲಕಾಲಕ್ಕೆ ಅಲ್ಲಿ ಅಳವಡಿಸಿಕೊಳ್ಳಲಾದ ಸೌಲಭ್ಯ ಹಾಗೂ ಕಟ್ಟಡದೊಳಗೆ ಬದಲಾಯಿಸಿದ ವಿನ್ಯಾಸಗಳ ಬಗ್ಗೆ ಸಹ ವಿವರ ಲಭ್ಯವಾಗುತ್ತದೆ. ಈ ಮೌಲ್ಯಮಾಪನವು ವಿವಿಧ ಕಟ್ಟಡಗಳಲ್ಲಿನ ವ್ಯವಸ್ಥೆಗಳ ಬಗ್ಗೆ ದತ್ತಾಂಶ ಸಂಗ್ರಹಿಸಿ, ವರದಿ ಸಿದ್ಧಪಡಿಸಲು ಸಹಕಾರಿಯಾಗಿದೆ. ಇದರಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಆಯ್ಕೆಗಳಿವೆ. ಆ್ಯಪ್‌ನ ನೆರವಿನಿಂದ ಕಟ್ಟಡಗಳ ಮೌಲ್ಯಮಾಪನ ನಡೆಸಲು ಸಂಸ್ಥೆಯು ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಸದಸ್ಯರ ಹಾಗೂ ವಿದ್ಯಾರ್ಥಿಗಳ ನೆರವು ಪಡೆಯಲು ಮುಂದಾಗಿದೆ.

ಕೆಲವು ಕಟ್ಟಡಗಳಲ್ಲಿ ಅಂಗವಿಕಲರು, ಅಂಧರು ಹಾಗೂ ವೃದ್ಧರಿಗೆ ಸೂಕ್ತ ವ್ಯವಸ್ಥೆ ಇರದಿರುವುದರಿಂದ ಈ ವರ್ಗದವರು ಸಮಸ್ಯೆ ಎದುರಿಸುತ್ತಾರೆ. ಅವರಿಗೆ ನೆರವಾಗುವ ಉದ್ದೇಶದಿಂದ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ

ವಿಜಯಲಕ್ಷ್ಮಿ ಆರ್., ಎಪಿಡಿಯ ಯೆಸ್ ಟು ಆ್ಯಕ್ಸಸ್ ಪ್ರಾಜೆಕ್ಟ್ ಮುಖ್ಯಸ್ಥೆ

ಪುಟಿದೆದ್ದು ಬಂದ ಫಡಣವೀಸ್

• ಮೃತ್ಯುಂಜಯ ಬೋಸ್



ರಾಜಭವನದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿ ವೇಳೆ ದೇವೇಂದ್ರ ಫಡಣವೀಸ್, ಏಕನಾಥ ಶಿಂದೆ ಮತ್ತು ಅಜಿತ್ ಪವಾರ್ ಅವರು ವಿಜಯದ ಸಂಕೇತ ತೋರಿದರು ಪಿಟಿಐ ಚಿತ್ರ

ಮುಂಬೈ: ದೇವೇಂದ್ರ ಫಡಣವೀಸ್ ಅವರನ್ನು ಪಕ್ಷದ ಒಳಗಿನ ಹಾಗೂ ಹೊರಗಿನ ವಿರೋಧಿಗಳು ಏಕಾಂಗಿಯಾಗಿಸಿದ್ದರು. ರಾಜಕೀಯ ಪಂಡಿತರು 'ಫಡಣವೀಸ್ ಅವರ ರಾಜಕೀಯ ಮುಗಿಯಿತು' ಎಂದು ಷರಾ ಬರೆದಾಗಿತ್ತು. ಆದರೆ, ಫಡಣವೀಸ್ ಅವರು ಮತ್ತೆ ಅಧಿಕಾರದ ಕೇಂದ್ರಕ್ಕೆ ಮರಳಿದ್ದಾರೆ. ಒಂದು ದಶಕದ ಅವಧಿಯಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಅವರು ಮೂರನೆಯ ಬಾರಿಗೆ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯ ಕಚೇರಿ ಇರುವ ನಾಗ್ಪುರದ ಫಡಣವೀಸ್ ಅವರು ಮಹಾರಾಷ್ಟ್ರ ರಾಜಕಾರಣದಲ್ಲಿ ಹಲವು ಸಂಪ್ರದಾಯಗಳನ್ನು, ಪರಂಪರೆಗಳನ್ನು ಮುರಿದು ಬಂದವರು. ಮುಖ್ಯಮಂತ್ರಿಯಾಗಿ ಮೊದಲ ಐದು ವರ್ಷಗಳ ಆಡಳಿತದಲ್ಲಿ ಫಡಣವೀಸ್ ಅವರು, ಹಿರಿಯ ನಾಯಕರ ನಡುವಿನ 'ಹೊಂದಾಣಿಕೆ ರಾಜಕೀಯ'ವನ್ನು ಮೂಲೆಗೆ ತಳ್ಳಿದ್ದರು.

ಜಾತಿ ಲೆಕ್ಕಾಚಾರದ ಪ್ರಭಾವ ಜೋರಾಗಿರುವ ಮಹಾರಾಷ್ಟ್ರ ರಾಜಕಾರಣದಲ್ಲಿ, ಶರದ್ ಪವಾರ್ ಅವರು ಐದು ದಶಕಗಳಿಂದ ಹೊಂದಿದ್ದ ಪ್ರಾಬಲ್ಯಕ್ಕೆ ಸವಾಲು ಒಡ್ಡಿದ್ದು ಮಾಜಿ ಮುಖ್ಯಮಂತ್ರಿ ವಿಲಾಸರಾವ್ ದೇಶಮುಖ್ ಅವರ ನಂತರ ಫಡಣವೀಸ್ ಅವರೇ ಇರಬೇಕು. ಸಂಖ್ಯೆಯ ದೃಷ್ಟಿಯಿಂದ ನಗಣ್ಯವಾಗಿರುವ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಫಡಣವೀಸ್ ಅವರು, ಮರಾಠ ಮೀಸಲಾತಿ ಹೋರಾಟ ಜೋರಾಗಿದ್ದರೂ, ಅದರ ಪ್ರಭಾವಕ್ಕೆ ಎದುರಾಗಿ ನಿಲ್ಲುವ ರಾಜಕೀಯ ಚಾಕಚಕ್ಯತೆಯನ್ನು ತೋರಿಸಿದರು.

ಎರಡನೆಯ ಬಾರಿಗೆ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ನಂತರ ಫಡಣವೀಸ್ ಅವರು ಮತ್ತೊಂದು ಅವಧಿಗೆ ಮುಖ್ಯಮಂತ್ರಿ ಆಗುವ ಅವಕಾಶ ಕಳೆದುಕೊಂಡರು. ಅದುವರೆಗೆ ಬಿಜೆಪಿಯ ಮಿತ್ರಪಕ್ಷ ಆಗಿದ್ದ ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ಜೊತೆಗೂಡಿ ಸರ್ಕಾರ ರಚಿಸಿತು. ಆದರೆ, ನಂತರದಲ್ಲಿ ಶಿವಸೇನಾ ಪಕ್ಷವು ಹೋಳಾಗುವಂತೆ ಬಿಜೆಪಿ ತಂತ್ರಗಾರಿಕೆ ನಡೆಸಿದಾಗ, ಏಕನಾಥ ಶಿಂದೆ ನೇತೃತ್ವದಲ್ಲಿ ರಚನೆಯಾದ ಸರ್ಕಾರದಲ್ಲಿ ಫಡಣವೀಸ್ ಅವರು ಉಪಮುಖ್ಯಮಂತ್ರಿ ಹುದ್ದೆಗೆ ಸಮಾಧಾನ ಪಟ್ಟುಕೊಳ್ಳಬೇಕಾಯಿತು.

ತಮಗೆ ಒಳ್ಳೆಯ ಅವಕಾಶ ಸಿಗಬಹುದು ಎಂದು ತಾಳ್ಮೆಯಿಂದ ಕಾದಿದ್ದ ಫಡಣವೀಸ್, ಕಳೆದ ವರ್ಷ ನಡೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಭಾರಿ ಹಿನ್ನಡೆ ಅನುಭವಿಸಬೇಕಾಯಿತು. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಸಂಖ್ಯಾಬಲವು ಮಹಾರಾಷ್ಟ್ರದಲ್ಲಿ ಒಂದಂಕಿಗೆ ಕುಸಿಯಿತು.

ಆಗ ಆರ್‌ಎಸ್‌ಎಸ್ ಜೊತೆ ಸಮನ್ವಯ ಸಾಧಿಸಿ ಫಡಣವೀಸ್ ಅವರು ಹೊಸ ಬಗೆಯಲ್ಲಿ ಚುನಾವಣಾ ಪ್ರಚಾರ ಆರಂಭಿಸಬೇಕಾಯಿತು.

ಮಹಾರಾಷ್ಟ್ರ ಚುನಾವಣೆಯಲ್ಲಿ ಸಾಮಾನ್ಯವಾಗಿ, ಫಡಣವೀಸ್ ಅವರ ತಂಡವು ಆರ್‌ಎಸ್‌ಎಸ್ ಜೊತೆ ಸಮನ್ವಯ ಸಾಧಿಸಿ ಪ್ರಚಾರ ಅಭಿಯಾನ ನಡೆಸುತ್ತದೆ.

ಆದರೆ, ಭಾರಿ ಸೋಲು ಕಂಡ ಐದೇ ತಿಂಗಳುಗಳಲ್ಲಿ ಫಡಣವೀಸ್ ಅವರು ಮತ್ತೆ ಪುಟಿದೆದ್ದಿದ್ದಾರೆ. ಹೊಸ ವಿಧಾನಸಭೆಯಲ್ಲಿ ಬಿಜೆಪಿಗೆ ಬಹುಮತಕ್ಕೆ 10 ಸ್ಥಾನಗಳಷ್ಟೇ ಕಡಿಮೆ. ಹೀಗಾಗಿ, ಫಡಣವೀಸ್ ಅವರ ಸ್ನೇಹಿತರಿಗೆ ಹಾಗೂ ಶತ್ರುಗಳಿಗೆ, ಅವರನ್ನೇ ಮುಖ್ಯಮಂತ್ರಿಯನ್ನಾಗಿ ಒಪ್ಪಿಕೊಳ್ಳದೆ ಬೇರೆ ಆಯ್ಕೆ ಇರಲಿಲ್ಲ.

ಸಿಧು ವಿರುದ್ಧ ಕ್ರಮಕ್ಕೆ ಕೋರ್ಟ್ ನಕಾರ

ನವದೆಹಲಿ (ಪಿಟಿಐ): ದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಇಂದಿಗೂ ಇದೆ ಎಂದು ಹೇಳಿರುವ ದೆಹಲಿ ಹೈಕೋರ್ಟ್, ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಅವರು ತಮ್ಮ ಪತ್ನಿಗೆ 4ನೆಯ ಹಂತದ ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿ ಪಥ್ಯಾಹಾರ ಕ್ರಮ ನೆರವಿಗೆ ಬಂದಿತ್ತು ಎಂದು ಹೇಳಿದ್ದಕ್ಕಾಗಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬ ಅರ್ಜಿಯನ್ನು ಪರಿಗಣಿಸಲು ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಮನಮೋಹನ್ ಮತ್ತು ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರು ಇದ್ದ ವಿಭಾಗೀಯ ಪೀಠವು, 'ಸಿಧು ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಅವರ ಅನಿಸಿಕೆಯನ್ನು ವಿರೋಧಿಸಲು ಅರ್ಜಿದಾರರಿಗೆ ಸ್ವಾತಂತ್ರ್ಯವಿದೆ' ಎಂದು ಹೇಳಿದೆ.

ಫಡಣವೀಸ್ 'ಮಹಾ' ಸಿ.ಎಂ

ಒಂದನೇ ಪುಟದಿಂದ...

ಮಿತ್ರಪಕ್ಷಗಳ ಪ್ರಾಬಲ್ಯ ಹಾಗೂ ಅದರ ನಾಯಕರ ಜೊತೆಗಿನ ವೈಯಕ್ತಿಕ ಸಂಬಂಧದ ಕಾರಣದಿಂದಾಗಿ ಫಡಣವೀಸ್ ಅವರಿಗೆ ಈ ಬಾರಿ ಸವಾಲುಗಳು ಹೆಚ್ಚಿರಲಿವೆ. ಕೆಲವು ಕಠಿಣ ತೀರ್ಮಾನಗಳನ್ನು ತಾವು ತೆಗೆದುಕೊಳ್ಳಬೇಕಾಗಬಹುದು ಎಂಬ ಸೂಚನೆಯನ್ನು ಅವರು ನೀಡಿದ್ದಾರೆ.

ಬಿಜೆಪಿ ಶಾಸಕಾಂಗ ಪಕ್ಷದ ಸಭೆಯ ನಂತರ ಫಡಣವೀಸ್, ಶಿಂದೆ ಮತ್ತು ಪವಾರ್ ಅವರು ಮುಖ್ಯಮಂತ್ರಿಯ ಅಧಿಕೃತ ನಿವಾಸದಲ್ಲಿ ಸಭೆ ಸೇರಿದರು. ನಂತರ ಅವರು, ಸರ್ಕಾರ ರಚನೆಯ ಹಕ್ಕು ಮಂಡಿಸಲು ಅಲ್ಲಿಂದ ರಾಜಭವನಕ್ಕೆ ತೆರಳಿದರು.

ಫಡಣವೀಸ್ ಅವರು ಸರ್ಕಾರ ರಚಿಸಲು ರಾಜ್ಯಪಾಲರ ಮುಂದೆ ಹಕ್ಕು ಮಂಡಿಸಿದರು. ಶಿಂದೆ ಮತ್ತು ಪವಾರ್ ಅವರು, ಸರ್ಕಾರ ರಚಿಸಲು ತಮ್ಮ ಬೆಂಬಲ ಇದೆ ಎನ್ನುವ ಪತ್ರ ನೀಡಿದರು.

ಶಿಂದೆ ಅವರಿಗೆ ಧನ್ಯವಾದ ಅರ್ಪಿಸಿ ಮಾತನಾಡಿದ ಫಡಣವೀಸ್, 'ಸರ್ಕಾರದ ಭಾಗವಾಗಿ ಇರುವಂತೆ ನಾನು ಶಿಂದೆ ಅವರನ್ನು ಕೋರಿದ್ದೇನೆ, ಅವರು ಇದನ್ನು ಒಪ್ಪುತ್ತಾರೆ ಎಂದು ನಾನು ಆಶಿಸುವೆ. ಸಿ.ಎಂ ಹುದ್ದೆ ಎಂಬುದು ನಮ್ಮ ನಡುವಿನ ಒಂದು ತಾಂತ್ರಿಕ ಒಪ್ಪಂದ ಮಾತ್ರ. ನಿರ್ಧಾರಗಳನ್ನು ಕೈಗೊಳ್ಳುವಾಗ ನಾವು ಒಟ್ಟಾಗಿದ್ದೆವು, ಮುಂದೆಯೂ ಅದನ್ನೇ ಮಾಡುತ್ತೇವೆ' ಎಂದು ಹೇಳಿದರು.

ಫಡಣವೀಸ್ ಅವರು ಶಿಂದೆ ಅವರ ಜೊತೆ ಮಂಗಳವಾರ ಮತ್ತು ಬುಧವಾರ ಸಂಜೆ ಗೋಪ್ಯ ಸಭೆ ನಡೆಸಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರೊಂದಿಗೆ ಮಹಾರಾಷ್ಟ್ರದ ಬಿಜೆಪಿ ವೀಕ್ಷಕರಾಗಿದ್ದ ಗುಜರಾತಿನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾಣಿ ಅವರು 'ಮುಖ್ಯಮಂತ್ರಿ ಜೊತೆ ಇಬ್ಬರು ಉಪ ಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ' ಎಂದು ತಿಳಿಸಿದರು.

'ಪ್ರೋಬಾ–3' ಇಂದು ನಭಕ್ಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಶ್ರೀಹರಿಕೋಟಾ (ಆಂಧ್ರಪ್ರದೇಶ): ಯುರೋಪಿಯನ್ ಸ್ಪೇಸ್ ಏಜೆನ್ಸಿ(ಎಎಸ್ಎ)ಯ ಉಪಗ್ರಹ 'ಪ್ರೋಬಾ–3'ಯಲ್ಲಿ ದೋಷ ಪತ್ತೆಯಾಗಿರುವ ಕಾರಣ, ಉಪಗ್ರಹ ಉಡ್ಡಯನವನ್ನು ಡಿ.5ಕ್ಕೆ ಮರು ನಿಗದಿ ಮಾಡಲಾಗಿದೆ ಎಂದು ಇಸ್ರೊ ಬುಧವಾರ ಘೋಷಿಸಿದೆ.

'ಪ್ರೋಬಾ–3' ಹೊತ್ತ ಪಿಎಸ್‌ಎಲ್‌ವಿ–ಸಿ59 ರಾಕೆಟ್ ಅನ್ನು ಇಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಬುಧವಾರ ಸಂಜೆ 4.09ಕ್ಕೆ ಉಡ್ಡಯನ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ದೋಷ ಪತ್ತೆಯಾದ ಕಾರಣ ಇಎಸ್‌ಎ ಮನವಿ ಮೇರೆಗೆ, ಈ ಉಪಗ್ರಹದ ಉಡ್ಡಯನವನ್ನು ಗುರುವಾರ ಸಂಜೆ 4.12ಕ್ಕೆ ಮರುನಿಗದಿ ಮಾಡಲಾಗಿದೆ' ಎಂದು ನಿಗದಿತ ಉಡಾವಣೆಗೂ ಕೆಲ ನಿಮಿಷಗಳ ಮೊದಲು ಇಸ್ರೊ ಪ್ರಕಟಿಸಿತು.

ಇಬ್ಬರು ಸಿ.ಎ ಸೇರಿ ಮೂವರ ಬಂಧನ



ನವದೆಹಲಿ(ಪಿಟಿಐ): ₹640 ಕೋಟಿ ಸೈಬರ್ ವಂಚನೆ ಪ್ರಕರಣದಲ್ಲಿ ಇಬ್ಬರು ಚಾರ್ಟಡ್ ಅಕೌಂಟೆಂಟ್‌ಗಳು ಮತ್ತು ಕ್ರಿಪ್ಟೊಕರೆನ್ಸಿ ವರ್ತಕನೊಬ್ಬನನ್ನು ಬಂಧಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ತಿಳಿಸಿದೆ.

ಚಾರ್ಟಡ್ ಅಕೌಂಟೆಂಟ್‌ಗಳಾದ ಅಜಯ್ ಯಾದವ್ ಮತ್ತು ವಿಪಿನ್ ಯಾದವ್ ಮತ್ತು ಕ್ರಿಪ್ಟೊ ವರ್ತಕ ಜಿತೇಂದ್ರ ಕಸ್ವಾನ್ ಬಂಧಿತರು.

ಪ್ರಮುಖ ಆರೋಪಿ ಚಾರ್ಟಡ್ ಅಕೌಂಟೆಂಟ್ ಅಶೋಕ್ ಕುಮಾರ್ ಶರ್ಮಾ ಅವರ ಸಹೋದರ ರಾಧೆ ಶ್ಯಾಮ್ ಶರ್ಮಾ ಅವರ ಫಾರ್ಮ್ ಹೌಸ್‌ನಲ್ಲಿ ಇ.ಡಿ ಅಧಿಕಾರಿಗಳು ನವೆಂಬರ್ 28ರಂದು ಶೋಧ ನಡೆಸಿದ್ದರು. ಈ ವೇಳೆ ಇ.ಡಿ ಅಧಿಕಾರಿಗಳ ಮೇಲೆ ಹಲ್ಲೆ ನಡೆದಿದ್ದು, ಪ್ರಕರಣ ಸಂಬಂಧ ರಾಧೆ ಶರ್ಮಾ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ನವೆಂಬರ್ 28 ಮತ್ತು 30ರಂದು ಜಾರಿ ನಿರ್ದೇಶನಾಲಯವು, ದೆಹಲಿ, ಗುರುಗ್ರಾಮ, ಜೋಧಪುರ, ಜುಂಜುನು, ಹೈದರಾಬಾದ್, ಪುಣೆ, ಕೋಲ್ಕತ್ತ ಸೇರಿದಂತೆ 13 ಕಡೆಗಳಲ್ಲಿ ಶೋಧ ನಡೆಸಿತ್ತು. ಈ ಸಂದರ್ಭದಲ್ಲಿ ವಿವರಣೆ ನೀಡದ ₹47 ಲಕ್ಷ ನಗದು, ₹1.3 ಕೋಟಿ ಮೌಲ್ಯದ ಕ್ರಿಪ್ಟೊಕರೆನ್ಸಿಯನ್ನು ವಶಕ್ಕೆ ಪಡೆದಿತ್ತು.

ಚಾರ್ಟಡ್ ಅಕೌಂಟೆಂಟ್‌ಗಳು, ಕಂಪನಿಗಳ ಕಾರ್ಯದರ್ಶಿಗಳು ಮತ್ತು ಕ್ರಿಪ್ಟೊ ವರ್ತಕರ ಮೂಲಕ ಸೈಬರ್ ವಂಚನೆ ನಡೆದಿದೆ ಎಂದು ಇ.ಡಿ ಹೇಳಿದೆ.



ಚಲನಚಿತ್ರೋತ್ಸವ

ಕೋಲ್ಕತ್ತದಲ್ಲಿ ಬುಧವಾರ ನಡೆದ 30ನೇ ಕೋಲ್ಕತ್ತ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಒಡಿಸ್ಸಿ ನೃತ್ಯಗಾರ್ತಿ ಡೋನಾ ಗಂಗೂಲಿ ಹಾಗೂ ಅವರ ತಂಡ ಪ್ರದರ್ಶನ ನೀಡಿತು –ಪಿಟಿಐ ಚಿತ್ರ

ಹತ್ತು ಕಡೆಗಳಲ್ಲಿ ಸಿಬಿಐ ಶೋಧ

ಅಂತರರಾಷ್ಟ್ರೀಯ ಮಟ್ಟದಲ್ಲಿ ₹117 ಕೋಟಿ ಸೈಬರ್ ವಂಚನೆ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದಿರುವ ಸುಮಾರು ₹117 ಕೋಟಿ ಸೈಬರ್ ಹಣಕಾಸು ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಬುಧವಾರ ದೆಹಲಿ ಮತ್ತು ಸುತ್ತಲಿನ 10 ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಲ ಅಪರಿಚಿತ ವಿದೇಶಿ ನಟರು ಮತ್ತು ಸಂಘಟಿತ ಸೈಬರ್ ಅಪರಾಧಿಗಳು ವ್ಯವಸ್ಥಿತವಾಗಿ ದೇಶದಾದ್ಯಂತ ಹಣಕಾಸು ವಂಚನೆಯಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿ ಕೇಂದ್ರ ಗೃಹ ಸಚಿವಾಲಯದ ಸೈಬರ್ ಅಪರಾಧ ಸಂಯೋಜನಾ ಕೇಂದ್ರ (14ಸಿ) ನೀಡಿದ್ದ ದೂರಿನ ಮೇರೆಗೆ ಸಿಬಿಐ ಕಳೆದ ವರ್ಷದ ಡಿಸೆಂಬರ್‌ನಲ್ಲಿ ಪ್ರಕರಣ ದಾಖಲಿಸಿತ್ತು.

ದೂರನ್ನು ಆಧರಿಸಿ, 2023ರ ಜನವರಿ 1ರಿಂದ 2023ರ ಅಕ್ಟೋಬರ್ 17ರವರೆಗೆ ರಾಷ್ಟ್ರೀಯ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್‌ನಲ್ಲಿ (ಎನ್‌ಸಿಆರ್‌ಪಿ) ದಾಖಲಾದ 3,903 ದೂರುಗಳನ್ನು ಸಿಬಿಐ ವಿಶ್ಲೇಷಣೆಗೆ ಒಳಪಡಿಸಿತು. ವೆಬ್‌ಸೈಟ್, ವಾಟ್ಸ್‌ಆ್ಯಪ್, ಟೆಲಿಗ್ರಾಮ್ ಆ್ಯಪ್‌ಗಳನ್ನು ಬಳಸಿ ಈ ಜಾಲದವರು ಜನರಿಗೆ ಮೋಸ ಮಾಡಿ ₹117 ಕೋಟಿಯಷ್ಟು ಸುಲಿಗೆ ಮಾಡಿರುವುದು ಗಮನಕ್ಕೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ಈ ವಂಚನೆಗಳನ್ನು ನಡೆಸುತ್ತಿರುವವರನ್ನು ಪತ್ತೆ ಹಚ್ಚಲು ಸಿಬಿಐ ವರ್ಷದಿಂದ ನಿಗಾವಹಿಸಿದ್ದು, ವಿಸ್ತೃತವಾಗಿ ತಾಂತ್ರಿಕ ವಿಶ್ಲೇಷಣೆಯಲ್ಲೂ ತೊಡಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇದರ ಪರಿಣಾಮ 10 ಶಂಕಿತರನ್ನು ಪತ್ತೆಹಚ್ಚುವಲ್ಲಿ ಕೇಂದ್ರೀಯ ತನಿಖಾ ಸಂಸ್ಥೆ ಯಶಸ್ವಿಯಾಗಿದ್ದು, ಬುಧವಾರ ದೆಹಲಿಯ ಎಂಟು ಮತ್ತು ಗುರುಗ್ರಾಮದ ಎರಡು ಪ್ರದೇಶಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿತು ಎಂದು ಅವರು ವಿವರಿಸಿದ್ದಾರೆ.

ಬಾಂಗ್ಲಾದೇಶಕ್ಕೆ ಅಮೆರಿಕ ಕರೆ

'ಮೂಲಭೂತ ಸ್ವಾತಂತ್ರ್ಯ ಗೌರವಿಸಿ'

ವಾಷಿಂಗ್ಟನ್ (ಪಿಟಿಐ): ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಯ ಬೆನ್ನಲ್ಲೇ, ಧಾರ್ಮಿಕ ಮತ್ತು ಮಾನವ ಹಕ್ಕುಗಳು ಸೇರಿದಂತೆ ಮೂಲಭೂತ ಸ್ವಾತಂತ್ರ್ಯವನ್ನು ಗೌರವಿಸಬೇಕು ಎಂದು ಅಮೆರಿಕ ಮಂಗಳವಾರ ಕರೆ ನೀಡಿದೆ.

'ನಮ್ಮೊಂದಿಗೆ ಬಾಂಧವ್ಯ ಹೊಂದಿರುವ ಪ್ರತಿ ಸರ್ಕಾರದೊಂದಿಗೆ ಸ್ಥಿರತೆಯನ್ನು ಹೊಂದಿದ್ದೇವೆ. ಬಾಂಗ್ಲಾದೇಶದಲ್ಲಿ ಮೂಲಭೂತ ಸ್ವಾತಂತ್ರ್ಯವನ್ನು ಗೌರವಿಸುವ ಅಗತ್ಯವಿದೆ' ಎಂದು ವಿದೇಶಾಂಗ ಇಲಾಖೆ ವಕ್ತಾರ ವೇದಾಂತ್ ಪಟೇಲ್ ಸುದ್ದಿಗಾರರಿಗೆ ತಿಳಿಸಿದರು.

'ಸರ್ಕಾರಗಳು ಕಾನೂನು ಮತ್ತು ಮಾನವ ಹಕ್ಕುಗಳನ್ನು ಗೌರವಿಸಬೇಕು. ಹಾಗೆಯೇ ಯಾವುದೇ ರೀತಿಯ ಪ್ರತಿಭಟನೆಯಾಗಿರಲಿ, ಅದು ಶಾಂತಿಯುತವಾಗಿರಬೇಕು' ಎಂದು ಹೇಳಿದರು. ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, 'ಬಂಧನದಲ್ಲಿರುವವರ ಪರವಾಗಿ ವಾದ ಮಂಡನೆಗೆ ಅವಕಾಶ ನೀಡಬೇಕು, ಅವರಿಗೆ ಮೂಲಭೂತ ಸ್ವಾತಂತ್ರ್ಯವನ್ನು ನೀಡಬೇಕು' ಎಂದು ಹೇಳಿದರು.

ಬಾಂಗ್ಲಾದಲ್ಲಿ ಅಲ್ಪಸಂಖ್ಯಾತರು ಅದರಲ್ಲೂ ಹಿಂದೂಗಳ ಮೇಲಿನ ದಾಳಿ ಬಗ್ಗೆ ಭಾರತ ತೀವ್ರ ಕಳವಳ ವ್ಯಕ್ತಪಡಿಸುತ್ತಿದೆ.

'ನನ್ನ, ತಂಗಿ ಹತ್ಯೆಗೆ ಸಂಚು'

ನವದೆಹಲಿ (ಪಿಟಿಐ): 'ಬಾಂಗ್ಲಾದಲ್ಲಿ ಅಲ್ಪಸಂಖ್ಯಾತರಿಗೆ ಕಿರುಕುಳ ನೀಡಲಾಗುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಮಧ್ಯಂತರ ಸರ್ಕಾರದ ನಾಯಕ ಮೊಹಮ್ಮದ್ ಯೂನಸ್ ಅವರ ವಿರುದ್ಧ ಮಾಜಿ ಪ್ರಧಾನಿ ಶೇಖ್ ಹಸೀನಾ ವಾಗ್ದಾಳಿ ನಡೆಸಿದ್ದಾರೆ. ನ್ಯೂಯಾರ್ಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ವರ್ಚುಯಲ್ ಆಗಿ ಭಾಗವಹಿಸಿದ್ದ ಅವರು, 'ಯೂನಸ್ ಅವರು ನರಮೇಧಕ್ಕೆ ಉತ್ತೇಜನ ನೀಡುತ್ತಿದ್ದಾರೆ. ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತರನ್ನು ರಕ್ಷಿಸುವಲ್ಲಿ ವಿಫಲರಾಗಿದ್ದಾರೆ' ಎಂದು ಆರೋಪಿಸಿದರು.

'ನನ್ನ ತಂದೆ ಶೇಖ್ ಮುಜಿಬುರ್ ರೆಹಮಾನ್‌ರಂತೆ ನನ್ನ ಮತ್ತು ನನ್ನ ತಂಗಿ ಶೇಖ್ ರೆಹಾನಾ ಹತ್ಯೆಗೂ ಸಂಚು ನಡೆದಿತ್ತು' ಎಂದು ಆರೋಪಿಸಿದರು. ಮುಜಿಬುರ್ ಅವರನ್ನು 1975ರಲ್ಲಿ ಹತ್ಯೆಮಾಡಲಾಗಿತ್ತು.

'ಉಗ್ರರ ದಾಳಿ ಸಾಧ್ಯತೆ'

ಲಂಡನ್ (ಪಿಟಿಐ): ಬಾಂಗ್ಲಾದೇಶದಲ್ಲಿ ಭಯೋತ್ಪಾದಕರು ದಾಳಿ ನಡೆಸುವ ಸಾಧ್ಯತೆ ಇದೆ. ಅಲ್ಲಿಗೆ ತೆರಳುವ ಮುನ್ನ ಎಚ್ಚರಿಕೆಯಿಂದಿರಿ ಎಂದು ಎಂದು ಬ್ರಿಟನ್ ಸರ್ಕಾರ ತನ್ನ ದೇಶದ ಪ್ರಜೆಗಳಿಗೆ ತಿಳಿಸಿದೆ.

ಪ್ರಧಾನಿ ಮಧ್ಯಪ್ರದೇಶಕ್ಕೆ ಸಂಸದರ ಒತ್ತಾಯ

ನವದೆಹಲಿ(ಪಿಟಿಐ): ಬಾಂಗ್ಲಾದೇಶದಲ್ಲಿ ಬಂಧಿಸಿರುವ ಹಿಂದೂ ಮುಖಂಡ ಚಿನ್ಮಯಿ ಕೃಷ್ಣದಾಸ್ ಬಿಡುಗಡೆ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶಿಸಬೇಕು ಎಂದು ಬಿಜೆಪಿ ಸಂಸದ ಅನಿಲ್ ಫಿರೋಜಿಯಾ ಅವರು ಬುಧವಾರ ಒತ್ತಾಯಿಸಿದರು.

ಲೋಕಸಭೆಯಲ್ಲಿ ಬುಧವಾರ ಶೂನ್ಯ ವೇಳೆಯಲ್ಲಿ ಅನಿಲ್ ಈ ವಿಷಯ ಪ್ರಸ್ತಾಪಿಸಿದರು.

ಮಥುರಾ ಸಂಸದೆ ಹೇಮಾ ಮಾಲಿನಿ ಅವರು, 'ಧರ್ಮಕ್ಕೆ ಅವಮಾನಿಸುವುದು, ಹಿಂಸಾಚಾರ ಮತ್ತು ಅನ್ಯಾಯವನ್ನು ಸಹಿಸಲು ಸಾಧ್ಯವಿಲ್ಲ' ಎಂದು ಹೇಳಿದರು.

'ನಾವು ಸುಮ್ಮನಿರಲು ಸಾಧ್ಯವಿಲ್ಲ. ಇದು ರಾಜತಾಂತ್ರಿಕ ವಿಚಾರವಲ್ಲ, ನಮ್ಮ ಸಂವೇದನೆ, ಶ್ರೀಕೃಷ್ಣನ ಕುರಿತ ಭಕ್ತಿಗೆ ಸಂಬಂಧಿಸಿದ್ದು' ಎಂದು ಹೇಳಿದರು. ಮತ್ತೊಬ್ಬ ಬಿಜೆಪಿ ಸಂಸದ ದಿಲೀಪ್ ಸೈಕಿಯಾ ಅವರು,'ಹಿಂದೂಗಳ ಮೇಲಿನ ದೌರ್ಜನ್ಯವನ್ನು ನಿಲ್ಲಿಸುವ ಸಂದೇಶ ನೀಡುವ ನಿರ್ಣಯವನ್ನು ಸಂಸತ್ತಿನಲ್ಲಿ ಅಂಗೀಕರಿಸಬೇಕು' ಎಂದರು.

ಜಿಲ್ಲಾ ಪಂಚಾಯಿತಿ ಅಧಿಕಾರ ಮೊಟಕು, ಜನವರಿಯಿಂದಲೇ ಹೊಸ ಸಮಿತಿ

ಶಾಸಕರಿಗೆ ಶಾಲಾ ಮೇಲ್ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮೇಲ್ವಿಚಾರಣೆಗೆ ಆಯಾ ಕ್ಷೇತ್ರದ ಶಾಸಕರ ನೇತೃತ್ವದಲ್ಲಿ ಸಮಿತಿಗಳನ್ನು ರಚಿಸಲಾಗುತ್ತಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಬುಧವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಮಿತಿಗಳ ರಚನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಅನುಮೋದನೆ ನೀಡಿದ್ದಾರೆ. ಈ ಕುರಿತು ಆದೇಶವನ್ನು ಹೊರಡಿಸಲಾಗುವುದು. ನೂತನ ಸಮಿತಿಗಳು ಜನವರಿಯಿಂದಲೇ ಅಸ್ತಿತ್ವಕ್ಕೆ ಬರಲಿವೆ' ಎಂದರು.

ಮೊದಲು ಜಿ.ಪಂ. ಸಿಇಒ ಶಾಲೆಗಳ ಮೇಲ್ವಿಚಾರಣಾ ಕಾರ್ಯ ಮಾಡುತ್ತಿದ್ದರು. ಇದೇ ಮೊದಲ ಬಾರಿಗೆ ಶಾಸಕರ ನೇತೃತ್ವದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಕಾರ್ಯನಿರ್ವಹಣೆಗೆ 'ಬಗರ್‌ಹುಕುಂ' ಸಮಿತಿಗಳ ಮಾದರಿಯಲ್ಲಿ ಹೊಸ ಸಮಿತಿಗಳನ್ನು ರಚಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಸಮಿತಿಯಲ್ಲಿ ಆಯಾ ತಾಲ್ಲೂಕುಗಳ ತಹಶೀಲ್ದಾರ್, ಬಿಇಒಗಳು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯ ಶಿಕ್ಷಕರು, ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (ಡಯಟ್) ಪ್ರತಿನಿಧಿಗಳು, ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಸಮಿತಿಯ ಸದಸ್ಯರಾಗಿರುತ್ತಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ಸಮುದಾಯದ ಮಹಿಳೆಯರು, ಸಾಮಾನ್ಯ ವರ್ಗದ ಪ್ರತಿನಿಧಿ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಎಸ್‌ಡಿಎಂಸಿಯಿಂದ ಇಬ್ಬರು ಸದಸ್ಯರನ್ನು ಸರ್ಕಾರ ಸಮಿತಿಗೆ ನಾಮನಿರ್ದೇಶನ ಮಾಡುತ್ತದೆ ಎಂದರು.

'ಶಾಲಾ ಕಟ್ಟಡ, ಕೊಠಡಿಗಳ ನಿರ್ಮಾಣ ನಿಧಾನ ಗತಿಯಲ್ಲಿ ಸಾಗಿದೆ. ಹಿಂದಿನ ಸರ್ಕಾರ ಹೆಚ್ಚು ಕೊಠಡಿಗಳನ್ನು ಘೋಷಿಸಿ, ಅಲ್ಪ ಅನುದಾನ ನೀಡಿತ್ತು. ಸಿಎಸ್‌ಆರ್ ನಿಧಿಯಲ್ಲಿ ಕೆಲ ಕಾರ್ಯ ಅನುಷ್ಠಾನ ಮಾಡುತ್ತಿದ್ದೇವೆ. ಇಂತಹ ಕಾರ್ಯಗಳಿಗೆ ವೇಗ ದೊರಕಿಸಲು ಶಾಸಕರ ಉಸ್ತುವಾರಿಯ ಅಗತ್ಯವಿದೆ' ಎಂದರು.



ಶಿಕ್ಷಣ ಇಲಾಖೆ ಆಯೋಜಿಸಿದ 'ಗೆಳತಿಯರೊಂದಿಗೆ ಹಾರೋಣ' ಕಾರ್ಯಕ್ರಮಕ್ಕೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹಾಗೂ ವಿದ್ಯಾರ್ಥಿನಿಯರು ಬುಧವಾರ ಬೆಂಗಳೂರಿನ ವಿಧಾನಸೌಧದಲ್ಲಿ ಚಾಲನೆ ನೀಡಿದರು. ಶಾಸಕ ಬಿ.ಜಿ. ಗೋವಿಂದಪ್ಪ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಗೆಳತಿಯರೊಂದಿಗೆ ಹಾರೋಣ' ಅನುಷ್ಠಾನ

ಕಸ್ತೂರಬಾ ಗಾಂಧಿ ಬಾಲಕಿಯರ ವಿದ್ಯಾಲಯಗಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು, ಅವರನ್ನು ಭವಿಷ್ಯದ ಬದುಕಿಗೆ ಸಜ್ಜುಗೊಳಿಸಲು ಸ್ವಾತಾಲೀಮ್ ಪ್ರತಿಷ್ಠಾನದ ಸಹಯೋಗದಲ್ಲಿ ರಾಜ್ಯದಲ್ಲೂ 'ಗೆಳತಿಯರೊಂದಿಗೆ ಹಾರೋಣ' ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು.

ಕಸ್ತೂರಬಾ ವಿದ್ಯಾಲಯಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ವಂಚಿತ ಸಮುದಾಯಗಳ ಬಾಲಕಿಯರು, ಅನಾಥ, ಒಂಟಿ ಪೋಷಕರ ಮಕ್ಕಳು ಓದುತ್ತಿದ್ದಾರೆ. ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು, ಮಕ್ಕಳಿಗೆ ಜೀವನ ಕೌಶಲ ಕಲಿಸಲು, ಅವರನ್ನು ಸವಾಲುಗಳಿಗೆ ಸಜ್ಜುಗೊಳಿಸಲು ಹಾಗೂ ಇಂಗ್ಲಿಷ್ ಭಾಷಾ ಜ್ಞಾನ ವೃದ್ಧಿಸಲು, ಕ್ರೀಡಾ ಚಟುವಟಿಕೆ ಪ್ರೋತ್ಸಾಹಿಸಲು ಈ ಕಾರ್ಯಕ್ರಮ ನೆರವಾಗಲಿದೆ ಎಂದು ಅವರು ತಿಳಿಸಿದರು.

ಶೈಕ್ಷಣಿಕವಾಗಿ ಹಿಂದುಳಿದ ಭಾಗಗಳ 10,300 ಬಾಲಕಿಯರಿಗೆ ಕೌಶಲ ತರಬೇತಿ ನೀಡಲಾಗುತ್ತದೆ. ಜತೆಗೆ, ಸೇತು ಬಂಧ ಶಿಕ್ಷಣಕ್ಕೂ ವ್ಯವಸ್ಥೆ ಮಾಡಲಾಗಿದೆ. ಶಿಕ್ಷಕರು, ಹಾಸ್ಟೆಲ್‌ಗಳ ಮೇಲ್ವಿಚಾರಕರು, ಪೋಷಕರು ಮತ್ತು ಸಮುದಾಯದ ಮುಖಂಡರಿಗೂ ಮಾಹಿತಿ ನೀಡಲಾಗುತ್ತದೆ ಎಂದು ವಿವರ ನೀಡಿದರು.

ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ 10ರಿಂದ

ಆಳ್ವಾಸ್ ವಿರಾಸತ್: ಕೈಮಗ್ಗ ಸೀರೆಗಳ ಉತ್ಸವ ಸೇರಿ ಹಲವು ಮೇಳ ಸಂಗಮ

ಪ್ರಜಾವಾಣಿ ವಾರ್ತೆ

ಮಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಆಯೋಜಿಸುವ 30ನೇ ವರ್ಷದ 'ಆಳ್ವಾಸ್ ವಿರಾಸತ್–ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ' ಇದೇ 10ರಿಂದ 15ರ ವರೆಗೆ ಜರುಗಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ತಿಳಿಸಿದರು.

ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸಾಂಸ್ಕೃತಿಕ ವೈಭವದ ಜೊತೆಗೆ ವಿವಿಧ ಮೇಳಗಳು ನಡೆಯಲಿವೆ. ಕಲಿಕೆ ಹಾಗೂ ಜೀವನೋಲ್ಲಾಸದ ಸೆಲೆಯಾಗಿ ಈ ಉತ್ಸವ ಮೂಡಿಬರಲಿದೆ ಎಂದು ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

10ರಂದು ಸಂಜೆ 5.30ಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಉದ್ಘಾಟಿಸುವರು. ಉಡುಪಿಯ ಜಿ.ಶಂಕರ್ ಫ್ಯಾಮಿಲಿ ಟ್ರಸ್ಟ್ ಅಧ್ಯಕ್ಷ ಜಿ. ಶಂಕರ್ ಅಧ್ಯಕ್ಷತೆ ವಹಿಸುವರು. 100ಕ್ಕೂ ಅಧಿಕ ದೇಶೀಯ ಜಾನಪದ ಕಲಾ ತಂಡಗಳಿಂದ, 3ಸಾವಿರಕ್ಕೂ ಹೆಚ್ಚು ಕಲಾವಿದರಿಂದ ಸಾಂಸ್ಕೃತಿಕ ಮೆರವಣಿಗೆ ನಂತರ ಆಳ್ವಾಸ್ ವಿರಾಸತ್ ಸಾಂಸ್ಕೃತಿಕ ರಥ ಸಂಚಲನ ಮತ್ತು ರಥಾರತಿ ನಡೆಯಲಿದೆ ಎಂದರು.



ಸಂಸ್ಥೆಯಲ್ಲಿ 22 ಸಾವಿರ ವಿದ್ಯಾರ್ಥಿಗಳಿದ್ದು, ಪಾಲಕರು, ಸಾರ್ವಜನಿಕರು ಸೇರಿ ನಿತ್ಯ 1 ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ. 40 ಸಾವಿರ ಆಸನ ವ್ಯವಸ್ಥೆ ಮಾಡಲಾಗಿದೆ

ಡಾ.ಮೋಹನ ಆಳ್ವ, ಆಳ್ವ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ

11ರಂದು ಸಂಜೆ 5.45ಕ್ಕೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ ಪಂಡಿತ್ ವೆಂಕಟೇಶ್ ಕುಮಾರ್ ಅವರಿಗೆ ₹1 ಲಕ್ಷ ನಗದು ಒಳಗೊಂಡ 'ಆಳ್ವಾಸ್ ವಿರಾಸತ್ 2024' ಪ್ರಶಸ್ತಿಯನ್ನು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಪ್ರದಾನ ಮಾಡುವರು. ಪಂ.ವೆಂಕಟೇಶ್ ಕುಮಾರ್ ಅವರು ಹಿಂದೂಸ್ತಾನಿ ಗಾಯನ ನಡೆಸಿಕೊಡುವರು. ನಂತರ ಗುಜರಾತ್‌ನ 'ರಂಗ್ ಮಲಹರ್ ದಿ ಫೋಕ್ ಆರ್ಟ್ಸ್' ತಂಡದಿಂದ ವೈವಿಧ್ಯಮಯ ಗುಜರಾತಿ ಜಾನಪದ ನೃತ್ಯ ಪ್ರದರ್ಶನ, 12ರಂದು ಗುಜರಾತ್ ಒಸ್ಮಾನ್ ಮೀರ್ ಮತ್ತು ಬಳಗದಿಂದ ಸಂಗೀತ ಲಹರಿ, 13ರಂದು ನೀಲಾದ್ರಿ ಕುಮಾರ್ ಮತ್ತು ತಂಡದಿಂದ 'ಸೌಂಡ್ ಆಫ್ ಇಂಡಿಯಾ', ಕೋಲ್ಕತ್ತದ ಆಶೀಮ್ ಬಂಧು ಭಟ್ಟಾಚಾರ್ಜಿ ಸಂಯೋಜನೆಯಲ್ಲಿ ಭರತನಾಟ್ಯ, ಒಡಿಸ್ಸಿ, ಕಥಕ್ ಸಂಗಮದ ತ್ರಿಪರ್ಣ ಪ್ರಸ್ತುತಗೊಳ್ಳಲಿದೆ. 14ರಂದು ಚೆನ್ನೈನ ಸ್ಟೆಕೇಟೋದ 25 ಕಲಾವಿದರಿಂದ 'ಸಂಗೀತ ರಸದೌತಣ' ಹಾಗೂ ರಾತ್ರಿ 9ಕ್ಕೆ ಸಾಂಸ್ಕೃತಿಕ ರಥ ಸ್ವಸ್ಥಾನ ಆಗಮನ ನಡೆಯಲಿದೆ. ನಿತ್ಯವೂ ಸ್ಥಳೀಯ ಕಲಾವಿದರು, ಆಳ್ವಾಸ್ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ಇರಲಿವೆ ಎಂದು ಮಾಹಿತಿ ನೀಡಿದರು.

15ರಂದು ಸಾಂಸ್ಕೃತಿಕ ಕಾರ್ಯಕ್ರಮ ಇರುವುದಿಲ್ಲ. ವಿವಿಧ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳ ಮಹಾಮೇಳ ದಿನಪೂರ್ತಿ ತೆರೆದಿರುತ್ತದೆ ಎಂದರು.

ಆಳ್ವಾಸ್ ಪತ್ರಿಕೋದ್ಯಮ ಕಾಲೇಜಿನ ಮುಖ್ಯಸ್ಥ ಪ್ರಸಾದ ಶೆಟ್ಟಿ ಇದ್ದರು.

ಸ್ಕೌಟ್ಸ್-ಗೈಡ್ಸ್ ಉತ್ಸವ: ಪ್ರತಿಷ್ಠಾನವು ಐದು ದಿನ ಆಯೋಜಿಸಿರುವ ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿ ಶಿಬಿರದಲ್ಲಿ 1,600 ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ವಿರಾಸತ್ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸಲು ಈ ಮಕ್ಕಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಮೋಹನ್ ಆಳ್ವ ತಿಳಿಸಿದರು.

ಬಾಂಗ್ಲಾದಲ್ಲಿ ದೌರ್ಜನ್ಯ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ನಿಲ್ಲಬೇಕು ಮತ್ತು ಹಿಂದೂಗಳಿಗೆ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿ, ಹಿಂದೂ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಬುಧವಾರ ಇಲ್ಲಿ ಪ್ರತಿಭಟನೆ ನಡೆಯಿತು.

'ಇಸ್ಲಾಂ ಆಕ್ರಮಣ ನಡೆದ ಎಲ್ಲ ದೇಶಗಳ ಸಂಸ್ಕೃತಿ, ನಾಗರಿಕತೆ, ಪರಂಪರೆ ನಾಶವಾಗಿದ್ದು, ಬಾಂಗ್ಲಾದೇಶದಲ್ಲೂ ಇದೇ ಪ್ರಯೋಗ ನಡೆಯುತ್ತಿದೆ. ಕರ್ನಾಟಕದಲ್ಲೂ 'ಅವರ' ಸಂಖ್ಯೆ ಹೆಚ್ಚುತ್ತಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇ 35ರಷ್ಟು ಹೆಚ್ಚಾಗಿದೆ. ಬಾಂಗ್ಲಾದೇಶದ ಸ್ಥಿತಿ ಮುಂದೆ ದಕ್ಷಿಣ ಕನ್ನಡ ಜಿಲ್ಲೆಯ ಹಿಂದೂಗಳಿಗೂ ಬರಬಹುದು' ಎಂದು ವಿಶ್ವ ಹಿಂದೂ ಪರಿಷತ್ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಹೇಳಿದರು.

ಹಿಂದೂ ಜಾಗರಣ ವೇದಿಕೆ ಪ್ರಾಂತ ಕಾರ್ಯಕಾರಿ ಸದಸ್ಯ ಶ್ರೀಕಾಂತ ಶೆಟ್ಟಿ ಮಾತನಾಡಿ, ಬಾಂಗ್ಲಾದೇಶದ ಚಟ್ಟೋ ಗ್ರಾಮದಿಂದ ಸಿಲಿಗುರಿ ವರೆಗಿನ ಭೂಭಾಗ ಸೇರಿಸಿ 'ಗೂರ್ಖಾ ಲ್ಯಾಂಡ್' ಎನ್ನುವ ಹೊಸ ಹಿಂದೂ ದೇಶ ರಚಿಸಿ, ಅಲ್ಲಿ ಬಾಂಗ್ಲಾದ 1.30 ಕೋಟಿ ಹಿಂದೂಗಳಿಗೆ ನೆಲೆ ನೀಡುವಂತೆ ಪ್ರಧಾನಿ ಮೋದಿ ಎದುರು ಬೇಡಿಕೆ ಇಡಲಾಗುವುದು ಎಂದರು.

ವಾಹನ ಮತ್ತು ಜನಸಂಚಾರಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಪ್ರತಿಭಟನಾ ಸಭೆ ಆಯೋಜಕರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.



ಬೀದರ್‌ನಲ್ಲಿ ಬುಧವಾರ ವಕ್ಫ್ ಮಂಡಳಿ ವಿರುದ್ಧ ಬಿಜೆಪಿ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು

'ಕಲ್ಯಾಣ'ದ ನೆಲದಿಂದ ಆರಂಭ: ವಿಜಯೇಂದ್ರ ನೇತೃತ್ವ

ವಕ್ಫ್ ವಿರೋಧಿ ಹೋರಾಟ ಶುರು

ಪ್ರಜಾವಾಣಿ ವಾರ್ತೆ

ಬೀದರ್: 'ನಮ್ಮ ಭೂಮಿ ನಮ್ಮ ಹಕ್ಕು' ಹೆಸರಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಪಕ್ಷವು ವಕ್ಫ್ ವಿರೋಧಿ ಹೋರಾಟವನ್ನು 'ಕಲ್ಯಾಣ'ದ ನೆಲದಿಂದ ಬುಧವಾರ ಆರಂಭಿಸಿತು.

ಬೀದರ್ ಜಿಲ್ಲೆಯಿಂದಲೇ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದ ಬಣ ನವೆಂಬರ್ 25ರಂದು ವಕ್ಫ್ ವಿರೋಧಿ ಹೋರಾಟ ಆರಂಭಿಸಿತ್ತು. ಇದಾದ ಹತ್ತು ದಿನಗಳ ಒಳಗೆ ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರ ನೇತೃತ್ವದಲ್ಲಿ ಮತ್ತೊಂದು ಬಣ ಇನ್ನೊಂದು ಹೋರಾಟವನ್ನು ಆರಂಭಿಸಿದೆ.

ಬೀದರ್‌ನ ಗಾಂಧಿ ಗಂಜ್‌ನಲ್ಲಿ ಪ್ರತಿಭಟನಾ ಸಭೆ ನಡೆಸಿದ ಬಿಜೆಪಿ ಮುಖಂಡರು, ಅಲ್ಲಿಂದ ಎತ್ತಿನ ಬಂಡಿಗಳಲ್ಲಿ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿದರು. 'ವಕ್ಫ್ ಹಟಾವೋ ದೇಶ್ ಬಚಾವೋ', 'ನಮ್ಮ ಭೂಮಿ ನಮ್ಮ ಹಕ್ಕು' ಎಂದು ಘೋಷಣೆಗಳನ್ನು ಕೂಗಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿ ಅಧಿಕಾರಿಗೆ ಮನವಿ ಪತ್ರ ಸಲ್ಲಿಸಿದರು.

ಇದಕ್ಕೂ ಮುನ್ನ ಮಾತನಾಡಿದ ವಿಜಯೇಂದ್ರ, 'ರೈತರು, ಮಠ–ಮಂದಿರಗಳಿಗೆ ವಕ್ಫ್ ಬೋರ್ಡ್‌ನಿಂದ ನೋಟಿಸ್ ಕೊಟ್ಟಿರುವ ವಿಷಯವನ್ನು ಬೆಳಗಾವಿ ಅಧಿವೇಶನದಲ್ಲಿ ಪ್ರಸ್ತಾಪಿಸುತ್ತೇವೆ. ರೈತರು, ಹಿಂದೂಗಳಿಗೆ ನ್ಯಾಯ ಕೊಡಿಸುವವರೆಗೆ ಬಿಜೆಪಿ ಹೋರಾಟ ನಡೆಸಲಿದೆ' ಎಂದು ಭರವಸೆ ನೀಡಿದರು.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಶಾಸಕರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಬೈರತಿ ಬಸವರಾಜ, ಪ್ರಭು ಚವಾಣ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಾರ್‌ನಲ್ಲಿ ಬಿಲ್ ಪಾವತಿ ವಿಷಯಕ್ಕೆ ನಡೆದ ಮಾರಾಮಾರಿ

35 ಜನರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಇಲ್ಲಿನ ಬಾರ್‌ನಲ್ಲಿ ಮದ್ಯದ ಬಿಲ್ ಪಾವತಿ ಸಂಬಂಧ ನಡೆದ ಜಗಳ ವಿಕೋಪಕ್ಕೆ ತಿರುಗಿ ಮಾರಕಾಸ್ತ್ರಗಳನ್ನು ಹಿಡಿದು ಮಾರಾಮಾರಿ ನಡೆದಿದೆ. ಈ ಘರ್ಷಣೆಯಲ್ಲಿ ಗಂಭೀರವಾಗಿ ಗಾಯಗೊಂಡಿರುವ ಐವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 35 ಜನರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

'ನಗರದ ಕೆ.ಎಂ.ರಸ್ತೆಯ ದೀಪಾ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ಮನು ಮತ್ತು ಇತರರು ಸೋಮವಾರ ಮದ್ಯ ಸೇವಿಸಿದ್ದರು. ಬಳಿಕ ಬಿಲ್ ಪಾವತಿ ವಿಷಯದಲ್ಲಿ ಸಿಬ್ಬಂದಿಯೊಂದಿಗೆ ಜಗಳ ನಡೆದಿತ್ತು. ಮಂಗಳವಾರ ಮಧ್ಯಾಹ್ನ ಹತ್ತಕ್ಕೂ ಹೆಚ್ಚು ಯುವಕರ ಗುಂಪು, ಮನು ಸೇರಿ ಮೂವರ ಮೇಲೆ ಹಲ್ಲೆ ನಡೆಸಿದೆ. ದೊಣ್ಣೆಗಳನ್ನು ಹಿಡಿದು ಮನುನನ್ನು ಹುಡುಕಿಕೊಂಡು ಬೈಕ್‌ಗಳಲ್ಲಿ ಓಡಾಡಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾ ಮತ್ತು ಹಲವರ ಮೊಬೈಲ್ ಫೋನ್‌ಗಳಲ್ಲಿ ಸೆರೆಯಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕಡೂರು ರಸ್ತೆಯ ಸಾಲುಮರದಮ್ಮ ದೇವಸ್ಥಾನದ ಬಳಿ ಇದ್ದಾಗ ಬಂದ ರಾಕಿ, ರವಿ, ಯಶ್ವಂತ, ಮಾರ್ಕ್ಸ್ ಸೂರಿ, ಛತ್ರಿ ಕುಮಾರ್, ಬಡ್ಡಿ ರಾಕಿ, ಸುರೇಶ್ ಮತ್ತು ಇತರರು ರಾಡು ಮತ್ತು ಕತ್ತಿಯಿಂದ ಹಲ್ಲೆ ನಡೆಸಿದರು. ಜತೆಯಲ್ಲಿದ್ದ ಸೈಫ್ ಅಲಿಖಾನ್ ಮತ್ತು ಮಲ್ಲಿಕಾರ್ಜುನ ಅವರ ಮೇಲೂ ಹಲ್ಲೆ ನಡೆಸಿದ್ದಾರೆ' ಎಂದು ಮನು ಪೊಲೀಸರಿಗೆ ದೂರು ನೀಡಿದ್ದಾರೆ.

'ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದಾಗ ಕೆಳಗೆ ಬಿದ್ದ ನಮ್ಮನ್ನು ಕಾಲಿನಿಂದ ತುಳಿದು, ಕೊಲೆ ಮಾಡುವ ಬೆದರಿಕೆ ಹಾಕಿದರು. ತಪ್ಪಿಸಿಕೊಂಡು ಓಡಿ ಸಂಜೀವಿನಿ ಶಾಲೆ ಬಳಿ ಬಂದೆವು. ಆಗ ಮಣಿಕಂಠ ಮತ್ತು ಅರುಣ್‌ಕುಮಾರ್ ಎಂಬುವರು ನಮ್ಮನ್ನು ಆಸ್ಪತ್ರೆಗೆ ದಾಖಲಿಸಿದರು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ಕೊಲೆ ಯತ್ನ ಆರೋಪದಲ್ಲಿ 13 ಜನರ ವಿರುದ್ಧ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮನು, ಸೈಫ್ ಅಲಿಖಾನ್ ಮತ್ತು ಮಲ್ಲಿಕಾರ್ಜುನ ಅವರನ್ನು ಆಸ್ಪತ್ರೆಗೆ ಸೇರಿಸಿದ್ದ ಮಣಿಕಂಠ ಮತ್ತು ಅರುಣ್‌ಕುಮಾರ್ ಮೇಲೆ 50ಕ್ಕೂ ಹೆಚ್ಚು ಜನರ ಗುಂಪು ಮಂಗಳವಾರ ಸಂಜೆ ದಾಳಿ ನಡೆಸಿದೆ. ಕಲ್ಯಾಣನಗರದಲ್ಲಿ ಇವರಿಬ್ಬರ ಮೇಲೆ ಹಲ್ಲೆ ನಡೆದಿದ್ದು, ಈ ಇಬ್ಬರು ನೀಡಿರುವ ದೂರು ಆಧರಿಸಿ 22 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

‘ದಾಖಲೆ ರಹಿತ ವಸತಿ ಪ್ರದೇಶ ಕಂದಾಯ ಗ್ರಾಮವಾಗಿ ಘೋಷಣೆ’

ಪ್ರಜಾವಾಣಿ ವಾರ್ತೆ



ಸಚಿವ ಕೃಷ್ಣಬೈರೇಗೌಡ ಅವರು ಶಿರಸಿಯಲ್ಲಿ ಫಲಾನುಭವಿಗಳಿಗೆ ಬಗರ್ ಹುಕುಂ ಸಾಗುವಳಿ ಚೀಟಿಯನ್ನು ಬುಧವಾರ ವಿತರಿಸಿದರು. ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ, ಸಚಿವ ಮಂಕಾಳ ವೈದ್ಯ, ಶಾಸಕ ಭೀಮಣ್ಣ ನಾಯ್ಕ ಇದ್ದರು

ಶಿರಸಿ: ‘ರಾಜ್ಯದ 3,800 ದಾಖಲೆ ರಹಿತ ವಸತಿ ಪ್ರದೇಶಗಳನ್ನು 6 ತಿಂಗಳಲ್ಲಿ ಕಂದಾಯ ಗ್ರಾಮಗಳೆಂದು ಘೋಷಿಸಲಾಗುವುದು. ಆ ಗ್ರಾಮಗಳಲ್ಲಿ ವಾಸಿಸುವ 1.50 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗುವುದು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಶಿರಸಿಯ ಅಂಬೇಡ್ಕರ್ ಭವನದಲ್ಲಿ ಬುಧವಾರ ಅವರು ಅರ್ಹ ಫಲಾನುಭವಿಗಳಿಗೆ ಸಾಂಕೇತಿಕವಾಗಿ ಬಗರ್ ಹುಕುಂ ಸಾಗುವಳಿ ಚೀಟಿ, ಪಹಣಿ ಪತ್ರಿಕೆ, ಪೋಡಿ ದಾಖಲೆ ಮತ್ತು ಕಂದಾಯ ಗ್ರಾಮಗಳ ಹಕ್ಕುಪತ್ರ ವಿತರಿಸಿ ಮಾತನಾಡಿದರು.

‘ಬಗರ್ ಹುಕುಂ ಅಡಿ ಲಕ್ಷಾಂತರ ಅರ್ಜಿಗಳು ಬಂದಿವೆ. ಇಲಾಖೆಯು ಆಂದೋಲನದ ರೀತಿ ಅಂಥ ಅರ್ಜಿ ವಿಲೇವಾರಿ ಮಾಡಿ, ಮಾನದಂಡದ ಪ್ರಕಾರ ಅರ್ಹರಿಗೆ ಹಕ್ಕುಪತ್ರ ನೀಡಲಿದೆ. ರಾಜ್ಯದಲ್ಲಿನ ವಿವಿಧ ಪ್ರದೇಶದ ತಾಂಡಾಗಳು, ಹಟ್ಟಿಗಳು, ಕ್ಯಾಂಪ್‌ಗಳಿಗೆ ಅಧಿಕೃತ ಮಾನ್ಯತೆ ಇಲ್ಲದ ಕಾರಣ ಅವುಗಳಿಗೆ ಕಂದಾಯ ಗ್ರಾಮದ ಅಧಿಕಾರ ನೀಡಲು ಸರ್ಕಾರ ನಿರ್ಧರಿಸಿದೆ’ ಎಂದು ಅವರು ತಿಳಿಸಿದರು.

‘ಹಕ್ಕುಪತ್ರ ಮಂಜೂರಿ ನಿಯಮ ಬಿಗಿ ಮಾಡಲಾಗಿದ್ದು, ಅರ್ಜಿದಾರರ ಹೆಸರಲ್ಲಿ ಜಮೀನು ಇದೆಯೇ? ಸಾಗುವಳಿ ನಡೆದಿದೆಯೇ ಎಂಬುದನ್ನು ಖಾತ್ರಿ ಮಾಡಲಾಗುತ್ತದೆ. ಬಗರ್ ಹುಕುಂ ಸಮಿತಿಗಳ ನಡಾವಳಿಗಳನ್ನು ಡಿಜಿಟಲೀಕರಣ ಮಾಡಲಾಗುತ್ತದೆ. ಇದರ ಜತೆ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಅರ್ಹರಿಗೆ ಜಮೀನು ನೋಂದಣಿ ಮಾಡಿಕೊಡಲಾಗುತ್ತದೆ. ಇದರಿಂದ ಅರ್ಹರಿಗೆ ಜಮೀನು ಸಿಗಲು ಸಾಧ್ಯ’ ಎಂದು ಹೇಳಿದರು.

ಶಾಸಕ ಭೀಮಣ್ಣ ನಾಯ್ಕ ಮಾತನಾಡಿ, ‘ಗ್ರಾಮೀಣ ಭಾಗದಲ್ಲಿ ಮನೆ ನಿರ್ಮಿಸಲು ಜಾಗ ಇಲ್ಲದಿರುವವರಿಗೆ ಕಂದಾಯ ಜಾಗ ನೀಡುವ ಕಾರ್ಯ ಆಗಬೇಕು’ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಶಾಸಕ ಶಿವರಾಮ ಹೆಬ್ಬಾರ್, ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಇದ್ದರು.

ಜೈನರಗುತ್ತಿ: ತೀರ್ಥಂಕರರ ಪ್ರತಿಮೆಗಳಿಗೆ ಮಸ್ತಕಾಭಿಷೇಕ

ಹಳೇಬೀಡು (ಹಾಸನ): ಜೈನರಗುತ್ತಿಯಲ್ಲಿ ಪಂಚಕಲ್ಯಾಣಿಕ ಮಹಾ ಮಹೋತ್ಸವವು ಬುಧವಾರ ಮೋಕ್ಷ ಕಲ್ಯಾಣಿಕದೊಂದಿಗೆ ವೈಭವದ ತೆರೆ ಕಂಡಿತು. ಸಾವಿರಾರು ಭಕ್ತರು ಈ ಸನ್ನಿವೇಶಕ್ಕೆ ಸಾಕ್ಷಿಯಾದರು.

ಜೈನರಗುತ್ತಿ ಕ್ಷೇತ್ರದಲ್ಲಿ ವಿರಾಜಮಾನರಾಗಿರುವ ಜೈನ ತೀರ್ಥಂಕರರಾದ ಮುನಿಸುವ್ರತ ಹಾಗೂ ಶೀತಲನಾಥ ತೀರ್ಥಂಕರರ ಪ್ರತಿಮೆಗಳಿಗೆ ಪಂಚಕಲ್ಯಾಣಿಕ ಪೂರ್ವಕ ಮೊದಲ ಮಸ್ತಕಾಭಿಷೇಕ ನಡೆಯಿತು. ಎಳನೀರು, ಹಾಲು, ಕಬ್ಬಿನಹಾಲು, ಚತುಷ್ಕೋನ ಕಳಸ, ಶ್ರೀಗಂಧ, ಅರಿಸಿನ, ಕಲ್ಕಚೂರ್ಣ, ಚಂದನ, ಕಷಾಯಗಳನ್ನು 1008 ಕಳಸಗಳಲ್ಲಿ ತುಂಬಿ ಅಭಿಷೇಕ ಮಾಡಲಾಯಿತು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ‘ಬೇಲೂರು ತಾಲ್ಲೂಕಿನ ಪುರಾತನ ವಿಗ್ರಹಗಳು ಪತ್ತೆಯಾಗುತ್ತಿದ್ದು, ಸಂಶೋಧನೆಗೆ ಅನುಕೂಲವಾಗುವಂತೆ ಧರ್ಮಸ್ಥಳ ಧರ್ಮೋತ್ಥಾನ ಸಂಸ್ಥೆಯಿಂದ ಶೀಘ್ರವೇ ಇಲ್ಲಿ ಅಧ್ಯಯನ ಪೀಠ ಸ್ಥಾಪಿಸಲಾಗುವುದು’ ಎಂದರು.

‘ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಬದ್ಧರಾಗಿದ್ದು, ಅಗತ್ಯ ವ್ಯವಸ್ಥೆಗಳನ್ನು ಒದಗಿಸಿಕೊಡುತ್ತೇವೆ. ಕರ್ನಾಟಕದ ವಿವಿಧೆಡೆ ಮಣ್ಣಿನಡಿ ಹಲವು ವಿಗ್ರಹಗಳು ಸಿಕ್ಕಿದ್ದು, ಅವುಗಳಿಗೆ ದೇಗುಲ ನಿರ್ಮಿಸಲು ಧರ್ಮಸ್ಥಳ ಸಂಸ್ಥೆ ಸಹಕಾರ ನೀಡಿದೆ’ ಎಂದರು.



ಶೀತಲನಾಥ ತೀರ್ಥಂಕರರ ಪ್ರತಿಮೆಗೆ ಹಾಲಿನ ಅಭಿಷೇಕ ನೆರವೇರಿಸಲಾಯಿತು

ಆಚಾರ್ಯ ಶ್ರೀಗಳಾದ ವಿಶುದ್ಧ ಸಾಗರ ಮುನಿ ಮಹಾರಾಜ್, ಚಂದ್ರಪ್ರಭ ಮುನಿ ಮಹಾರಾಜ್, ಜೈನಮುನಿ ವೀರಸಾಗರ ಮುನಿ ಮಹಾರಾಜ್, ಹೊಂಬುಜ ಜೈನ ಮಠದ ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರವಣಬೆಳಗೊಳ ಮಠದ ಅಭಿನವ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಸ್ವಾಮೀಜಿ ಪಾಲ್ಗೊಂಡಿದ್ದರು.

ವೈದ್ಯಕೀಯ ಶಿಕ್ಷಣ ಇಲಾಖೆ ಆದೇಶಕ್ಕೆ ತಡೆ

ಶಸ್ತ್ರಚಿಕಿತ್ಸಕರಾಗಿ ಡಾ.ಲೋಕೇಶ್ ಮುಂದುವರಿಕೆ– ಡಿ.ಸಿ

ಪ್ರಜಾವಾಣಿ ವಾರ್ತೆ

ಹಾಸನ: ಮಹಿಳಾ ಸಿಬ್ಬಂದಿಯೊಂದಿಗೆ ಅನುಚಿತ ವರ್ತನೆಯ ಆರೋಪ ಎದುರಿಸುತ್ತಿರುವ ಇಲ್ಲಿನ ಪ್ರಭಾರ ಜಿಲ್ಲಾ ಶಸ್ತ್ರ ಚಿಕಿತ್ಸಕ ಹಾಗೂ ಹಿಮ್ಸ್‌ನ ಜನರಲ್ ಮೆಡಿಸಿನ್ ವಿಭಾಗದ ಸಹ ಪ್ರಾಧ್ಯಾಪಕ ಡಾ.ಎಚ್.ಸಿ.ಲೋಕೇಶ್ ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಿ ವೈದ್ಯಕೀಯ ಶಿಕ್ಷಣ ಇಲಾಖೆ ಹೊರಡಿಸಿದ್ದ ಆದೇಶಕ್ಕೆ ಜಿಲ್ಲಾಧಿಕಾರಿಯು ತಡೆ ನೀಡಿದ್ದು, ಅವರನ್ನು ಅದೇ ಹುದ್ದೆಯಲ್ಲಿ ಮುಂದುವರಿಸಲಾಗಿದೆ.

ಮಹಿಳಾ ಆಯೋಗಕ್ಕೆ ದೂರುಗಳು ಸಲ್ಲಿಕೆಯಾಗಿರುವುದರಿಂದ ಇಲಾಖೆಯು ನವೆಂಬರ್ 30ರಂದು ಆದೇಶ ಹೊರಡಿಸಿತ್ತು. ಆದರೆ, ಡಿಸೆಂಬರ್ 3ರಂದು ಹಿಮ್ಸ್ ನಿರ್ದೇಶಕರಿಗೆ ಪತ್ರ ಬರೆದಿರುವ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ, ‘ಡಿಸೆಂಬರ್ 3ರಂದು ಜಿಲ್ಲಾ ಉಸ್ತುವಾರಿ ಸಚಿವರ ಮೌಖಿಕ ಆದೇಶದಂತೆ, ಡಾ.ಲೋಕೇಶ್ ಅವರನ್ನು ಜಿಲ್ಲಾ ಶಸ್ತ್ರಚಿಕಿತ್ಸಕರ ಪ್ರಭಾರ ಹುದ್ದೆಯಿಂದ ಬಿಡುಗಡೆ ಮಾಡಬಾರದು’ ಎಂದು ಸೂಚಿಸಿದ್ದಾರೆ. ಈ ಪತ್ರ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.


‘ದೂರುದಾರ ಮಹಿಳಾ ಸಿಬ್ಬಂದಿಯು ಆರೋಪಿ ಅಧಿಕಾರಿಯ ಕೈಕೆಳಗೆ ಕೆಲಸ ಮಾಡಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಲಾಗಿದೆ. ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡುವುದಾಗಿ ಹೇಳುವ ಸರ್ಕಾರವು, ಆರೋಪಿ ಅಧಿಕಾರಿಯನ್ನು ಅದೇ ಸ್ಥಳದಲ್ಲಿ ಮುಂದುವರಿಸುತ್ತಿರುವುದು ಎಷ್ಟು ಸರಿ’ ಎಂದು ಸಂತ್ರಸ್ತೆಯೊಬ್ಬರು ಅಲವತ್ತುಕೊಂಡರು.

‘ಡಾ.ಲೋಕೇಶ್ ಅನುಚಿತವಾಗಿ ವರ್ತಿಸುತ್ತಿದ್ದಾರೆ’ ಎಂದು ಮಹಿಳಾ ಸಿಬ್ಬಂದಿ ಅನನ್ಯ ಟ್ರಸ್ಟ್ ಗಮನಕ್ಕೆ ತಂದಿದ್ದರು. ಆ ಬಗ್ಗೆ ವೈದ್ಯಕೀಯ ಶಿಕ್ಷಣ ಸಚಿವರು, ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದಿದ್ದ ಟ್ರಸ್ಟ್ ಕ್ರಮಕ್ಕೆ ಒತ್ತಾಯಿಸಿತ್ತು.

ನಂತರ, ವೈದ್ಯಕೀಯ ಶಿಕ್ಷಣ ಇಲಾಖೆಯು ರಚಿಸಿದ್ದ, ಮೂವರು ಸದಸ್ಯರ ಸಮಿತಿಯು ತನಿಖೆ ನಡೆಸಿ ಸೆಪ್ಟೆಂಬರ್‌ನಲ್ಲಿ ವರದಿ ನೀಡಿತ್ತು. ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿದ್ದು, ಸೂಕ್ತ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿತ್ತು. ಅದನ್ನು ಆಧರಿಸಿ, ಡಾ.ಲೋಕೇಶ್ ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡುವಂತೆ ಆದೇಶ ಹೊರಡಿಸಿತ್ತು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಹಿಮ್ಸ್ ಪ್ರಭಾರ ನಿರ್ದೇಶಕ ಡಾ.ರಾಜಣ್ಣ ಅವರಿಗೆ ಕರೆ ಮಾಡಿದರೂ, ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

2022ರಲ್ಲೂ ಅಮಾನತು: 2022ರ ಜನವರಿಯಲ್ಲಿ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಡಾ.ಲೋಕೇಶ್ ಅವರನ್ನು ಅಮಾನತುಗೊಳಿಸಲಾಗಿತ್ತು. ದೂರುದಾರರು ಹೇಳಿಕೆ ದಾಖಲಿಸಲು ತನಿಖಾ ಸಮಿತಿಯ ಮುಂದೆ ಹಾಜರಾಗದ ಕಾರಣ, ಸಮಿತಿಯು ಅವರನ್ನು ದೋಷಮುಕ್ತಗೊಳಿಸಿತ್ತು. ಹೀಗಾಗಿ, 2022ರ ಆಗಸ್ಟ್‌ನಲ್ಲಿ ಮತ್ತೆ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು.



ಹಾಸನದ ಹಿಮ್ಸ್ ನಿರ್ದೇಶಕರಿಗೆ ಜಿಲ್ಲಾಧಿಕಾರಿ ಸತ್ಯಭಾಮಾ ಬರೆದಿರುವ ಪತ್ರ

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ • ಲೋಕಸಭೆಯಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಮಾಹಿತಿ

20 ತಿಂಗಳಲ್ಲಿ ₹438 ಕೋಟಿ ಟೋಲ್ ಸಂಗ್ರಹ

• ಓದೇಶ ಸಕಲೇಶಪುರ

ರಾಮನಗರ: ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ–275 ವಾಹನಗಳ ಸಂಚಾರಕ್ಕೆ ಮುಕ್ತವಾದ ದಿನದಿಂದ ಇಲ್ಲಿಯವರೆಗೆ ₹438 ಕೋಟಿ ಟೋಲ್ ಸಂಗ್ರಹಿಸಿದೆ.

ದೇಶದ ಹೆದ್ದಾರಿಗಳಲ್ಲಿ ಸಂಗ್ರಹವಾಗುತ್ತಿರುವ ಟೋಲ್ ಕುರಿತು ಸಂಸದ ಅಸಾದುದ್ದೀನ್ ಒವೈಸಿ ಅವರು ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರು ನೀಡಿರುವ ಪ್ರತಿಕ್ರಿಯೆಯಲ್ಲಿ, ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಟೋಲ್ ಮಾಹಿತಿಯೂ ಇದೆ. ಆ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಹೆದ್ದಾರಿಯುದ್ದಕ್ಕೂ ಮೂರು ಟೋಲ್ ಸಂಗ್ರಹ ಕೇಂದ್ರಗಳಿವೆ. ಈ ಪೈಕಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಣಿಮಿಣಿಕೆ ಮತ್ತು ರಾಮನಗರ ತಾಲ್ಲೂಕಿನ ಶೇಷಗಿರಿಹಳ್ಳಿ ಕೇಂದ್ರದಲ್ಲಿ ಒಟ್ಟು ₹278.91 ಕೋಟಿ ಹಾಗೂ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಗಣಂಗೂರಿನ ಕೇಂದ್ರದಲ್ಲಿ ₹159.37 ಕೋಟಿ ಟೋಲ್ ಸಂಗ್ರಹವಾಗಿದೆ.



ರಾಮನಗರ ತಾಲ್ಲೂಕಿನ ಶೇಷಗಿರಿಹಳ್ಳಿಯಲ್ಲಿರುವ ಟೋಲ್ ಸಂಗ್ರಹ ಕೇಂದ್ರ

118 ಕಿ.ಮೀ. ಉದ್ದ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ನಿರ್ಮಿಸಿದ್ದ 118 ಕಿ.ಮೀ. ಉದ್ದದ ಹೆದ್ದಾರಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು 2023ರ ಮಾರ್ಚ್‌ನಲ್ಲಿ ಉದ್ಘಾಟಿಸಿದ್ದರು. ಹೆದ್ದಾರಿ ಸಂಚಾರಕ್ಕೆ ಮುಕ್ತವಾಗಿ ಇಂದಿಗೆ 20 ತಿಂಗಳು ಕಳೆದಿದೆ.

ಬೆಂಗಳೂರಿನ ಕುಂಬಳಗೋಡಿನಿಂದ ಆರಂಭವಾಗುವ ಹೆದ್ದಾರಿಯು ರಾಮನಗರ ಜಿಲ್ಲೆಯಲ್ಲಿ 55 ಕಿ.ಮೀ, ಮಂಡ್ಯದಲ್ಲಿ 58 ಕಿ.ಮೀ ಹಾಗೂ ಮೈಸೂರು ಜಿಲ್ಲೆಯಲ್ಲಿ 5 ಕಿ.ಮೀ ವ್ಯಾಪಿಸಿದೆ.

ಪ್ರಯಾಣಿಕರ ಸುರಕ್ಷತೆಗೆ ಆರಂಭದಲ್ಲಿ ಅಗತ್ಯ ಕ್ರಮ ಕೈಗೊಳ್ಳದಿದ್ದರಿಂದ ಆರಂಭಿಕ 9 ತಿಂಗಳಲ್ಲಿ 595 ಅಪಘಾತಗಳು ಹೆದ್ದಾರಿಯಲ್ಲಿ ಸಂಭವಿಸಿದ್ದವು. ಇದರಲ್ಲಿ 158 ಮಂದಿ ಜೀವ ಕಳೆದುಕೊಂಡು 538 ಜನ ಗಾಯಗೊಂಡಿದ್ದರು. ಬಳಿಕ ವೇಗದ ಮಿತಿಯನ್ನು ಪ್ರತಿ ಗಂಟೆಗೆ 120 ಕಿ.ಮೀ.ಗೆ ಇಳಿಸಲಾಯಿತು. ವೇಗದ ಮೇಲೆ ನಿಗಾ ಇಡಲು ಅಲ್ಲಲ್ಲಿ ಕ್ಯಾಮೆರಾ ಅಳವಡಿಸಿ ಮಿತಿ ಮೀರಿದವರಿಂದ ದಂಡ ಸಂಗ್ರಹಿಸಲಾಗುತ್ತಿದೆ.

ತಲೆ ಎತ್ತದ ಮೇಲ್ಸೇತುವೆ

'ಹೆದ್ದಾರಿಯಲ್ಲಿ ವಾಹನಗಳ ಸಂಚಾರ ಮತ್ತು ಪ್ರಯಾಣಿಕರ ಸೌಲಭ್ಯಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರವು ಇನ್ನೂ ಕೆಲ ಸೌಕರ್ಯಗಳನ್ನು ಒದಗಿಸುವಲ್ಲಿ ವಿಫಲವಾಗಿದೆ. ಹೆದ್ದಾರಿಯ ಕೆಲವೆಡೆ ಸರ್ವೀಸ್ ರಸ್ತೆ ಇಲ್ಲ. ಜನರು ಹೆದ್ದಾರಿ ದಾಟಲು ಪಾದಚಾರಿ ಮೇಲ್ಸೇತುವೆಗಳು ಇನ್ನೂ ತಲೆ ಎತ್ತಿಲ್ಲ. ಇದರಿಂದಾಗಿ ಪಾದಚಾರಿಗಳು ಹೆದ್ದಾರಿ ಬೇಲಿಗಳನ್ನು ತುಂಡರಿಸಿ ಅಪಾಯ ಲೆಕ್ಕಿಸದೆ ರಸ್ತೆ ದಾಟುವುದು ಸಾಮಾನ್ಯವಾಗಿದೆ. ಇದರ ಜೊತೆಗೆ ಪ್ರಯಾಣಿಕರಿಗೆ ಬೇಕಾದ ಕೆಲ ಮೂಲಸೌಕರ್ಯಗಳನ್ನು ಪ್ರಾಧಿಕಾರ ಇನ್ನೂ ಒದಗಿಸಿಲ್ಲ' ಎನ್ನುತ್ತಾರೆ ಕಾರು ಚಾಲಕ ಚೇತನ್.

3 ಸಲ ಪರಿಷ್ಕರಣೆ

ಕಳೆದ 20 ತಿಂಗಳಲ್ಲಿ ಹೆದ್ದಾರಿಯಲ್ಲಿ ಮೂರು ಸಲ ಟೋಲ್ ಪರಿಷ್ಕರಣೆ ಆಗಿದೆ. ಇದೇ ವರ್ಷದ ಏಪ್ರಿಲ್‌ನಿಂದ ಜಾರಿಗೆ ಬಂದಿರುವಂತೆ ಸದ್ಯ ಒಂದು ಕಾರಿನ ಏಕಮುಖ ಸಂಚಾರಕ್ಕೆ ₹170 ಹಾಗೂ ದ್ವಿಮುಖ ಸಂಚಾರ ₹255 ಇದೆ. ಬಹು ಅಥವಾ ಅದಕ್ಕಿಂತ ಹೆಚ್ಚಿನ ಆಕ್ಸೆಲ್ ವಾಹನದ ಏಕಮುಖ ಸಂಚಾರಕ್ಕೆ ₹1,362 ಹಾಗೂ ದ್ವಿಮುಖ ಸಂಚಾರಕ್ಕೆ ₹1,660 ಟೋಲ್ ನಿಗದಿಪಡಿಸಲಾಗಿದೆ.

ಸುದ್ದಿ 2 ನಿಮಿಷ

ದರ್ಶನ್ ಜಾಮೀನು ರದ್ದು ಕೋರಿ 'ಸುಪ್ರೀಂ'ಗೆ ಮೇಲ್ಮನವಿ ಸಲ್ಲಿಕೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರಿಗೆ ಹೈಕೋರ್ಟ್ ಮಂಜೂರು ಮಾಡಿದ್ದ ಮಧ್ಯಂತರ ಜಾಮೀನು ರದ್ದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಬುಧವಾರ ಮೇಲ್ಮನವಿ ಸಲ್ಲಿಸಲಾಗಿದೆ.

ಪ್ರಾಸಿಕ್ಯೂಷನ್ ಪರವಾಗಿ ವಕೀಲರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ದರ್ಶನ್ ಅವರಿಗೆ ಕರ್ನಾಟಕ ಹೈಕೋರ್ಟ್ ಮಂಜೂರು ಮಾಡಿರುವ ಷರತ್ತುಬದ್ಧ ಮಧ್ಯಂತರ ಜಾಮೀನು ರದ್ದು ಮಾಡುವಂತೆ ಅರ್ಜಿಯಲ್ಲಿ ಕೋರಲಾಗಿದೆ. ಡಿ.9 ಅಥವಾ ಡಿ.9ರಂದು ಅರ್ಜಿ ವಿಚಾರಣೆಗೆ ಬರುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ.

ಕೊಲೆ ಪ್ರಕರಣದ ಆರೋಪಿಯಾಗಿದ್ದ ದರ್ಶನ್ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿ ಇದ್ದರು. ಅಲ್ಲಿ ವಿಶೇಷ ಆತಿಥ್ಯ ಪಡೆದಿದ್ದ ಆರೋಪ ಮೇರೆಗೆ ದರ್ಶನ್ ಅವರನ್ನು ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರ ಮಾಡಲಾಗಿತ್ತು. ಜೈಲಿನಲ್ಲಿದ್ದ ಅವಧಿಯಲ್ಲಿ ದರ್ಶನ್ ಅವರಿಗೆ ಬೆನ್ನು ನೋವು ಕಾಣಿಸಿಕೊಂಡಿತ್ತು. ವೈದ್ಯಕೀಯ ಚಿಕಿತ್ಸೆಗೆ ಜಾಮೀನು ನೀಡುವಂತೆ ದರ್ಶನ್ ಪರ ವಕೀಲರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಜಾಮೀನು ಸಿಕ್ಕಿದ ಬಳಿಕ ಜೈಲಿನಿಂದ ದರ್ಶನ್ ಬಿಡುಗಡೆಯಾಗಿ ಕೆಂಗೇರಿಯ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಗೃಹ ಇಲಾಖೆ ಅನುಮತಿ ನೀಡಿತ್ತು. ಅನುಮತಿ ನೀಡಿದ ಬೆನ್ನಲ್ಲೇ ಮೇಲ್ಮನವಿ ಸಲ್ಲಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.



ಅಪಘಾತ: ಗಾರೆ ಕೆಲಸಗಾರ ಸಾವು

ಬೆಂಗಳೂರು: ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ನಾಯಂಡಹಳ್ಳಿ ರೈಲ್ವೆ ಕೆಳಸೇತುವೆಯಲ್ಲಿ ಬುಧವಾರ ನಸುಕಿನ ವೇಳೆ ಸಂಭವಿಸಿದ ಅಪಘಾತದಲ್ಲಿ ಗಾರೆ ಕೆಲಸ ಮಾಡುತ್ತಿದ್ದ ಯುವಕ ಮೃತಪಟ್ಟಿದ್ದಾರೆ.

ವಿಜಯನಗರದ ಮೂಡಪ್ಪಪಾಳ್ಯದ ನಿವಾಸಿ ಅಯ್ಯನವರ್(24) ಮೃತಪಟ್ಟವರು.

'ತಮಿಳುನಾಡಿನ ವಿಲ್ಲುಪುರಂನ ನಿವಾಸಿ ಅಯ್ಯನವರ್, ನಗರದ ಬಾಡಿಗೆ ಮನೆಯೊಂದರಲ್ಲಿ ನೆಲಸಿದ್ದರು. ಗಾರೆ ಕೆಲಸದ ಜತೆಗೆ ಆಟೊ ಚಾಲನೆ ಮಾಡುತ್ತಿದ್ದರು. ಬುಧವಾರ ನಸುಕಿನಲ್ಲಿ ದ್ವಿಚಕ್ರ ವಾಹನದಲ್ಲಿ ಅಯ್ಯನವರ್ ಒಬ್ಬರೇ ತೆರಳುತ್ತಿದ್ದರು. ನಾಯಂಡಹಳ್ಳಿ ಸಿಗ್ನಲ್ ಕಡೆಯಿಂದ ನಾಗರಬಾವಿ ಕಡೆಗೆ ತೆರಳಲು ಹೊರವರ್ತುಲ ರಸ್ತೆಯಲ್ಲಿ ವೇಗವಾಗಿ ವಾಹನ ಚಲಾಯಿಸುತ್ತಿದ್ದರು. ಆಗ ನಾಯಂಡಹಳ್ಳಿ ರೈಲ್ವೆ ಕೆಳಸೇತುವೆಯ ಪಿಲ್ಲರ್‌ಗೆ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳೀಯರು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಅವರು ಮೃತಪಟ್ಟಿದ್ದಾರೆ' ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಅಜಾಗರೂಕತೆ ಹಾಗೂ ನಿರ್ಲಕ್ಷ್ಯ ವಹಿಸಿ ಚಾಲನೆ ಮಾಡಿದ್ದರಿಂದ ಅಪಘಾತ ಸಂಭವಿಸಿದೆ ಎಂದು ಅವರು ತಿಳಿಸಿದರು.

ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂಗಡಿ ಎದುರು ಇಟ್ಟಿದ್ದ ಹಾಲಿನ ಪೊಟ್ಟಣಗಳ ಕಳ್ಳತನ


ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ಕಳ್ಳತನದ ದೃಶ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಹ್ಮಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕಲ್ಲಸಂದ್ರದ ಅಂಗಡಿಯೊಂದರ ಎದುರು ಇಡಲಾಗಿದ್ದ ಹಾಲಿನ ಪೊಟ್ಟಣಗಳನ್ನು ಕಳ್ಳರು ಕದ್ದು ಪರಾರಿಯಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ನಗರದಲ್ಲಿ ಮುಂಜಾನೆ ಸಮಯದಲ್ಲಿ ಹಾಲಿನ ಕ್ರೇಟ್‌ಗಳನ್ನು ಕಳ್ಳತನ ಮಾಡುವ ಗ್ಯಾಂಗ್‌ವೊಂದು ಸಕ್ರಿಯ ಆಗಿರುವುದು ಗೊತ್ತಾಗಿದೆ.

ದಿಲೀಪ್ ಅವರ ಅಂಗಡಿ ಎದುರು ಕ್ರೇಟ್‌ನಲ್ಲಿ ಇಡಲಾಗಿದ್ದ ಹಾಲಿನ ಪೊಟ್ಟಣ ಕಳ್ಳತನ ಮಾಡುತ್ತಿರುವುದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

'ಕಲ್ಲಸಂದ್ರದಲ್ಲಿ ಹಲವು ವರ್ಷಗಳಿಂದ ದಿಲೀಪ್ ಹಾಲಿನ ಮಾರಾಟ ಮಾಡುತ್ತಿದ್ದಾರೆ. ಲಾರಿಯಲ್ಲಿ ಹಾಲಿನ ಪೊಟ್ಟಣಗಳು ತುಂಬಿರುವ ಕ್ರೇಟ್‌ಗಳನ್ನು ತಂದು ಮುಂಜಾನೆ ಅಂಗಡಿ ಎದುರು ಇಳಿಸಲಾಗಿತ್ತು. ಇದೇ ಕ್ರೇಟ್‌ಗಳನ್ನು ಕಳ್ಳರು ಕದೊಯ್ದಿದ್ದಾರೆ' ಎಂದು ಗೊತ್ತಾಗಿದೆ.

ದ್ವಿಚಕ್ರ ವಾಹನದಲ್ಲಿ ಬಂದಿದ್ದ ಮೂವರು ಹಾಲನ್ನು ಕಳ್ಳತನ ಮಾಡಿ ಪರಾರಿ ಆಗಿದ್ದಾರೆ. ಇದೇ ರೀತಿ ಸುಬ್ರಹ್ಮಣ್ಯಪುರದ ಹಲವು ಹಾಲಿನ ಬೂತ್‌ನಲ್ಲಿ ಕಳ್ಳತನ ಮಾಡಿರುವುದು ಪತ್ತೆಯಾಗಿದೆ.

ವಿದ್ಯಾರ್ಥಿನಿ ಆತ್ಮಹತ್ಯೆ: ಸ್ನೇಹಿತ ಬಂಧನ

'ಕ್ಯಾಸಿನೊದಲ್ಲಿ ಹಣ ಹೂಡಿ, ದುಪ್ಪಟ್ಟು ಸಂಪಾದಿಸಿ ಕೊಡುವುದಾಗಿ ಆಮಿಷ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಪಡೆದು ವಾಪಸ್ ಕೊಡದ ಸ್ನೇಹಿತನ ಹೆಸರನ್ನು ಮರಣ ಪತ್ರದಲ್ಲಿ ಉಲ್ಲೇಖಿಸಿ ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಕರಣ ಸಂಬಂಧ ರಾಜಾಜಿನಗರ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ರಾಜಾಜಿನಗರದ ನಿವಾಸಿ ದಿಗಂತ್ ಬಂಧಿತ ಆರೋಪಿ.

ನಗರದ ಖಾಸಗಿ ಕಾಲೇಜಿನಲ್ಲಿ ಪ್ರಥಮ ಬಿ.ಕಾಂ ಪದವಿ ವ್ಯಾಸಂಗ ಮಾಡುತ್ತಿದ್ದ ಪ್ರಿಯಾಂಕಾ(19) ನೇಣು ಬಿಗಿದುಕೊಂಡು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಘಟನಾ ಸ್ಥಳದಲ್ಲಿ ದೊರೆತ ಮರಣ ಪತ್ರದಲ್ಲಿ ಆಕೆ ತನ್ನ ಸ್ನೇಹಿತ ದಿಗಂತ್ ಹೆಸರು ಉಲ್ಲೇಖಿಸಿದ್ದರು. ಅಲ್ಲದೇ ವಿದ್ಯಾರ್ಥಿನಿ ಪೋಷಕರು ನೀಡಿದ ದೂರು ಆಧರಿಸಿ, ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಆತ್ಮಹತ್ಯೆ ಮಾಡಿಕೊಂಡಿದ್ದ ಯುವತಿಯ ತಂದೆ ಚಿನ್ನದ ವ್ಯಾಪಾರಿ ಎಂಬ ಮಾಹಿತಿ ತಿಳಿದುಕೊಂಡಿದ್ದ ದಿಗಂತ್, ಆಕೆಯ ಸ್ನೇಹ ಮಾಡಿದ್ದ. ಕ್ಯಾಸಿನೊದಲ್ಲಿ ಹಣ ಹೂಡಿ, ದುಪ್ಪಟ್ಟು ಸಂಪಾದಿಸಿ ಕೊಡುವುದಾಗಿ ಆತ ಆಮಿಷ ಒಡ್ಡಿದ್ದ. ಇದನ್ನು ನಂಬಿದ್ದ ಪ್ರಿಯಾಂಕಾ ಮನೆಯವರಿಗೆ ತಿಳಿಯದಂತೆ ಚಿನ್ನಾಭರಣಗಳನ್ನು ದಿಗಂತನಿಗೆ ನೀಡಿದ್ದರು' ಎಂದು ಮೂಲಗಳು ಮಾಹಿತಿ ನೀಡಿವೆ.

'₹15 ಲಕ್ಷ ಮೌಲ್ಯದ ಚಿನ್ನಾಭರಣವನ್ನು ನಿಗದಿತ ಸಮಯದಲ್ಲಿ ಆತ ವಾಪಸ್ ಕೊಟ್ಟಿರಲಿಲ್ಲ. ಕೇಳಿದಾಗ ಇಲ್ಲದ ಸಬೂಬು ಹೇಳುತ್ತಿದ್ದ. ಅದರಿಂದ ನೊಂದಿದ್ದ ಪ್ರಿಯಾಂಕಾ, ನ.28ರಂದು ಮನೆಯಲ್ಲಿ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

'ಕಾಲೇಜಿನಲ್ಲಿ ಸ್ನೇಹಿತನಾಗಿದ್ದ ದಿಗಂತ್‌ಗೆ ₹15 ಲಕ್ಷ ಮೌಲ್ಯದ ಚಿನ್ನಾಭರಣ ನೀಡಿದ್ದೆ. ಆತ ಚಿನ್ನ ವಾಪಸ್ ನೀಡದೇ ಪೀಡಿಸುತ್ತಿದ್ದ. ಮಾನಸಿಕ ಕಿರುಕುಳ ನೀಡುತ್ತಿದ್ದ. ನನ್ನ ಸಾವಿಗೆ ದಿಗಂತ್ ಕಾರಣ ಎಂಬುದಾಗಿ ಮರಣ ಪತ್ರದಲ್ಲಿ ಉಲ್ಲೇಖಿಸಿದ್ದಾರೆ' ಎಂದು ವಿದ್ಯಾರ್ಥಿನಿಯ ಪೋಷಕರು ಪೊಲೀಸರಿಗೆ ನೀಡಿದ್ದ ದೂರಿನಲ್ಲಿ ವಿವರಿಸಿದ್ದಾರೆ.

ವ್ಹೀಲಿ: 11 ಮಂದಿ ಬಂಧನ, 10 ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ವ್ಹೀಲಿ ನಡೆಸುವ ಪುಂಡರ ವಿರುದ್ಧ ವಿಶೇಷ ಕಾರ್ಯಾಚರಣೆ ಆರಂಭಿಸಿರುವ ನಗರದ ಸಂಚಾರ ಪೊಲೀಸರು, ಒಂದೇ ದಿನದಲ್ಲಿ 11 ಮಂದಿಯನ್ನು ಬಂಧಿಸಿದ್ದಾರೆ.

ಮೇಲ್ಸೇತುವೆ, ಬಡಾವಣೆಗಳಲ್ಲಿ ವ್ಹೀಲಿ ನಡೆಸುತ್ತಾ ಇತರೆ ಸವಾರರಿಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಸಂಚಾರ ಪೊಲೀಸರಿಗೆ ಸಾಮಾಜಿಕ ಜಾಲತಾಣ ಹಾಗೂ ನೇರವಾಗಿ ದೂರುಗಳು ಬಂದಿದ್ದವು. ದೂರು ಆಧರಿಸಿ ಸಂಚಾರ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ.

ಡಿ.2ರ ಮುಂಜಾನೆಯಿಂದ ಡಿ.3ರ ಸಂಜೆವರೆಗೆ ನಗರದ ಎಲ್ಲಾ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ವ್ಹೀಲಿ ಮಾಡುತ್ತಿದ್ದ 11 ಮಂದಿಯನ್ನು ಬಂಧಿಸಿ, 10 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. 12 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

₹2 ಲಕ್ಷ ದಂಡ ಸಂಗ್ರಹ: ಪೂರ್ವ ವಿಭಾಗದ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ 406 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ₹2 ಲಕ್ಷ ದಂಡ ಸಂಗ್ರಹಿಸಲಾಗಿದೆ.

ಮಂಗಳವಾರ ಸಂಚಾರ ನಿಯಮ ಉಲ್ಲಂಘನೆ ಬಗ್ಗೆ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಏಕಮುಖ ಸಂಚಾರ, ನಿಷೇಧಿತ ಸ್ಥಳದಲ್ಲಿ ವಾಹನ ನಿಲುಗಡೆ, ದ್ವಿಚಕ್ರ ವಾಹನದಲ್ಲಿ ಮೂವರ ಸವಾರಿ ಸೇರಿದಂತೆ ವಿವಿಧ ಸಂಚಾರ ನಿಯಮ ಉಲ್ಲಂಘನೆ ಮಾಡಿದ್ದ 406 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೂರ್ವ ಸಂಚಾರ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಜೈನ್ ಮಾಹಿತಿ ನೀಡಿದರು.

ಅಪರಾಧ ಸುದ್ದಿ

ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಅಧಿಕಾರಿಗಳಿಗೆ ಸೂಚನೆ

ನೀರಿನ ಸಂಪರ್ಕ ಪಡೆಯಲು ಮಾಹಿತಿ ನೀಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಪಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡಿರುವ 110 ಹಳ್ಳಿಗಳ ವ್ಯಾಪ್ತಿಯಲ್ಲಿರುವ ಸಾರ್ವಜನಿಕರಿಗೆ ಕಾವೇರಿ ಕುಡಿಯುವ ನೀರಿನ ಹೊಸ ಸಂಪರ್ಕ ಪಡೆಯುವ ಕುರಿತು ಸಮರ್ಪಕವಾದ ಮಾಹಿತಿ ನೀಡುವಂತೆ ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಪೂರ್ವ ವಲಯದ ಚಳ್ಳಗೇರೆ, ಚನ್ನಸಂದ್ರ ಭಾಗದಲ್ಲಿ ಜಲಮಂಡಳಿಯಿಂದ ಆಯೋಜಿಸಿರುವ ಕಾವೇರಿ ಸಂಪರ್ಕ ಅಭಿಯಾನದ ಸ್ಥಳಗಳಿಗೆ ಬುಧವಾರ ಭೇಟಿ ನೀಡಿ, ಪ್ರಕ್ರಿಯೆ ಪರಿಶೀಲಿಸಿ ಅವರು ಮಾತನಾಡಿದರು.

'110 ಹಳ್ಳಿಗಳಿಗೆ ಸಮರ್ಪಕ ನೀರು ಒದಗಿಸಲು ಬೆಂಗಳೂರು ಜಲಮಂಡಳಿ ಸಜ್ಜಾಗಿದೆ. ಈಗಾಗಲೇ ಹೆಚ್ಚುವರಿ ನೀರು ನಗರಕ್ಕೆ ಸರಬರಾಜು ಆಗುತ್ತಿದೆ. ಇದನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಜನರು ನೀರಿನ ಸಂಪರ್ಕ ಪಡೆದುಕೊಳ್ಳುವುದು ಅವಶ್ಯಕವಾಗಿದೆ' ಎಂದರು.

'ಬೇಸಿಗೆಯಲ್ಲಿ ಕೊಳವೆಬಾವಿಗಳಲ್ಲಿ ನೀರು ಕಡಿಮೆಯಾಗಿ ಸಮಸ್ಯೆಯಾಗಿತ್ತು. ಈ ಬಾರಿ ಸಮಸ್ಯೆ ಮರುಕಳಿಸದಿರಲು ಸಾರ್ವಜನಿಕರು ಕಾವೇರಿ ಕುಡಿಯುವ ನೀರಿನ ಸಂಪರ್ಕ ಪಡೆದುಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಸಾರ್ವಜನಿಕರು, ತಮ್ಮ ಪ್ರದೇಶ ವ್ಯಾಪ್ತಿಯಲ್ಲಿ ಕಾವೇರಿ ನೀರು-ಕುಡಿಯುವ ನೀರು ಸಂಪರ್ಕ ಅಭಿಯಾನ ನಡೆಯುತ್ತಿರುವ ಸ್ಥಳಗಳಿಗೆ ಭೇಟಿ ನೀಡಿ. ಸ್ಥಳದಲ್ಲೇ ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು' ಎಂದು ಸಾರ್ವಜನಿಕರಿಗೆ ಸೂಚಿಸಿದರು.

'ಮುಂದಿನ ದಿನಗಳಲ್ಲಿ ಜಲಮಂಡಳಿಯಿಂದ ಕಾವೇರಿ ಕುಡಿಯುವ ನೀರು ಸಂಪರ್ಕ ಅಭಿಯಾನದ ಭಿತ್ತಿಪತ್ರ, ಅರ್ಜಿ ಹಾಗೂ ಠೇವಣಿ ಶುಲ್ಕದ ವಿವರಗಳನ್ನು ಒಳಗೊಂಡಿರುವ ಮಾಹಿತಿಯನ್ನು ಮನೆ ಬಾಗಿಲಿಗೆ ನೀಡಲು ನಿರ್ಧರಿಸಲಾಗಿದೆ' ಎಂದು ಮಾಹಿತಿ ನೀಡಿದರು.


ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ 'ಕಾವೇರಿ ನೀರಿನ ಸಂಪರ್ಕ ಅಭಿಯಾನ'ದ ಪ್ರದೇಶವೊಂದಕ್ಕೆ ಭೇಟಿ ನೀಡಿ ಪ್ರಕ್ರಿಯೆಯನ್ನು ಪರಿಶೀಲಿಸಿದರು

ಸರಗಳ್ಳತನ: ಸಾಫ್ಟ್‌ವೇರ್ ಎಂಜಿನಿಯರ್ ಸೇರಿ ಐವರ ಬಂಧನ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಎರಡು ತಿಂಗಳ ಹಿಂದೆ ಹೆದ್ದಾರಿಯಲ್ಲಿ ವಾಯು ವಿಹಾರ ಮಾಡುತ್ತಿದ್ದ ಮಹಿಳೆಯೊಬ್ಬರ ಚಿನ್ನದ ಸರ ಕಿತ್ತು ಪರಾರಿಯಾಗಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಸೇರಿದಂತೆ ಐವರನ್ನು ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕನಕಪುರ ತಾಲ್ಲೂಕಿನ ಮರಳೆ ಹಳ್ಳಿಯ ಸಾಫ್ಟ್‌ವೇರ್ ಎಂಜಿನಿಯರ್ ಶಿವಕುಮಾರ್ (33), ಬೆಂಗಳೂರಿನ ಜೆ.ಪಿ. ನಗರ ನಿವಾಸಿ ಸೈಯ್ಯದ್ ರಿಯಾನ್, ಅಪ್ಪು, ಚಂದ್ರಶೇಖರ್ ಹಾಗೂ ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕನನ್ನು ಬಂಧಿಸಲಾಗಿದೆ. ಇನ್ನೂ ಮೂವರು ಪರಾರಿಯಾಗಿದ್ದಾರೆ.

ಬಂಧಿತರಿಂದ ಚಿನ್ನದ ಸರ ವಶಪಡಿಸಿಕೊಂಡು ಗುಂಜೂರು ಗ್ರಾಮದ ಶೈಲಜಾ ಎಂಬುವರಿಗೆ ಹಿಂದಿರುಗಿಸಲಾಗಿದೆ. ಸೆ.19 ರಂದು ಬೆಳಗ್ಗೆ ಹೆದ್ದಾರಿಯಲ್ಲಿ ಶೈಲಜಾ ವಾಯು ವಿಹಾರ ಮಾಡುತ್ತಿದ್ದರು. ಕಾರಿನಲ್ಲಿ ಬಂದ ಅಪರಿಚಿತರು ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು.

ಟೈರ್ ಸ್ಫೋಟ ಇಬ್ಬರಿಗೆ ಗಾಯ

ಬೆಂಗಳೂರು: ವೈಟ್‌ಫೀಲ್ಡ್ ಬಳಿ ಚಲಿಸುತ್ತಿದ್ದ ಬಿಎಂಟಿಸಿ ಬಸ್‌ನ ಹಿಂದಿನ ಟೈರ್ ಸ್ಫೋಟಗೊಂಡು, ಇಬ್ಬರಿಗೆ ಸಣ್ಣಪುಟ್ಟ ಗಾಯವಾಗಿದೆ.

ಮಂಗಳವಾರ ಬೆಳಿಗ್ಗೆ 8.45ರ ಸುಮಾರಿಗೆ ವೈಟ್‌ಫೀಲ್ಡ್ ಬಿಎಂಟಿಸಿ ಬಸ್ ನಿಲ್ದಾಣದಿಂದ ಸಿಲ್ಕ್‌ಬೋರ್ಡ್ ಕಡೆಗೆ ಬಸ್ ಸಂಚರಿಸುತ್ತಿತ್ತು. ಐಟಿಪಿಎಲ್ ಬಳಿ ಟೈರ್ ಸ್ಫೋಟವಾಗಿದೆ ಎಂದು ಮೂಲಗಳು ತಿಳಿಸಿವೆ.

ಪುಷ್ಪ-2 ತಡರಾತ್ರಿ, ಮುಂಜಾನೆ ಶೋ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಚಿತ್ರ ಮಂದಿರಗಳಲ್ಲಿ ತೆಲುಗಿನ ಪುಷ್ಪ-2 ಸಿನಿಮಾದ ಗುರುವಾರ (ಡಿ.5) ಮುಂಜಾನೆಯ 4 ಗಂಟೆಯ ಪ್ರದರ್ಶನಗಳು ರದ್ದುಗೊಂಡವು.

ಕರ್ನಾಟಕ ಸಿನಿಮಾ ರೆಗ್ಯುಲೇಷನ್ ಕಾಯ್ದೆಯಡಿ ಬೆಳಗ್ಗೆ 6.30ರ ಮೊದಲು ಹಾಗೂ ರಾತ್ರಿ 10.30ರ ನಂತರ ಸಿನಿಮಾ ಪ್ರದರ್ಶನಕ್ಕೆ ಅವಕಾಶವಿಲ್ಲ. ಈ ವಿಷಯವನ್ನು ಪ್ರಸ್ತಾಪಿಸಿ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದರು.

ಇದರ ಬೆನ್ನಲ್ಲೇ, ನಿಯಮ ಉಲ್ಲಂಘಿಸುವ ಚಿತ್ರಮಂದಿರಗಳ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಪೊಲೀಸ್ ಆಯುಕ್ತರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚಿಸಿದ್ದರು. ಮುಂಜಾನೆ 6ಕ್ಕೂ ಮೊದಲು ಸಿನಿಮಾ ಪ್ರದರ್ಶನ ನೀಡುತ್ತಿರುವ 40ಕ್ಕೂ ಅಧಿಕ ಚಿತ್ರಮಂದಿರಗಳ ಹೆಸರನ್ನೂ ಪತ್ರದಲ್ಲಿ ಜಿಲ್ಲಾಧಿಕಾರಿಗಳು ಉಲ್ಲೇಖಿಸಿದ್ದರು.

ಈ ದೂರಿನ ಬೆನ್ನಲ್ಲೇ ಕರ್ನಾಟಕದಲ್ಲಿ 'ಪುಷ್ಪ-2' ಸಿನಿಮಾದ ಬುಧವಾರ ಮಧ್ಯರಾತ್ರಿ ಹಾಗೂ ಗುರುವಾರ ಬೆಳಗಿನ ಪ್ರದರ್ಶನಗಳನ್ನು ರದ್ದುಗೊಳಿಸಲಾಗಿದೆ. ಈ ಬಗ್ಗೆ ಚಿತ್ರತಂಡವೇ ಅಧಿಕೃತ ಮಾಹಿತಿ ನೀಡಿದ್ದು, ಜಿಲ್ಲಾಧಿಕಾರಿಗಳ ಆದೇಶದಂತೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.



ಸೆಮಿಕಂಡಕ್ಟರ್‌ಗೆ ₹8,400 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸೆಮಿಕಂಡಕ್ಟರ್ ವಲಯದಲ್ಲಿ ಮುಂದಿನ ಐದು ವರ್ಷಗಳಲ್ಲಿ ₹8,400 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಮಾಡುವುದಾಗಿ ಸೆಮಿಕಂಡಕ್ಟರ್ ತಯಾರಿಸುವ ನೆದರ್‌ಲ್ಯಾಂಡ್ಸ್‌ನ 'ಎನ್‌ಎಕ್ಸ್‌ಪಿ' ಕಂಪನಿ ವಾಗ್ದಾನ ಮಾಡಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಇನ್ವೆಸ್ಟ್ ಕರ್ನಾಟಕ-2025ಕ್ಕೆ ಹೂಡಿಕೆದಾರರನ್ನು ಆಕರ್ಷಿಸಲು ಯುರೋಪ್ ಪ್ರವಾಸದಲ್ಲಿರುವ ಅವರು, 'ಸೆಮಿಕಂಡಕ್ಟರ್ ಕ್ಷೇತ್ರದಲ್ಲಿನ ಸಂಶೋಧನೆ ಹಾಗೂ ಅಭಿವೃದ್ಧಿಗೆ ಕಂಪನಿಯು ಬೆಂಗಳೂರಿನಲ್ಲಿ ಹೂಡಿಕೆ ಮಾಡುವುದಾಗಿ ಎನ್‌ಎಕ್ಸ್‌ಪಿ-ಯ ಕಾರ್ಯನಿರ್ವಾಹಕ ನಿರ್ದೇಶಕ ಮೌರಿಸ್ ಗೆರೆಟ್ಸ್ ಅವರು ಭರವಸೆ ನೀಡಿದ್ದಾರೆ' ಎಂದಿದ್ದಾರೆ.

'ಜಾಗತಿಕ ವಾಣಿಜ್ಯ ಬಾಂಧವ್ಯವೃದ್ಧಿಗೆ ರಾಜ್ಯದ ನಿಯೋಗ ಫಿಲಿಪ್ಸ್ ಕಂಪನಿ ಜತೆಗೂ ಸಮಾಲೋಚನೆ ನಡೆಸಿದೆ. ಬೆಂಗಳೂರಿನ ಕ್ಯಾಂಪಸ್‌ನಲ್ಲಿ 2023ರಲ್ಲಿ ₹445 ಕೋಟಿ ಹೂಡಿಕೆ ಮಾಡಿರುವ ಈ ಕಂಪನಿ ರಾಜ್ಯದಲ್ಲಿ ತಯಾರಿಕಾ ಘಟಕ ಸ್ಥಾಪಿಸಲು ಮುಂದೆ ಬಂದರೆ ಅಗತ್ಯ ನೆರವು ಕಲ್ಪಿಸಲಾಗುವುದು. ದೀಪ, ಬೆಳಕಿನ ಉತ್ಪನ್ನಗಳ ಜಾಗತಿಕ ಪ್ರಮುಖ ಕಂಪನಿ ಸಿಗ್ನಿಫೈಯ (ಈ ಹಿಂದಿನ ಫಿಲಿಪ್ಸ್ ಲೈಟಿಂಗ್) ಪ್ರಮುಖರನ್ನು ಭೇಟಿಯಾಗಿ ರಾಜ್ಯದಲ್ಲಿ ತಯಾರಿಕಾ ಘಟಕ ಸ್ಥಾಪಿಸುವುದರ ಪ್ರಯೋಜನಗಳನ್ನು ಮನದಟ್ಟು ಮಾಡಿಕೊಟ್ಟೆವು' ಎಂದು ಹೇಳಿದ್ದಾರೆ.

ನೆದರ್‌ಲ್ಯಾಂಡ್ಸ್‌ನಲ್ಲಿ ನಡೆದ 'ಇನ್ವೆಸ್ಟ್ ಕರ್ನಾಟಕ'ದ ರೋಡ್‌ಷೋದಲ್ಲಿ ನಾವೀನ್ಯತೆ, ಸೆಮಿಕಂಡಕ್ಟರ್, ನವೀಕರಿಸಬಹುದಾದ ಇಂಧನ ಮತ್ತು ತಯಾರಿಕಾ ವಲಯದಲ್ಲಿನ ಕರ್ನಾಟಕದಲ್ಲಿರುವ ಸದವಕಾಶಗಳನ್ನು ಸ್ಥಳೀಯ ಉದ್ಯಮಿಗಳಿಗೆ ಪರಿಚಯಿಸಲಾಯಿತು ಎಂದಿದ್ದಾರೆ.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ ಇದ್ದರು.

ನಗರದಲ್ಲಿ ಇಂದು

'ರಾಷ್ಟ್ರ ಮಟ್ಟದ ಅನ್ವೇಷಣೆ, ಜಾನಪದ ಗೀತೆ ಗಾಯನ, ನೃತ್ಯ ಸ್ಪರ್ಧೆ': ಅತಿಥಿಗಳು: ಟಿ.ಎಸ್. ಗಣೇಶ್, ಸಿ.ಪಿ. ರವಿಕುಮಾರ್, ಎಂ. ಬೈರೇಗೌಡ, ಎಚ್.ವಿ. ಮುರಳೀಧರ್, ಸಿ.ಎಂ. ನರಸಿಂಹಮೂರ್ತಿ, ಕೃಷ್ಣ ಚೈತನ್ಯಾ, ಮಧುರಾ ಜೆ., ಎನ್.ಎಸ್. ಫಾಲಗುಣಿ ಭಟ್, ಸೌಂದರ್ಯ ಕೆ., ದಿಲಿಪ್ ಎಂ., ಆಯೋಜನೆ: ದಯಾನಂದ ಸಾಗರ್ ಪಿಯು ಕಾಲೇಜು, ಸ್ಥಳ: ಡಾ.ಡಿ. ಪ್ರೇಮಚಂದ್ರ ಸಾಗರ್ ಸಭಾಂಗಣ, ದಯಾನಂದ ಪದವಿಪೂರ್ವ ಕಾಲೇಜು, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 9

ಸ್ಟಾರ್ ಸ್ಟಾರ್ಟ್‌ಅಪ್ ಅವಾರ್ಡ್ಸ್–2024: ಅತಿಥಿ: ಪ್ರಶಾಂತ್ ಪ್ರಕಾಶ್, ಭಾಷಣಕಾರರು: ಎಂ.ಆರ್. ಜಯರಾಮ್, ಎಂ.ಆರ್. ಸೀತಾರಾಮ್, ಸಮರ್ಥ ನಾಗಭೂಷಣಂ, ಆಯೋಜನೆ: ರಾಮಯ್ಯ ಎವೊಲ್ಯೂಟ್, ಸ್ಥಳ: ಇಎಸ್‌ಬಿ ಸಭಾಂಗಣ, ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಿಗ್ಗೆ 10ರಿಂದ

ಸ್ಮಾರ್ಟ್ ನಿಲ್ದಾಣದ ಉದ್ಘಾಟನೆ: ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಉಮಾಶಂಕರ್, ತುಷಾರ್ ಗಿರಿನಾಥ್, ಶಿವಪ್ರಕಾಶ್ ದೇವರಾಜು, ಸಾರಾ ಫಾತೀಮಾ, ಪ್ರಹ್ಲಾದ್ ಬಿ., ಮೊಹಮ್ಮದ್ ಆರೀಫ್, ಆಯೋಜನೆ: ಶಿಲ್ಪಾ ಫೌಂಡೇಶನ್, ಸ್ಥಳ: ನೆಕ್ಸಸ್ ಮುಂಭಾಗ, ಆಡುಗೋಡಿ ರಸ್ತೆ, ಕೋರಮಂಗಲ, ಬೆಳಿಗ್ಗೆ 10

'ಪ್ರಸ್ತುತ ಕಾರ್ಮಿಕ ವರ್ಗದ ಮುಂದಿರುವ ಅಂತರರಾಷ್ಟ್ರೀಯ ಸವಾಲುಗಳು, ಜಾಗತಿಕ ಕಾರ್ಮಿಕ ಚಳವಳಿಯ ಕಾರ್ಯತಂತ್ರ ಮತ್ತು ಕಾರ್ಯವಿಧಾನ, ಇತಿಹಾಸದ ಮೇಲಿನ ವಿಮರ್ಶಾತ್ಮಕ ಟಿಪ್ಪಣಿಗಳು' ಸಂವಾದ: ಜಾರ್ಜಿಯಸ್ ಮಾವ್ರಿಕೋಸ್, ಸ್ವದೇಶ್ ದೇವರಾಯ್, ಎಚ್. ಮಹಾದೇವನ್, ಆಯೋಜನೆ: ಡಬ್ಲ್ಯುಎಫ್‌ಟಿಯು, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಮಧ್ಯಾಹ್ನ 3.30

'ನಾ ರಾಜಗುರು' ನಾಟಕ ಪ್ರದರ್ಶನ: ನಿರ್ದೇಶನ: ಮಹದೇವ ಹಡಪದ, ಆಯೋಜನೆ: ಆಟಮಾಟ, ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಕನ್ನಡ ರಾಜ್ಯೋತ್ಸವ: ಬೆಳಿಗ್ಗೆ 11.30ಕ್ಕೆ ಧ್ವಜಾರೋಹಣ: ಮೂಡ್ನಾಕೂಡು ಚಿನ್ನಸ್ವಾಮಿ, ಅತಿಥಿ: ವಿಶಾಲ್ ರಘು ಎಚ್.ಎಲ್., ಮಧ್ಯಾಹ್ನ 1.30ಕ್ಕೆ ಅತಿಥಿಗಳು: ಎಚ್.ಪಿ. ಸಂದೇಶ್, ಗುರುರಾಜ ಕರಜಗಿ, ಅಧ್ಯಕ್ಷತೆ: ಮಂಜುನಾಥ ಬಿ. ಗೌಡ, ದೀಪಿಕಾ ದಾಸ್, ರಣವ್ ಕ್ಷೀರಸಾಗರ್, ಉಪಸ್ಥಿತಿ: ವಿವೇಕ್ ಸುಬ್ಬಾರೆಡ್ಡಿ, ಟಿ.ಜಿ. ರವಿ. ಹರೀಶ ಎಂ.ಟಿ., ಆಯೋಜನೆ: ಬೆಂಗಳೂರು ವಕೀಲರ ಸಾಹಿತ್ಯ ಕೂಟ, ಬೆಂಗಳೂರು ವಕೀಲರ ಸಂಘ, ಬೆಂಗಳೂರು ವಕೀಲರ ಸಹಕಾರ ಸಂಘ, ಸ್ಥಳ: ವಕೀಲರ ಭವನ, ನಗರ ಸಿವಿಲ್ ನ್ಯಾಯಾಲಯದ ಆವರಣ


ದೀಪಿಕಾ ದಾಸ್

ಶಾಶ್ವತ ಪರಿಹಾರಕ್ಕಾಗಿ ಸ್ಥಳೀಯ ನಿವಾಸಿಗಳು, ಅಂಗಡಿ ಮಾಲೀಕರ ಆಗ್ರಹ

ಚರಂಡಿ ಭರ್ತಿ: ನಿವಾಸಿಗಳು ಹೈರಾಣ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಜಾಲಹಳ್ಳಿ ಕ್ರಾಸ್ ಸಮೀಪದಲ್ಲಿ ಚರಂಡಿಯೊಂದು ತುಂಬಿ ಕೊಳಚೆ ನೀರು ರಸ್ತೆಗೆ ಹರಿದು, ದುರ್ನಾತ ಬೀರುತ್ತಿದೆ. ಸುತ್ತಮುತ್ತಲಿನ ಅಂಗಡಿ ಮಳಿಗೆಗಳ ಮಾಲೀಕರು, ನಿವಾಸಿಗಳು ಈ ದುರ್ವಾಸನೆಯಿಂದ ಹೈರಾಣಾಗಿದ್ದಾರೆ.

ಜಾಲಹಳ್ಳಿ ಕ್ರಾಸ್ ಜಂಕ್ಷನ್‌ನಿಂದ ಗಂಗಮ್ಮ ವೃತ್ತದ ಕಡೆಗೆ ತೆರಳುವ ಮಾರ್ಗದ ಎಡ ಬದಿಯಲ್ಲಿ ಬೇಕರಿ, ಹೋಟೆಲ್, ಮೊಬೈಲ್ ಫೋನ್ ಮಾರಾಟದ ಅಂಗಡಿಗಳು ಸೇರಿದಂತೆ ಹತ್ತಾರು ಮಳಿಗೆಗಳಿವೆ. ಪಕ್ಕದಲ್ಲೇ ರಾಕ್‌ಲೈನ್ ಮಾಲ್ ಇದೆ. ಇನ್ನೊಂದು ಬದಿಯಲ್ಲಿ ಯಶವಂತಪುರ ಕಡೆಗೆ ಹೋಗುವ ಬಸ್‌ಗಳ ನಿಲುಗಡೆ ಸ್ಥಳವಿದೆ. ಇದು ಸದಾ ಜನದಟ್ಟಣೆಯ ಪ್ರದೇಶ.

ಗಂಗಮ್ಮ ವೃತ್ತದ ಕಡೆಗೆ ಹೋಗುವ ಮಾರ್ಗದ ಎಡಬದಿಯಲ್ಲಿರುವ ಅಂಗಡಿಗಳ ಮುಂಭಾಗದ ಚರಂಡಿ ಆಗಾಗ್ಗೆ ತುಂಬಿ ಕೊಳಚೆ ನೀರು ರಸ್ತೆಗೆ ಹರಿಯುತ್ತಿರುತ್ತದೆ. ನಾಲ್ಕು ದಿನಗಳಿಂದ ಚರಂಡಿಯ ನೀರು ರಸ್ತೆಗೆ ಹರಿಯುತ್ತಾ ದುರ್ನಾತ ಬೀರುತ್ತಿದೆ. ಸುತ್ತಲಿನ ಅಂಗಡಿಯವರು ಕೊಳಚೆ ನೀರಿನ ದುರ್ವಾಸನೆಯಿಂದ ಬೇಸತ್ತು ಹೋಗಿದ್ದಾರೆ.

'ಮಳೆಗಾಲದಲ್ಲಷ್ಟೇ ಈ ಸಮಸ್ಯೆ ಆಗಬಹುದು' ಎಂದು ಊಹಿಸುವಂತಿಲ್ಲ. ಸ್ಥಳೀಯರು ಹೇಳುವಂತೆ ಎಲ್ಲ ಕಾಲದಲ್ಲೂ ಆಗಾಗ್ಗೆ ಚರಂಡಿ ತುಂಬಿ ಕೊಳಚೆ ನೀರು ರಸ್ತೆಗೆ ಹರಿಯುತ್ತಿರುತ್ತದೆ. ರೋಗ ಹರಡುವ ಭೀತಿಯೂ ಸುತ್ತಮುತ್ತಲಿನ ಅಂಗಡಿಯವರನ್ನು ಕಾಡುತ್ತಿದೆ.

'ಸರ್ಕಲ್ ಸುತ್ತಮುತ್ತಲಿನ ಅಂಗಡಿಯವರು, ಸಿಗ್ನಲ್‌ನಲ್ಲಿ ನಿಲ್ಲುವ ವಾಹನ ಸವಾರರು ಮೂಗು ಮುಚ್ಚಿಕೊಂಡೇ ಓಡಾಡಬೇಕು. ದುರ್ವಾಸನೆಯಿಂದಾಗಿ ಇಲ್ಲಿರುವ ಹೋಟೆಲ್, ಬೇಕರಿಯಂತಹ ಅಂಗಡಿಗಳಿಗೆ ಜನ ಬರಲು ಹಿಂದೇಟು ಹಾಕುತ್ತಾರೆ' ಎಂದು ಮಾಲೀಕರು ಬೇಸರ ವ್ಯಕ್ತಪಡಿಸುತ್ತಾರೆ.

'ಈ ಚರಂಡಿಯ ನೀರಿನ ದುರ್ವಾಸನೆಯಿಂದಾಗಿ ನಮ್ಮ ಬೇಕರಿಯಲ್ಲಿ ನಿಂತು ವ್ಯಾಪಾರ ಮಾಡುವುದು ಕಷ್ಟವಾಗುತ್ತಿದೆ. ಗ್ರಾಹಕರು ಬರುವುದಕ್ಕೂ ಹಿಂದೇಟು ಹಾಕುತ್ತಾರೆ' ಎಂದು ಬೇಕರಿ ಮಾಲೀಕ ಮಧು ಬೇಸರ ವ್ಯಕ್ತಪಡಿಸಿದರು.

'ಒಂದು ತಿಂಗಳಿನಿಂದ ನಮ್ಮ ಅಂಗಡಿ ಮುಂದಿನ ಚರಂಡಿಯಲ್ಲಿ ಗಲೀಜು ತುಂಬಿಕೊಂಡು ದುರ್ವಾಸನೆ ಬರುತ್ತಿದೆ. ಪಾದಚಾರಿ ಮಾರ್ಗದಲ್ಲಿ ಜನರು ಓಡಾಡುವುದು ಕಷ್ಟವಾಗಿದೆ. ಈಗಾಗಲೇ ಬಿಬಿಎಂಪಿಗೆ ಮೂರು ಬಾರಿ ದೂರು ನೀಡಿದ್ದೆವು. ಈಗ ಸರಿಪಡಿಸುತ್ತಿದ್ದಾರೆ' ಎಂದು ಮೊಬೈಲ್ ಅಂಗಡಿ ಮಾಲೀಕ ಸಿದ್ದಾಂತ್ ತಿಳಿಸಿದರು.

'ನಾನು ನಿತ್ಯ ಬಸ್‌ಗಾಗಿ ಇಲ್ಲಿಯೇ ಕಾಯುತ್ತಿರುತ್ತೇನೆ. ಚರಂಡಿಯ ನೀರಿನ ದುರ್ವಾಸನೆಯಿಂದಾಗಿ ಹೆಚ್ಚು ಹೊತ್ತು ಇಲ್ಲಿ ನಿಲ್ಲಲು ಆಗುವುದಿಲ್ಲ. ಮೂರ್ನಾಲ್ಕು ದಿನಗಳಿಂದ ಹೀಗೆ ರಸ್ತೆಯಲ್ಲಿ ಕೊಳಚೆ ನೀರು ಹರಿಯುತ್ತಿದೆ' ಎಂದು ಪ್ರಯಾಣಿಕ ಶಶಿ ಹೇಳಿದರು.

ಹಿಂದೆ ಇಲ್ಲಿನ ಅಂಗಡಿಗಳ ಮಾಲೀಕರಲ್ಲಿ ಕೆಲವರು ಚರಂಡಿ ಸಮಸ್ಯೆ ಬಗ್ಗೆ ಬಿಬಿಎಂಪಿಯವರಿಗೆ ದೂರು ನೀಡಿದ್ದರು. ಆಗ ಬಿಬಿಎಂಪಿಯವರು ಒಂದೆರಡು ಬಾರಿ ಚರಂಡಿ ಸ್ವಚ್ಛಗೊಳಿಸಿದ್ದಾರೆ. ಆದರೂ, ಈ ಸಮಸ್ಯೆ ಆಗಾಗ್ಗೆ ಧುತ್ತೆಂದು ಕಾಣಿಸಿಕೊಳ್ಳುತ್ತದೆ.

'ಪದೇ ಪದೇ ಚರಂಡಿ ತುಂಬಿ ಹರಿಯುತ್ತಿರುತ್ತದೆ. ದೂರು ನೀಡಿ ನಾಲ್ಕೈದು ದಿನಗಳಾದರೂ ಇದನ್ನು ಸ್ವಚ್ಛಗೊಳಿಸುವುದಿಲ್ಲ. ಈ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಸಿಕೊಡಬೇಕು' ಎಂಬುದು ಅಂಗಡಿಗಳ ಮಾಲೀಕರು ಮತ್ತು ನಿವಾಸಿಗಳ ಆಗ್ರಹವಾಗಿದೆ.


ಚರಂಡಿ ಸ್ವಚ್ಛಗೊಳಿಸುತ್ತಿರುವ ಬಿಬಿಎಂಪಿ ಸಿಬ್ಬಂದಿ



ಚರಂಡಿಯಲ್ಲಿ ಕಸ ತುಂಬಿಕೊಳ್ಳುವ ಕಾರಣ, ಗಲೀಜು ನೀರು ಮುಂದಕ್ಕೆ ಹೋಗದೇ, ರಸ್ತೆ ಮೇಲೆ ಹರಿಯುತ್ತಿದೆ. ಬೇಕರಿಯಲ್ಲಿ ನಿಲ್ಲುವುದಕ್ಕೂ ಆಗದಷ್ಟು ಕೆಟ್ಟ ವಾಸನೆ ಬರುತ್ತಿದೆ

ಮಧು, ಬೇಕರಿ ಮಾಲೀಕ

'ಸಮಸ್ಯೆಗೆ ಅಪಾರ್ಟ್‌ಮೆಂಟ್ ಕಾರಣ'

'ಸಮೀಪದಲ್ಲಿರುವ ಅಪಾರ್ಟ್‌ಮೆಂಟ್‌ವೊಂದರ ಒಳಚರಂಡಿ ನೀರನ್ನು ಚರಂಡಿಗೆ ಹರಿಸುತ್ತಿದ್ದಾರೆ. ಇದರಿಂದ ಚರಂಡಿಯಲ್ಲಿ ತ್ಯಾಜ್ಯ ತುಂಬಿಕೊಂಡು, ನೀರು ಸರಾಗವಾಗಿ ಹರಿದು ಮುಂದಕ್ಕೆ ಹೋಗದೇ ರಸ್ತೆ ಮೇಲೆ ಹರಿಯುತ್ತಿದೆ. ಹಿಂದೆ ಒಂದೆರಡು ಸಾರಿ ಸರಿಪಡಿಸಿದ್ದೆವು' ಎಂದು ಬಿಬಿಎಂಪಿ ಸಹಾಯಕ ಎಂಜಿನಿಯರ್ ದರ್ಶನ್ ತಿಳಿಸಿದರು.

ದುರ್ವಾಸನೆ ತಡೆಯಲಾರದೇ, ಇಲ್ಲಿನ ಅಂಗಡಿಗಳವರು ಚರಂಡಿ ಮೇಲಿನ ಚಪ್ಪಡಿ ಕಿತ್ತು ಹಾಕಿದ್ದಾರೆ. ಈಗ ಚರಂಡಿಯನ್ನು ಸರಿಪಡಿಸುತ್ತಿದ್ದೇವೆ. ಕಾಲುವೆಗೆ ಒಳಚರಂಡಿ ನೀರನ್ನು ಹರಿಸುತ್ತಿರುವ ಅಪಾರ್ಟ್‌ಮೆಂಟ್‌ನವರಿಗೂ ನೋಟಿಸ್ ನೀಡುತ್ತಿದ್ದೇವೆ

ದರ್ಶನ್, ಸಹಾಯಕ ಎಂಜಿನಿಯರ್, ಬಿಬಿಎಂಪಿ

ತನಿಖೆ ರಾಜಕೀಯ ಪ್ರೇರಿತ: ಸಚಿವರಾದ ಜೆ.ಪರಮೇಶ್ವರ, ಪ್ರಿಯಾಂಕ್ ಖರ್ಗೆ ವಾಗ್ದಾಳಿ

ಇ.ಡಿ ವಿರುದ್ಧ ರಾಜಕೀಯ, ಕಾನೂನು ಹೋರಾಟ

ಪ್ರಜಾವಾಣಿ ವಾರ್ತೆ



ಜಿ.ಪರಮೇಶ್ವರ

ಬೆಂಗಳೂರು: 'ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಲೋಕಾಯುಕ್ತ ತನಿಖೆಗೆ ಅಡ್ಡಿ ಮಾಡಲು ಮತ್ತು ನ್ಯಾಯಾಲಯದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿದೆ. ಜಾರಿ ನಿರ್ದೇಶನಾಲಯ ವಿರುದ್ಧ ರಾಜಕೀಯವಾಗಿ ಮತ್ತು ಕಾನೂನಾತ್ಮಕವಾಗಿ ಹೋರಾಟ ನಡೆಸುತ್ತೇವೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಲೋಕಾಯುಕ್ತಕ್ಕೆ ಪತ್ರ ಬರೆದ ವಿಷಯವಾಗಿ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಜತೆ ಜಂಟಿ ಸುದ್ದಿಗೋಷ್ಠಿ ನಡೆಸಿದ ಅವರು ಕೇಂದ್ರ ಸರ್ಕಾರ ಮತ್ತು ಇ.ಡಿ ವಿರುದ್ಧ ಕಿಡಿಕಾರಿದರು.

ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಎರಡು ತನಿಖಾ ಏಜೆನ್ಸಿಗಳು ತನಿಖೆ ನಡೆಸಲು ಕಾನೂನಿನಲ್ಲಿ ಅವಕಾಶವಿಲ್ಲ. ಲೋಕಾಯುಕ್ತ ತನಿಖೆ ನಡೆಯುತ್ತಿರುವಾಗಲೇ ಜಾರಿ ನಿರ್ದೇಶನಾಲಯ ಈ ಪ್ರಕರಣದ ವಿಚಾರವಾಗಿ ಅಂತಿಮ ತೀರ್ಮಾನಕ್ಕೆ ಬಂದ ಹಾಗೆ ಲೋಕಾಯುಕ್ತಕ್ಕೆ ಪತ್ರ ಬರೆದಿದೆ. ಈ ಮೂಲಕ ಲೋಕಾಯುಕ್ತ ತನಿಖೆ ಮತ್ತು ನ್ಯಾಯಾಲಯದ ವಿಚಾರಣೆ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಿದೆ. ಇತ್ತೀಚೆಗೆ ನಡೆದ ವಿಧಾನಸಭಾ ಉಪಚುನಾವಣೆಯಲ್ಲಿ ಬಿಜೆಪಿ– ಜೆಡಿಎಸ್ ಮೂರೂ ಕ್ಷೇತ್ರಗಳಲ್ಲಿ ಸೋತಿವೆ. ಅವರ ಬಳಿ ಈಗ ಮಾತನಾಡಲು ವಿಷಯವಿಲ್ಲ. ಇವರಿಗೆ ರಾಜಕೀಯ ಅಸ್ತ್ರ ನೀಡಲೆಂದೇ ಜಾರಿ ನಿರ್ದೇಶನಾಲಯ ಈ ಪತ್ರವನ್ನು ಬರೆದಿದೆ ಎಂದು ಪರಮೇಶ್ವರ ಆಪಾದಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಗೆ ಸಿಬಿಐ ಅಥವಾ ಇ.ಡಿ ಸಹಾಯ ನಾವು ಕೇಳಿಲ್ಲ. ಹಣ ದುರ್ಬಳಕೆ ಪ್ರಕರಣದಲ್ಲಿ ಮಾತ್ರ ಇ.ಡಿ ಪ್ರವೇಶಿಸಬಹುದು. ಆದರೆ, ಇ.ಡಿ ಹೇಗೆ ಈ ಪ್ರಕರಣದಲ್ಲಿ ನುಸುಳಿಕೊಂಡಿದೆ ಎಂಬುದು ಗೊತ್ತಾಗುತ್ತಿಲ್ಲ ಎಂದರು.

ಲೋಕಾಯುಕ್ತಕ್ಕೆ ಬರೆದ ಪತ್ರವನ್ನು ಉದ್ದೇಶಪೂರ್ವಕವಾಗಿ ಆಯ್ದ ಮಾಧ್ಯಮಗಳಿಗೆ ಸೋರಿಕೆ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಬಳಿ ಈಗ ಜಮೀನೂ ಇಲ್ಲ ಮತ್ತು ನಿವೇಶನಗಳೂ ಇಲ್ಲ. 14 ನಿವೇಶನಗಳನ್ನು ಮುಡಾಗೆ ಮರಳಿ ಒಪ್ಪಿಸಿದ ಮೇಲೆ, ತನಿಖೆಯ ಅಗತ್ಯವಿದೆಯೇ? ಮಾಧ್ಯಮಗಳು ಈ ವಿಚಾರವಾಗಿ ಸಾರ್ವಜನಿಕ ವಿಚಾರಣೆ ನಡೆಸುತ್ತಿವೆ. ಹಾಸನ ಸಮಾವೇಶದಲ್ಲಿ ಸಾರ್ವಜನಿಕರ ಮುಂದೆ ಈ ವಿಷಯವನ್ನು ಪ್ರಸ್ತಾಪಿಸುತ್ತೇವೆ ಎಂದು ತಿಳಿಸಿದರು.

ರಾಜಕೀಯವಾಗಿ ಅಪ್ರಸ್ತುತವಾಗುತ್ತಿರುವ ಬಿಜೆಪಿಗೆ ಸಹಾಯ ಮಾಡಲು ಜಾರಿ ನಿರ್ದೇಶನಾಲಯ ಈ ಪತ್ರವನ್ನು ಬರೆದು, ಮಾಹಿತಿ ಸೋರಿಕೆ ಮಾಡಿದೆ ಎಂದು ಪ್ರಿಯಾಂಕ್ ಕಿಡಿಕಾರಿದರು. ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಮಾತನಾಡಿದರು.

ಇ.ಡಿ ಹತಾಶೆ ಸಾಬೀತು– ಡಿಕೆಶಿ



ಡಿ.ಕೆ. ಶಿವಕುಮಾರ್

'ಯಾವುದೇ ತನಿಖೆ ನಡೆದರೂ ಅದು ಗೌಪ್ಯವಾಗಿರಬೇಕು. ಏನಾದರೂ ಸತ್ಯಾಂಶವಿದ್ದರೆ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ಅದರ ಬದಲು ಮಾಧ್ಯಮಗಳಿಗೆ ನೀಡುತ್ತಾರೆಂದರೆ, ಇ.ಡಿಯವರು ಎಷ್ಟು ಹತಾಶರಾಗಿದ್ದಾರೆ ಎನ್ನುವುದು ಗೊತ್ತಾಗುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಮುಡಾ ಪ್ರಕರಣ ವಿಚಾರವಾಗಿ ಲೋಕಾಯುಕ್ತಕ್ಕೆ ಇ.ಡಿ ಪತ್ರ ಬರೆದಿರುವ ಕುರಿತು ಪ್ರತಿಕ್ರಿಯಿಸಿದ ಅವರು ,'ಮುಡಾ ಪ್ರಕರಣದಲ್ಲಿ ದುಡ್ಡು ತೆಗೆದುಕೊಳ್ಳುವುದು, ಕೊಡುವುದು ನಡೆದಿಲ್ಲ. ದಾಳಿ ಮಾಡಿದಾಗ ಹಣ ಸಿಕ್ಕಿಲ್ಲ. ಹೀಗಾಗಿ, ಈ ಪ್ರಕರಣದಲ್ಲಿ ಮನಿ ಎಲ್ಲಿ ಲಾಂಡರಿಂಗ್ ಆಯಿತು' ಎಂದು ಪ್ರಶ್ನಿಸಿದರು. 'ಈ ಪ್ರಕರಣ ಆಡಳಿತ ಇಲಾಖೆಯನ್ನು ಇ.ಡಿಯವರು ವಿಚಾರಣೆ ಮಾಡಬೇಕು. ಅದನ್ನು ಬಿಟ್ಟು ಮಾಧ್ಯಮಗಳಿಗೆ ಈ ವಿಚಾರಗಳನ್ನು ಸೋರಿಕೆ ಮಾಡಿದರೆ ಹೇಗೆ ? ಒಂದು ತನಿಖಾ ಸಂಸ್ಥೆ, ಮತ್ತೊಂದು ತನಿಖಾ ಸಂಸ್ಥೆಗೆ, 'ನೀವು ಹೀಗೆ ಮಾಡಿ' ಎಂದು ಹೇಳುವುದನ್ನು ನಾನು ಹೊಸದಾಗಿ ನೋಡುತ್ತಿದ್ದೇನೆ. ಇದಕ್ಕೆ ಜನ ಉತ್ತರ ಕೊಡುತ್ತಾರೆ. ನಾವೂ ಉತ್ತರ ಕೊಡುತ್ತೇವೆ' ಎಂದರು.



ಮುಡಾ ಹಗರಣದ ತನಿಖೆ ಮಾಡಲು ಇ.ಡಿಗೆ ಕೋರ್ಟ್ ಅನುಮತಿ ಕೊಟ್ಟಿತ್ತೇ?. ರಾಜ್ಯದ ತನಿಖಾ ಸಂಸ್ಥೆಯ ಕಾರ್ಯದಲ್ಲಿ ಹಸ್ತಕ್ಷೇಪ ಮಾಡಲು ಇ.ಡಿಗೆ ಯಾವ ಅಧಿಕಾರವಿದೆ

ಎಂ.ಸಿ. ಸುಧಾಕರ್, ಉನ್ನತ ಶಿಕ್ಷಣ ಸಚಿವ

ಆದರೆ, ಕಾನೂನು ಗಾಳಿಗೆ ತೂರಿ ಬಿಜೆಪಿಗೆ ಅನುಕೂಲ ಮಾಡಿಕೊಡಲು ಇ.ಡಿ ಮುಡಾ ಪ್ರಕರಣದಲ್ಲಿ ಮೂಗು ತೂರಿಸಿದೆ ಎಂದು ಪರಮೇಶ್ವರ ದೂರಿದರು.

ಸುಧಾಕರ್, ಮಧು ಬಂಗಾರಪ್ಪ ಮಾಹಿತಿ

ಎಲ್ಲ ಸಚಿವರಿಂದಲೂ ಹೈಕಮಾಂಡ್ ವರದಿ ಸಂಗ್ರಹ. ಸಚಿವರ ಮೌಲ್ಯಮಾಪನ ಮಾಡಲಿರುವ ಹೈಕಮಾಂಡ್.

ಸಚಿವರ ಕಾರ್ಯಕ್ಷಮತೆಯ ವರದಿ; ಹೈಕಮಾಂಡ್‌ಗೆ ಸಲ್ಲಿಕೆ

ಬೆಂಗಳೂರು: 'ಸಚಿವರಾಗಿ ನಾವು ಮಾಡಿದ ಕಾರ್ಯಗಳ ಸಾಧನಾ ವರದಿಯನ್ನು ಪಕ್ಷದ ಹೈಕಮಾಂಡ್‌ಗೆ ಕಳುಹಿಸಿದ್ದೇವೆ' ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಇಬ್ಬರೂ ಪ್ರತ್ಯೇಕವಾಗಿ ಮಾತನಾಡಿ, 'ಸಿದ್ದರಾಮಯ್ಯ ಸಂಪುಟದ ಸಚಿವರ ಮೌಲ್ಯಮಾಪನ ಮಾಡುವ ಹಕ್ಕು ಹೈಕಮಾಂಡ್‌ಗೆ ಇದೆ. ಪಕ್ಷದ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳನ್ನು ಸಾಕಾರಗೊಳಿಸುವುದು ನಮ್ಮ ಕರ್ತವ್ಯವೂ ಹೌದು' ಎಂದು ಹೈಕಮಾಂಡ್ ನಡೆಯನ್ನು ಸಮರ್ಥಿಸಿಕೊಂಡರು.

ಎಂ.ಸಿ.ಸುಧಾಕರ್, 'ಎಲ್ಲ ಸಚಿವರಿಂದಲೂ ಹೈಕಮಾಂಡ್ ವರದಿ ಕೇಳಿದೆ.



ನನ್ನ ಖಾತೆಗೆ ಸಂಬಂಧಿಸಿದ ವರದಿಯನ್ನು ಈಗಾಗಲೇ ಕಳುಹಿಸಿದ್ದೇನೆ. ಆಯಾ ಸಚಿವರ ಕಾರ್ಯವೈಖರಿ ಆಧರಿಸಿ, ಹೈಕಮಾಂಡ್ ಮುಂದಿನ ನಿರ್ಧಾರ ತೆಗೆದುಕೊಳ್ಳಲಿದೆ' ಎಂದರು.

ಮಧು ಬಂಗಾರಪ್ಪ, 'ಶಾಲಾ ಶಿಕ್ಷಣ ಇಲಾಖೆಯ ಸಚಿವನಾದ ನಂತರ ಮಾಡಿದ ಉತ್ತಮ ಕೆಲಸಗಳ ವರದಿಯನ್ನು ಹೈಕಮಾಂಡ್‌ಗೆ ಕಳುಹಿಸಿದ್ದೇನೆ. ಇನ್ನೊಂದು ವರದಿಯನ್ನು ಶೀಘ್ರ ಕಳುಹಿಸುತ್ತೇನೆ' ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ

ಚುನಾವಣೆ: ಸಿ.ಎಸ್. ಷಡಾಕ್ಷರಿ ತಂಡ ಮೇಲುಗೈ

ಪ್ರಜಾವಾಣಿ ವಾರ್ತೆ



ಸಿ.ಎಸ್.ಷಡಾಕ್ಷರಿ

ಬೆಂಗಳೂರು: ಸರ್ಕಾರಿ ನೌಕರರ ಸಂಘದ ತಾಲ್ಲೂಕು, ಜಿಲ್ಲಾ ಶಾಖೆಗಳ ಪದಾಧಿಕಾರಿಗಳು, ರಾಜ್ಯ ಪರಿಷತ್ ಸದಸ್ಯರ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ರಾಜ್ಯ ಸಂಘದ ಹಾಲಿ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ನೇತೃತ್ವದ ತಂಡ ಮೇಲುಗೈ ಸಾಧಿಸಿದೆ.

ಸಂಘದ ವಿವಿಧ ಸ್ತರಗಳ ಚುನಾವಣಾ ಪ್ರಕ್ರಿಯೆ ಸೆ. 17ರಿಂದ ಆರಂಭವಾಗಿತ್ತು. ಮೊದಲ ಹಂತದಲ್ಲಿ ಮೂರು ಶೈಕ್ಷಣಿಕ ಜಿಲ್ಲೆ ಒಳಗೊಂಡ 33 ಜಿಲ್ಲೆಗಳು ಹಾಗೂ 191 ತಾಲ್ಲೂಕುಗಳ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಮೊದಲ ಹಂತದಲ್ಲಿ ತಾಲ್ಲೂಕು ಶಾಖೆಯ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿತ್ತು.



ಪ್ರತಿ ಜಿಲ್ಲಾ ಕೇಂದ್ರದಲ್ಲೂ ಜಿಲ್ಲಾ ಸಂಘದ 66 ಸ್ಥಾನಗಳಿಗೆ ನ.16ರಂದು ಚುನಾವಣೆ ನಡೆದಿತ್ತು. ಚುನಾಯಿತರಾದವರು ಬುಧವಾರ ನಡೆದ ಚುನಾವಣೆಯಲ್ಲಿ ಆಯಾ ಜಿಲ್ಲಾ ಸಂಘದ ಅಧ್ಯಕ್ಷರು, ಖಜಾಂಚಿ ಹಾಗೂ ರಾಜ್ಯ ಪರಿಷತ್ ಸದಸ್ಯರನ್ನು ಆಯ್ಕೆ ಮಾಡಿದ್ದಾರೆ. ರಾಜ್ಯ ಪರಿಷತ್‌ನ 102 ಸ್ಥಾನಗಳಿಗೂ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದೆ.

'ಜಿಲ್ಲಾಧ್ಯಕ್ಷ ಹಾಗೂ ಪದಾಧಿಕಾರಿಗಳ ಸ್ಥಾನಕ್ಕೆ 13 ಜಿಲ್ಲೆಗಳಲ್ಲಿ ಅವಿರೋಧ ಆಯ್ಕೆ ನಡೆದಿತ್ತು. ಬುಧವಾರ 18 ಜಿಲ್ಲೆಗಳಲ್ಲಿ ಚುನಾವಣೆ ನಡೆಯಿತು. ಅವಿರೋಧ ಆಯ್ಕೆಯೂ ಸೇರಿ 31 ಜಿಲ್ಲೆಗಳಲ್ಲಿ 27ರಲ್ಲಿ ನಮ್ಮ ಬಣ ಜಯಗಳಿಸಿದೆ. ರಾಜ್ಯ ಪರಿಷತ್‌ನ 102 ಸ್ಥಾನಗಳಲ್ಲಿ 95 ಸ್ಥಾನಗಳು ನಮ್ಮ ಬಣದ ಪಾಲಾಗಿವೆ. ಹಿಂದಿನ ಅವಧಿಯಲ್ಲಿ ಮಾಡಿದ ಒಳ್ಳೆಯ ಕಾರ್ಯಗಳಿಗೆ ನೌಕರರ ಬೆಂಬಲ ದೊರೆತಿದೆ' ಎಂದು ಷಡಾಕ್ಷರಿ ಹೇಳಿದ್ದಾರೆ.

ರಾಜ್ಯ ಸಂಘ: ಡಿ. 9ರಿಂದ ನಾಮಪತ್ರ

ತಾಲ್ಲೂಕು ಹಾಗೂ ಜಿಲ್ಲಾ ಸಂಘದ ಪದಾಧಿಕಾರಿಗಳ ಆಯ್ಕೆ ಮುಕ್ತಾಯವಾಗಿದ್ದು, ಡಿ. 9ರಿಂದ ರಾಜ್ಯ ಸಂಘದ ಅಧ್ಯಕ್ಷ ಹಾಗೂ ಖಜಾಂಚಿ ಚುನಾವಣೆ ಪ್ರಕ್ರಿಯೆಗಳು ಆರಂಭವಾಗಲಿವೆ.

ಡಿ. 9ರಿಂದ ಈ ಎರಡೂ ಸ್ಥಾನಗಳಿಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ. ತಾಲ್ಲೂಕು ಸಂಘಗಳು, ಜಿಲ್ಲಾ ಸಂಘಗಳು, ಬೆಂಗಳೂರು ಪರಿಷತ್ ಸ್ಥಾನ ಹಾಗೂ ಯೋಜನಾ ಶಾಖೆಗಳಿಮದ ಆಯ್ಕೆಯಾಗಿರುವ ಒಟ್ಟು 1,006 ಮತದಾರರು ಮತ ಚಲಾಯಿಸಲಿದ್ದಾರೆ. ಡಿ. 27ರಂದು ಮತದಾನ ನಡೆಯಲಿದೆ. ಅಂದೇ ಮತ ಎಣಿಕೆ ನಡೆದು, ಫಲಿತಾಂಶ ಹೊರಬೀಳಲಿದೆ.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಪ್ರತಿಭಟನೆಯಲ್ಲಿ ಹಿಂದೂ ಹಿತರಕ್ಷಣಾ ವೇದಿಕೆಯ ಸದಸ್ಯರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಹಿಂದೂಗಳ ಮೇಲೆ ದೌರ್ಜನ್ಯ: ಪ್ರತಿಭಟನೆ

ಬೆಂಗಳೂರು: ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ನಿಲ್ಲಬೇಕು ಹಾಗೂ ಹಿಂದೂಗಳಿಗೆ ರಕ್ಷಣೆ ಒದಗಿಸಬೇಕು ಎಂದು ಒತ್ತಾಯಿಸಿ ಹಿಂದೂ ಹಿತರಕ್ಷಣಾ ಸಮಿತಿಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

'ಬಾಂಗ್ಲಾದೇಶದಲ್ಲಿ ಹಿಂದೂ ಅಲ್ಪಸಂಖ್ಯಾತರ ಧಾರ್ಮಿಕ ಮುಖಂಡರ ಮೇಲೆ ನಿರಂತರವಾಗಿ ದೌರ್ಜನ್ಯಗಳು ನಡೆಯುತ್ತಿವೆ. ಹಿಂದೂ ದೇವಸ್ಥಾನ ಹಾಗೂ ಶಿಲ್ಪಗಳನ್ನು ಧ್ವಂಸಗೊಳಿಸಲಾಗುತ್ತಿದೆ. ಇದರಿಂದ ಮಾನವೀಯ ಹಾಗೂ ನೈತಿಕ ಮೌಲ್ಯಗಳಿಗೆ ಧಕ್ಕೆಯಾಗುತ್ತಿದೆ. ಜನಾಂಗೀಯ ಹಿಂಸೆ ಮಿತಿಮೀರಿದೆ. ಶಾಂತಿಗೆ ಭಂಗ ತರುವ ಕೆಲಸ ನಡೆಯುತ್ತಿದೆ' ಎಂದು ಪ್ರತಿಭಟನಕಾರರು ಆರೋಪಿಸಿದರು.

ಮುಖ್ಯಾಂಶಗಳು

- ದೇವಾಲಯ, ಶಿಲ್ಪಗಳನ್ನು ಧ್ವಂಸಗೊಳಿಸುವುದು ಸರಿಯಲ್ಲ
- ಹಿಂದೂಗಳ ರಕ್ಷಣೆಗೆ ಕೇಂದ್ರ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು

ಬೇಲಿಮಠದ ಶಿವರುದ್ರ ಸ್ವಾಮೀಜಿ ಮಾತನಾಡಿ, 'ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ದೌರ್ಜನ್ಯ ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ ಖಂಡನೀಯ. ಸನಾತನ ಧರ್ಮ, ಪರಂಪರೆ ಹೊಂದಿರುವ ಭಾರತೀಯರು ಶಾಂತಿಪ್ರಿಯರು. ಹಿಂದೂ ಸಮುದಾಯದ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ನಾವೆಲ್ಲರೂ ಒಗ್ಗಟ್ಟಿನಿಂದ ಖಂಡಿಸಬೇಕಿದೆ' ಎಂದು ಕರೆ ನೀಡಿದರು.

'ಬಾಂಗ್ಲಾದೇಶದಲ್ಲಿರುವ ಹಿಂದೂಗಳ ರಕ್ಷಣೆಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು. ಅಲ್ಲಿ ಶಾಂತಿ–ಸೌಹಾರ್ದ ಸ್ಥಾಪಿಸುವಂತೆ ವಿಶ್ವಸಂಸ್ಥೆಗೆ ಪತ್ರ ಬರೆಯಬೇಕು' ಎಂದು ಒತ್ತಾಯಿಸಿದರು.ಪಟಾಪಟ್ ಶ್ರೀನಿವಾಸ್ ಉಪಸ್ಥಿತರಿದ್ದರು.

44 ಲಿಂಗತ್ವ ಅಲ್ಪಸಂಖ್ಯಾತರು ಉತ್ತೀರ್ಣ

ಹೈದರಾಬಾದ್(ಪಿಟಿಐ): ಸಂಚಾರ ಸಹಾಯಕರ ಹುದ್ದೆಗಳ ನೇಮಕಾತಿಗೆ ಹೈದರಾಬಾದ್ ಸಂಚಾರ ಪೊಲೀಸ್ ಇಲಾಖೆ ನಡೆಸಿದ ದೈಹಿಕ ಕ್ಷಮತೆ ಪರೀಕ್ಷೆಯಲ್ಲಿ 44 ಲಿಂಗತ್ವ ಅಲ್ಪಸಂಖ್ಯಾತರು ಉತ್ತೀರ್ಣರಾಗಿದ್ದಾರೆ.

58 ಲಿಂಗತ್ವ ಅಲ್ಪಸಂಖ್ಯಾತರು ಪರೀಕ್ಷೆಗೆ ಹಾಜರಾಗಿದ್ದರು. 'ಆಯ್ಕೆಯಾದವರನ್ನು ಆರು ತಿಂಗಳು ಪ್ರಾಯೋಗಿಕವಾಗಿ ಸಂಚಾರ ನಿರ್ವಹಣೆ ಕಾರ್ಯಕ್ಕೆ ನಿಯೋಜಿಸಲಾಗುವುದು' ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಲಾಡ್ಲಿ ಫೌಂಡೇಶನ್' ವತಿಯಿಂದ ಕೊಡುಗೆ • ಶಾಸಕ ಮುನಿರಾಜು ಚಾಲನೆ

ಸರ್ಕಾರಿ ಶಾಲೆಗಳಿಗೆ 'ಸ್ಮಾರ್ಟ್ ಕ್ಲಾಸ್'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಕ್ಷೇತ್ರದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯಗಳ ಜೊತೆಗೆ 100 ಕೊಠಡಿಗಳ ನಿರ್ಮಿಸಲಾಗುತ್ತಿದೆ ಎಂದು ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಶಾಸಕ ಎಸ್. ಮುನಿರಾಜು ತಿಳಿಸಿದರು.

ಅಬ್ಬಿಗೆರೆ ಮತ್ತು ದಾಸರಹಳ್ಳಿ ಸರ್ಕಾರಿ ಪ್ರೌಢ ಶಾಲೆಗಳಿಗೆ 'ಲಾಡ್ಲಿ ಫೌಂಡೇಶನ್' ವತಿಯಿಂದ ₹9 ಲಕ್ಷ ವೆಚ್ಚದಲ್ಲಿ ಅಳವಡಿಸಲಾಗಿರುವ ಸ್ಮಾರ್ಟ್ ಕ್ಲಾಸ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಲಾಡ್ಲಿ ಫೌಂಡೇಶನ್ ಮುಖ್ಯಸ್ಥ ಸಲ್ಮಾನ್ ಶರೀಫ್ ಮಾತನಾಡಿ, 'ಸರ್ಕಾರಿ ಶಾಲೆಗಳಲ್ಲಿಯೂ ಕೂಡ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯಬೇಕೆನ್ನುವ ಉದ್ದೇಶದಿಂದ ನಮ್ಮ ಸಂಸ್ಥೆಯಿಂದ ಸ್ಮಾರ್ಟ್ ಕ್ಲಾಸ್ ಸೌಲಭ್ಯ ಒದಗಿಸಲಾಗಿದೆ' ಎಂದು ಹೇಳಿದರು.

ಲಾಡ್ಲಿ ಫೌಂಡೇಶನ್ ಸದಸ್ಯ ಇಮ್ರಾನ್, ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ಶ್ರೀನಿವಾಸ್, ಸ್ಥಳೀಯ ಮುಖಂಡರಾದ ಅಬ್ಬಿಗೆರೆ ಮಂಜುನಾಥ್, ಪಾಲಿಕೆ ಮಾಜಿ ಸದಸ್ಯೆ ಉಮಾದೇವಿ ನಾಗರಾಜು, ನಾಗಣ್ಣ, ಚಂದ್ರಶೇಖರ್, ಎಂ. ಮುನಿರಾಜು, ಹೇಮಾಚಲ ರೆಡ್ಡಿ, ಯತೀಶ್, ರೇಣುಕಮ್ಮ, ಸುರೇಖಾ ಉಪಸ್ಥಿತರಿದ್ದರು.



ಅಬ್ಬಿಗೆರೆ ಮತ್ತು ದಾಸರಹಳ್ಳಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್‌ಗೆ ಶಾಸಕ ಎಸ್. ಮುನಿರಾಜು ಚಾಲನೆ ನೀಡಿದರು

ವಿಮಾನ ನಿಲ್ದಾಣಕ್ಕೆ ಬೆದರಿಕೆ ಸಂದೇಶ: ಪ್ರಕರಣ ದಾಖಲು

ಮಂಗಳೂರು: ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಾಮೇಶ್ವರಂ ಕೆಫೆ ಮಾದರಿಯಲ್ಲಿ ಬಾಂಬ್ ಇಟ್ಟಿದ್ದಾಗಿ ಬೆದರಿಕೆ ಒಡ್ಡಿರುವ ಇ–ಮೇಲ್ ಸಂದೇಶ ನವೆಂಬರ್ 30ರಂದು ಬಂದಿದ್ದು, ಸಿಐಎಸ್‌ಎಫ್ ಸಿಬ್ಬಂದಿ ನೀಡಿದ ದೂರಿನಂತೆ ಬಜಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಮಿಳುನಾಡಿನಲ್ಲಿ ಬಂಧಿತರಾಗಿರುವ ಜಾಫರ್ ಸಾದಿಕ್ ಮತ್ತು ಡಿಸಿಎಂ ಉದಯನಿಧಿ ಸ್ಟಾಲಿನ್ ಪತ್ನಿ, ಕೃತಿಗಾ ಉದಯನಿಧಿ ಅವರ ಮೇಲಿರುವ ಕೇಸ್ ಅನ್ನು ವಾಪಸ್ ಪಡೆಯಬೇಕು. ತಿರುಚ್ಚಿ ಸೆಂಟ್ರಲ್ ಜೈಲಿನಲ್ಲಿರುವ ಟಿಎನ್‌ಎಲ್‌ಎ ಉಗ್ರ ಸಂಘಟನೆಯ ಮುಖ್ಯಸ್ಥ ಎಸ್. ಮಾರನ್ ಅವರನ್ನು ಬಿಡುಗಡೆ ಮಾಡಬೇಕು ಎಂಬುದಾಗಿ ಬೇಡಿಕೆ ಇಡಲಾಗಿದೆ. 'ಅಕ್ರಮ್ ವಾಯ್ಕರ್@ಔಟ್‌ಲುಕ್.ಕಾಂ' ಎಂಬ ಹೆಸರಿನಿಂದ ಬಂದಿರುವ ಇಂಗ್ಲಿಷ್ ಒಕ್ಕಣಿಕೆಯ ಇ–ಮೇಲ್‌ನಲ್ಲಿ ಇನ್ನೂ ಅನೇಕ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ವಿಮಾನ ನಿಲ್ದಾಣದಲ್ಲಿ ಬಾಂಬ್ ಸ್ಫೋಟಿಸಿ ಪ್ರಯಾಣಿಕರ ಜೀವಕ್ಕೆ ಹಾನಿ ಮಾಡುವುದಾಗಿ ಮೇಲ್‌ನಲ್ಲಿ ಬೆದರಿಕೆ ಹಾಕಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸೀಟ್ ಬ್ಲಾಕಿಂಗ್: ಹಿಂದಿನ ವರ್ಷಗಳದ್ದೂ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ಸೀಟು ಹಂಚಿಕೆಯಲ್ಲಿ ನಡೆದ 'ಸೀಟ್ ಬ್ಲಾಕಿಂಗ್' ದಂಧೆಯ ತನಿಖೆ ನಡೆಸುತ್ತಿರುವ ಅಧಿಕಾರಿಗಳಿಗೆ ಹಿಂದಿನ ವರ್ಷಗಳ ಸೀಟು ಹಂಚಿಕೆಯನ್ನೂ ಪರಿಗಣಿಸುವಂತೆ ಕೋರಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಸುಧಾಕರ್ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಹೊರಗುತ್ತಿಗೆ ನೌಕರ ಸೇರಿದಂತೆ 10 ಆರೋಪಿಗಳನ್ನು ಬಂಧಿಸಲಾಗಿದೆ. ದಂಧೆಯ ಹಿಂದೆ ದೊಡ್ಡ ಜಾಲವೇ ಇದೆ. ಹಲವು ವರ್ಷಗಳಿಂದ ಸಕ್ರಿಯರಾಗಿರುವ ಶಂಕೆ ಇದ್ದು, ಹಿಂದಿನ ವರ್ಷಗಳ ಸೀಟು ಹಂಚಿಕೆಯ ಕುರಿತು ತನಿಖೆ ನಡೆಸುವ ಅಗತ್ಯವಿದೆ ಎಂದರು.

'ಹಗರಣದಲ್ಲಿ ವಿದ್ಯಾರ್ಥಿಗಳು ಭಾಗಿಯಾಗಿದ್ದರೆ ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು. ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಕೈವಾಡ ಕುರಿತು ಹೆಚ್ಚಿನ ಮಾಹಿತಿ ಇಲ್ಲ. ತನಿಖೆ ನಡೆಯುತ್ತಿದ್ದು, ಈ ಹಂತದಲ್ಲಿ ಸಂಸ್ಥೆಗಳ ಪಾತ್ರದ ಬಗ್ಗೆ ಸರ್ಕಾರ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ತನಿಖೆ ಪೂರ್ಣಗೊಂಡ ನಂತರ ಎಲ್ಲವೂ ಬಹಿರಂಗವಾಗಲಿದೆ' ಎಂದು ಪ್ರತಿಕ್ರಿಯಿಸಿದರು.

ಮುಂದಿನ ವಾರ ಬಾಂಗ್ಲಾಗೆ ಮಿಸ್ರಿ?

ಢಾಕಾ (ಪಿಟಿಐ): ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಮುಂದಿನ ವಾರ ಬಾಂಗ್ಲಾದೇಶಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ.



ವಿಕ್ರಮ್ ಮಿಸ್ರಿ

ಡಿಸೆಂಬರ್ 9 ಅಥವಾ 10ರಂದು ಭಾರತ ಹಾಗೂ ಬಾಂಗ್ಲಾದೇಶಗಳ ವಿದೇಶಾಂಗ ಕಾರ್ಯದರ್ಶಿಗಳ ಸಭೆ ನಡೆಸಲು ನಿರ್ಧರಿಸಲಾಗಿದೆ ಎಂದು ಬಾಂಗ್ಲಾದೇಶದ ವಿದೇಶಾಂಗ ಸಲಹೆಗಾರ ಮೊಹಮ್ಮದ್ ತೌಹಿದ್ ಹುಸೇನ್ ಅವರ ಹೇಳಿಕೆ ಉಲ್ಲೇಖಿಸಿ 'ಬಿಎಸ್‌ಎಸ್' ಸುದ್ದಿಸಂಸ್ಥೆ ವರದಿ ಮಾಡಿದೆ.

ಶೇಖ್ ಹಸೀನಾ ಅವರು ಬಾಂಗ್ಲಾದ ಪ್ರಧಾನಿ ಸ್ಥಾನದಿಂದ ಉಚ್ಚಾಟಿತರಾದ ನಂತರ ಉಭಯ ದೇಶಗಳ ನಡುವೆ ನಡೆಯಲಿರುವ ಉನ್ನತ ಮಟ್ಟದ ಸಭೆ ಇದಾಗಲಿದೆ.

'ಬಾಂಗ್ಲಾ ಪರಿಸ್ಥಿತಿಗೆ ಯೂನುಸ್ ಕಾರಣ'

ನವದೆಹಲಿ(ಪಿಟಿಐ): 'ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತರ ರಕ್ಷಣೆ ಮಾಡುವಲ್ಲಿ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ವಿಫಲರಾಗಿದ್ದು, ಬಾಂಗ್ಲಾದೇಶದ ಸದ್ಯದ ಪರಿಸ್ಥಿತಿಗೆ ಅವರೇ ಕಾರಣ' ಎಂದು ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಬುಧವಾರ ವಾಗ್ದಾಳಿ ನಡೆಸಿದ್ದಾರೆ.

'ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ 'ನರಹತ್ಯೆ'ಗೆ ಯೂನುಸ್ ಅವರೇ ಹೊಣೆ' ಎಂದೂ ಆರೋಪಿಸಿದ್ದಾರೆ.

ನ್ಯೂಯಾರ್ಕ್‌ನಲ್ಲಿರುವ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ವರ್ಚುವಲ್ ಆಗಿ ಮಾತನಾಡಿದ ಅವರು, 'ನಮ್ಮ ತಂದೆ ಶೇಖ್ ಮುಜಿಬುರ್ ರೆಹಮಾನ್ ಅವರನ್ನು 1975ರಲ್ಲಿ ಹತ್ಯೆ ಮಾಡಲಾಗಿತ್ತು. ಅದೇ ರೀತಿಯಲ್ಲಿಯೇ ನನ್ನನ್ನು, ನನ್ನ ಸಹೋದರಿ ಶೇಖ್ ರೆಹಾನಾಳನ್ನು ಕೊಲೆ ಮಾಡಲು ಸಂಚು ರೂಪಿಸಲಾಗಿತ್ತು' ಎಂದು ಆರೋಪಿಸಿದ್ದಾರೆ.



ಶೇಖ್ ಹಸೀನಾ

'ಯೂನುಸ್ ಒಬ್ಬ ಅಧಿಕಾರ ದಾಹಿ' ಎಂದು ಟೀಕಿಸಿದ ಅವರು, 'ಬಾಂಗ್ಲಾದೇಶದಲ್ಲಿನ ದೇವಾಲಯಗಳ ಮೇಲೆ ದಾಳಿ ನಡೆಯುತ್ತಿದೆ. ದೇಶದಲ್ಲಿ ಉದ್ಭವಿಸಿರುವ ಪರಿಸ್ಥಿತಿ ನಿಭಾಯಿಸುವಲ್ಲಿ ಪ್ರಸ್ತುತ ಸರ್ಕಾರ ಸಂಪೂರ್ಣ ವಿಫಲವಾಗಿದೆ' ಎಂದು ಆರೋಪಿಸಿದ್ದಾರೆ.

ಅಸಮತೋಲನ ಮಾನದಂಡ: ಹಸಿರು ವ್ಯಾಪ್ತಿ ಸೇರಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾದೇಶಿಕ ಅಸಮತೋಲನ ನಿವಾರಣೆಯ ಮಾನದಂಡದಲ್ಲಿ ತಲಾದಾಯ ಮತ್ತು ಪ್ರದೇಶದ ಹಸಿರು ವ್ಯಾಪ್ತಿಯನ್ನೂ ಪರಿಗಣಿಸುವ ಅಗತ್ಯವಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರತಿಪಾದಿಸಿದರು.

ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಅಧ್ಯಕ್ಷ ಹಾಗೂ ಆರ್ಥಿಕ ತಜ್ಞ ಪ್ರೊ.ಎಂ.ಗೋವಿಂದರಾವ್ ನಿಯೋಗದೊಂದಿಗೆ ಸಮಾಲೋಚನೆ ನಡೆಸಿದ ಅವರು, ಅರಣ್ಯ ಇರುವ ಪ್ರದೇಶಗಳಲ್ಲಿ ಕೆಂಪು ಪ್ರವರ್ಗದ ಕೈಗಾರಿಕೆಗಳ ಸ್ಥಾಪನೆ ಸಾಧ್ಯವಿಲ್ಲ. ಹೀಗಾಗಿ ಪಶ್ಚಿಮಘಟ್ಟ ಪ್ರದೇಶಗಳಿಗೆ ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಸಿರು ಹೊದಿಕೆಯ ವ್ಯಾಪ್ತಿ ಅತ್ಯಂತ ಕಡಿಮೆ ಇದೆ. ಇಲ್ಲಿ ವೃಕ್ಷ ಸಂವರ್ಧನೆಗೂ ಪ್ರಾದೇಶಿಕ ಅಸಮತೋಲನ ನಿವಾರಣೆಯಲ್ಲಿ ಆದ್ಯತೆ ನೀಡಬೇಕು ಮತ್ತು ಹೆಚ್ಚಿನ ಹಣ ಒದಗಿಸಬೇಕು ಎಂದು ಖಂಡ್ರೆ ಸಲಹೆ ನೀಡಿದರು.

ಅಸಮತೋಲನ ನಿವಾರಣೆಗೆ ಹಂಚಿಕೆಯಾಗುವ ಹಣವನ್ನು ಮೂಲಸೌಕರ್ಯ ಅಭಿವೃದ್ಧಿ, ಕೈಗಾರಿಕೆ, ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಮಾತ್ರವೇ ಬಳಕೆ ಮಾಡಬೇಕು. ಇತರ ಯಾವುದೇ ಯೋಜನೆಗಳಿಗೆ ಬಳಕೆಯಾದ ಹಣವನ್ನು ಈ ಬಾಬ್ತಿನಲ್ಲಿ ತೋರಿಸಬಾರದು ಎಂದೂ ಅವರು ತಿಳಿಸಿದರು.

ಸಮಿತಿ ಅಧ್ಯಕ್ಷ ಗೋವಿಂದರಾವ್ ಮಾತನಾಡಿ, ಕಲ್ಯಾಣ ಕರ್ನಾಟಕದ ಬಹುಪಾಲು ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಕೃಷಿಯಿಂದ ಲಾಭಕ್ಕಿಂತ ನಷ್ಟವೇ ಹೆಚ್ಚಾಗುತ್ತಿದೆ. ಇದರಿಂದಾಗಿ ಹಲವರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಈ ಅಂಶವನ್ನು ಅಸಮತೋಲನದ ಸೂಚ್ಯಂಕದಲ್ಲಿ ಪರಿಗಣಿಸಬೇಕು ಎಂದು ಹೇಳಿದರು.

ಅಲ್ಲದೇ, ರೈತರು ಬೆಳೆ ಪದ್ಧತಿ ಬದಲಾವಣೆ ಮಾಡುವ ಅಗತ್ಯವಿದೆ. ಇದಕ್ಕೆ ಪ್ರೋತ್ಸಾಹ ನೀಡಬೇಕು ಎಂದರು. ಸಮಿತಿಯ ಸದಸ್ಯರುಗಳಾದ ಸೂರ್ಯನಾರಾಯಣ, ವಾಸುದೇವ ಸೇಡಂ, ಎನ್.ಟಿ.ಬಾಗಲಕೋಟಿ, ಡಿ.ಚಂದ್ರಶೇಖರಯ್ಯ ಸಭೆಯಲ್ಲಿ ಇದ್ದರು.

ಬ್ರಿಗೇಡ್ ರೀಪ್‌ನ ಪ್ರೊಪ್‌ಗೇಟ್ ಕಾರ್ಯಕ್ರಮದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ

ಸುಸ್ಥಿರ ಭಾರತಕ್ಕಾಗಿ ಶ್ರಮಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಸ್ಥಿರ ಭಾರತವನ್ನು ನಿರ್ಮಿಸಲು ರಿಯಲ್ ಎಸ್ಟೇಟ್ ಕ್ಷೇತ್ರ ಮತ್ತು ಸರ್ಕಾರಗಳು ಒಟ್ಟಾಗಿ ಕೆಲಸ ಮಾಡಬೇಕು ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಬ್ರಿಗೇಡ್ ರೀಪ್ ಇದರ 'ಪ್ರೊಪಗೇಟ್–2024' ಕಾರ್ಯಕ್ರಮ 'ದಿ ಮೋಸ್ಟ್ ಇಂಪ್ಯಾಕ್ಟ್‌ಫುಲ್ ಪ್ರಾಪ್‌ಟೆಕ್ ಸಮ್ಮಿಟ್' ಅನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ರಿಯಲ್ ಎಸ್ಟೇಟ್ ಕ್ಷೇತ್ರವು ಜಿಡಿಪಿಗೆ ಶೇ 7.3ರಷ್ಟು ಕೊಡುಗೆ ನೀಡುತ್ತಿದೆ. ಕರ್ನಾಟಕದಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರ ಅತಿ ವೇಗದಲ್ಲಿ ಬೆಳೆಯುತ್ತಿದೆ. ಬೆಂಗಳೂರು ಮುಂಚೂಣಿಯಲ್ಲಿದೆ. ಈ ಕ್ಷೇತ್ರಕ್ಕೆ ನೀತಿ ನಿರೂಪಿಸಲು ಇದು ಸಕಾಲ ಎಂದು ತಿಳಿಸಿದರು.

ಭಾರತದ ಮೊಟ್ಟಮೊದಲ ವರ್ತುಲ ಆರ್ಥಿಕ ನೀತಿಯನ್ನು ಕರ್ನಾಟಕ ಜಾರಿ ಮಾಡಿದೆ. ಇದರಡಿಯಲ್ಲಿ ಕಟ್ಟಡ ನಿರ್ಮಾಣ ವಸ್ತುಗಳಲ್ಲಿ ಶೇ 20ರಷ್ಟು ಸುಸ್ಥಿರವಾಗಿರುವಂತೆ ಖಾತ್ರಿ ಮಾಡಿಕೊಳ್ಳಲಾಗುತ್ತಿದೆ. ಮೇಕ್ ಇಂಡಿಯಾ, ಸ್ಟಾರ್ಟ್‌ಅಪ್ ಇಂಡಿಯಾ, ಡಿಜಿಟಲ್ ಇಂಡಿಯಾ ಎಂದು ಏನೆಲ್ಲ ಘೋಷಣೆಗಳು ಈಗ ದೇಶದಲ್ಲಿ ಕೇಳುತ್ತಿದೆಯೋ ಅದೆಲ್ಲ ಬೆಂಗಳೂರಿನಲ್ಲಿ ಈಗಾಗಲೇ ಇವೆ. ಗ್ರೇಡ್ 'ಎ' ಮಟ್ಟದ ವಾಣಿಜ್ಯ ಕಟ್ಟಡಗಳ ಸಂಖ್ಯೆ ಮಾತ್ರ ಹೆಚ್ಚಾಗಬೇಕಿದೆ ಎಂದರು.

ಬ್ರಿಗೇಡ್ ಗ್ರೂಪ್ ಜಂಟಿ ವ್ಯವಸ್ಥಾಪಕ ನಿರ್ದೇಶಕಿ ನಿರೂಪ ಶಂಕರ್ ಮಾತನಾಡಿ, 'ರಿಯಲ್ ಎಸ್ಟೇಟ್ ಅಭಿವೃದ್ಧಿಯಲ್ಲಿ ತಂತ್ರಜ್ಞಾನದ ಅಭಿವೃದ್ಧಿಯೂ ಸೇರಿಕೊಂಡಿದೆ. ಇದು ವೇಗ ಮತ್ತು ದಕ್ಷತೆಗೆ ಮಾತ್ರ ಸಂಬಂಧಿಸಿಲ್ಲ. ಸುರಕ್ಷತೆ ಮತ್ತು ಸುಸ್ಥಿರತೆಗೂ ಸಂಬಂಧಪಟ್ಟಿದೆ. ಪರಿಸರವನ್ನು ರಕ್ಷಿಸಿಕೊಂಡು ಸ್ಮಾರ್ಟ್ ನಗರಗಳನ್ನು ನಿರ್ಮಿಸಬೇಕಿದೆ' ಎಂದು ಹೇಳಿದರು.

ಕೊಟಕ್ ಬ್ಯಾಂಕ್‌ನ ಹಿರಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ಅಮಿತ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಬ್ರಿಗೇಡ್ ಗ್ರೂಪ್ ನಿರ್ದೇಶಕ (ಆತಿಥ್ಯ) ವಿನೀತ್ ವರ್ಮ, ಎಂಬಸಿ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಜಿತು ವೀರ್‌ವಾಣಿ, ಉದ್ಯಮಿಗಳು, ಸ್ಟಾರ್ಟ್‌ಅಪ್ ನಾಯಕರು, ಬ್ಯಾಂಕ್‌ಗಳ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡರು.



ಬೆಂಗಳೂರಿನಲ್ಲಿ ಬುಧವಾರ ನಡೆದ 'ದಿ ಮೋಸ್ಟ್ ಇಂಪ್ಯಾಕ್ಟ್‌ಫುಲ್ ಪ್ರಾಪ್‌ಟೆಕ್ ಸಮ್ಮಿಟ್' ಕಾರ್ಯಕ್ರಮದಲ್ಲಿ ಬ್ರಿಗೇಡ್ ಗ್ರೂಪ್ ನಿರ್ದೇಶಕ (ಆತಿಥ್ಯ) ವಿನೀತ್ ವರ್ಮ, ಎಂಬಸಿ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಜಿತು ವೀರ್‌ವಾಣಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಬ್ರಿಗೇಡ್ ಗ್ರೂಪ್ ಜಂಟಿ ವ್ಯವಸ್ಥಾಪಕ ನಿರ್ದೇಶಕಿ ನಿರೂಪ ಶಂಕರ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ತಡವಾಗಲಿರುವ ಬೆಂಗಳೂರು- ಮೈಸೂರು ರೈಲು

ಬೆಂಗಳೂರು: ನಾಯಂಡಹಳ್ಳಿ ಮತ್ತು ಕೆಂಗೇರಿ ನಿಲ್ದಾಣಗಳಲ್ಲಿ ಸುರಕ್ಷತೆ ಮತ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಎಸ್‌ಎಂವಿಟಿ ಬೆಂಗಳೂರು-ಮೈಸೂರು ಡೈಲಿ ಪ್ಯಾಸೆಂಜರ್ ವಿಶೇಷ ರೈಲು ಕೆಲವು ದಿನ ತಡವಾಗಿ ಚಲಿಸಲಿದೆ.

ಡಿಸೆಂಬರ್ 6, 8 ಮತ್ತು 10ರಂದು ನಿಗದಿತ ಸಮಯಕ್ಕಿಂತ 60 ನಿಮಿಷ ತಡವಾಗಿ ಎಸ್‌ಎಂವಿಟಿ ಬೆಂಗಳೂರು ನಿಲ್ದಾಣದಿಂದ ಹೊರಡಲಿದೆ. ಇದೆ ರೈಲು ಡಿ.15ರಂದು 50 ನಿಮಿಷ ತಡವಾಗಿ ಹೊರಡಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಮಗು ಮೇಲೆ ಅತ್ಯಾಚಾರ: ಯುವಕನಿಗೆ ಕಠಿಣ ಶಿಕ್ಷೆ

ಬೆಳಗಾವಿ: ಎರಡೂವರೆ ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಯುವಕನಿಗೆ ಇಲ್ಲಿನ ಪೋಕ್ಸೊ ನ್ಯಾಯಾಲಯ ಜೀವ ಇರುವವರೆಗೂ ಕಠಿಣ ಶಿಕ್ಷೆ ಮತ್ತು ₹30 ಸಾವಿರ ದಂಡ ವಿಧಿಸಿ ಬುಧವಾರ ತೀರ್ಪು ನೀಡಿದೆ.

ಬೈಲಹೊಂಗಲ ತಾಲ್ಲೂಕಿನ ವಣ್ಣೂರಿನ ಸುಭಾಷ ಮಹಾದೇವ ನಾಯ್ಕ ಶಿಕ್ಷೆಗೆ ಒಳಗಾದ ವ್ಯಕ್ತಿ. 2017ರಲ್ಲಿ ಶಾಲೆ ಆವರಣದಲ್ಲಿ ಆಟವಾಡುತ್ತಿದ್ದ ಬಾಲಕಿಯನ್ನು ಶಾಲೆ ಕಂಪೌಂಡ್ ಹತ್ತಿರ ಅವಳ ಗುಪ್ತಾಂಗ ಗಾಯಗೊಳಿಸಿದ್ದ. ಕುತ್ತಿಗೆ ಹಿಸುಕಿದ್ದ. ಜತೆಗೆ, ಮಣ್ಣಿನಲ್ಲಿ ಹೂತುಹಾಕಿ ಕೊಲೆ ಮಾಡಲು ಯತ್ನಿಸಿದಾಗ ಸಿಕ್ಕಿಬಿದ್ದಿದ್ದ. ಈ ಸಂಬಂಧ ಬಾಲಕಿ ಪೋಷಕರು ನೇಸರಗಿ ಠಾಣೆಯಲ್ಲಿ ದೂರು ದಾಖಲಿಸಿದ್ದರು. ತನಿಖಾಧಿಕಾರಿ ಎಚ್. ಸಂಗನಗೌಡರ ಅವರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಸಿ.ಎಂ. ಪುಷ್ಪಲತಾ ಅವರು, ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ತೀರ್ಪು ಪ್ರಕಟಿಸಿದ್ದಾರೆ.

ಸಾಂಕ್ರಾಮಿಕ ರೋಗ ಹಬ್ಬುವ ಸಾಧ್ಯತೆ: ಮುನ್ನೆಚ್ಚರಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ಒಂದು ವಾರದಿಂದ ಮಳೆ ಸುರಿಯುತ್ತಿರುವ ಕಾರಣ ಗ್ರಾಮೀಣ ಪ್ರದೇಶದಲ್ಲಿ ನೀರು ಕಲುಷಿತಗೊಂಡು, ಸಾಂಕ್ರಾಮಿಕ ರೋಗಗಳು ಹಬ್ಬುವ ಸಾಧ್ಯತೆ ಇದೆ. ಆದ್ದರಿಂದ ಮುಂಜಾಗ್ರತೆ ವಹಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವ ಪ್ರಿಯಾಂಕ್ ಖರ್ಗೆ ಗ್ರಾಮ ಪಂಚಾಯಿತಿಗಳ ಮುಖ್ಯಸ್ಥರಿಗೆ ಸೂಚನೆ ನೀಡಿದರು.



ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜತೆ ಬುಧವಾರ ವಿಡಿಯೊ ಸಂವಾದ ನಡೆಸಿದ ಅವರು, ಈ ಕುರಿತು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರು.

ರಾಜ್ಯದ 18ರಿಂದ 20 ಜಿಲ್ಲೆಗಳಲ್ಲಿ ಮಳೆಯಾಗುತ್ತಿದೆ. ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಜಲಮೂಲಗಳ ಸುತ್ತಮುತ್ತ ಶುಚಿತ್ವ ಕಾಪಾಡಬೇಕು, ನೀರು ಸರಬರಾಜು ಕೊಳವೆಗಳಲ್ಲಿ ಸೋರಿಕೆ ಇಲ್ಲದಂತೆ ಎಚ್ಚರಿಕೆ ವಹಿಸಬೇಕು ಎಂದು ಸೂಚಿಸಿದರು.

ನೀರು ಪೂರೈಕೆ ಪೈಪ್‌ಗಳು ಹಾದು ಹೋಗುವ ಮಾರ್ಗಗಳ ಪರಿಶೀಲನೆ ಸೇರಿದಂತೆ ಪ್ರತಿಯೊಂದು ವಿಚಾರದಲ್ಲೂ ತೀವ್ರ ನಿಗಾ ಇಡಬೇಕು. ನೀರಿನ ಮಾದರಿಗಳನ್ನು ಪರೀಕ್ಷಿಸಿಯೇ ನೀರು ಸರಬರಾಜು ಮಾಡಬೇಕು ಎಂದು ಪ್ರಿಯಾಂಕ್ ಹೇಳಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದು, ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳಬೇಕೆಂದು ಅವರು ಸಲಹೆ ನೀಡಿದರು.


ಸ್ಪರ್ಧಾ ವಾಣಿ

ಚಾಕೋಲೆಟ್ ಉದ್ಯಮ

ಐಎಎಸ್, ಕೆಎಎಸ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗುವ ಪ್ರಚಲಿತ ವಿದ್ಯಮಾನ



60% ರಷ್ಟು ಉತ್ಪಾದನೆ ಐವರಿ ಕೋಸ್ಟ್ ಮತ್ತು ಘಾನಾ ದೇಶಗಳಲ್ಲಿ



15 ರಿಂದ **39** ಡಿಗ್ರಿ ಸೆಲ್ಸಿಯಸ್ ತಾಪಮಾನದ ಅವಶ್ಯಕತೆ



90 ರಿಂದ **100** ಮಿಲಿ ಮೀಟರ್ ಪ್ರತಿ ತಿಂಗಳು ಮಳೆಯ ಅಗತ್ಯ

ಗುರುಶಂಕರ್ ಕೆ.ಪಿ.

ಹವಾಮಾನ ಬದಲಾವಣೆಯಿಂದಾಗಿ ಕೋಕೋ ಬೀಜದ ದರ ಗಣನೀಯವಾಗಿ ಹೆಚ್ಚಳವಾಗುತ್ತಿದೆ. ಇದರಿಂದ ಚಾಕೋಲೇಟ್ ಉದ್ಯಮದ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತಿದೆ. 2024ರ ಏಪ್ರಿಲ್ ತಿಂಗಳ ಅನ್ವಯ ಕೋಕೋ ಬೀಜದ ದರ ಪ್ರತಿ ಟನ್‌ಗೆ 12,000 ಅಮೆರಿಕದ ಡಾಲರ್ ಇತ್ತು, 2023ರ ದರಗಳಿಗಿಂತ ನಾಲ್ಕು ಪಟ್ಟು ದರ ಹೆಚ್ಚಳಗೊಂಡಿದೆ. 2023-24ರ ಅವಧಿಯಲ್ಲಿ 3,74,000 ಟನ್ ಕೋಕೋ ಬೀಜ ಉತ್ಪಾದನೆ ಇಳಿಮುಖವಾಗಿರುವುದರ ಬಗ್ಗೆ ಅಂತರರಾಷ್ಟ್ರೀಯ ಕೋಕೋ ಸಂಸ್ಥೆ ವರದಿ ಬಿಡುಗಡೆ ಮಾಡಿದೆ.

ಕಾರಣಗಳು

- ಜಾಗತಿಕ ಮಟ್ಟದ ಕೋಕೋ ಬೀಜದ ಉತ್ಪಾದನೆಯಲ್ಲಿ ಪಶ್ಚಿಮ ಆಫ್ರಿಕಾದ ರಾಷ್ಟ್ರಗಳಾದ ಐವರಿ ಕೋಸ್ಟ್ ಮತ್ತು ಘಾನಾ ದೇಶಗಳು ಶೇ 60ರಷ್ಟು ಉತ್ಪಾದನೆ ಮಾಡುತ್ತಿವೆ. ಆದರೆ, ಹವಾಮಾನ ಬದಲಾವಣೆ ಮತ್ತು 'ಎಲ್ ನಿನೊ' ಪರಿಣಾಮದಿಂದಾಗಿ ಈ ಪ್ರದೇಶಗಳಲ್ಲಿ ಕೋಕೋ ಬೀಜದ ಇಳುವರಿ ಕಡಿಮೆಯಾಗಿದೆ.
- ಪೆಸಿಫಿಕ್ ಸಮುದ್ರದ ಬಳಿ ತಾಪಮಾನ ಹೆಚ್ಚಾಗುವುದನ್ನು 'ಎಲ್ ನಿನೊ' ಎನ್ನಲಾಗುತ್ತದೆ. ಪಶ್ಚಿಮ ಆಫ್ರಿಕಾದ ಕೆಲ ಭಾಗಗಳಲ್ಲಿ ಸ್ವಾಭಾವಿಕ ಪ್ರಮಾಣಕ್ಕಿಂತ ಮಳೆ ಹೆಚ್ಚಾಗಿದೆ. ಇದರಿಂದ ರೋಗ ರುಜಿನಗಳು ಹೆಚ್ಚಾಗಿದ್ದು, ಉತ್ಪಾದನೆಯ ಸಾಮರ್ಥ್ಯ ಕಡಿಮೆಯಾಗಿದೆ.
- ಕೋಕೋ ಬೀಜದ ಉತ್ಪಾದನೆಯಲ್ಲಿ ತೊಡಗಿಕೊಂಡಿರುವ ರೈತರಿಗೆ ಸೂಕ್ತ ವೇತನ ಸಿಗದ ಕಾರಣ ಮತ್ತು ಬಹುತೇಕರು ಇದರ ಕೃಷಿಯಲ್ಲಿ ನಿರಾಸಕ್ತಿ ತೋರುವ ಕಾರಣಗಳಿಂದಾಗಿಯೂ ಇಳುವರಿ ಕಡಿಮೆಯಾಗಿದೆ.
- ಚಾಕೋಲೆಟ್ ಉದ್ಯಮದಲ್ಲಿ ತೊಡಗಿಕೊಂಡಿರುವ ಬಹುರಾಷ್ಟ್ರೀಯ ಕಂಪನಿಗಳು ಹೆಚ್ಚಿನ ಪ್ರಮಾಣದ ಲಾಭ ಗಳಿಸುತ್ತಿವೆ. ಆದರೆ, ರೈತರ ಆದಾಯದ ಬಗ್ಗೆ ಕ್ರಮ ಕೈಗೊಳ್ಳದೇ ಇರುವುದು ನಿರಾಸಕ್ತಿ ಕಾರಣವಾಗಿದೆ.



ಭಾರತದಲ್ಲಿ ಕೋಕೋ ಉತ್ಪಾದನೆ

- ಭಾರತದಲ್ಲಿ ತೆಂಗು ಮತ್ತು ಅಡಿಕೆ ತೋಟಗಳಲ್ಲಿ ಕೋಕೋ ಸಸಿಗಳನ್ನು ಹೆಚ್ಚಾಗಿ ನೆಡಲಾಗಿದ್ದು, ಪ್ರಮುಖವಾಗಿ ಕರ್ನಾಟಕ, ಕೇರಳ ಮತ್ತು ತಮಿಳುನಾಡಿ, ಆಂಧ್ರಪ್ರದೇಶದಲ್ಲಿ ಬೆಳೆಯಲಾಗುತ್ತದೆ.
- ರಾಷ್ಟ್ರೀಯ ತೋಟಗಾರಿಕೆ ಅಭಿಯಾನದ ಅಡಿಯಲ್ಲಿ ಆಂಧ್ರಪ್ರದೇಶದ ಕೋಕೋ ಬೆಳೆಗಾರರಿಗೆ ಕೇಂದ್ರ ಸರ್ಕಾರದಿಂದ ಮೊದಲ ಮೂರು ವರ್ಷಗಳವರೆಗೂ ಪ್ರತಿ ಹೆಕ್ಟೇರ್‌ಗೆ 20,000 ಸಹಾಯಧನವನ್ನು ಕಲ್ಪಿಸಲಾಗುತ್ತಿದೆ.
- ಭಾರತದಲ್ಲಿ ಕೋಕೋ ಬೇಸಾಯವನ್ನು ಹೆಚ್ಚಿಸುವ ಉದ್ದೇಶದಿಂದ ಸೆಂಟ್ರಲ್ ಪ್ಲಾಂಟೇಷನ್ ಕ್ರಾಪ್ಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸಂಸ್ಥೆಯು ಸಂಶೋಧನಾ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದು ಮುಂದಿನ ದಿನಗಳಲ್ಲಿ ಭಾರತದಲ್ಲಿಯೂ ಕೋಕೋ ಬೀಜಗಳ ಉತ್ಪಾದನೆ ಹೆಚ್ಚಾಗಬಹುದು.

ಅಂತರರಾಷ್ಟ್ರೀಯ ಕೋಕೋ ಸಂಸ್ಥೆ

- ಈ ಸಂಸ್ಥೆಯನ್ನು 1973ರಲ್ಲಿ ವಿಶ್ವಸಂಸ್ಥೆಯ ಅಡಿಯಲ್ಲಿ ಸ್ಥಾಪಿಸಲಾಯಿತು.
- ಮುಖ್ಯ ಕಚೇರಿ - ಐವರಿ ಕೋಸ್ಟ್

ಕೋಕೋ ಬೇಸಾಯದ ರೀತಿ

- ಸಮುದ್ರಮಟ್ಟದಿಂದ 300 ಮೀಟರ್ ಎತ್ತರದ ಪ್ರದೇಶಗಳಲ್ಲಿ ಕೋಕೋ ಬೀಜಗಳನ್ನು ಉತ್ಪಾದಿಸಲಾಗುತ್ತದೆ. ಪ್ರತಿ ತಿಂಗಳು 90 ರಿಂದ 100 ಮಿಲಿ ಮೀಟರ್ ಮಳೆಯ ಅವಶ್ಯಕತೆ ಇರುತ್ತದೆ. ಪ್ರತಿವರ್ಷ ಸರಾಸರಿ 1,500 ರಿಂದ 2,000 ಮಿಲಿ ಮೀಟರ್ ಮಳೆಯ ಅವಶ್ಯಕತೆ ಇರುತ್ತದೆ.
- ಕೋಕೋ ಬೀಜಗಳನ್ನು ಉತ್ಪಾದಿಸಲು 15 ರಿಂದ 39 ಡಿಗ್ರಿ ಸೆಲ್ಸಿಯಸ್ ತಾಪಮಾನದ ಅವಶ್ಯಕತೆ ಇರುತ್ತದೆ. 25 ಡಿಗ್ರಿ ಸೆಲ್ಸಿಯಸ್ ತಾಪಮಾನವಿದ್ದರೆ ಅದನ್ನು ಮಾದರಿ ತಾಪಮಾನ ಎಂದು ಪರಿಗಣಿಸಬಹುದು.
- ಸ್ವಾಭಾವಿಕವಾಗಿ ಜೇಡಿ ಮಣ್ಣು ಮತ್ತು ಮರಳು ಮಿಶ್ರಿತ ಮಣ್ಣಿನ ಪ್ರದೇಶಗಳಲ್ಲಿ ಕೋಕೋ ಬೀಜಗಳನ್ನು ಹೆಚ್ಚಾಗಿ ಉತ್ಪಾದಿಸಬಹುದು.
- ಕೋಕೋ ಮರಗಳು ನೆರಳಿನಲ್ಲಿ ಬೆಳೆಯುವ ಮರಗಳಾಗಿದ್ದು, ಎತ್ತರದ ಮರಗಳ ಅಡಿಯಲ್ಲಿ ಇವುಗಳನ್ನು ನೆಡಲಾಗುತ್ತದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಉಗಾನೋ ತತ್ವಗಳು ಕೆಳಗಿನ ಯಾವ ವಿಚಾರಕ್ಕೆ ಸಂಬಂಧಿಸಿದಂತೆ ಸ್ಪಷ್ಟ ವಿವರಣೆಯನ್ನು ನೀಡುತ್ತದೆ?
ಎ. ಹವಾಮಾನ ಬದಲಾವಣೆಯನ್ನು ತಡೆಗಟ್ಟಲು ತೆಗೆದುಕೊಂಡಿರುವ ನಿರ್ಧಾರ.
ಬಿ. ಬಂಡವಾಳ ಹಿಂತೆಗೆತ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲು ಅಂತರರಾಷ್ಟ್ರೀಯ ಮಟ್ಟದಲ್ಲಿ ರಚನೆಯಾಗಿರುವ ಕಾರ್ಯಸೂಚಿ.
ಸಿ. ಉಕ್ರೇನ್ ರಾಷ್ಟ್ರದ ಪುನರ್ ನಿರ್ಮಾಣಕ್ಕಾಗಿ ಸಿದ್ಧವಾಗಿರುವ ಕಾರ್ಯಸೂಚಿ.
ಡಿ. ಯುದ್ಧದ ಕೈದಿಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಸಿದ್ಧವಾಗಿರುವ ಮಾರ್ಗಸೂಚಿಗಳು.
ಉತ್ತರ : ಸಿ

2. ಇತ್ತೀಚೆಗೆ ವೈಕೊಮ್ ಸತ್ಯಾಗ್ರಹದ ಶತಮಾನೋತ್ಸವವನ್ನು ರಾಷ್ಟ್ರದ ಯಾವ ಭಾಗದಲ್ಲಿ ಆಯೋಜಿಸಲಾಗಿತ್ತು?
ಎ. ಕೊಟ್ಟಾಯಂ, ಕೇರಳ.
ಬಿ. ಕೋಲ್ಕತ್ತ, ಪಶ್ಚಿಮ ಬಂಗಾಳ.
ಸಿ. ಚೆನ್ನೈ, ತಮಿಳುನಾಡು.
ಡಿ. ವಿಶಾಖಪಟ್ಟಣಂ, ಆಂಧ್ರಪ್ರದೇಶ.
ಉತ್ತರ : ಎ

3. ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯು ತನ್ನ ಪ್ರಾದೇಶಿಕ ಕಚೇರಿಗಳನ್ನು ಯಾವ ಸ್ಥಳದಲ್ಲಿ ಹೊಂದಿದೆ?
1. ಜಿನಿವಾ.
2. ನ್ಯೂಯಾರ್ಕ್.
3. ಟೊರೆಂಟೊ.
4. ಟೋಕಿಯೋ.
5. ರೋಮ್.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2, 3 ಮತ್ತು 4 ಬಿ. 1, 2 ಮತ್ತು 4
ಸಿ. 2, 3 ಮತ್ತು 4 ಡಿ. 2 ಮತ್ತು 5
ಉತ್ತರ : ಎ

4. ಹೆಲಿಯೊ ಪೊಲೀಸ್ ಸ್ಮಾರಕಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಈ ಸ್ಮಾರಕವನ್ನು ಈಜಿಪ್ಟ್‌ನ ಕೈರೋದಲ್ಲಿ ಸ್ಥಾಪಿಸಲಾಗಿದೆ.
2. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಹೋರಾಡಿದ ಭಾರತೀಯ ಸೈನಿಕರ ಸ್ಮರಣಾರ್ಥವಾಗಿ ಈ ಸ್ಮಾರಕವನ್ನು ನಿರ್ಮಿಸಲಾಗಿದೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.
ಉತ್ತರ : ಎ

5. ಖನಿಜ ಭದ್ರತಾ ಪಾಲುಗಾರಿಕೆಯಲ್ಲಿ ಕೆಳಗಿನ ಯಾವ ರಾಷ್ಟ್ರಗಳು ಸದಸ್ಯತ್ವವನ್ನು ಪಡೆದಿವೆ?
1. ಜರ್ಮನಿ.
2. ಐರೋಪ್ಯ ಒಕ್ಕೂಟ.
3. ಅಮೇರಿಕ ಸಂಯುಕ್ತ ಸಂಸ್ಥಾನ.
4. ಫಿನ್ಲೆಂಡ್
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 1, 2 ಮತ್ತು 3
ಸಿ. 2, 3 ಮತ್ತು 4 ಡಿ. 3 ಮತ್ತು.4
ಉತ್ತರ : ಬಿ

6. ಇತ್ತೀಚೆಗೆ ಕೆಳಗಿನ ಯಾವ ಸಚಿವಾಲಯ ರಾಷ್ಟ್ರೀಯ ಶಕ್ತಿ ಸಂಪನ್ಮೂಲಗಳ ದತ್ತಾಂಶವನ್ನು ಬಿಡುಗಡೆ ಮಾಡಿದೆ?
ಎ. ಕೇಂದ್ರ ಶಕ್ತಿ ಸಚಿವಾಲಯ.
ಬಿ. ಕೇಂದ್ರ ಜಲವಿದ್ಯುತ್ ಇಲಾಖೆ.
ಸಿ. ಕೇಂದ್ರ ಸೌರವಿದ್ಯುತ್ ಸಚಿವಾಲಯ.
ಡಿ. ಕೇಂದ್ರ ಶಾಖೋತ್ಪನ್ನ ವಿದ್ಯುತ್ ಇಲಾಖೆ.
ಉತ್ತರ : ಎ

7. ಇ-ಹರಾಜು ಪ್ರಕ್ರಿಯೆಗೆ ಸಂಬಂಧಿಸಿದಂತೆ ಭಾರತೀಯ ಆಹಾರ ನಿಗಮ ಉಲ್ಲೇಖಿಸಿರುವ ನಿಬಂಧನೆಗಳನ್ನು ಗುರುತಿಸಿ?
1. ಈ ಹರಾಜು ಪ್ರಕ್ರಿಯೆಯಲ್ಲಿ 100 ಮೆಟ್ರಿಕ್ ಟನ್ ಅಕ್ಕಿ ಮತ್ತು ಗೋಧಿಯನ್ನು ಕೊಂಡುಕೊಳ್ಳಲು ಅವಕಾಶವನ್ನು ಒಬ್ಬ ವ್ಯಾಪಾರಿಗೆ ನೀಡಲಾಗಿದೆ.
2. ಸಣ್ಣ ವ್ಯಾಪಾರಿಗಳಿಗೆ ಉಪಯುಕ್ತವಾಗಲು 10 ಮೆಟ್ರಿಕ್ ಟನ್ ಅಕ್ಕಿ ಮತ್ತು ಗೋಧಿಯನ್ನು ಕನಿಷ್ಠ ಪ್ರಮಾಣದಲ್ಲಿ ಕೊಂಡುಕೊಳ್ಳಬಹುದು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿದೆ.
ಉತ್ತರ : ಸಿ

8. ಜೋಹ ಅಕ್ಕಿ ಕೆಳಗಿನ ಯಾವ ಅಂಶಗಳಿಂದ ಹೆಚ್ಚು ಸಂಪದ್ಭರಿತವಾಗಿ ಇರುತ್ತದೆ?
1. ಆ್ಯಂಟಿಆಕ್ಸಿಡೆಂಟ್ ಗಳು.
2. ಫ್ಲವೊನೋಯ್ಡ್ ಗಳು.
3. ಫಿನೊಲೆಕ್ಸ್ ಗಳು.
4. ಮಧುಮೇಹ ಉಂಟಾಗದಂತೆ ಗ್ಲೂಕೋಸ್ ಅಂಶವನ್ನು ಕಡಿಮೆ ಮಾಡುವ ಅಂಶಗಳು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2, 3 ಮತ್ತು 4 ಬಿ. 2 ಮತ್ತು 4
ಸಿ. 1 ಮತ್ತು 2 ಡಿ. 1 ಮತ್ತು 3
ಉತ್ತರ : ಎ

9. ಇತ್ತೀಚೆಗೆ ಭಾರತೀಯ ನೌಕಾಪಡೆಯ ನೌಕಾ ವಾಹನವಾದ ಸುನೈನ ಕೆಳಗಿನ ಯಾವ ರಾಷ್ಟ್ರಗಳಿಗೆ ಭೇಟಿಯನ್ನು ನೀಡಿತ್ತು?
ಎ. ಜಾಂಬಿಯಾ.
ಬಿ. ನಮಿಬಿಯ.
ಸಿ. ದಕ್ಷಿಣ ಆಫ್ರಿಕಾ.
ಡಿ. ಕೀನ್ಯಾ.
ಉತ್ತರ : ಡಿ

10. ಇತ್ತೀಚೆಗೆ ಕೆಳಗಿನ ಯಾವ ಬ್ಯಾಂಕು ಬಂಡವಾಳ ವೆಚ್ಚಕ್ಕೆ ಸಂಬಂಧಿಸಿದ ವರದಿಯನ್ನು ಬಿಡುಗಡೆ ಮಾಡಿದೆ?
ಎ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ.
ಬಿ. ಭಾರತೀಯ ಸ್ಟೇಟ್ ಬ್ಯಾಂಕ್.
ಸಿ. ಬ್ಯಾಂಕ್ ಆಫ್ ಬರೋಡ.
ಡಿ. ಕೆನರಾ ಬ್ಯಾಂಕ್.
ಉತ್ತರ : ಸಿ

11 ಪಾತ್ ಮಿತ್ರೋ ಆಪ್ ಅನ್ನು ಕೆಳಗಿನ ಯಾವ ವಲಯದ ರೈತರಿಗೆ ಉಪಯುಕ್ತವಾಗಲೆಂದು ಬಿಡುಗಡೆ ಮಾಡಲಾಗಿದೆ?
ಎ. ಹತ್ತಿ ಬೆಳೆಗಾರರು.
ಬಿ. ಸೆಣಬು ಬೆಳೆಗಾರರು.
ಸಿ. ತೋಟಗಾರಿಕೆ ಬೆಳೆಗಾರರು.
ಡಿ. ರೇಷ್ಮೆ ಬೆಳೆಗಾರರು.
ಉತ್ತರ : ಬಿ

12.'ಅಮೃತ್ ಕಾರ್ಯಾಚರಣೆ'ಯನ್ನು ಕೆಳಗಿನ ಯಾವ ರಾಜ್ಯದಲ್ಲಿ ಕೈಗೆತ್ತಿಕೊಳ್ಳಲಾಗಿದೆ?
ಎ. ಮಧ್ಯ ಪ್ರದೇಶ.
ಬಿ. ಉತ್ತರ ಪ್ರದೇಶ.
ಸಿ. ಆಂಧ್ರಪ್ರದೇಶ.
ಡಿ. ಕೇರಳ.
ಉತ್ತರ : ಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH

Prose The Concert


11. Match the following:

	A	B	
	Who discouraged the girl		Ustab Allah Rakha
The person	Who made the request	was	Pandit Ravi Shankar
	Who gave the consent finally		the girl, Smita
	Who suggested the time of concert		the moustached man

Ans:
1. The person who discouraged the girl was the mustached man.
2. The person who made the request was the girl, Smita.
3. The person who gave the consent finally was Pandit Ravi Shankar.
4. The person who suggested the time of the concert was Ustad Allah Rakha.

Self Assessment

Task 1: Complete the crossword with the help of the following clues. Across and Down. Refer to the dictionary for any help.





Clues Across
1. To make a sound louder (7)
7. A short unit in music, or part of a pub (3)
8. A lot of musicians who play together (9)
11. A kind of dance popular in the 1950's (5) – (given in the crossword)
13 To call off. To give up something that was planned (6)
14. We'll begin the work ____________ Thursday (preposition) (2)
15. Top rock stars ________________ a lot of money (Verb) (4)
16. A collective word used to describe trumpets, trombones, etc (5)
17. A song sung by two people (4)
18. If you want to record a song, you should make ________________of a good studio. (3)

Clues Down
1. Preposition (2)
2. It is not stereo (4)
3. A long playing record (2) - (given in the crossword)
4. Music and painting are examples of this (3)
5. The maestro keeps looking at it, as he conducts the orchestra (6)
6. Another name for the word 'Instrument' (5)
7. The most famous pop group of all time (7) - (given in the crossword)
9. Musical entertainment to audience (7)
10. It might be a C.D., or else a 'vinyl'. It repeats the voice when desired. (6)
12. A flutist plays, but a vocalist .... (5)

Ans

1 A	2 M	P	3 L	I	F	Y	■	■	■
T	O	■	P	■	■	■	4 A	■	5
■	N	6 O	■	■	7 B	A	R	■	.
■	8 O	R	9 C	H	E	S	T	R	A
10 R	■	G	O	■	A	■	■	■	
E	■	A	N	■	11 T	W	I	12 S	T
13 C	A	N	C	E	L	■	■	I	
14 O	N	■	E	■	15 E	A	R	N	■
R	■	16 B	R	A	S	S	■	G	■
17 D	U	E	T	■	■	■	18 U	S	E

(Contd........)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - CHEMISTRY


Coordination Compound

23. Give the oxidation state, d orbital occupation and coordination number of the central metal ion in the following complexes:
(i) $K_3[Co(C_2O_4)_3]$ (ii) cis-$[CrCl_2(en)_2]Cl$
(iii) $(NH_4)_2[CoF_4]$ ***(iv) $[Mn(H_2O)_6]SO_4$***

Ans:
(iv) $[Mn(H_2O)_6]SO_4$
Central metal ion: Mn.
Coordination number = 6.
We know,
The oxidation state is : $x + 0 = 2$
$x = +2$
The d orbital occupation: $t_{2g}^3\ e_g^2$.


24. Write down the IUPAC name for each of the following complexes and indicate the oxidation state, electronic configuration and coordination number. Also, give the stereochemistry and magnetic moment of the complex:
(i) $K[Cr(H_2O)_2(C_2O_4)_2].3H_2O$
(ii) $[Co(NH_3)_5Cl]Cl_2$
(iii) $[CrCl_3(py)_3]$
(iv) $Cs[FeCl_4]$
(v) $K_4[Mn(CN)_6]$

Ans:
(i) IUPAC name = Potassium diaquadioxalatochromate (III) trihydrate.
Coordination number = 6
The oxidation state of chromium: $x + 0 + 2(-2) = -1$
$x = 3$
Electronic configuration: $3d^3 = t_{2g}^3$
Shape: Octahedral
Stereochemistry:



Magnetic moment, $\mu = n(n+2)$
[n = unpaired electrons]
$= 3(3+2)$
$= 15$
$\approx 4BM$


(ii) IUPAC name = Pentaamminechloridocobalt(III) chloride
Coordination number = 6
The oxidation state of Co: $x + 0 - 1 = +2$
$x = 3$
Electronic configuration: $3d^6 = t_{2g}^6$
Shape: Octahedral
Stereochemistry:



2 isomers

n = 0.
Thus, Magnetic moment = 0

(iii) IUPAC name = Trichloridotripyridinechromium (III)
Coordination number = 6
The oxidation state of Cr:
$x - 3 + 0 = 0$
$x = 3$
Electronic configuration: $3d^3 = t_{2g}^3$
Shape: Octahedral
Stereochemistry:



n = 3
Magnetic moment, $\mu = n(n+2)$
$= 3(3+2)$
$= 15$
$\approx 4BM$

(iv) IUPAC name = Caesiumtetrachloroferrate (III)
Coordination number = 4
The oxidation state of Fe: $x - 4 = -1$
$x = 3$
Electronic configuration: $d^6 = e_g^2\ t_{2g}^3$
Shape: Tetrahedral
Stereochemistry:- optically inactive
n = 5
Magnetic moment, $\mu = n(n+2)$
$= 5(5+2)$
$= 35$
≈ 6 BM

(v) IUPAC name = Potassium hexacyanomanganate(II)
Coordination number = 6
The oxidation state of Mn: $x - 6 = -4$
$x = +2$
Electronic configuration: $3d^5 = t_{2g}^5$
Shape: Octahedral
Stereochemistry: optically inactive n = 1
Magnetic moment, $\mu = n(n+2)$
$= 1(1+2)$
$= 3$
$= 1.732$ BM

(Contd......)

ಸ್ವರ್ಣಮಂದಿರ ಬಳಿ ಮಾಜಿ ಉಗ್ರನಿಂದ ಗುಂಡಿನ ದಾಳಿ, ಬಂಧನ

ಎಸ್‌ಎಡಿ ನಾಯಕ ಬಾದಲ್ ಹತ್ಯೆ ಯತ್ನ

ಅಮೃತಸರ (ಪಿಟಿಐ): ಧಾರ್ಮಿಕ ಶಿಕ್ಷೆಯಡಿ 'ಸೇವಾದಾರ'ರಾಗಿ ಕೆಲಸ ನಿರ್ವಹಿಸಲು ಸ್ವರ್ಣಮಂದಿರಕ್ಕೆ ಬಂದಿದ್ದ ಶಿರೋಮಣಿ ಅಕಾಲಿ ದಳದ (ಎಸ್‌ಎಡಿ) ನಾಯಕ, ಸುಖ್‌ಬಿರ್ ಸಿಂಗ್ ಬಾದಲ್ ಅವರ ಮೇಲೆ ಗುಂಡುಹಾರಿಸಿ ಹತ್ಯೆಗೆ ಯತ್ನಿಸಿದ ಘಟನೆ ಬುಧವಾರ ನಡೆದಿದೆ.

ಸ್ಥಳದಲ್ಲಿ ಸಾಮಾನ್ಯ ದಿರಿಸಿನಲ್ಲಿದ್ದ ಪೊಲೀಸರು ಹತ್ಯೆ ಯತ್ನವನ್ನು ವಿಫಲಗೊಳಿಸಿದ್ದು, ಹತ್ಯೆಗೆ ಯತ್ನಿಸಿದ ಮಾಜಿ ಖಾಲಿಸ್ತಾನಿ ಭಯೋತ್ಪಾದಕನನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತನನ್ನು 68 ವರ್ಷದ ನಾರಾಯಣ್ ಸಿಂಗ್ ಚೌರಾ ಎಂದು ಗುರುತಿಸಲಾಗಿದೆ. ಈತ ಮಂಗಳವಾರವೂ ಸ್ವರ್ಣಮಂದಿರ ಬಳಿ ಕಾಣಿಸಿಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳದಲ್ಲಿದ್ದ ಮಾಧ್ಯಮ ಪ್ರತಿನಿಧಿಗಳ ಕ್ಯಾಮೆರಾಗಳಲ್ಲಿ ಹತ್ಯೆ ಯತ್ನದ ದೃಶ್ಯಗಳು ಸೆರೆಯಾಗಿವೆ. ಪಂಜಾಬ್‌ನಲ್ಲಿ 2007ರಿಂದ 2017ರವರೆಗೆ ಎಸ್‌ಎಡಿ ಪಕ್ಷದ ಅಧಿಕಾರ ಅವಧಿಯಲ್ಲಿ ಆಗಿರುವ 'ತಪ್ಪುಗಳಿಗೆ' ಪ್ರಾಯಶ್ಚಿತ್ತವಾಗಿ ಬಾದಲ್ ಅವರು ಧಾರ್ಮಿಕ ಶಿಕ್ಷೆಗೆ



ಅಮೃತಸರದ ಸ್ವರ್ಣಮಂದಿರದ ಆವರಣದಲ್ಲಿ ಶಿರೋಮಣಿ ಅಕಾಲಿ ದಳದ (ಎಸ್‌ಎಡಿ) ನಾಯಕ ಸುಖ್‌ಬಿರ್ ಸಿಂಗ್ ಬಾದಲ್ ಅವರ ಮೇಲೆ ಗುಂಡುಹಾರಿಸಿ ಹತ್ಯೆಗೆ ಯತ್ನಿಸಿದ ವ್ಯಕ್ತಿಯನ್ನು ಹಿಡಿಯಲಾಯಿತು –ಪಿಟಿಐ ಚಿತ್ರ

ಗುರಿಯಾಗಿದ್ದಾರೆ.

ಬಾದಲ್ ಅವರ ಬಳಿಗೆ ನಿಧಾನ ಗತಿಯಲ್ಲಿ ಸಾಗುವ ದಾಳಿಕೋರ, ಜೇಬಿನಿಂದ ಗನ್ ತೆಗೆದು ಹತ್ಯೆಗೆ ಯತ್ನಿಸುವುದು ವಿಡಿಯೊದಲ್ಲಿ ದಾಖಲಾಗಿದೆ. ಸಮೀಪದಲ್ಲೇ ಇದ್ದ ಪೊಲೀಸರು ಜಾಗೃತರಾಗಿದ್ದು, ದಾಳಿಕೋರನ ಮೇಲೆ ಬಲಪ್ರಯೋಗ ಮಾಡಿದ್ದಾರೆ.

ಈ ಗೊಂದಲದಲ್ಲಿಯೇ ಸಿಡಿದಿರುವ ಗುಂಡು, ಸ್ವರ್ಣಮಂದಿರ ಪ್ರವೇಶ ದ್ವಾರದ ಗೋಡೆಗೆ ತಾಕಿದೆ. ಬಾದಲ್ ಅವರು ಅಪಾಯವಿಲ್ಲದೆ ಪಾರಾಗಿದ್ದಾರೆ. ಬಾದಲ್ ಅವರಿಗೆ ಝಡ್ ಪ್ಲಸ್ ದರ್ಜೆಯ ಭದ್ರತೆ ನೀಡಲಾಗಿದೆ. ಹತ್ಯೆ ಕೃತ್ಯದ ಹಿಂದೆಯೇ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ ಸದಸ್ಯರು ಸ್ಥಳಕ್ಕೆ ಧಾವಿಸಿದರು.

ನಾರಾಯಣ್ ಸಿಂಗ್ ಚೌರಾ ಡೇರಾ ಬಾಬಾ ನಾನಕ್ ನಿವಾಸಿಯಾಗಿದ್ದು, ಮಾಜಿ ಉಗ್ರನಾಗಿದ್ದಾನೆ. ಮಂಗಳವಾರವು ಆತ ಕಾಣಿಸಿಕೊಂಡಿದ್ದ. ಪೊಲೀಸರು ಆತನ ಮೇಲೆ ಕಣ್ಗಾವಲು ಇಟ್ಟಿದ್ದರು ಎಂದು ಹೆಚ್ಚುವರಿ ಉಪ ಪೊಲೀಸ್ ಆಯುಕ್ತ ಹರ್ಪಲ್ ಸಿಂಗ್ ತಿಳಿಸಿದರು.

ಈತನ ವಿರುದ್ಧ 20ಕ್ಕೂ ಹೆಚ್ಚು ಪ್ರಕರಣಗಳಿವೆ. ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯಡಿ (ಯುಎಪಿಎ) ಕೂಡ ಪ್ರಕರಣವಿದೆ. 2004ರಲ್ಲಿ ನಡೆದಿದ್ದ ಬುರೈಲ್ ಜೈಲ್ ಪ್ರಕರಣದಲ್ಲೂ ಭಾಗಿಯಾಗಿದ್ದ ಈತ ಉಗ್ರರಾದ ಜಗ್‌ತಾರ್ ಸಿಂಗ್, ಪರಂಜಿತ್ ಸಿಂಗ್ ಭೇವ್ರೊರಾ ಮತ್ತು ಇತರ ಇಬ್ಬರು ಜೈಲಿನಿಂದ ಪಾರಾಗಲು ನೆರವಾಗಿದ್ದ ಎಂದು ವಿಶೇಷ ಡಿಜಿಪಿ ಅರ್ಪಿತ್ ಶುಕ್ಲಾ ತಿಳಿಸಿದರು.

'ಚೌರಾನನ್ನು ಬಂಧಿಸಿ, ಎಫ್‌ಐಆರ್ ದಾಖಲಿಸಲಾಗಿದೆ. ದಾಳಿಗೆ ಬಳಸಿದ್ದ ಮಾರಕಾಸ್ತ್ರವನ್ನು ವಶಕ್ಕೆ ಪಡೆಯಲಾಗಿದೆ' ಎಂದು ಅಮೃತಸರ ಪೊಲೀಸ್ ಕಮಿಷನರ್ ಗುರುಪ್ರೀತ್ ಸಿಂಗ್ ಭುಲ್ಲರ್ ತಿಳಿಸಿದ್ದಾರೆ.

ಸ್ವರ್ಣಮಂದಿರಕ್ಕೆ ಚೌರಾ ಒಬ್ಬನೇ ಬಂದಿದ್ದ. ದಾಳಿಗೆ ಕಾರಣ ತಿಳಿದುಬಂದಿಲ್ಲ. ತನಿಖೆ ನಡೆದಿದೆ ಎಂದು ತಿಳಿಸಿದರು. 'ಸ್ವರ್ಣಮಂದಿರ ಬಳಿ ಅಗತ್ಯ ಪ್ರಮಾಣದ ಭದ್ರತೆ ಇತ್ತು. ಧರ್ಮ ಸೂಕ್ಷ್ಮತೆಯ ಕಾರಣದಿಂದಾಗಿ ಎಲ್ಲರನ್ನೂ ಶೋಧಿಸಲಾಗದು' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಗುಂಡಿನ ದಾಳಿ ಸುದ್ದಿ ತಿಳಿಯುತ್ತಿದ್ದಂತೆ ಸಂಸದೆಯೂ ಆಗಿರುವ ಬಾದಲ್ ಪತ್ನಿ ಹರ್‌ಸಿಮ್ರತ್ ಕೌರ್ ಅವರು ಸ್ಥಳಕ್ಕೆ ಧಾವಿಸಿದರು.

ಜೈಲಿನಲ್ಲಿದ್ದ ಶತಾಯುಷಿ ಬಿಡುಗಡೆ

ಕೋಲ್ಕತ್ತ/ಮಾಲ್ಡಾ(ಪಿಟಿಐ): ಭೂವ್ಯಾಜ್ಯದಲ್ಲಿ ತನ್ನ ಅಣ್ಣನನ್ನು ಕೊಲೆ ಮಾಡಿ, ಜೀವಾವಧಿ ಶಿಕ್ಷೆಗೆ ಗುರಿಯಾಗಿ 36 ವರ್ಷ ಜೈಲಿನಲ್ಲಿ ಕಳೆದಿರುವ 104 ವರ್ಷದ ಶತಾಯುಷಿ ರಸಿಕ್ತ್ ಮಂಡಲ್ ಅವರು ಪಶ್ಚಿಮ ಬಂಗಾಳದ ಮಾಲ್ಡಾ ಜೈಲಿನಿಂದ ಬಿಡುಗಡೆಯಾಗಿದ್ದಾರೆ.

ಮಾಲ್ಡಾ ಜಿಲ್ಲೆಯ ಮಾಣಿಕ್‌ಚಾಕ್‌ನ ನಿವಾಸಿಯಾದ ಮಂಡಲ್ ಮಂಗಳವಾರ ಮಾಲ್ಡಾ ಜೈಲಿನಿಂದ ಹೊರಬಂದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ನನ್ನ ಮನೆಯಂಗಳದಲ್ಲಿರುವ ಗಿಡಗಳ ಪೋಷಣೆ ಮಾಡುತ್ತೇನೆ ಮತ್ತು ಕುಟುಂಬ ಸದಸ್ಯರೊಂದಿಗೆ ಸಮಯ ಕಳೆಯಲು ಬಯಸುತ್ತೇನೆ' ಎಂದು ಹೇಳಿದರು.


'ಜೈಲಿನಲ್ಲಿದ್ದಾಗ ದೈಹಿಕ ಕಸರತ್ತು ಮಾಡುತ್ತಿದ್ದೆ. ಇದು ನನ್ನನ್ನು ಆರೋಗ್ಯವಾಗಿರಿಸಿತ್ತು. ವಯಸ್ಸಾದರೂ ನನ್ನನ್ನು ಗಟ್ಟಿಮುಟ್ಟಾಗಿರಿಸಿತ್ತು. ನಾನು ನಿರಪರಾಧಿ ಮತ್ತು ಸಂದರ್ಭಗಳ ಬಲಿಪಶು' ಎಂದು ಹೇಳಿಕೊಂಡರು.

ವಯಸ್ಸು ಎಷ್ಟು ಎಂದು ಕೇಳಿದಾಗ, ಮಂಡಲ್ 108 ವರ್ಷ ಎಂದರು. ಆದರೆ, ಜತೆಗಿದ್ದ ಅವರ ಮಗ ಪ್ರಕಾಶ್ ಮಂಡಲ್, 104 ವರ್ಷವೆಂದು ಜೈಲು ಅಧಿಕಾರಿಗಳು ನೀಡಿರುವ ದಾಖಲೆಗಳನ್ನು ತೋರಿಸಿದರು. ತಮ್ಮ ತಂದೆಯನ್ನು ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಬಿಡುಗಡೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಪತಿ ಬಂಧಮುಕ್ತವಾಗಿರುವ ಕುರಿತು ಪ್ರತಿಕ್ರಿಯಿಸಿದ ಪತ್ನಿ ಮೀನಾ ಮಂಡಲ್ 'ನನಗೆ ತುಂಬಾ ಸಂತೋಷವಾಗಿದೆ' ಎಂದರು.

1988ರಲ್ಲಿ ಭೂವಿವಾದದ ಪ್ರಕರಣದಲ್ಲಿ ತನ್ನ ಸಹೋದರನನ್ನು ಕೊಂದ ಆರೋಪದ ಮೇಲೆ ರಸಿಕ್ತ್ ಮಂಡಲ್‌ನನ್ನು 1988ರಲ್ಲಿ ಬಂಧಿಸಲಾಗಿತ್ತು. 1992ರಲ್ಲಿ ಮಾಲ್ಡಾದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಮಂಡಲ್‌ಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಆಗ ಮಂಡಲ್‌ಗೆ 72 ವರ್ಷ ವಯಸ್ಸಾಗಿತ್ತು. ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಕೆಳ ನ್ಯಾಯಾಲಯದ ತೀರ್ಪನ್ನು ಹೈಕೋರ್ಟ್ ಎತ್ತಿಹಿಡಿದಿತ್ತು.

ವಿಚಾರಣೆ ನಡೆಯುವಾಗ ಒಂದು ವರ್ಷ ಜಾಮೀನು ಮೇಲೆ ಮಂಡಲ್ ಹೊರಗಿದ್ದರು. 2020ರಲ್ಲಿ ಒಂದು ಬಾರಿ ಅವರಿಗೆ ಪೆರೋಲ್ ಸಿಕ್ಕಿತ್ತು. ಪೆರೋಲ್ ಮುಗಿದ ನಂತರ 2021ರಲ್ಲಿ ಮಂಡಲ್ ಮತ್ತೆ ಜೈಲಿಗೆ ಹೋಗಿದ್ದರು. ಬಿಡುಗಡೆ ಕೋರಿ ಹಲವು ಸಲ ಸಲ್ಲಿಸಿದ್ದ ಮನವಿಗಳನ್ನು ಕಲ್ಕತ್ತ ಹೈಕೋರ್ಟ್ ತಿರಸ್ಕರಿಸಿತ್ತು. ಸುಪ್ರೀಂ ಕೋರ್ಟ್ ಕಳೆದ ತಿಂಗಳು ಆದೇಶ ನೀಡುವವರೆಗೂ ಮಂಡಲ್ ಜೈಲಿನಲ್ಲೇ ಇದ್ದರು.



❦ ಸುಭಾಷಿತ ❦

ಸಣ್ಣ ಗುರಿಯನ್ನು ಇಟ್ಟುಕೊಳ್ಳಬೇಡಿ, ದೊಡ್ಡ ದೊಡ್ಡ ಗುರಿಗಳನ್ನು ಇಟ್ಟುಕೊಳ್ಳಿ.

–ಎ.ಪಿ.ಜೆ. ಅಬ್ದುಲ್ ಕಲಾಂ

ಸಾಮಾಜಿಕ ಜಾಲತಾಣ ಬಳಕೆ ನಿಷೇಧ ಆಸ್ಟ್ರೇಲಿಯಾ ಇರಿಸಿದ ಭಿನ್ನ ನಡೆ

ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸುವುದರ ಮೇಲೆ ನಿರ್ಬಂಧಗಳು, ಮಿತಿಗಳು ಇರಬೇಕು ಎಂಬ ವಿಚಾರವಾಗಿ ವಿಶ್ವದಾದ್ಯಂತ ಪರ-ವಿರೋಧ ಚರ್ಚೆಗಳು ಬಹಳ ಜೋರಾಗಿ ನಡೆದಿವೆ. ಈಗ ಆಸ್ಟ್ರೇಲಿಯಾ, 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡುವಂತಿಲ್ಲ ಎಂದು ಕಾನೂನು ರೂಪಿಸಿದೆ. ಜಗತ್ತಿನಲ್ಲಿ ಈ ಬಗೆಯ ಕಾನೂನು ರೂಪಿಸಿದ ಮೊದಲ ದೇಶ ಆಸ್ಟ್ರೇಲಿಯಾ. ಸಾಮಾಜಿಕ ಜಾಲತಾಣಗಳ ಬಳಕೆಯಿಂದ ತೊಂದರೆಗೆ ಒಳಗಾಗಬಹುದಾದ ವಯೋಮಾನದವರು ಅಂತಹ ಜಾಲತಾಣಗಳನ್ನು ಬಳಸುವುದರ ಮೇಲೆ ನಿಯಂತ್ರಣಗಳನ್ನು ಹೇರುವ ಹಾಗೂ ಅವರ ಖಾಸಗಿತನವನ್ನು ರಕ್ಷಿಸುವ ಉದ್ದೇಶದ ಕಾನೂನುಗಳು ಅಮೆರಿಕ ಹಾಗೂ ಯುರೋಪಿನಲ್ಲಿ ಜಾರಿಯಲ್ಲಿವೆ. ಆದರೆ, ಸಮಗ್ರವಾದ ಕಾನೂನೊಂದನ್ನು ರೂಪಿಸಿರುವುದು ಇದೇ ಮೊದಲು. ಮಕ್ಕಳ ಸುರಕ್ಷತೆಯನ್ನು ಖಾತರಿಪಡಿಸಲು ಸಾಮಾಜಿಕ ಹೊಣೆಗಾರಿಕೆಯನ್ನು ನಿಗದಿಪಡಿಸುವ ಉದ್ದೇಶವು ಈ ಕಾನೂನಿಗೆ ಇದೆ ಎಂದು ಆಸ್ಟ್ರೇಲಿಯಾ ಸರ್ಕಾರ ಹೇಳಿದೆ. 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟಿಕ್‌ಟಾಕ್, ಸ್ನ್ಯಾಪ್‌ಚಾಟ್‌ನಂತಹ ವೇದಿಕೆಗಳನ್ನು ಬಳಕೆ ಮಾಡುವುದನ್ನು ತಡೆಯುವ ಉದ್ದೇಶವನ್ನು ಕಾನೂನು ಹೊಂದಿದೆ. ಆದರೆ, ಶೈಕ್ಷಣಿಕ ಮಾಹಿತಿಯನ್ನು ಹೊಂದಿರುವ ಯೂಟ್ಯೂಬ್‌ನಂತಹ ವೇದಿಕೆಗಳನ್ನು ಬಳಸಲು ಅನುವು ಮಾಡಿಕೊಡುತ್ತದೆ. ಅಲ್ಲಿ ಇನ್ನು ಮುಂದೆ ಸಾಮಾಜಿಕ ಜಾಲತಾಣಗಳು ಬಳಕೆದಾರರ ವಯಸ್ಸನ್ನು ಪರಿಶೀಲಿಸುವ ಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಲೋಪಗಳು ಕಂಡುಬಂದರೆ ಸಾಮಾಜಿಕ ಜಾಲತಾಣ ಕಂಪನಿಗಳು ಭಾರಿ ದಂಡ ತೆರಬೇಕಾಗುತ್ತದೆ.



ಈ ಕಾನೂನು ಹಲವು ಕಾರಣಗಳಿಂದಾಗಿ ವಿವಾದಾತ್ಮಕವಾಗಿ ಪರಿಣಮಿಸಿದೆ. ವೈಯಕ್ತಿಕ ದತ್ತಾಂಶಗಳನ್ನು ಆಧರಿಸಿ ಬಳಕೆದಾರರ ವಯಸ್ಸನ್ನು ತಾಳೆ ಮಾಡಲಾಗುತ್ತದೆ. ಇದರಿಂದಾಗಿ ಖಾಸಗಿತನಕ್ಕೆ ಸಂಬಂಧಿಸಿದ ಕಾನೂನುಗಳ ಉಲ್ಲಂಘನೆ ಆಗಬಹುದು ಎಂಬ ಆತಂಕ ವ್ಯಕ್ತವಾಗಿದೆ. ಸಾಮಾಜಿಕ ಜಾಲತಾಣಗಳು ಯುವ ಮನಸ್ಸುಗಳ ಮೇಲೆ ಉಂಟುಮಾಡುವ ಪರಿಣಾಮಗಳ ಬಗ್ಗೆ ವಿಭಿನ್ನ ಅನಿಸಿಕೆಗಳಿವೆ. ಸಾಮಾಜಿಕ ಜಾಲತಾಣಗಳನ್ನು ಅತಿಯಾಗಿ ಬಳಕೆ ಮಾಡುವುದರಿಂದ ಮಕ್ಕಳು ಹಾಗೂ ಹದಿಹರೆಯದವರ ಸಹಜ ಬೆಳವಣಿಗೆಗೆ ಅಡ್ಡಿ ಉಂಟಾಗಬಹುದು; ಆತಂಕ, ಖಿನ್ನತೆ, ಕೀಳರಿಮೆ, ನಿದ್ರಾಹೀನತೆಯಂತಹ ಸಮಸ್ಯೆಗಳನ್ನು ಅದು ಸೃಷ್ಟಿಸಬಹುದು ಎಂದು ಹಲವು ತಜ್ಞರು ಅಭಿಪ್ರಾಯಪಡುತ್ತಾರೆ. 'ಸಾಮಾಜಿಕ ಜಾಲತಾಣಗಳು ಸರೀಕರೊಂದಿಗೆ ಒತ್ತಡ ಸೃಷ್ಟಿಸುತ್ತವೆ, ಆತಂಕ ಉಂಟುಮಾಡುತ್ತವೆ, ವಂಚನೆ ಎಸಗುವವರಿಗೆ ಅವಕಾಶಗಳನ್ನು ಕಲ್ಪಿಸುತ್ತವೆ.


ಸಾಮಾಜಿಕ ಜಾಲತಾಣಗಳನ್ನು ಜವಾಬ್ದಾರಿಯುತವಾಗಿ ಬಳಕೆ ಮಾಡುವುದರ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವ ಕೆಲಸದಲ್ಲಿ ಶಾಲೆಗಳು ಹಾಗೂ ಪಾಲಕರು ಮಹತ್ವದ ಪಾತ್ರ ವಹಿಸಬೇಕು

ಅಲ್ಲದೆ, ಆನ್‌ಲೈನ್ ಮೂಲಕ ಮಕ್ಕಳನ್ನು ಲೈಂಗಿಕ ಕ್ರಿಯೆಗೆ ಬಳಸಿಕೊಳ್ಳುವವರಿಗೆ ವೇದಿಕೆಗಳೂ ಆಗಿವೆ' ಎಂದು ಆಸ್ಟ್ರೇಲಿಯಾದ ಪ್ರಧಾನಿ ಆಂಥನಿ ಆಲ್ಬನೀಸ್ ಅಲ್ಲಿನ ಸಂಸತ್ತಿನಲ್ಲಿ ಹೇಳಿದ್ದಾರೆ. ಸಾಮಾಜಿಕ ಜಾಲತಾಣಗಳ ವೇದಿಕೆಗಳಲ್ಲಿ ಹೆಚ್ಚು ಹೊತ್ತು ಕಳೆಯುವ ಮಕ್ಕಳು ತಮಗೆ ಹಾನಿ ಮಾಡಿಕೊಂಡಿರುವ ನಿದರ್ಶನಗಳು ಇವೆ. ಆದರೆ, ಸಾಮಾಜಿಕ ಜಾಲತಾಣಗಳ ಕುರಿತಾದ ನಕಾರಾತ್ಮಕವಾದ ಚಿತ್ರವು ತೀರಾ ಅತಿಯಾದ ಪ್ರಮಾಣದಲ್ಲಿದೆ, ವಾಸ್ತವದಲ್ಲಿ ಈ ವೇದಿಕೆಗಳು ಮಕ್ಕಳಿಗೆ ಅನುಕೂಲಗಳನ್ನು ಕಲ್ಪಿಸಿ ಕೊಡುತ್ತವೆ ಎಂಬ ಅಭಿಪ್ರಾಯವೂ ಇದೆ. ಸಾಮಾಜಿಕ ಜಾಲತಾಣಗಳ ಬಳಕೆಯ ಮೇಲೆ ನಿಯಂತ್ರಣ ವಿಧಿಸುವುದನ್ನು ಪಾಲಕರು ಮತ್ತು ವಯಸ್ಕರು ಬೆಂಬಲಿಸುತ್ತಾರೆ ಎಂಬುದನ್ನು ಸಮೀಕ್ಷೆಗಳು ಹೇಳುತ್ತವೆ.

ಈ ಕಾನೂನಿನ ಅನುಷ್ಠಾನವು ಅಸಾಧ್ಯವೇನೂ ಅಲ್ಲ, ಆದರೆ ಬಹಳ ಕಷ್ಟದ್ದಾಗಲಿದೆ. ನಿಷೇಧ ಹಾಗೂ ನಿರ್ಬಂಧಗಳ ಪರಿಣಾಮವು ಸಾಮಾನ್ಯವಾಗಿ ಉದ್ದೇಶವನ್ನು ಈಡೇರಿಸುವುದಿಲ್ಲ. ಉದ್ದೇಶಕ್ಕೆ ವಿರುದ್ಧವಾದ ಪರಿಣಾಮಗಳೇ ಆಗುವ ಸಾಧ್ಯತೆ ಇದೆ. ಮಕ್ಕಳು ವಯಸ್ಕರಂತೆ ಬಿಂಬಿಸಿಕೊಂಡು ಖಾತೆಗಳನ್ನು ತೆರೆಯುವ ಸಾಧ್ಯತೆ ಇರುತ್ತದೆ. ಈ ಕಾನೂನು ಆಸ್ಟ್ರೇಲಿಯಾದಲ್ಲಿ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರುತ್ತದೆ ಎಂಬುದನ್ನು ಇತರ ದೇಶಗಳು ಅವಲೋಕಿಸಲಿವೆ. ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಹದಿಹರೆಯದವರ ಅತಿದೊಡ್ಡ ಸಮುದಾಯ ಭಾರತದಲ್ಲಿದೆ. ಭಾರತದಲ್ಲಿ ಕೂಡ ಸಾಮಾಜಿಕ ಜಾಲತಾಣಗಳ ಬಳಕೆಗೆ ಕಾನೂನಿನ ಮೂಲಕ ನಿಯಂತ್ರಣ ವಿಧಿಸಬೇಕು ಎಂಬ ಆಗ್ರಹ ಜೋರಾಗಿಯೇ ಇದೆ. ಆದರೆ, ಕಾನೂನಿನ ಮೂಲಕ ನಿಯಂತ್ರಣ ತರುವಲ್ಲಿ ಒಂದು ಸಮಸ್ಯೆ ಇದೆ. ಸಂಪೂರ್ಣ ನಿಷೇಧ ಹಾಗೂ ಬಳಕೆಗೆ ಮುಕ್ತ ಸ್ವಾತಂತ್ರ್ಯದ ನಡುವೆ ಸಮತೋಲನವೊಂದನ್ನು ಕಂಡುಕೊಳ್ಳುವುದು ಬಹಳ ಕಷ್ಟದ ಕೆಲಸ. ಸಾಮಾಜಿಕ ಜಾಲತಾಣಗಳನ್ನು ಜವಾಬ್ದಾರಿಯುತವಾಗಿ ಬಳಕೆ ಮಾಡುವುದರ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವ ಕೆಲಸದಲ್ಲಿ ಶಾಲೆಗಳು ಹಾಗೂ ಪಾಲಕರು ಮಹತ್ವದ ಪಾತ್ರ ವಹಿಸಬೇಕು. ಈಗ ಆಸ್ಟ್ರೇಲಿಯಾದ ಅನುಭವದಿಂದ ಒಂದಿಷ್ಟು ಪಾಠಗಳನ್ನು ಕಲಿಯಲು ಇತರ ದೇಶಗಳಿಗೆ ಅವಕಾಶ ಇದೆ.

ದಿನದ ಟ್ವೀಟ್

ಅಮೂಲ್ಯ ಸಮಯ ವ್ಯರ್ಥವಾಗದಿರಲಿ



ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಸಮಾಜವಿಜ್ಞಾನದ ಶಿಸ್ತಿನ ಶಿಕ್ಷಕರಂತೆ ಕ್ರಮ ಕೈಗೊಂಡಿದ್ದಾರೆ. ಸಂಸತ್ತಿನಲ್ಲಿ ವ್ಯರ್ಥವಾದ ಕಲಾಪದ ಸಮಯವನ್ನು ಸರಿಹೊಂದಿಸಲು ಬುಧವಾರ ಊಟದ ವಿರಾಮಕ್ಕೆ ಅವಕಾಶ ನೀಡಲಿಲ್ಲ. ಈ ಬಾರಿಯ ಚಳಿಗಾಲದ ಅಧಿವೇಶನದಲ್ಲಿ ವ್ಯರ್ಥವಾದ ಕಲಾಪದ ಅವಧಿಯನ್ನು ಸರಿದೂಗಿಸಲು ಇದು ಅತ್ಯಗತ್ಯವಾಗಿದ್ದ ಕ್ರಮ.

ನಬಿಲಾ ಜಮಾಲ್, ಪತ್ರಕರ್ತೆ

ಕಿಡಿನುಡಿ



ಬಸನಗೌಡ ಪಾಟೀಲ ಯತ್ನಾಳ ಅವರ ಹೇಳಿಕೆ ಮತ್ತು ನಡವಳಿಕೆ ಗಮನಿಸಿದರೆ ಅವರು ವೀರಶೈವ ಲಿಂಗಾಯತರೇ ಎಂಬ ಅನುಮಾನ ಮೂಡುತ್ತದೆ. ವೀರಶೈವ ಲಿಂಗಾಯತರಿಗೆ ಇರಬೇಕಾದ ಆಚಾರ, ಸಂಸ್ಕಾರ ಅವರಲ್ಲಿ ಕಾಣದಿರುವುದು ದುರದೃಷ್ಟಕರ.

ಶಾಮನೂರು ಶಿವಶಂಕರಪ್ಪ
ಅಧ್ಯಕ್ಷ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ

25 ವರ್ಷಗಳ ಹಿಂದೆ — ಭಾನುವಾರ, 5-12-1999

● **ರಾಜ್ಯದಲ್ಲಿ ದಳ (ಯು), ಸಮತಾ ಪಕ್ಷ, ಲೋಕಶಕ್ತಿ ವಿಲೀನ**

ಬೆಂಗಳೂರು, ಡಿ. 4– ರಾಜ್ಯ ಮಟ್ಟದಲ್ಲಿ ಜನತಾದಳ (ಯು), ಲೋಕಶಕ್ತಿ ಮತ್ತು ಸಮತಾ ಪಕ್ಷ ಪರಸ್ಪರ ವಿಲೀನಗೊಂಡಿವೆ ಎಂದು ರಾಮಕೃಷ್ಣ ಹೆಗಡೆ ಮತ್ತು ಜೆ.ಎಚ್. ಪಟೇಲ್ ಇಂದು ಜಂಟಿ ಪತ್ರಿಕಾಗೋಷ್ಠಿಯಲ್ಲಿ ವಿಧ್ಯುಕ್ತವಾಗಿ ಘೋಷಿಸಿದರು.

ಚುನಾವಣೆಗಿಂತ ಮುಂಚೆ ಜನತೆಗೆ ನೀಡಿದ್ದ ವಾಗ್ದಾನದಂತೆ ಎಲ್ಲರೂ ಸೇರಿ ಒಮ್ಮತದಿಂದ ಈ ನಿರ್ಧಾರ ಕೈಗೊಂಡಿದ್ದೇವೆ ಎಂದು ಅವರು ತಿಳಿಸಿದರು.

● **ಆಲಮಟ್ಟಿ: ತೆರೆಮರೆಯ ವ್ಯವಹಾರ**

ಬೆಂಗಳೂರು, ಡಿ. 4– ರಾಜ್ಯ ಸರ್ಕಾರದ ವಕೀಲರಾದ ಎಫ್.ಎಸ್.ನಾರಿಮನ್ ಅವರು ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 519 ಮೀಟರ್‌ಗೆ ಸೀಮಿತಗೊಳಿಸುವ ಇಂಗಿತ ವ್ಯಕ್ತಪಡಿಸಿರುವುದನ್ನು ಗಮನಿಸಿದರೆ, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ನಡುವೆ ತೆರೆಮರೆ ವ್ಯವಹಾರ ನಡೆದಿರುವ ಅನುಮಾನ ಬರುತ್ತಿದೆ ಎಂದು ನೀರಾವರಿ ತಜ್ಞ ಎಚ್.ಎನ್. ನಂಜೇಗೌಡ ಆರೋಪಿಸಿದ್ದಾರೆ.

50 ವರ್ಷಗಳ ಹಿಂದೆ — ಗುರುವಾರ, 5-12-1974

● **ಸಚಿವರಿಬ್ಬರ ನಡುವೆ ವಿರಸ ಬಹಿರಂಗ**

ಬೆಂಗಳೂರು, ಡಿ. 4– ಜಮೀನು ಹಂಚಿಕೆಯ ವಿಚಾರದಲ್ಲಿ ಸಚಿವರಿಬ್ಬರ ನಡುವಣ ವಿರಸ ದೊಡ್ಡಬಳ್ಳಾಪುರದಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಕಾರ್ಯಕರ್ತರ ಶಿಬಿರದಲ್ಲಿ ಬಹಿರಂಗವಾಯಿತೆಂದು ತಿಳಿದುಬಂದಿದೆ.

ಜಮೀನು ಹಂಚಿಕೆಯಲ್ಲಿ ಹರಿಜನರಿಗೆ ನ್ಯಾಯವಾಗಿ ಸಲ್ಲಬೇಕಾದ ಪಾಲಿಗೆ ಸಂಚಕಾರ ತರಲಾಗಿದೆಯೆಂದೂ ಮಹದನ್ಯಾಯ ನಡೆಯುತ್ತಿದೆಯೆಂದೂ ಸಮಾಜ ಕಲ್ಯಾಣ ಸಚಿವ ಎನ್.ರಾಚಯ್ಯನವರು ಸ್ಪಷ್ಟ ಆರೋಪ ಮಾಡಿ ಕಂದಾಯ ಸಚಿವರ ಬಗ್ಗೆ ನೇರವಾದ ಆಪಾದನೆ ಮಾಡಿದರೆಂದೂ ಗೊತ್ತಾಗಿದೆ. ಈ ಆಪಾದನೆಯನ್ನು ಕಂದಾಯ ಸಚಿವ ಎನ್.ಹುಚ್ಚಮಾಸ್ತಿ ಗೌಡರು ನಿರಾಕರಿಸಿ ಸ್ಪಷ್ಟನೆ ನೀಡಿದರೆಂದು ಹೇಳಲಾಗಿದೆ.

ಸಚಿವರ ನಡುವೆ ಬಂದ ಈ ವಿರಸವನ್ನು ಪ್ರಸ್ತಾಪಿಸಿದ ಮುಖ್ಯಮಂತ್ರಿ ಡಿ.ದೇವರಾಜ ಅರಸು, ಆರೋಪದಲ್ಲಿ ಹುರುಳಿದೆಯೇ ಎಂದು ತನಿಖೆ ಮಾಡುವ ಅಭಿಪ್ರಾಯ ವ್ಯಕ್ತಪಡಿಸಿದರೆಂದು ತಿಳಿದುಬಂದಿದೆ.

● **ದಂಡಿನಲ್ಲಿನ ಮಾವಂದಿರು!**

ಬೆಂಗಳೂರು, ಡಿ. 4– ನಿಮ್ಮನ್ನು ತಡೆಯುವವರು ಯಾರು? ಪತ್ರಿಕಾ ವರದಿಗಾರರಿಗೆ ಜನ ಸರ್ವೇಸಾಮಾನ್ಯವಾಗಿ ಕೇಳುವ ಪ್ರಶ್ನೆ ಇದು.

ದೊಡ್ಡಬಳ್ಳಾಪುರದ ಬಳಿಯ 'ಬೆಸಂಟ್ ಪಾರ್ಕ್'ನಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಶಿಬಿರದತ್ತ ಬೆರಳು ಮಾಡಿ ವರದಿಗಾರರು ಉತ್ತರಿಸಬಹುದು ಈ ಪ್ರಶ್ನೆಗೆ. ತಡೆಯುತ್ತಿರುವುದು ವರದಿಗಾರರನ್ನು ಮಾತ್ರವಲ್ಲವೆಂಬುದು ವರದಿಗಾರರಿಗೊಂದು ಸಮಾಧಾನ.

ವರದಿಗಾರರಿಗೂ ರಾಜಕಾರಣಿಗಳಿಗೂ ಎಷ್ಟೇ ನಂಟಿರಲಿ, ಈ ಮೂರು ದಿನಗಳು ಮಾತ್ರ ವರದಿಗಾರರಿಗೆ ಕಾಂಗ್ರೆಸ್ ನಾಯಕರು 'ದಂಡಿನಲ್ಲಿನ ಸೋದರಮಾವಂದಿರು'. ಕಂಡ ಕೂಡಲೇ ಕೈಕುಲುಕಿ ನಗುಮೊಗದಿಂದ ಸ್ವಾಗತಿಸುತ್ತಿದ್ದವರೆಲ್ಲಾ ಮುಳ್ಳಿನ ಬೇಲಿಯಾಚೆ ನಿಂತು 'ಸಾರಿ' ಅಂದರು.

ಮಣ್ಣಿನ ಸಂರಕ್ಷಣೆಗೆ ಜಾಗತಿಕ ಮಟ್ಟದಲ್ಲಿ ಗಂಭೀರ ಪ್ರಯತ್ನ ಆಗಬೇಕಿದೆ

ರಕ್ಷಿಸಿಕೊಳ್ಳೋಣ 'ಜೀವ ಖಜಾನೆ'



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಮಣ್ಣಿಂದಲೇ ಅನ್ನ, ಮಣ್ಣಿಂದಲೇ ಚಿನ್ನ, ಮಣ್ಣಿಂದಲೇ ತ್ರಾಣ, ಮಣ್ಣಿಂದಲೇ ಪ್ರಾಣ– ಇವು, ಮಣ್ಣಿನ ಮಹತ್ವವನ್ನು ಸಾರುವ ದಾಸರ ಪದದ ಸಾಲುಗಳು. ಕೃಷಿ ಕ್ಷೇತ್ರದಲ್ಲಿ ಮಣ್ಣನ್ನು ರೈತನ ಕಣ್ಣು ಎನ್ನಲಾಗುತ್ತದೆ. ಹಿಂದಿನ ಎರಡು ಶತಮಾನಗಳಲ್ಲಿ ಮಣ್ಣಿನ ಸ್ವರೂಪ ಬಹಳಷ್ಟು ಬದಲಾಗಿದೆ.

ಪ್ರತಿ ಐದು ಸೆಕೆಂಡಿಗೆ, ಫುಟ್ಬಾಲ್ ಆಟದ ಮೈದಾನದಷ್ಟು ವಿಸ್ತಾರವಾದ ಪ್ರದೇಶದ ಮಣ್ಣು ಸವಕಳಿ ಹೊಂದುತ್ತಿದೆ. ಗಾಳಿ ಬೀಸುವಾಗ, ನೀರು ಹರಿಯುವಾಗ ಮತ್ತು ಉಳುಮೆ ಮಾಡುವಾಗ ಮಣ್ಣಿನ ಸವಕಳಿ ಹೆಚ್ಚು ಸಂಭವಿಸುತ್ತದೆ. ಈಗಾಗಲೇ ಭೂ ಭಾಗದ ಮೂರನೇ ಒಂದರಷ್ಟು ಪ್ರದೇಶ ಸವಕಳಿಯಾಗಿದ್ದು, 2050ರ ವೇಳೆಗೆ ಇದರ ಪ್ರಮಾಣ ದುಪ್ಪಟ್ಟಾಗಲಿದೆ ಎಂಬ ಆಘಾತಕಾರಿ ಮಾಹಿತಿ ಇದೆ. ಮಣ್ಣಿನ ಸವಕಳಿಯಿಂದಾಗಿ ಪ್ರತಿವರ್ಷ 750 ಕೋಟಿ ಟನ್ ಫಲವತ್ತಾದ ಮೇಲ್ಮಣ್ಣು ಅಣೆಕಟ್ಟು ಇಲ್ಲವೇ ಸಮುದ್ರಗಳ ತಳ ಸೇರುತ್ತಿದೆ. ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಶೇಕಡ 71ರಷ್ಟು ಕೃಷಿ ಭೂಮಿ ನಿಸ್ಸಾರಗೊಳ್ಳಲಿದ್ದು, ಆಹಾರಧಾನ್ಯ ಉತ್ಪಾದನೆ ಕುಸಿಯಲಿದೆ ಎಂಬ ಅಂದಾಜಿದೆ.

ಭೂಮಿಯ ಬಿಸಿಯಷ್ಟೇ ಗಂಭೀರ ಸಮಸ್ಯೆಯಾಗಿರುವ ಮಣ್ಣಿನ ಸವಕಳಿಯನ್ನು ತಡೆಯುವುದರ ಕುರಿತು 'ನಮ್ಮ ನೆಲ, ನಮ್ಮ ಭವಿಷ್ಯ' ಎಂಬ ತಿರುಳನ್ನು ಇಟ್ಟುಕೊಂಡು, ಮಣ್ಣೆಂಬ ಜೀವ ಖಜಾನೆಯನ್ನು ಹೇಗೆ ಸಂರಕ್ಷಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸಲು 197 ದೇಶಗಳ ನಾಯಕರು ಇದೇ 2ರಿಂದ 13ರವರೆಗೆ ರಿಯಾದ್ ನಗರದಲ್ಲಿ ನಡೆಯುತ್ತಿರುವ ಸಭೆಯಲ್ಲಿ ವಿಶ್ವ ಕಾರ್ಯಸೂಚಿ ರೂಪಿಸುತ್ತಿದ್ದಾರೆ. ಫಲವತ್ತಾದ ಭೂಮಿಯ ಮರುಭೂಮೀಕರಣದ ಪ್ರಮಾಣವು ಭೂಗೋಳದ ಸುಸ್ಥಿರತೆಯ ಎಲ್ಲ ಮಿತಿ, ಗಡಿಗಳನ್ನು ಮೀರಿರುವ ಬಗ್ಗೆ ಭಾರಿ ಆತಂಕ ಮೊದಲ ದಿನದ ಚರ್ಚೆಗಳಲ್ಲಿ ವ್ಯಕ್ತವಾಗಿದೆ. ಮರುಭೂಮೀಕರಣ ಪ್ರಕ್ರಿಯೆಯು ದೊಡ್ಡ ಅಪಾಯದ ಸೂಚನೆಯಾಗಿದ್ದು, ಮಾನವ ಸಂತತಿಯ ಉಳಿವಿಗೆ ಸಂಚಕಾರ ತರಲಿದೆ ಎಂದು ಯುಎನ್ ಕನ್ವೆನ್ಷನ್ ಟು ಕಂಬ್ಯಾಟ್ ಡೆಸರ್ಟಿಫಿಕೇಶನ್ (ಯುಎನ್‌ಸಿಸಿಡಿ) ಒಕ್ಕೂಟ ಹೇಳಿದೆ.

ಅರಣ್ಯನಾಶ, ನಗರೀಕರಣ ಮತ್ತು ಅವೈಜ್ಞಾನಿಕ ಕೃಷಿ ಪದ್ಧತಿಯಿಂದಾಗಿ ಪ್ರತಿವರ್ಷ ಹತ್ತು ಲಕ್ಷ ಚದರ ಕಿಲೊ ಮೀಟರಿನಷ್ಟು ಭೂಮಿಯು ತ್ವರಿತಗತಿಯಲ್ಲಿ ಬರಡಾಗುತ್ತಿದೆ. ಇದು ಇತರ ಜೀವಿ ಪರಿಸ್ಥಿತಿಗಳ ಮೇಲೆ ಅಡ್ಡ ಪರಿಣಾಮ ಬೀರುತ್ತಿದೆ. ವಿಶ್ವದ 1.5 ಕೋಟಿ ಚದರ ಕಿಲೊ ಮೀಟರ್‌ನಷ್ಟು ವ್ಯಾಪ್ತಿಯ ಭೂಪ್ರದೇಶವು ಈಗಾಗಲೇ ಬರಡಾಗಿದೆ. ಈ ಜಾಗದಲ್ಲಿ ಒಂದು ಹುಲ್ಲುಕಡ್ಡಿಯೂ ಬೆಳೆಯುತ್ತಿಲ್ಲ. ದುಃಖದ ವಿಷಯವೆಂದರೆ, ಜಗತ್ತಿನ ಬಡವರ ಪೈಕಿ ಹೆಚ್ಚಿನ ಜನ ಈ ನೆಲದಲ್ಲೇ ವಾಸವಿದ್ದಾರೆ.

ನಮ್ಮ ರಾಜ್ಯದ ಶೇ 36ರಷ್ಟು ಭೂ ಪ್ರದೇಶವು ಸಾರ ಕಳೆದುಕೊಂಡು ವೇಗವಾಗಿ ಬರಡಾಗುತ್ತಿದೆ. ಇದರಲ್ಲಿ 20 ಜಿಲ್ಲೆಗಳು ಸೇರಿದ್ದು, ಮಲೆನಾಡಿನ ಭಾಗವೂ ಇರುವುದು ದೊಡ್ಡ ಆತಂಕ ಸೃಷ್ಟಿಸಿದೆ. ಉತ್ತರ ಕರ್ನಾಟಕದ ಬಹುಪಾಲು ಜಿಲ್ಲೆಗಳು ಮತ್ತು ಮೈಸೂರು, ಕೊಡಗು, ತುಮಕೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಅನೇಕ ಭಾಗಗಳಲ್ಲಿ ಮರುಭೂಮೀಕರಣ ಹೆಚ್ಚುತ್ತಿದೆ.

ವಾತಾವರಣಕ್ಕಿಂತ ಮೂರು ಪಟ್ಟು ಹೆಚ್ಚಿನ ಇಂಗಾಲವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಮಣ್ಣಿಗಿದೆ. ಅಂತರ್ಜಲದ ಮಾಲಿನ್ಯ ತಡೆಯುವ ಫಿಲ್ಟರ್‌ನಂತೆ ಮಣ್ಣು ಕೆಲಸ ಮಾಡುತ್ತದೆ. ಕಲ್ಲುಬಂಡೆಗಳು ಪುಡಿಯಾಗುವುದರಿಂದ ಅದರಲ್ಲಿನ ಖನಿಜಗಳು ಮಣ್ಣಾಗಿ ಬದಲಾಗಿ ತೇವಾಂಶ ಹೀರಿಕೊಳ್ಳುವ ಗುಣ ಪಡೆಯುತ್ತವೆ. ಹಿಡಿ ಮಣ್ಣಿನಲ್ಲಿ ಏಳುನೂರು ಕೋಟಿ ಬ್ಯಾಕ್ಟೀರಿಯಾಗಳು ಇರುತ್ತವೆ ಎಂದು ವಿಜ್ಞಾನ ಹೇಳುತ್ತದೆ. ಇದರಿಂದಲೇ ಮಣ್ಣಿಗೆ ಫಲವತ್ತತೆ ದೊರಕುತ್ತದೆ. ನಮ್ಮಲ್ಲಿ ಮೆಕ್ಕಲುಮಣ್ಣು, ಕಪ್ಪು, ಕೆಂಪು, ಲ್ಯಾಟರೈಟ್, ಶುಷ್ಕ, ಅರಣ್ಯ ಮತ್ತು ಪರ್ವತ ಮಣ್ಣು, ಜವುಗು, ಲವಣಯುಕ್ತ ಅಥವಾ ಕ್ಷಾರೀಯ ಎಂಬ ಎಂಟು ಬಗೆಯ ಮಣ್ಣುಗಳಿವೆ.

ಯಾವುದೇ ಭೂಪ್ರದೇಶದ ಜೀವಿ ಪರಿಸರದಲ್ಲಿ ಹಲವು ಮಿತಿಗಳಿರುತ್ತವೆ. ವಾತಾವರಣಕ್ಕೆ ಶಾಖವರ್ಧಕ ಅನಿಲಗಳ ಸೇರ್ಪಡೆ ಪ್ರಮಾಣ, ಜೀವಿಗೋಳದ ಏಕತೆ, ಜೀವವೈವಿಧ್ಯ ಮತ್ತು ಸಂತತಿ ವಿನಾಶ, ಓಝೋನ್ ಪದರ ತೆಳುವಾಗುವುದು, ಸಾಗರ ನೀರಿನ ಆಮ್ಲೀಕರಣ, ವಾತಾವರಣದಲ್ಲಿ ರಂಜಕ ಮತ್ತು ಸಾರಜನಕದ ಪ್ರಮಾಣ, ನೈಸರ್ಗಿಕ ಭೂಪ್ರದೇಶ ನಾಶ, ನಗರೀಕರಣ ಮತ್ತು ಅರಣ್ಯನಾಶ, ಸಿಹಿನೀರಿನ ಮೂಲಗಳ ಬಳಕೆ ಮತ್ತು ಶೋಷಣೆ, ವಾತಾವರಣದಲ್ಲಿರುವ ತೇಲು ಕಣಗಳ ಪ್ರಮಾಣ, ವಾತಾವರಣದ ಮೈಕ್ರೊ ಪ್ಲಾಸ್ಟಿಕ್ ಪ್ರಮಾಣ, ಸಾವಯವ ಮಾಲಿನ್ಯಕಾರಕಗಳು ಹಾಗೂ ದೇಹಗ್ರಂಥಿಗಳ ಕೆಲಸ ಕೆಡಿಸುವ ಹೊಸ ಕಣಗಳಿಗೆ ಇರುವ ಮಿತಿಗಳನ್ನು ಪ್ಲಾನೆಟರಿ ಬೌಂಡರೀಸ್ ಎಂದು ಗುರುತಿಸಲಾಗಿದೆ. ಈ ಪೈಕಿ ಹಲವು ಗಡಿಗಳನ್ನು ಈಗಾಗಲೇ ಅತಿಕ್ರಮಿಸಿದ್ದೇವೆ.

ಸುಸ್ಥಿರ ಗುರಿಗಳಲ್ಲಿ ಒಂದಾಗಿರುವ ಮಣ್ಣಿನ ಸಂರಕ್ಷಣೆಯ ಕಡೆ ಇಡೀ ವಿಶ್ವವೇ ಗಂಭೀರವಾಗಿ ಚಿಂತಿಸಿ ಕಾರ್ಯಪ್ರವೃತ್ತವಾಗಬೇಕಿದೆ. 2022ರಲ್ಲಿ ಮಾಂಟ್ರಿಯಲ್‌ನಲ್ಲಿ ಸಭೆ ಸೇರಿದ್ದ ವಿಶ್ವದ 196 ದೇಶಗಳ ನಾಯಕರು, ಈಗಾಗಲೇ ಬರಡಾಗಿರುವ ಜಾಗದ ಶೇಕಡ 30ರಷ್ಟನ್ನು 2030ರ ವೇಳೆಗೆ ಮರಳಿ ಸಹಜ ಸ್ಥಿತಿಗೆ ತರುತ್ತೇವೆ ಎಂದು ಶಪಥ ಮಾಡಿದ್ದರು. ಬಳಕೆಯಲ್ಲಿರುವ ಕೃಷಿ ಪದ್ಧತಿಗಳಿಂದಾಗಿ ಭೂಮಿಯ ಸತ್ವ ನಾಶಗೊಂಡು ಅದು ಬರಡಾಗುತ್ತಿದೆ ಮತ್ತು ಮರುಭೂಮಿಯಾಗುತ್ತಿದೆ ಎಂಬ ಪ್ರಮುಖ ಆರೋಪವು ಕೃಷಿಯ ಬಗ್ಗೆ ಕೇಳಿಬರುತ್ತಿದೆ. ಅರಣ್ಯನಾಶ, ಮಣ್ಣು ಸವಕಳಿಯು ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ಸಾರಜನಕ ಮತ್ತು ರಂಜಕಯುಕ್ತ ಕೃತಕ ರಾಸಾಯನಿಕ ಗೊಬ್ಬರಗಳಿಂದ ಸಿಹಿನೀರಿನ ಮೂಲಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಕೃಷಿ ವಿಸ್ತರಣೆಯಿಂದ ಅರಣ್ಯಗಳು ಒತ್ತುವರಿಯಾಗಿ, ಅವು ನಮಗೆ ನೀಡುತ್ತಿದ್ದ ನೈಸರ್ಗಿಕ ಕೊಡುಗೆಗಳು ಕಡಿಮೆಯಾಗುತ್ತಿವೆ. ಇದನ್ನು ಕೂಡಲೇ ಅರಿತು ಸರಿಯಾದ ಕ್ರಮ ಕೈಗೊಳ್ಳದಿದ್ದರೆ ಮುಂದಿನ ತಲೆಮಾರುಗಳು ನೀರು, ಅನ್ನ, ಶುದ್ಧ ಗಾಳಿ, ವಸತಿಗಾಗಿ ಪಡಬಾರದ ಬವಣೆ ಪಡುವಂತಾಗುತ್ತದೆ. ಈಗಾಗಲೇ ನಮ್ಮ ಭೂಭಾಗದ ಶೇಕಡ 30ರಷ್ಟು ಪ್ರದೇಶವು ಮರುಭೂಮಿಯಾಗಿದೆ. 15 ವರ್ಷಗಳಿಂದ ದೇಶದ ಅನೇಕ ರಾಜ್ಯಗಳ ಭೂಪ್ರದೇಶಗಳಲ್ಲಿ ಮಣ್ಣಿನ ಸತ್ವ ದೊಡ್ಡ ಪ್ರಮಾಣದಲ್ಲಿ ಕುಂದುತ್ತಿದೆ. ಮರುಭೂಮಿ ಪ್ರದೇಶಗಳು ವಿಸ್ತಾರಗೊಳ್ಳುತ್ತಿವೆ. ಕೆಲವೇ ಸೆಂಟಿಮೀಟರ್ ಎತ್ತರದ ಮಣ್ಣು ತಯಾರಾಗಲು ಸಾವಿರ ವರ್ಷಗಳೇ ಬೇಕು. ದೇಶದ ಒಟ್ಟು ಭೂಭಾಗದ ಕಾಲು ಭಾಗದಷ್ಟು ಇರುವ ಬರಡು ಪ್ರದೇಶದ ಅಭಿವೃದ್ಧಿಯು ಒಂದೆರಡು ದಿನ ಅಥವಾ ಒಂದೆರಡು ವರ್ಷಗಳ ಕೆಲಸವಲ್ಲ.



ಭಾರತ ಸರ್ಕಾರವು ಮರುಭೂಮೀಕರಣ ತಡೆಯಲು ರಾಷ್ಟ್ರೀಯ ಯೋಜನೆಯನ್ನು ರೂಪಿಸಿದೆ. ಯೋಜನೆಯ ಅಡಿ ದೇಶದ 15 ರಾಜ್ಯಗಳ ಭೂಪ್ರದೇಶಗಳನ್ನು ಬರಡೀಕರಣದಿಂದ ಮುಕ್ತಗೊಳಿಸಲು ಕೆಲಸ ನಡೆಯುತ್ತಿದೆ. ಮರುಭೂಮೀಕರಣವನ್ನು ತಡೆಯಲು ರಾಷ್ಟ್ರೀಯ ಕೃಷಿ ಅರಣ್ಯ ನೀತಿಯನ್ನು ಹತ್ತು ವರ್ಷಗಳ ಹಿಂದೆಯೇ ಜಾರಿಗೊಳಿಸಲಾಗಿದೆ. ಅಡುಗೆಗೆ ಬೇಕಾದ ಉರುವಲು, ಜಾನುವಾರುಗಳ ಮೇವು, ಮನೆ ಕೆಲಸಕ್ಕೆ ಬೇಕಾದ ಮರಮಟ್ಟುಗಳ ಅಗತ್ಯವನ್ನು ಪೂರೈಸಿಕೊಳ್ಳಲು ಇದು ದೊಡ್ಡ ರೀತಿಯಲ್ಲಿ ನೆರವಾಗುತ್ತದೆ. ಹಣ್ಣಿನ ಮರ, ಬಿದಿರಿನ ಕಾಡು, ಹುಲ್ಲುಗಾವಲು ಬೆಳೆಸುವ ಪದ್ಧತಿಗಳು ಮಣ್ಣಿನ ಸವಕಳಿ ತಡೆಯುತ್ತವೆ.

ಬೆಳೆಯ ಅಗತ್ಯಕ್ಕಿಂತ ಹೆಚ್ಚು ರಾಸಾಯನಿಕ ಗೊಬ್ಬರ ಬಳಸುತ್ತಿರುವುದು ಮಣ್ಣಿಗೆ ಕಂಟಕಪ್ರಾಯ ಎನಿಸಿದೆ. ರೈತರು ಕಾಲಕಾಲಕ್ಕೆ ಮಣ್ಣು ಪರೀಕ್ಷೆ ಮಾಡಿಸಿ ಮಣ್ಣಿನ ಆರೋಗ್ಯ ಚೀಟಿ (ಸಾಯಿಲ್ ಹೆಲ್ತ್ ಕಾರ್ಡ್) ಪಡೆಯಬೇಕು. ಮೂರು ವರ್ಷಕ್ಕೊಮ್ಮೆ ರೈತರಿಗೆ ಈ ಕಾರ್ಡ್ ನೀಡಲಾಗುತ್ತಿದೆ. ಆಹಾರ ಭದ್ರತೆಗೆ ಎದುರಾಗಿರುವ ಬಿಕ್ಕಟ್ಟು ನಿವಾರಿಸಲು ರೈತರು ಮಣ್ಣು ಪರೀಕ್ಷೆಗೆ ಆದ್ಯತೆ ನೀಡಬೇಕು. ಚೀಟಿಯು ಮಣ್ಣಿನಲ್ಲಿರುವ 12 ಪ್ರಮುಖ ಘಟಕಗಳ ಕುರಿತು ಮಾಹಿತಿ ನೀಡುತ್ತದೆ. ಇದನ್ನು ಆಧರಿಸಿ ರೈತರು ವಿವಿಧ ಬೆಳೆಗಳಿಗೆ ಗೊಬ್ಬರ ನೀಡಬೇಕು. ಸರದಿ ಬೆಳೆ, ಹೊದಿಕೆ ಬೆಳೆ, ಗಾಳಿ ತಡೆ ಮತ್ತು ತಾರಸಿ ಕೃಷಿ ಪದ್ಧತಿಗಳಿಂದ ಮಣ್ಣಿನ ರಕ್ಷಣೆ ಸಾಧ್ಯ.

ಶಾಲೆ, ಮನೆ ಮತ್ತು ಸಮುದಾಯದ ಜಾಗಗಳಲ್ಲಿ ಗೊಬ್ಬರದ ಗುಂಡಿಗಳನ್ನು ರಚಿಸಿ ಮಣ್ಣಿನ ಗುಣಮಟ್ಟವನ್ನು ಸುಧಾರಿಸಬಹುದು. ಕುಟುಂಬಗಳಿಗೆ ಸೇರಿದ 'ವಾಡಿ'ಗಳಲ್ಲಿ ನೀರು, ಮಣ್ಣಿನ ಸಂರಕ್ಷಣೆಗೆ ಆದ್ಯತೆ ನೀಡುತ್ತಾ ಕೃಷಿ ಅರಣ್ಯ ಮತ್ತು ತೋಟಗಾರಿಕೆ ಮಾದರಿಯನ್ನು ಅನುಸರಿಸಿದಲ್ಲಿ ಮಣ್ಣಿನ ಸವಕಳಿ ಗಣನೀಯವಾಗಿ ಕಡಿಮೆಯಾಗುತ್ತದೆ. ಸಾವಯವ ಕೃಷಿ ಪದ್ಧತಿಯಲ್ಲೂ ಮಣ್ಣಿನ ಸವಕಳಿ ಕಡಿಮೆ ಇರುತ್ತದೆ.

ಚುರುಮುರಿ



ಪವರ್‌ಫುಲ್ ಹುದ್ದೆ!

● ಗುರು ಪಿ.ಎಸ್.

'ದಿ ಪವರ್‌ಫುಲ್ ಪೀಪಲ್ ಕಮ್ ಫ್ರಂ ಪವರ್‌ಫುಲ್ ಪ್ಲೇಸಸ್' ಕೆಜಿಎಫ್ ಸಿನಿಮಾ ಡೈಲಾಗ್ ಹೇಳುತ್ತಾ ಒಳಗೆ ಬಂದಳು ಹೆಂಡತಿ.

'ಯೂ ಆರ್ ರಾಂಗ್, ಪವರ್‌ಫುಲ್ ಪೀಪಲ್ ಮೇಕ್ ಪ್ಲೇಸಸ್ ಪವರ್‌ಫುಲ್, ಅಂದ್ರೆ ನನ್ನಂಗೆ' ಎಂದೆ ಪ್ರಕಾಶ್‌ರಾಜ್ ಸ್ಟೈಲ್‌ನಲ್ಲಿ.

'ನೀವು ಪವರ್‌ಫುಲ್ಲಾ' ಜೋರಾಗಿ ನಕ್ಕಳು.

'ನಿಜಕ್ಕೂ ನಾನು ಪವರ್‌ಫುಲ್ ಕಣೆ. ಒಂದೊಂದು ಪ್ಲೇಸ್‌ಗೆ ಹೋದಾಗ ಒಂದೊಂದು ಪೊಸಿಷನ್‌ಗೆ ಏರ್ತೀನಿ ಗೊತ್ತಾ ನಾನು!'

'ಹೌದಾ, ಅದ್ಹೆಂಗೆ?'

'ಮೊನ್ನೆ ವಿಜಯಪುರಕ್ಕೆ ಹೋಗಿದ್ದೆ. ಗೋಲ್‌ಗುಂಬಜ್ ಮುಂದೆ ನಿಂತಿದ್ದಷ್ಟೇ, ರಾಜ್ಯ ಬಿಜೆಪಿಗೆ ನಾನೇ ಅಧ್ಯಕ್ಷ ಆಗಿಬಿಟ್ಟಿದ್ದೆ' ಎಂದೆ ಗಂಭೀರವಾಗಿ.

ನಗು ಬಂದರೂ ತಡೆದುಕೊಂಡು, 'ಮತ್ತೆಲ್ಲಿಗೆ ಹೋದಾಗ, ಏನಾಗಿದ್ರಿ' ಕೇಳಿದಳು ಹೆಂಡತಿ.

'ಹೋದ ವಾರ ಕನಕಪುರಕ್ಕೆ ಹೋಗಿದ್ನಾ, ಅಲ್ಲಿನ ಸರ್ಕಲ್‌ನಲ್ಲಿ ನಿಂತಿದ್ದಷ್ಟೇ, ಎಲ್ಲರೂ ಕರ್ನಾಟಕದ ಮುಖ್ಯಮಂತ್ರಿಗೆ ಜಯವಾಗಲಿ ಎನ್ನತೊಡಗಿದರು. ಆಗಲೇ ಅರಿವಿಗೆ ಬಂದಿದ್ದು, ನಾನೇ ಸಿಎಂ ಅಂತ' ಎಂದೆ ಗಟ್ಟಿಧ್ವನಿಯಲ್ಲಿ.

ಇದ್ಯಾಕೋ ಲೂಸ್ ಆಗಿದೆ ಅಂದುಕೊಂಡ ಹೆಂಡತಿ, 'ಪುಣ್ಯಕ್ಕೆ ಮುಂಬೈಗೆ ಹೋಗಿಲ್ವಲ್ಲ ನೀವು' ಎಂದಳು.

'ಅಲ್ಲಿಗ್ಯಾಕೆ ಹೋಗಲಿ' ಕೇಳಿದೆ ಅನುಮಾನದಲ್ಲಿ.

'ಅಲ್ಲಿಗೆ ಹೋಗಿದ್ರೆ, ನೀವೇ ಮಹಾರಾಷ್ಟ್ರ ಸಿಎಂ ಆಗ್ತಿದ್ರೇನೋ' ಎಂದಳು ವ್ಯಂಗ್ಯವಾಗಿ.

'ಓಹ್ ಹೌದಲ್ವಾ, ಛೇ, ಮಹಾರಾಷ್ಟ್ರ ಮುಖ್ಯಮಂತ್ರಿ ಆಗೋ ಚಾನ್ಸ್ ಮಿಸ್ ಆಯ್ತು ನೋಡು' ಎಂದವನೇ ಮತ್ತೇನೋ ಹೊಳೆದಂತಾಗಿ ಹೇಳ್ದೆ, 'ನಾಳೆ ಆಸ್ಟ್ರೇಲಿಯಾಕ್ಕೆ ಹೋಗ್ತಿದೀನಿ. ಅಲ್ಲಿ ಕಾಲಿಟ್ಟ ತಕ್ಷಣ ನಾನೇ ಇಂಡಿಯನ್ ಕ್ರಿಕೆಟ್ ಟೀಂ ಕ್ಯಾಪ್ಟನ್ ಆದರೂ ಆಗಬಹುದು. ಆಗ, ಮೊದಲ ಪಂದ್ಯದ ಮೊದಲ ಇನಿಂಗ್ಸ್‌ನಲ್ಲೇ ಸೆಂಚುರಿ ಹೊಡೆಯೋದೇ' ನಿಂತಲ್ಲೇ ಬ್ಯಾಟ್ ಬೀಸತೊಡಗಿದೆ!

'ಇದೇನ್ರೀ ಇದು, ಪೊರಕೆ ಎತ್ತಿ ಹಿಡಿದು ಅದ್ಯಾರಿಗೆ ಹಾಗೆ ತೋರಿಸ್ತಿದೀರಿ. ಹಾಸಿಗೆಯಿಂದ ಏಳ್ರೀ ಮೇಲೆ' ಎಂದು ನೀರು ಎರಚಿದಳು ಹೆಂಡತಿ!

ಸಂಗತ

ಅವಾಸ್ತವದ ಕಥೆಯ ಮೋಹದಲ್ಲಿ...

ಅವಾಸ್ತವಿಕ ಕಥೆಯ ಸಿನಿಮಾಗಳು ಈಗಿನ ಸಂದರ್ಭದಲ್ಲಿ ಹೆಚ್ಚು ಸದ್ದು ಮಾಡುತ್ತಿವೆ. ಇಂತಹ ವಿಪರ್ಯಾಸಕ್ಕೆ ಕಾರಣ ಯಾರು?

● ರಾಜಕುಮಾರ ಕುಲಕರ್ಣಿ

ಗೋವಾದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ, ನಿರ್ದೇಶಕ ತಪನ್ ಸಿನ್ಹಾ ಅವರ ಕುರಿತು 'ಸಿನ್ಹಾ ತಮ್ಮ 48 ಸಿನಿಮಾಗಳನ್ನು 48 ವಿಭಿನ್ನ ವಿಷಯಗಳನ್ನಾಧರಿಸಿ ರೂಪಿಸಿದ್ದಾರೆ. ಮನುಷ್ಯನ ಜೀವನಾನುಭವ ಅವರ ಸಿನಿಮಾಗಳ ಪ್ರಧಾನ ವಿಷಯವಸ್ತುವಾಗಿದೆ. ಅವರು ಪ್ರತಿ ಹಂತದಲ್ಲಿ ತಮ್ಮನ್ನು ತಾವು ವಿಶ್ಲೇಷಿಸಿಕೊಂಡಿದ್ದಾರೆ. ಪ್ರೇಕ್ಷಕರು ಮತ್ತು ಸಿನಿಮಾ ಮಾಧ್ಯಮದವರು ಅವರನ್ನು ಮರೆತಿರುವುದು ದುರದೃಷ್ಟಕರ' ಎನ್ನುವ ಮಾತುಗಳು ಕೇಳಿಬಂದವು. ಈ ಮಾತಿಗೆ ನಿದರ್ಶನ ಎನ್ನುವಂತೆ, ಸಿನಿಮಾ ಮಂದಿರದಲ್ಲಿ ಭೇಟಿಯಾದ ಹಿರಿಯ ಮಿತ್ರರೊಬ್ಬರು ಇಂದಿನ ಸಿನಿಮಾಗಳ ಕುರಿತು ತುಂಬ ಬೇಸರದಿಂದ ಮಾತನಾಡಿದರು.

ಸಿನಿಮಾ ಮಾಧ್ಯಮ ಸಂಪೂರ್ಣವಾಗಿ ತನ್ನ ಮೈ ಹೊರಳಿಸಿದೆ. ಅದು ವಾಸ್ತವದಿಂದ ಅವಾಸ್ತವದತ್ತ ಪಯಣಿಸುತ್ತಿದೆ. ಬದುಕಿಗೆ ಹತ್ತಿರವಲ್ಲದ ಸಿನಿಮಾಗಳು ಪುಂಖಾನುಪುಂಖವಾಗಿ ನಿರ್ಮಾಣಗೊಳ್ಳುತ್ತಿವೆ. ಇದು ಕಾಲದ ವ್ಯಂಗ್ಯವೋ ಪ್ರೇಕ್ಷಕರ ಬದಲಾದ ಅಭಿರುಚಿಯೋ ಉತ್ತರ ಇಲ್ಲದ ಪ್ರಶ್ನೆಯಾಗಿದೆ.

'ನಿರ್ದೇಶಕನು ಮನುಷ್ಯನ ಅನಿರೀಕ್ಷಿತ ಪದರುಗಳಿಗೆ ತನ್ನ ಒಳನೋಟವನ್ನು ಹರಿಸಿದಾಗ ಮಾತ್ರ ಅತ್ಯುತ್ತಮ ಸಿನಿಮಾಗಳ ಕಾಣ್ಕೆ ಸಾಧ್ಯ' ಎಂದಿದ್ದರು ಲಂಕೇಶ್. ಸಿನಿಮಾ ಎನ್ನುವುದು ಬದುಕಿಗೆ ಹತ್ತಿರವಾದ ಮತ್ತು ಫ್ಯಾಂಟಸಿಯಿಂದ ಮುಕ್ತವಾದ ಮಾಧ್ಯಮವಾದಾಗಲೇ ಉತ್ತಮ ಸಿನಿಮಾಗಳು ರೂಪುಗೊಳ್ಳಲು ಸಾಧ್ಯ ಎನ್ನುವುದು ಅವರ ನಂಬಿಕೆಯಾಗಿತ್ತು. ಒಟ್ಟಾರೆ, ಸಿನಿಮಾ ಎನ್ನುವುದು ಮಾನವನ ಮೂಲಭೂತ ದ್ವಂದ್ವ ಮತ್ತು ಅಸಹಾಯಕತೆಗೆ ಕನ್ನಡಿಯಾಗಬೇಕು ಎಂದು ಲಂಕೇಶ್ ತಮ್ಮ ಆತ್ಮಚರಿತ್ರೆಯಲ್ಲಿ ಬರೆದುಕೊಂಡಿದ್ದಾರೆ.

ಸಿನಿಮಾದ ಯಶಸ್ಸಿಗೆ ಕಥೆಗಿಂತ ವೈಭವಪೂರ್ಣ ದೃಶ್ಯಗಳೇ ಹೆಚ್ಚು ಪ್ರಸ್ತುತ ಎನ್ನುವ ಮನೋಭಾವ ಇಂದು ಸಿನಿಮಾಲೋಕದಲ್ಲಿ ಮನೆಮಾಡಿದೆ. ಆಧುನಿಕ ತಂತ್ರಜ್ಞಾನ ಬಳಸಿ ರೀಲು ಸುತ್ತುತ್ತಿರುವ ಸಿನಿಮಾ ಮಾಧ್ಯಮದವರು ಕಥೆಗಿಂತ ಮೈನವಿರೇಳಿಸುವ ದೃಶ್ಯಗಳಿಗೇ ಹೆಚ್ಚು ಒತ್ತು ನೀಡುತ್ತಿದ್ದಾರೆ. ಕೆಲವು ಸಿನಿಮಾಗಳು ಬಹುಭಾಷೆಗಳಲ್ಲಿ ನಿರ್ಮಾಣಗೊಂಡು ಭಾರಿ ಯಶಸ್ಸು ಗಳಿಸಿರುವುದರ ಹಿಂದೆ ಕಥೆಗಿಂತ ಗ್ರಾಫಿಕ್ ತಂತ್ರಜ್ಞಾನ ಬಳಸಿ ರೂಪಿಸಿದ ದೃಶ್ಯಗಳೇ ಮುಖ್ಯ ಕಾರಣ ಎನ್ನುವ ಮಾತು ಸತ್ಯಕ್ಕೆ ಹತ್ತಿರವಾಗಿದೆ.

ಸಿನಿಮಾ ಪರದೆಯ ಮೇಲಿನ ಪ್ರೇಕ್ಷಕರ ನೋಟವನ್ನು ಅತ್ತಿತ್ತ ಕದಲದಂತೆ ಎರಡೂವರೆ ತಾಸು ಹಿಡಿದಿಟ್ಟರೆ ಯಶಸ್ಸು ಖಂಡಿತ ಎನ್ನುವುದು ಇಂದು ಸಿನಿಮಾ ಮಾಧ್ಯಮದ ಸಿದ್ಧಸೂತ್ರವಾಗಿದೆ. ಆಕಾಶದೆತ್ತರದ ಬೆಟ್ಟಗಳನ್ನು ಸಲೀಸಾಗಿ ಏರಿಳಿಯುವುದು, ಬೃಹತ್ ಗಾತ್ರದ ಕಲ್ಲಿನ ವಿಗ್ರಹವನ್ನು ನಿರಾಯಾಸವಾಗಿ ಎತ್ತುವುದು, ಧುಮ್ಮಿಕ್ಕುವ ಜಲಪಾತವನ್ನು ಏಣಿಯಾಗಿಸಿಕೊಂಡು ಅದರ ಮೂಲಕ್ಕೆ ಹೋಗಿ ನಿಲ್ಲುವುದು, ಸಾವಿರಾರು ಸೈನಿಕರನ್ನು ಕ್ಷಣಮಾತ್ರದಲ್ಲಿ ಹೊಡೆದುರುಳಿಸುವುದು... ಹೀಗೆ ಕಲ್ಪನೆಗೂ ನಿಲುಕದ ದೃಶ್ಯಗಳು ಇಂದಿನ ಸಿನಿಮಾಗಳಲ್ಲಿ ಇರುತ್ತವೆ.

ಸಿನಿಮಾಗಳ ಕಥಾವಸ್ತು ನೈಜತೆಗೆ ಹತ್ತಿರವಾಗಿರಬೇಕು ಎನ್ನುವ ಸೈದ್ಧಾಂತಿಕ ಚೌಕಟ್ಟಿನಿಂದ ನಮ್ಮ ಬಹುಪಾಲು ನಿರ್ದೇಶಕರು ಮತ್ತು ನಿರ್ಮಾಪಕರು ಹೊರಬಂದಾಗಿದೆ. ಪ್ರೇಕ್ಷಕರಿಗೆ ಮನರಂಜನೆಯನ್ನು ಒದಗಿಸುವ ಭರಾಟೆಯಲ್ಲಿ ತರ್ಕಕ್ಕೆ ಸಿಗದ ಸಿನಿಮಾಗಳು ನಿರ್ಮಾಣಗೊಳ್ಳುತ್ತಿವೆ. ದೈವ ಮತ್ತು ದೆವ್ವ ಎರಡನ್ನೂ ತಂತ್ರಜ್ಞಾನದ ನೆರವಿನಿಂದ ಕಲಾತ್ಮಕವಾಗಿ ತೋರಿಸುವಲ್ಲಿಯೇ ನಮ್ಮ ನಿರ್ದೇಶಕರು ತಮ್ಮ ಜಾಣ್ಮೆ ಮೆರೆಯುತ್ತಿದ್ದಾರೆ. ಪ್ರಯೋಗಾತ್ಮಕ ಸಿನಿಮಾಗಳು ರೂಪುಗೊಳ್ಳುತ್ತಿದ್ದರೂ ಬಿಡುಗಡೆಯ ಸಂದರ್ಭದಲ್ಲಿ ಚಿತ್ರಮಂದಿರದ ಸಮಸ್ಯೆ ಎದುರಾಗುತ್ತದೆ. ಕಲಾತ್ಮಕ ಸಿನಿಮಾಗಳನ್ನು ವೀಕ್ಷಿಸಿ ಪ್ರೋತ್ಸಾಹಿಸುವ ಹಂಬಲ ಹೆಚ್ಚಿನ ಪ್ರೇಕ್ಷಕರಲ್ಲಿ ಕಾಣದಿರುವುದು ಈ ಸಿನಿಮಾಗಳು ಎದುರಿಸುತ್ತಿರುವ ಬಹುಮುಖ್ಯ ಸಮಸ್ಯೆ.



ಅವಾಸ್ತವಿಕ ಕಥೆಯ ಸಿನಿಮಾಗಳು ಈಗಿನ ಸಂದರ್ಭದಲ್ಲಿ ಹೆಚ್ಚು ಸದ್ದು ಮಾಡುತ್ತಿವೆ. ಇಂತಹ ವಿಪರ್ಯಾಸಕ್ಕೆ ಪ್ರೇಕ್ಷಕರೇ ಕಾರಣ. ಪರಿಣಾಮವಾಗಿ, ಸಿನಿಮಾ ಮಾಧ್ಯಮವು ಪ್ರೇಕ್ಷಕರನ್ನು ಬೌದ್ಧಿಕವಾಗಿ ಬೆಳೆಸುತ್ತಿಲ್ಲ ಎನ್ನುವ ಗಂಭೀರ ಆರೋಪ ಎದುರಿಸುವಂತಾಗಿದೆ. ನಿರ್ದೇಶಕ ಸತ್ಯಜಿತ್ ರೇ 'ನಾವು ಪ್ರೇಕ್ಷಕರನ್ನು ಬೆಳೆಸುತ್ತಿಲ್ಲ, ಸಿನಿಮಾಗಳನ್ನು ಬೆಳೆಸುತ್ತಿದ್ದೇವೆ' ಎಂದು ಖಾರವಾಗಿ ನುಡಿದು ತಮ್ಮ ಸಿಟ್ಟನ್ನು ತೋಡಿಕೊಂಡಿದ್ದರು. ಸಿನಿಮಾ ಮಾಧ್ಯಮ ಪ್ರೇಕ್ಷಕರಲ್ಲಿ ವೈಚಾರಿಕ ಪ್ರಜ್ಞೆಯನ್ನು ಬೆಳೆಸಬೇಕು. ಆದರೆ ಸಿನಿಮಾಗಳ ಸಂಖ್ಯೆಯನ್ನು ಹೆಚ್ಚಿಸುವ ಭರಾಟೆಯಲ್ಲಿ ಸಿನಿಮಾ ಮಾಧ್ಯಮದ ಜನ ಪ್ರೇಕ್ಷಕರಿಗೆ ಬರೀ ರಂಜನೆಯನ್ನು ನೀಡುತ್ತಿದ್ದಾರೆ ವಿನಾ ಬೌದ್ಧಿಕ ಕಸರತ್ತಿಗೆ ಆಸ್ಪದವೇ ಇಲ್ಲದಂತಾಗಿದೆ.

ಬೆರಳೆಣಿಕೆಯಷ್ಟು ಸಿನಿಮಾ ತರಬೇತಿ ಸಂಸ್ಥೆಗಳನ್ನು ಹೊರತುಪಡಿಸಿದರೆ ಮೂಲ ಶಿಕ್ಷಣ ವ್ಯವಸ್ಥೆಯಲ್ಲಿ ಸಿನಿಮಾ ಅಧ್ಯಯನಕ್ಕೆ ಅವಕಾಶವಿಲ್ಲ. ಸಾಹಿತ್ಯ, ವಿಜ್ಞಾನ, ಕಲೆ, ಕೈಗಾರಿಕೆ, ಪತ್ರಿಕೋದ್ಯಮದಂತಹ ವಿಷಯಗಳನ್ನೆಲ್ಲ ಅಧ್ಯಯನ ಮಾಡಲು ಶಿಕ್ಷಣ ವ್ಯವಸ್ಥೆಯಲ್ಲಿ ನಿರ್ದಿಷ್ಟ ಪಠ್ಯಕ್ರಮವಿದೆ. ಅದೇರೀತಿ ಸಿನಿಮಾವನ್ನು ವಿಶ್ಲೇಷಿಸುವ ಮತ್ತು ವಿಮರ್ಶಿಸುವ ವೈಚಾರಿಕ ಪ್ರಜ್ಞೆಯುಳ್ಳ ಪ್ರೇಕ್ಷಕರನ್ನು ರೂಪಿಸುವಂಥ ಪಠ್ಯಕ್ರಮಕ್ಕೆ ಶಿಕ್ಷಣದಲ್ಲಿ ಅವಕಾಶ ಇರಬೇಕು. ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಿನಿಮಾಗಳ ಕುರಿತು ಚರ್ಚೆ, ಸಂವಾದ, ಗೋಷ್ಠಿಗಳನ್ನು ಆಯೋಜಿಸುವಂತಹ ವಾತಾವರಣ ನಿರ್ಮಾಣವಾಗಬೇಕು. ಒಟ್ಟಾರೆ, ಸಿನಿಮಾ ಅಸಂಗತದಿಂದ ಸಂಗತಕ್ಕೆ ಪಲ್ಲಟಗೊಂಡು ಆ ಮೂಲಕ ಅದು ವಾಸ್ತವ ಬದುಕಿನ ದರ್ಪಣವಾಗಬೇಕಿದೆ.

ವಾಚಕರ ವಾಣಿ

ಫೆಂಜಲ್ ದುಷ್ಪರಿಣಾಮ: ಬೇಕಿದೆ ಪರಿಹಾರ

ಉತ್ತರ ಕರ್ನಾಟಕದ ರೈತರ ಪ್ರಮುಖ ವಾಣಿಜ್ಯ ಬೆಳೆಯಾದ ತೊಗರಿಯನ್ನು ಯಂತ್ರಗಳಿಂದ ಕಟಾವು ಮಾಡಬೇಕಾಗಿದ್ದ ದಿನಗಳಲ್ಲಿ ವಿನಾಶಕಾರಿ 'ಫೆಂಜಲ್' ಚಂಡಮಾರುತ ಆವರಿಸಿದ್ದರಿಂದ ಗಿಡದಲ್ಲಿನ ತೊಗರಿಕಾಳುಗಳು ನೆಲಕ್ಕೆ ಬಿದ್ದುಹೋಗಿವೆ. ಹೀಗಾಗಿ, ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಭಾರಿ ಮಳೆಯಿಂದ ಕೊಪ್ಪಳ ಜಿಲ್ಲೆಯ ಹಲವೆಡೆ ಭತ್ತದ ರಾಶಿಗೆ ನೀರು ನುಗ್ಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ನೆರವಿಗೆ ಧಾವಿಸಿ ಪರಿಹಾರ ಒದಗಿಸಿಕೊಡಬೇಕು.

ಚಂದು ಎಂ.ಪಿ., ಕುಷ್ಟಗಿ

ಕೆರೆಗಳೂ ಇಡಬಲ್ಲವು 'ಚಿನ್ನದ ಮೊಟ್ಟೆ'!

ಕೆರೆಗಳ ಸಂರಕ್ಷಣೆಗೆ ಅಗತ್ಯವಾದ ಹಣಕ್ಕಾಗಿ ವರಮಾನದ ಮೂಲ ಗುರುತಿಸುವಂತೆ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಅವರು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಡಿ. 3). ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಿದರೆ ನೀರಿನ ಸಮೃದ್ಧಿಯಿಂದ ಆಹಾರೋತ್ಪನ್ನ, ಮೇವು ಪೂರೈಕೆಯಲ್ಲಿ ಗಣನೀಯ ಪ್ರಗತಿ ಸಾಧಿಸಬಹುದು. ನಿರುದ್ಯೋಗದಂತಹ ಸಮಸ್ಯೆಗಳನ್ನು ನಿವಾರಿಸಬಹುದು. ಈ ಮೂಲಕ, ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ.

ಕೆರೆ ಪ್ರದೇಶದಲ್ಲಿ ವ್ಯರ್ಥವಾಗುತ್ತಿರುವ ಮಳೆನೀರು ಸಂಗ್ರಹಿಸಿ, ಅದರ ಪೂರೈಕೆಯಿಂದ ವರಮಾನ ಗಳಿಸಬಹುದು. ಕೆರೆಗಳ ಮೇಲೆ ತೇಲುವ ಸೌರಫಲಕ ಅಳವಡಿಸಿ ವಿದ್ಯುತ್ ಉತ್ಪಾದಿಸಬಹುದು. ಮೀನುಸಾಕಣೆ, ಕೆರೆ ಹೂಳಿನಿಂದ ಇಟ್ಟಿಗೆ, ಮಡಕೆ, ಆಟಿಕೆ ವಸ್ತುಗಳನ್ನು ತಯಾರಿಸಬಹುದು. ಕೆರೆ ಹೂಳನ್ನು ಹೊಲ–ಗದ್ದೆಗಳಿಗೆ ಬಳಸಿ ಇಳುವರಿ ಹೆಚ್ಚಿಸಬಹುದು. ಈಜು ಕಲಿಕಾ ಕೇಂದ್ರ ನಿರ್ಮಿಸಬಹುದು. ಪ್ರವಾಸಿ ಕೇಂದ್ರವನ್ನಾಗಿ ಮಾಡಿ ದೋಣಿ ವಿಹಾರ ಏರ್ಪಡಿಸಬಹುದು. ಕೆರೆಯ ಸುತ್ತಲೂ ವಿವಿಧ ಹಣ್ಣಿನ ಮರಗಳನ್ನು ಬೆಳೆಸಿ ಪ್ರಾಣಿ– ಪಕ್ಷಿಗಳಿಗೆ ಆಸರೆ ನೀಡಬಹುದು. ಅಂತರ್ಜಲ ವೃದ್ಧಿ, ಬರ– ಪ್ರವಾಹ ನಿಯಂತ್ರಣಕ್ಕೆ ಅನುಕೂಲ. ನದಿಗಳು ನಿರಂತರವಾಗಿ ಹರಿಯುವಂತೆ ನೋಡಿಕೊಂಡರೆ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿ ಸಾಧ್ಯವಾಗುತ್ತದೆ. ಇದರಿಂದ ವಲಸೆಯ ಸಮಸ್ಯೆಯೂ ನಿವಾರಣೆಯಾಗುತ್ತದೆ.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಅಂಗವಿಕಲರಿಗೆ ತೊಂದರೆ: ತಕ್ಕ ಸಂದೇಶ ರವಾನೆಯಾಗಲಿ

ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅಂಗವಿಕಲರು ಹಾಗೂ ಹಿರಿಯ ನಾಗರಿಕರು, ನಿಗದಿತ ಸ್ಥಳ ತಲುಪಲು ಸೂಕ್ತ ವ್ಯವಸ್ಥೆ ಇಲ್ಲದೆ ಪರದಾಡಿದ ಸುದ್ದಿ ಹಾಗೂ ಚಿತ್ರಗಳನ್ನು ನೋಡಿ ಬೇಸರವಾಯಿತು. ಸಾಮಾನ್ಯವಾಗಿ ಇಂತಹ ದೊಡ್ಡ ಸಾರ್ವಜನಿಕ ಕಟ್ಟಡಗಳಲ್ಲಿ ವೃದ್ಧರು ಹಾಗೂ ಅಂಗವಿಕಲರು ಸ್ಥಳಕ್ಕೆ ತಲುಪಲು ಸರಿಯಾದ ವ್ಯವಸ್ಥೆ ಮಾಡಬೇಕಿರುವುದು ಕಡ್ಡಾಯವಾಗಿರುತ್ತದೆ. ಆದರೆ ಸರ್ಕಾರದ ಅನುದಾನದಿಂದ ನಡೆಯುವ ವಿಶ್ವ ಅಂಗವಿಕಲರ ದಿನಾಚರಣೆಯ ಕಾರ್ಯಕ್ರಮಕ್ಕೆ ಬರಲು ಅವರಿಗೆ ಸರಿಯಾದ ವ್ಯವಸ್ಥೆ ಮಾಡದಿರುವುದು ಅಕ್ಷಮ್ಯ.

ಇಂತಹ ಅನನುಕೂಲದ ಪರಿಸ್ಥಿತಿ ನಿರ್ಮಾಣ ಮಾಡಿದವರ ವಿರುದ್ಧ ಯಾವುದೇ ಕ್ರಮ ಜರುಗಿಸದಿದ್ದರೆ ಸಮಾಜಕ್ಕೆ ತಪ್ಪು ಸಂದೇಶವನ್ನು ನೀಡಿದಂತಾಗುತ್ತದೆ. ಅಂಗವಿಕಲರಿಗೆ ಬೇಕಾದ ಅನುಕೂಲ ಮಾಡಿಕೊಡುವುದು ಬರೀ ಅವರ ಮೇಲಿನ ಕರುಣೆಯಿಂದಲ್ಲ, ಅದು ಅವರ ಹಕ್ಕು ಸಹ ಆಗಿದೆ.

ಕಡೂರು ಫಣಿಶಂಕರ್, ಬೆಂಗಳೂರು

ಮಹಾತ್ಮರ ಜಯಂತಿ: ಎಲ್ಲರೂ ಸಂಭ್ರಮಿಸೋಣ

ದೇಶದ ಮೊದಲ ಶಿಕ್ಷಣ ಸಚಿವ ಮೌಲಾನಾ ಅಬುಲ್ ಕಲಾಂ ಆಜಾದ್ ಅವರ ಜಯಂತಿಯನ್ನು ಆಚರಿಸುವುದಕ್ಕೆ ಅನುಮತಿ ನೀಡದಿರುವ ಅಧಿಕಾರಿಗಳ ನಡೆಯ ಬಗ್ಗೆ ಶಶಿಧರ ಪಾಟೀಲ ಅವರು ಬರೆದಿರುವುದು (ವಾ.ವಾ., ಡಿ. 3) ಸರಿಯಾಗಿದೆ. ಇಂದು ರಾಜ್ಯದಲ್ಲಿ ಆಚರಿಸುವ ಮಹಾತ್ಮರ ಜಯಂತಿಗಳಲ್ಲಿ ಅವರ ಜಾತಿಗೆ ಸೇರಿದ ಜನರೇ ತುಂಬಿರುತ್ತಾರೆ. ಇದು ತಪ್ಪು, ಹೀಗಾಗಬಾರದು. ಎಲ್ಲಾ ಜಾತಿ, ಸಮುದಾಯಗಳ ಜನರೂ ಸೇರಿ ಇಂತಹ ಜಯಂತಿಗಳನ್ನು ಸಂಭ್ರಮದಿಂದ ಆಚರಿಸುವಂತೆ ಆಗಬೇಕು.

ಮಲ್ಲನಗೌಡ ಪಾಟೀಲ, ರಾಮದುರ್ಗ

ಅತಿಥಿ ಉಪನ್ಯಾಸಕರ ನೇಮಕ: ನಿರ್ಲಕ್ಷ್ಯ ಸಲ್ಲ

ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಿಗೆ ಅಗತ್ಯವಾಗಿರುವ 15 ಸಾವಿರ ಉಪನ್ಯಾಸಕರಲ್ಲಿ 10 ಸಾವಿರ ಮಂದಿ ಅತಿಥಿ ಉಪನ್ಯಾಸಕರು. ಅಂದರೆ, ಶೇಕಡ 64ರಷ್ಟು ಅತಿಥಿ ಉಪನ್ಯಾಸಕರಾಗಿರುತ್ತಾರೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕಾಲೇಜುಗಳು ಆರಂಭವಾಗಿ ಎರಡು ತಿಂಗಳ ನಂತರ, ಅಂದರೆ ಸೆಮಿಸ್ಟರ್‌ನ ಅರ್ಧದಷ್ಟು ಅವಧಿ ಮುಗಿದ ನಂತರ ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ಮುಂದುವರಿಸಲಾಗಿದೆ. ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಸೇವೆ ಸಲ್ಲಿಸುತ್ತಿದ್ದು, ಪ್ರಸಕ್ತ ಸಾಲಿನಲ್ಲಿಯೂ ಅದೇ ಕಾಲೇಜಿನಲ್ಲಿ ಕಾರ್ಯಭಾರವಿದ್ದವರು ಈ ರೀತಿ ನೇಮಕಗೊಂಡಿದ್ದಾರೆ. ಆದರೆ ಕಾಯಂ ಪ್ರಾಧ್ಯಾಪಕರ ನಿವೃತ್ತಿ ಅಥವಾ ವರ್ಗಾವಣೆಯ ಕಾರಣದಿಂದ ಖಾಲಿಯಿರುವ ಸುಮಾರು ಸಾವಿರ ಸ್ಥಾನಗಳಿಗೆ ಅತಿಥಿ ಉಪನ್ಯಾಸಕರನ್ನು ಕಾಲೇಜು ಶಿಕ್ಷಣ ಇಲಾಖೆ ಇನ್ನೂ ನೇಮಕ ಮಾಡಿಲ್ಲ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸೇರುವ ವಿದ್ಯಾರ್ಥಿಗಳ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ನಿರಂತರವಾಗಿ ಕುಸಿಯುತ್ತಿದೆ. ಉಪನ್ಯಾಸಕರೇ ಇಲ್ಲದಿದ್ದಲ್ಲಿ ಮುಂದೆ ಸರ್ಕಾರಿ ಕಾಲೇಜುಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳ ಸಂಖ್ಯೆ ಇನ್ನಷ್ಟು ಕುಸಿದು ಕೆಲವು ವಿಭಾಗಗಳೇ ಮುಚ್ಚಿಹೋಗುವ ಪರಿಸ್ಥಿತಿ ಬರಬಹುದು. ಕ್ರಮೇಣ ಕಾಲೇಜುಗಳೇ ಮುಚ್ಚಿಹೋಗಬಹುದು. ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೆ ಅತ್ಯಗತ್ಯವಾದ ಅತಿಥಿ ಉಪನ್ಯಾಸಕರನ್ನು ಕಾಲೇಜುಗಳು ಆರಂಭವಾಗುವ ಹೊತ್ತಿಗೆ ನೇಮಕ ಮಾಡಿಕೊಳ್ಳುವುದು ಕಷ್ಟದ ಕೆಲಸವೇ? ಈ ವಿಚಾರದಲ್ಲಿ ಸರ್ಕಾರದ ನಿರ್ಲಕ್ಷ್ಯ ಧೋರಣೆಯು ಅಂತಿಮವಾಗಿ ಬಡ ವಿದ್ಯಾರ್ಥಿಗಳ ಕುರಿತ ತಾತ್ಸಾರದ ಧೋರಣೆಯೇ ತಾನೆ? ಒಟ್ಟಿನಲ್ಲಿ ನಮ್ಮಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆ ಹಾದಿ ತಪ್ಪಿದೆ. ಸರ್ಕಾರ ಎಚ್ಚೆತ್ತುಕೊಳ್ಳಬೇಕು.

ಸರ್ಜಾಶಂಕರ್ ಹರಳಿಮಠ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕಿರಾಣಿ ಅಂಗಡಿಗಳಿಗೆ ಕ್ವಿಕ್ ಕಾಮರ್ಸ್ ಸವಾಲು

ಆನ್‌ಲೈನ್ ಖರೀದಿ ಭರಾಟೆಯ ಮುಂದೆ ಮಂಕಾದ ಸಾಂಪ್ರದಾಯಿಕ ಮಾರಾಟ ವ್ಯವಸ್ಥೆ



ಭಾರತದಲ್ಲಿ ಕಿರಾಣಿ ಅಂಗಡಿಗಳು ಇಲ್ಲದ ಊರುಗಳು ಅಪರೂಪ. ಆದರೆ, ಇ–ಕಾಮರ್ಸ್ /ಕ್ವಿಕ್ ಕಾಮರ್ಸ್ ಕಂಪನಿಗಳು ನಮ್ಮ ನೆರೆಹೊರೆಯ ಕಿರಾಣಿ ಅಂಗಡಿಗಳಿಗೆ ಸವಾಲು ಒಡ್ಡಿವೆ. ನಿಮಿಷಗಳ ಲೆಕ್ಕದಲ್ಲಿ ಜನರ ಮನೆಬಾಗಿಲಿಗೆ ರಿಯಾಯಿತಿ ದರದಲ್ಲಿ ಸರಕು–ಸರಂಜಾಮು ತಲುಪಿಸುವ ಆನ್‌ಲೈನ್ ವ್ಯವಸ್ಥೆಗೆ ಜನ ಮಣೆ ಹಾಕುತ್ತಿದ್ದಾರೆ. ಇದು ದಶಕಗಳಿಂದ ಚಾಲ್ತಿಯಲ್ಲಿರುವ ಸಾಂಪ್ರದಾಯಿಕ ಮಾರಾಟ ವ್ಯವಸ್ಥೆಗೆ ಪೆಟ್ಟು ಕೊಡಲಿದ್ದು, ಸರ್ಕಾರ ಈ ಸಂಬಂಧ ನಿಯಮ ರೂಪಿಸಬೇಕು ಎನ್ನುವ ಒತ್ತಾಯ ಸಾಂಪ್ರದಾಯಿಕ ವರ್ತಕರಿಂದ ಕೇಳಿಬಂದಿದೆ

ಭಾರತೀಯರು ವ್ಯಾಪಾರ ಮಾಡುವ ರೀತಿ ಬದಲಾಗಿದೆ. ಜನರು ಮೊದಲು ಮನೆ ಹತ್ತಿರದ ಅಥವಾ ಊರು/ಪಟ್ಟಣದಲ್ಲಿರುವ ಅಂಗಡಿಗೆ ಬಂದು ಅಗತ್ಯವಿದ್ದಷ್ಟು ದಿನ ಬಳಕೆಯ ವಸ್ತುಗಳು ಅಥವಾ ಸರಕುಗಳನ್ನು ಕೊಳ್ಳುತ್ತಿದ್ದರು. ಇಂಟರ್‌ನೆಟ್ ಪ್ರವೇಶದೊಂದಿಗೆ ಇ–ಕಾಮರ್ಸ್ ಕಂಪನಿಗಳು ಅಡಿ ಇಟ್ಟವು. ಆನ್‌ಲೈನ್ ಮೂಲಕ ಬೇಡಿಕೆ ಸಲ್ಲಿಸಿದರೆ, ವಸ್ತುಗಳು ಮನೆಗೆ ಬಂದು ಬೀಳತೊಡಗಿದವು. ಮೊದಲೆಲ್ಲ ನಗರ, ಪಟ್ಟಣ ಪ್ರದೇಶಗಳಿಗೆ ಸೀಮಿತವಾಗಿದ್ದ ಇ–ಕಾಮರ್ಸ್ ಕಂಪನಿಗಳ ಕಾರ್ಯಾಚರಣೆ ಈಗ ಹೋಬಳಿ ಮಟ್ಟ, ಹಳ್ಳಿಗಳನ್ನೂ ತಲುಪಿದೆ.

ಆನ್‌ಲೈನ್ ಮಾರಾಟ–ಖರೀದಿ ವ್ಯವಸ್ಥೆ ಈಗ ಮತ್ತಷ್ಟು ಬದಲಾಗಿದ್ದು, ಪೈಪೋಟಿಯ ಮೇಲೆ ಕೆಲವೇ ನಿಮಿಷಗಳಲ್ಲಿ ಗ್ರಾಹಕರ ಅಗತ್ಯದ ವಸ್ತುಗಳನ್ನು ಅವರ ಮನೆಬಾಗಿಲಿಗೆ ಮುಟ್ಟಿಸುವ ಕಂಪನಿಗಳು/ಆ್ಯಪ್‌ಗಳು ಹೆಚ್ಚಾಗತೊಡಗಿವೆ. ‘ಕ್ವಿಕ್ (ತ್ವರಿತ) ಕಾಮರ್ಸ್’ ಕಲ್ಪನೆ ಅಡಿಯಲ್ಲಿ ಕಾರ್ಯಾಚರಿಸುವ ಈ ಕಂಪನಿ/ಆ್ಯಪ್‌ಗಳು ವೇಗವಾಗಿ ಬೆಳೆಯುತ್ತಿದ್ದು, ‘ಕೆಲವೇ ನಿಮಿಷಗಳಲ್ಲಿ ಸರಕುಗಳನ್ನು ನಿಮ್ಮ ಮನೆ ಬಾಗಿಲಿಗೆ ತಲುಪಿಸುತ್ತೇವೆ’ ಎಂದು ಪ್ರತಿಪಾದಿಸುತ್ತ ತಮ್ಮ ವ್ಯಾಪ್ತಿಯನ್ನೂ ವಿಸ್ತರಿಸಿಕೊಳ್ಳುತ್ತಿವೆ. ಅಮೆಜಾನ್, ಫ್ಲಿಪ್‌ಕಾರ್ಟ್‌ನಂತಹ ದೊಡ್ಡ ಇ–ಕಾಮರ್ಸ್ ಕಂಪನಿಗಳು ಕೂಡ ತ್ವರಿತ ಡೆಲಿವರಿ ಸೇವೆ ನೀಡುತ್ತಿವೆ. ಎಂಆರ್‌ಪಿಗಿಂತಲೂ ಕಡಿಮೆ ಬೆಲೆಯಲ್ಲಿ, ಡೆಲಿವರಿ ಶುಲ್ಕ ಇಲ್ಲದೇ ಸರಕುಗಳನ್ನು ಕಂಪನಿಗಳು ವಿತರಿಸುತ್ತಿರುವುದರಿಂದ ಹೆಚ್ಚಿನ ಗ್ರಾಹಕರು ಆನ್‌ಲೈನ್ ವ್ಯವಸ್ಥೆಯ ಮೂಲಕವೇ ವಸ್ತುಗಳನ್ನು ಖರೀದಿ ಮಾಡುತ್ತಿದ್ದಾರೆ. ಸದೃಢವಾಗಿ ಬೆಳೆಯುತ್ತಿರುವ ಆನ್‌ಲೈನ್ ಮಾರಾಟ–ಖರೀದಿ ವ್ಯವಸ್ಥೆಯು ಸಾಂಪ್ರದಾಯಿಕ ಕಿರಾಣಿ ಅಂಗಡಿಗಳ ವ್ಯಾಪಾರಕ್ಕೆ ಪೆಟ್ಟು ನೀಡಲು ಆರಂಭಿಸಿದೆ.

ಜನಸಂಖ್ಯೆಗೆ ಹೋಲಿಸಿದರೆ, ಜಗತ್ತಿನಲ್ಲಿಯೇ ಅತಿ ಹೆಚ್ಚು ಚಿಲ್ಲರೆ ಅಂಗಡಿಗಳಿರುವ ದೇಶ ಭಾರತ. ದೇಶದಲ್ಲಿ ಸುಮಾರು 1.3 ಕೋಟಿ ಕಿರಾಣಿ ಅಂಗಡಿಗಳು ಇವೆ ಎಂದು ಅಂದಾಜಿಸಲಾಗಿದ್ದು, ಅವುಗಳ ಪೈಕಿ ಒಂದು ಕೋಟಿ ಅಂಗಡಿಗಳು ಎರಡನೇ ಹಂತದ ನಗರ ಮತ್ತು ಸಣ್ಣ ಪಟ್ಟಣ, ಗ್ರಾಮೀಣ ಪ್ರದೇಶಗಳಲ್ಲಿವೆ.

2 ಲಕ್ಷ ಅಂಗಡಿ ಬಂದ್: ಗ್ರಾಹಕರು ವಸ್ತುಗಳ ಬೆಲೆಯನ್ನು ಆನ್‌ಲೈನ್‌ಲ್ಲಿರುವ ಬೆಲೆಗಳೊಂದಿಗೆ ಹೋಲಿಸಿ ನೋಡುವ ಪ್ರವೃತ್ತಿ ಹೆಚ್ಚುತ್ತಿದೆ. ದೇಶದಲ್ಲಿ ಅಮೆಜಾನ್, ಫ್ಲಿಪ್‌ಕಾರ್ಟ್‌ನಿಂದ ಹಿಡಿದು 10 ನಿಮಿಷದಲ್ಲಿ ಜನರಿಗೆ ಬೇಕಾದ ದಿನಸಿ ಮತ್ತಿತರ ವಸ್ತುಗಳನ್ನು ಮನೆಗೆ ತಲುಪಿಸುವ ಆ್ಯಪ್ ಆಧಾರಿತ ಬ್ಲಿಂಕಿಟ್, ಇನ್‌ಸ್ಟಾಮಾರ್ಟ್, ಜೆಪ್ಟೊ, ಬಿಗ್ ಬಾಸ್ಕೆಟ್ ನೌನಂತಹ ಇ– ಕಾಮರ್ಸ್ ಕಂಪನಿಗಳ ವಹಿವಾಟು ಮತ್ತು ವರಮಾನ ಕ್ಷಿಪ್ರಗತಿಯಲ್ಲಿ ವೃದ್ಧಿಯಾಗುತ್ತಿದೆ. ಇದಕ್ಕೆ ಹೋಲಿಸಿದರೆ ಕಿರಾಣಿ ಅಂಗಡಿಗಳ ಬೆಳವಣಿಗೆ ದರ ಕಡಿಮೆ ಇದೆ. ಅನೇಕ ಗ್ರಾಹಕರು ಮನೆ ಪಕ್ಕದ ಅಂಗಡಿಗಳಿಗೆ ಹೋಗುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಹೀಗಾಗಿ ಕಿರಾಣಿ ಅಂಗಡಿಗಳಲ್ಲಿನ ಮಾರಾಟವು ಶೇ 10ರಿಂದ ಶೇ 30ರವರೆಗೆ ಕುಸಿದಿದೆ. ಲಾಭದ ಪಾಲು ಕಡಿಮೆ ಆಗಿರುವುದರಿಂದ ಕಿರಾಣಿ ಅಂಗಡಿಗಳು ಮುಚ್ಚುವ ಹಂತಕ್ಕೆ ಬಂದಿವೆ. ಕೋವಿಡ್ ನಂತರವಂತೂ ಕಿರಾಣಿ ಅಂಗಡಿಗಳಲ್ಲಿ ವ್ಯಾಪಾರ ಮಾಡುತ್ತಿದ್ದ ಗ್ರಾಹಕರ ಸಂಖ್ಯೆಯಲ್ಲಿ ವಿಪರೀತ ಕುಸಿತವಾಗಿದೆ. ಆನ್‌ಲೈನ್ ಶಾಪಿಂಗ್ ಭರಾಟೆಯಿಂದ ದೇಶದಾದ್ಯಂತ ಒಂದೇ ವರ್ಷದಲ್ಲಿ 2 ಲಕ್ಷ ಕಿರಾಣಿ ಅಂಗಡಿಗಳು ಬಂದ್ ಆಗಿವೆ ಎಂದು ಅಖಿಲ ಭಾರತ ಗ್ರಾಹಕ ವಸ್ತುಗಳ ಪೂರೈಕೆ ಸಂಘಟನೆ (ಎಐಸಿಪಿಡಿಎಫ್) ನಡೆಸಿದ ಅಧ್ಯಯನದಿಂದ ತಿಳಿದುಬಂದಿದೆ.

ಇ–ಕಾಮರ್ಸ್ ಕಂಪನಿಗಳು ಅತ್ಯಂತ ವೇಗದಿಂದ ಬೆಳೆಯುತ್ತಿರುವುದನ್ನು ಪ್ರಮುಖ ತ್ವರಿತ ಬಿಕರಿ ಗ್ರಾಹಕ ಉತ್ಪನ್ನಗಳ ಕಂಪನಿಗಳು (ಎಫ್‌ಎಂಸಿಜಿ) 2023–24ರ ತಮ್ಮ ವಾರ್ಷಿಕ ವರದಿಗಳಲ್ಲಿ ಉಲ್ಲೇಖಿಸಿವೆ. ಎಫ್‌ಎಂಸಿಜಿಗಳ ಆದಾಯದಲ್ಲಿ ಮುಖ್ಯ ಪಾಲು ಇ–ಕಾಮರ್ಸ್‌ನಿಂದ ಬರುತ್ತಿದೆ.

ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಲ್ಲಿ ಬ್ರ್ಯಾಂಡೆಡ್ ವಸ್ತುಗಳು ಹೆಚ್ಚಾಗಿ ಮಾರಾಟವಾಗುತ್ತವೆ. ಇದರಿಂದ ವಸ್ತುಗಳ ಉತ್ಪಾದನೆ ಮತ್ತು ಮಾರಾಟ ವ್ಯವಸ್ಥೆಯಲ್ಲಿ ಏಕಸ್ವಾಮ್ಯಕ್ಕೆ ಕಾರಣವಾಗುವ ಸಂಭವವಿದೆ ಎಂದೂ ವರದಿಗಳು ಹೇಳಿವೆ.

ಭಾರತದಲ್ಲಿ ಇ–ಕಾಮರ್ಸ್ ಮಾರುಕಟ್ಟೆ: ಒಂದು ನೋಟ

₹7.17 ಲಕ್ಷ ಕೋಟಿ (8,500 ಕೋಟಿ ಡಾಲರ್) 2023–24ನೇ ಆರ್ಥಿಕ ವರ್ಷದಲ್ಲಿ ಭಾರತದಲ್ಲಿ ಇ–ಕಾಮರ್ಸ್ ಮಾರುಕಟ್ಟೆ ಮೌಲ್ಯ

1.58 ಕೋಟಿ ಇ–ಕಾಮರ್ಸ್ ವಲಯವು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸೃಷ್ಟಿಸಿದ ಉದ್ಯೋಗಗಳು

8% ದೇಶದ ಜಿಡಿಪಿಗೆ ಇ–ಕಾಮರ್ಸ್ ನೀಡುತ್ತಿರುವ ಕೊಡುಗೆ

35 ಲಕ್ಷ ಈ ವಲಯದಲ್ಲಿ ಉದ್ಯೋಗ ಪಡೆದ ಮಹಿಳೆಯರು

₹29.52 ಲಕ್ಷ ಕೋಟಿ (35 ಸಾವಿರ ಕೋಟಿ ಡಾಲರ್) 2023ರ ವೇಳೆಗೆ ಭಾರತದ ಇ–ಕಾಮರ್ಸ್‌ನ ಅಂದಾಜು ಜಿಎಂವಿ (ಒಟ್ಟು ಸರಕು ಮಾರಾಟ ಮೌಲ್ಯ)



ಈಗಲೂ ಕಿರಾಣಿ ಅಂಗಡಿಗಳ ಪಾಲೇ ಹೆಚ್ಚು

ಇಷ್ಟೆಲ್ಲ ಆದರೂ ಕಿರಾಣಿ ಅಂಗಡಿಗಳು ಸಂಪೂರ್ಣವಾಗಿ ಇಲ್ಲವಾಗುತ್ತವೆ ಎಂದೇನೂ ಹೇಳಲಾಗದು. ಏಕೆಂದರೆ, ಸಾಂಪ್ರದಾಯಿಕವಾದ ಕಿರಾಣಿ ಅಂಗಡಿ ವ್ಯವಸ್ಥೆಯ ಮೂಲಕವೇ ಈಗಲೂ ಸುಮಾರು ಶೇ 85ರಷ್ಟು ವ್ಯಾಪಾರ ವಹಿವಾಟು ನಡೆಯುತ್ತಿದೆ.

ಜನರ ಕೊಳ್ಳುವ ಶಕ್ತಿ ಕಡಿಮೆ ಇರುವ ಭಾರತದಂಥ ದೇಶದಲ್ಲಿ ಇ–ಕಾಮರ್ಸ್ /ಕ್ವಿಕ್ ಕಾಮರ್ಸ್ ಕಂಪನಿಗಳ ಬೆಳವಣಿಗೆ ಯಾವ ಮಟ್ಟಕ್ಕೆ ಏರಬಲ್ಲದು, ಕಿರಾಣಿ ಅಂಗಡಿಗಳಿಗೆ ಎಷ್ಟರ ಮಟ್ಟಿಗೆ ಪ್ರತಿಕೂಲವಾಗಬಹುದು ಎಂದು ಈಗಲೇ ಹೇಳಲಾಗದು. ಕಿರಾಣಿ ಅಂಗಡಿಗಳ ವ್ಯವಸ್ಥೆಯಲ್ಲಿ ಮಾರುವವರು ಮತ್ತು ಕೊಳ್ಳುವವರ ನಡುವೆ ಪರಿಚಯ, ಸ್ನೇಹ ಇರುತ್ತದೆ. ಬಹುತೇಕ ಅಂಗಡಿಗಳಲ್ಲಿ ಸಾಲ ಕೊಡುವ ಪದ್ಧತಿಯೂ ಜಾರಿಯಲ್ಲಿದೆ. ಕ್ವಿಕ್ ಕಾಮರ್ಸ್ ವ್ಯವಸ್ಥೆ ಸದ್ಯ ನಗರಗಳಿಗೆ ಮಾತ್ರ ಸೀಮಿತವಾಗಿದೆ. ಇನ್ನೂ ಗ್ರಾಮೀಣ ಪ್ರದೇಶಗಳಿಗೆ ತಲುಪಿಲ್ಲ. ಇವೆಲ್ಲವೂ ಇ–ಕಾಮರ್ಸ್‌ ನ ಒಟ್ಟಾರೆ ಬೆಳವಣಿಗೆಯ ವೇಗಕ್ಕೆ ತಡೆ ಒಡ್ಡಿವೆ. ಸಾಂಪ್ರದಾಯಿಕ ಮಾರಾಟ ವ್ಯವಸ್ಥೆ ಉಳಿಸುವುದಕ್ಕಾಗಿ ಸರ್ಕಾರ ಕಾನೂನು ತರಬೇಕು ಎನ್ನುವ ಒತ್ತಾಯವೂ ಕೇಳಿಬಂದಿದೆ.

ಚಿಲ್ಲರೆ ಮಾರಾಟಗಾರರು ಕೂಡ ಕಾಲಕ್ಕೆ ತಕ್ಕಂತೆ ಬದಲಾಗಬೇಕಾದ ಅಗತ್ಯವಿದೆ. ಕಿರಾಣಿ ಅಂಗಡಿಗಳು ಡಿಜಿಟಲೀಕರಣಗೊಳ್ಳಬೇಕು; ಈ ವಿಚಾರದಲ್ಲಿ ತಾನು ಕೇಂದ್ರ ಸರ್ಕಾರದ ‘ಡಿಜಿಟಲ್ ವ್ಯಾಪಾರಕ್ಕಾಗಿ ಮುಕ್ತ ವ್ಯವಸ್ಥೆ’ ಮೂಲಕ 13 ಲಕ್ಷ ಅಂಗಡಿಗಳಿಗೆ ಡಿಜಿಟಲೀಕರಣಗೊಳ್ಳಲು ನೆರವು ನೀಡುವುದಾಗಿ ಹಿಂದೂಸ್ಥಾನ್ ಯುನಿಲಿವರ್ ಹೇಳಿದೆ. ಇವುಗಳ ಫಲವಾಗಿ, ಕುಟುಂಬ ಒಡೆತನದ ಚಿಲ್ಲರೆ ಮಾರಾಟಗಾರರೂ ಕೂಡ ಡಿಜಿಟಲ್ ವ್ಯವಸ್ಥೆ ಅಳವಡಿಸಿಕೊಳ್ಳುತ್ತಿದ್ದಾರೆ ಎಂದು ರೆಡ್‌ಸೀರ್ ಸ್ಟ್ರಾಟಜಿ ಕನ್ಸಲ್ಟೆಂಟ್ಸ್ ಸಂಸ್ಥೆ ಹೇಳಿದೆ. ಇನ್ನೊಂದು ದಿಕ್ಕಿನಲ್ಲಿ, ಕಿರಾಣಿ ಅಂಗಡಿಗಳು ಮತ್ತು ಇ–ಕಾಮರ್ಸ್ ಕಂಪನಿಗಳು ಒಂದಾಗಿ ವ್ಯಾಪಾರ ಮಾಡುವ ಪ್ರಯತ್ನಗಳೂ ಆರಂಭವಾಗಿವೆ.

ಕ್ಷಿಪ್ರ ಬೆಳವಣಿಗೆಗೆ ಕಾರಣಗಳೇನು?

- ಡಿಜಿಟಲ್ ಬಳಕೆ ಹೆಚ್ಚಿರುವುದು ಮತ್ತು ಗ್ರಾಹಕರ ಖರೀದಿ ಪ್ರವೃತ್ತಿಯಲ್ಲಿ ಆಗಿರುವ ಬದಲಾವಣೆ
- ಸ್ಮಾರ್ಟ್‌ಫೋನ್ ಮತ್ತು ಇಂಟರ್‌ನೆಟ್ ಬಳಕೆಯಲ್ಲಾದ ಹೆಚ್ಚಳ. ಇದರಿಂದ ಎರಡನೇ ಹಂತ ಮತ್ತು ಮೂರನೇ ಹಂತದ ನಗರಗಳಲ್ಲೂ ಹೆಚ್ಚಿದ ಆನ್‌ಲೈನ್ ಖರೀದಿ
- ಡಿಜಿಟಲ್ ಪಾವತಿ ವ್ಯವಸ್ಥೆಗಳ ಲಭ್ಯತೆ
- ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಇದ್ದ ನಿರ್ಬಂಧಗಳಿಂದ ಆನ್‌ಲೈನ್ ಖರೀದಿಗೆ ಮುಂದಾದ ಜನ. ಸಾಂಕ್ರಾಮಿಕದ ನಂತರವೂ ಅದೇ ಪ್ರವೃತ್ತಿ ಮುಂದುವರಿಕೆ
- ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಂಪನಿಗಳು ಬಂಡವಾಳ ಹೂಡಿದ್ದರಿಂದ ವಿಸ್ತಾರಗೊಂಡ ವಲಯ
- ಡಿಜಿಟಲ್ ಪಾವತಿಗೆ ಉತ್ತೇಜನ ನೀಡಲು ಸರ್ಕಾರ ಕೈಗೊಂಡ ಕ್ರಮಗಳು
- ಇ–ಕಾಮರ್ಸ್ ಸಂಸ್ಥೆಗಳು ನೀಡುತ್ತಿರುವ ರಿಯಾಯಿತಿ ಕೊಡುಗೆಗಳು
- ಮೊದಲು ಖರೀದಿ, ನಂತರ ಹಣ ಪಾವತಿಸಲು ಇರುವ ಆಯ್ಕೆ
- ಕಂಪನಿಗಳ ಗ್ರಾಹಕಸ್ನೇಹಿ ಸೇವೆಗಳು
- ಕಂಪನಿಯಿಂದ ನೇರ ಗ್ರಾಹಕರಿಗೆ ತಲುಪಿಸುವ ಬ್ರ್ಯಾಂಡ್‌ಗಳು ಮತ್ತು ಆ ಮಾದರಿಯ ಹೊಸ ವ್ಯಾಪಾರದಲ್ಲಾದ ಹೆಚ್ಚಳ



ರಿಯಾಯಿತಿ ದರ ಮಾರಾಟ ಕಂಟಕ

ಕಿರಾಣಿ ಅಂಗಡಿಗಳಿಗೆ ಕಂಟಕವಾಗಿರುವುದು ಇ–ಕಾಮರ್ಸ್ /ಕ್ವಿಕ್ ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳ ರಿಯಾಯಿತಿ ಮಾರಾಟ. ಹಬ್ಬ ಅಥವಾ ವಿಶೇಷ ದಿನಗಳಲ್ಲಿ ಭಾರಿ ರಿಯಾಯಿತಿ ದರದಲ್ಲಿ ವಸ್ತುಗಳನ್ನು ಮಾರಾಟ ಮಾಡುತ್ತವೆ. ಹೀಗೆ ರಿಯಾಯಿತಿ ದರದಲ್ಲಿ ವಸ್ತುಗಳ ಮಾರಾಟ ಮಾಡುವ ಪ್ರವೃತ್ತಿಯು ಅನಾರೋಗ್ಯಕಾರಿ ಪೈಪೋಟಿಗೆ ಕಾರಣವಾಗಿದೆ ಎನ್ನುವ ಆತಂಕ ವ್ಯಕ್ತವಾಗಿದೆ. ಈ ಬಗ್ಗೆ ಸರ್ಕಾರ ಮತ್ತು ಜನ ಗಮನ ಹರಿಸಬೇಕು ಎಂದು ಎಐಸಿಪಿಡಿಎಫ್ ರಾಷ್ಟ್ರೀಯ ಅಧ್ಯಕ್ಷ ಧೈರ್ಯಶೀಲ್ ಪಾಟೀಲ್ ಒತ್ತಾಯಿಸಿದ್ದಾರೆ. ಆನ್‌ಲೈನ್ ಮತ್ತು ಆಫ್‌ಲೈನ್ ಮಾರಾಟ ಜಾಲಗಳ ನಡುವೆ ನ್ಯಾಯಸಮ್ಮತವಾದ ವ್ಯವಸ್ಥೆಯನ್ನು ರೂಪಿಸುವ ಸಲುವಾಗಿ ಮಸೂದೆಯೊಂದನ್ನು ತರಲು ಕೇಂದ್ರ ಸರ್ಕಾರವೂ ಪ್ರಯತ್ನ ನಡೆಸುತ್ತಿದೆ.

ಆಧಾರ: ಡೆಲಾಯ್ಟ್ ಮತ್ತು ಎಫ್‌ಐಸಿಸಿಐ –ಸ್ಪರಿಂಗ್ ಗ್ರೋತ್ ಇನ್ ಎಫ್‌ಎಂಸಿಜಿ, ರಿಟೇಲ್ ಆ್ಯಂಡ್ ಇ–ಕಾಮರ್ಸ್ ಸೆಕ್ಟರ್ಸ್ ಇನ್ ಇಂಡಿಯಾ ವರದಿ, ಇನ್‌ವೆಸ್ಟ್ ಇಂಡಿಯಾ ವೆಬ್‌ಸೈಟ್, ಜೆಎಂ ಫೈನಾನ್ಶಿಯಲ್‌ನ ‘ಡೀಪ್ ಡೈವ್: ಕ್ವಿಕ್ ಕಾಮರ್ಸ್’ ವರದಿ, ರೆಡ್‌ಸೀರ್ ಸ್ಟ್ರಾಟಜಿ ಕನ್ಸಲ್ಟೆಂಟ್ಸ್ ಅಧ್ಯಯನ ವರದಿ

ಸಿನಿ ಬಿಟ್ಸ್



ಚಿತ್ರದ ಪೋಸ್ಟರ್

ಬಲರಾಮನ ದಿನಗಳ ಫಸ್ಟ್ ಲುಕ್

‘ಆ ದಿನಗಳು’ ಖ್ಯಾತಿಯ ಕೆ.ಎಂ.ಚೈತನ್ಯ ನಿರ್ದೇಶನದಲ್ಲಿ ವಿನೋದ್ ಪ್ರಭಾಕರ್ ನಾಯಕರಾಗಿ ನಟಿಸುತ್ತಿರುವ ‘ಬಲರಾಮನ ದಿನಗಳು’ ಚಿತ್ರದ ಫಸ್ಟ್ ಲುಕ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ನಿರ್ಮಿಸುತ್ತಿರುವ ಈ ಚಿತ್ರ ವಿನೋದ್ ಪ್ರಭಾಕರ್ ನಾಯಕರಾಗಿ ನಟಿಸುತ್ತಿರುವ 25ನೇ ಚಿತ್ರ. ಇದು 1980ರ ಕಾಲಘಟ್ಟದಲ್ಲಿ ನಡೆಯುವ ಕಥೆಯಾಗಿದೆ. ಆ ಕಾಲಮಾನದ ಗೆಟಪ್‌ನಲ್ಲಿ ವಿನೋದ್ ಪ್ರಭಾಕರ್ ಕಾಣಿಸಿಕೊಂಡಿದ್ದಾರೆ.

ಸಂತೋಷ್ ನಾರಾಯಣನ್ ಸಂಗೀತ ನೀಡುತ್ತಿದ್ದಾರೆ. ‘ಬೆಂಗಳೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಮುಕ್ತಾಯವಾಗಿದೆ. ಎರಡನೇ ಹಂತದ ಚಿತ್ರೀಕರಣ ಆರಂಭವಾಗಲಿದೆ’ ಎಂದಿದೆ ಚಿತ್ರತಂಡ.



‘ತಾಯವ್ವ’ ಶೀರ್ಷಿಕೆ ಅನಾವರಣಗೊಳಿಸಿದ ಉಮಾಶ್ರೀ ಹಾಗೂ ಆರ್.ಅಶೋಕ್

‘ತಾಯವ್ವ’ ಶೀರ್ಷಿಕೆ ಅನಾವರಣ

ಸಾತ್ವಿಕ್ ಪವನ್ ಕುಮಾರ್ ನಿರ್ದೇಶನದ, ಗೀತಪ್ರಿಯ ಹಾಗೂ ಲತಾ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಚಿತ್ರಕ್ಕೆ ‘ತಾಯವ್ವ’ ಎಂಬ ಶೀರ್ಷಿಕೆ ಇಡಲಾಗಿದೆ. ಇತ್ತೀಚೆಗೆ ನಟಿ ಉಮಾಶ್ರೀ ಹಾಗೂ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಚಿತ್ರದ ಶೀರ್ಷಿಕೆ ಅನಾವರಣಗೊಳಿಸಿದರು.

‘ಸುದೀಪ್ ಮೊದಲ ಸಿನಿಮಾ ‘ತಾಯವ್ವ’ ಎನ್ನುವ ಶೀರ್ಷಿಕೆ ಹೊಂದಿತ್ತು. ನಾನು ಆ ಚಿತ್ರದಲ್ಲಿ ಅಜ್ಜಿಯ ಪಾತ್ರ ಮಾಡಿದ್ದೆ. ಅದೇ ಶೀರ್ಷಿಕೆ ಇದೀಗ ಮರುಬಳಕೆಯಾಗುತ್ತಿದೆ. ನಿರ್ಮಾಪಕ ಭಾ.ಮ. ಹರೀಶ್ ಒಳ್ಳೆಯ ಪ್ರಯತ್ನ ಮಾಡಿದ್ದಾರೆ. ಸಮಾಜಕ್ಕೆ ಅರಿವು ಮೂಡಿಸುವಂತಹ ಇಂತಹ ಸಿನಿಮಾಗಳು ಬಹಳ ಮುಖ್ಯವಾಗುತ್ತವೆ. ಇಂತಹ ಸ್ಪರ್ಧಾತ್ಮಕ ಜಗತ್ತಿನಲ್ಲಿ ಈ ರೀತಿ ಸಿನಿಮಾಗಳನ್ನು ಕಮರ್ಷಿಯಲ್ ವಿಧಾನದಲ್ಲಿ ಮಾಡುವುದು ಕಷ್ಟ’ ಎಂದರು ಉಮಾಶ್ರೀ.

‘ತಾಯವ್ವ’ ಸಿನಿಮಾವನ್ನು ನಂದಿ ಪ್ರಶಸ್ತಿ ಸಂಸ್ಥಾಪಕಿ ಎಸ್. ಪದ್ಮಾವತಿ ಚಂದ್ರಶೇಖರ್ ನಿರ್ಮಾಣ ಮಾಡಿದ್ದಾರೆ. ಸಾತ್ವಿಕ್ ಪವನ್ ಕುಮಾರ್ ನಿರ್ದೇಶನದ ಜೊತೆಗೆ ಛಾಯಾಚಿತ್ರಗ್ರಹಣದ ಜವಾಬ್ದಾರಿ ನಿಭಾಯಿಸಿದ್ದಾರೆ. ಪಿ.ಶೇಷಗಿರಿ ಕಥೆ ಚಿತ್ರಕಥೆ ಸಂಭಾಷಣೆ ಬರೆದಿರುವ ಈ ಸಿನಿಮಾಗೆ ಅನಂತ್ ಆರ್ಯನ್ ಸಂಗೀತ ಸಂಯೋಜಿಸಿದ್ದಾರೆ. ನಿರ್ಮಾಪಕ ಭಾ.ಮ.ಹರೀಶ್ ಈ ಚಿತ್ರವನ್ನು ಅರ್ಪಿಸುತ್ತಿದ್ದು, ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ ಸೆನ್ಸಾರ್‌ಗೆ ಅಣಿಯಾಗಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮರಕ್ಕೆ ಕಟ್ಟಿದ್ದ ಎತ್ತೊಂದಕ್ಕೆ ವ್ಯಕ್ತಿಯೊಬ್ಬ ಬಂದೂಕಿನಿಂದ ಗುಂಡು ಹೊಡೆಯುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಗೆದ್ದಿರುವುದನ್ನು ಸಂಭ್ರಮಿಸುತ್ತಾ ಕೇರಳದ ಕಾಂಗ್ರೆಸ್ ಮಾಧ್ಯಮ ಉಸ್ತುವಾರಿ ಮೊಹಮ್ಮದ್ ಮುಜಾಹೀದ್ ಅವರು ಎತ್ತಿಗೆ ಗುಂಡು ಹೊಡೆಯುತ್ತಿದ್ದಾರೆ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಲಾಗಿದ್ದು, ಹಲವರು ಅದನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು.

ವಿಡಿಯೊದ ಕೀ ಫ್ರೇಮ್‌ಗಳನ್ನು ರಿವರ್ಸ್ ಇಮೇಜ್ ವಿಧಾನದ ಮೂಲಕ ಇಂಟರ್‌ನೆಟ್‌ನಲ್ಲಿ ಹುಡುಕಾಡಿದಾಗ ಫ್ರೀ ಪ್ರೆಸ್ ಜರ್ನಲ್‌ನಲ್ಲಿ ಈ ವಿಡಿಯೊಕ್ಕೆ ಸಂಬಂಧಿಸಿದಂತೆ ಈ ವರ್ಷದ ಮೇ 7ರಂದು ಪ್ರಕಟಗೊಂಡ ಸುದ್ದಿ ಸಿಕ್ಕಿತು. ಆರು ತಿಂಗಳುಗಳಿಂದ ಈ ವಿಡಿಯೊ ತುಣುಕು ಬೇರೆ ಬೇರೆ ರೀತಿಯಲ್ಲಿ ಹರಿದಾಡಿದೆ. ವಿಡಿಯೊದಲ್ಲಿ ಇರುವುದು ಮಣಿಪುರದಲ್ಲಿ ಕುಕಿ ಸಮುದಾಯದ ಬಂಡುಕೋರ ಎಂದು ಒಮ್ಮೆ ಹೇಳಲಾಗಿತ್ತು. ಲೋಕಸಭಾ ಚುನಾವಣೆಯಲ್ಲಿ ಕೇರಳದಲ್ಲಿ ರಾಹುಲ್ ಗಾಂಧಿ ಅವರು ಗೆದ್ದಿದ್ದಕ್ಕೆ ಹಸುವನ್ನು ಬಲಿ ಕೊಡಲಾಗಿದೆ ಎಂದು ಮತ್ತೊಮ್ಮೆ ಹೇಳಲಾಗಿತ್ತು. ಹಲವು ಫ್ಯಾಕ್ಟ್ ಚೆಕ್ ವರದಿಗಳು ಇವು ಸುಳ್ಳು ಎಂದು ಹೇಳಿದ್ದವು. ಈ ವಿಡಿಯೊ ಎಲ್ಲಿಯದ್ದು ಎಂದು ಸ್ವತಂತ್ರವಾಗಿ ಖಚಿತ ಪಡಿಸಿಕೊಳ್ಳಲು ನಮಗೆ ಸಾಧ್ಯವಾಗಿಲ್ಲ. ಆದರೆ, ಹಳೆಯ ವಿಡಿಯೊವಾಗಿದ್ದು ವಯನಾಡ್‌ನಲ್ಲಿ ಇತ್ತೀಚೆಗೆ ನಡೆದ ಚುನಾವಣೆ ಮತ್ತು ಪ್ರಿಯಾಂಕಾ ಗೆಲುವಿಗೆ ಸಂಬಂಧಿಸಿದ್ದಲ್ಲ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ವರದಿಯಲ್ಲಿ ಹೇಳಿದೆ.

ಗುಂಡಣ್ಣ



ಮನುಷ್ಯನಿಗೆ ಅಹಂಕಾರ ಇರಬಾರದು!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

81

ಒಬ್ಬ ಜ್ಯೋತಿಷಿ ಬಳಿಗೆ ಹೋದ. ಅವ, ‘ನಿನಗೆ ಗುರು ಸರಿ ಇಲ್ಲ, ರಾಹು, ಕೇತು ತೊಂದರೆ ಕೊಡ್ತಾವ’ ಅಂದ. ತಮಾಷೆ ಎಂದರೆ ಜ್ಯೋತಿಷಿ ಹೇಳಿದ ಅಂತ ಕೋಟಿ ಕೋಟಿ ಕಿಮೀ ದೂರದಲ್ಲಿರುವ ಗ್ರಹಗಳನ್ನು ನಂಬುತ್ತೀರಿ. ಮಗ್ಗುಲಲ್ಲೇ ಇರುವ ಪತ್ನಿ ಅಥವಾ ಪತಿಯನ್ನು ನಂಬೋದಿಲ್ಲ. ಇದು ದುರಂತ. ಪ್ರೇಮ, ವಿಶ್ವಾಸ ಇದ್ದರೆ ಜೀವನ ಕಟ್ಟಲಿಕ್ಕೆ ಸಾಧ್ಯ ಇದೆ. ಮನೆ ಸಣ್ಣದಿರಲಿ, ದೊಡ್ಡದಿರಲಿ ತೊಂದರೆ ಇಲ್ಲ. ಮನಸ್ಸು ದೊಡ್ಡದಿರಬೇಕು. ಹೃದಯದಲ್ಲಿ ಪ್ರೇಮ ತುಂಬಿರಬೇಕು.

ದೇವರ ಮುಂದೆ ಹೋಗಿ ದೀಪ ಹಚ್ತಾರ. ದೇವರೇನು ಕತ್ತಲೆಯಲ್ಲಿ ಕುಂತಾನೇನು? ಅಜ್ಞಾನದ ಕತ್ತಲೆಯಲ್ಲಿ ಕುಳಿತಿದ್ದು ನಾವು. ದೇವರಲ್ಲ. ಅಜ್ಞಾನದ ಕತ್ತಲೆ, ಅಹಂಕಾರದ ಕತ್ತಲೆ ನಿನ್ನೊಳಗೆ ಇರುವಾಗ ದೇವರ ಮುಂದೆ ದೀಪ ಹಚ್ಚಿದರೆ ಏನೂ ಪ್ರಯೋಜನವಿಲ್ಲ. ಯಾರ ಮನೆಯಲ್ಲಿ ಇಲಿ ಹೆಗ್ಗಣ ಇರ್ತಾವೆ ಹೇಳಿ? ಯಾರ ಮನೆಯಲ್ಲಿ ಬೆಳಕು ಇಲ್ಲ, ಕತ್ತಲೆ ತುಂಬಿದೆಯೋ ಅಲ್ಲಿ ಇಲಿ ಹೆಗ್ಗಣಗಳು ಇರ್ತಾವ. ಹಾಗೆಯೇ ಯಾರ ತಲೆಯಲ್ಲಿ ಜ್ಞಾನದ ದೀಪ ಇಲ್ಲವೋ ಅವರ ತಲೆಯಲ್ಲಿ ದ್ವೇಷ, ಅಸೂಯೆ ತುಂಬಿಕೊಂಡಿರ್ತಾವ. ಜ್ಞಾನ ಅಂದರ ಏನು? ಈ ಜಗತ್ತಿನಲ್ಲಿ ನಾನು ಬಹಳ ಸಣ್ಣವನು ಎಂದು ತಿಳಿದುಕೊಳ್ಳುವುದೇ ಜ್ಞಾನ. ‘ದೇವನೇ, ನೀನು ಬಹಳ ದೊಡ್ಡವ, ನಿನ್ನ ಕರುಣೆ ಈ ಬದುಕು’ ಎಂದು ಬದುಕಿ. ಈ ಭೂಮ್ಯಾಗ ಪ್ರತಿ ನಿತ್ಯ ಕೋಟಿ ಕೋಟಿ ಸಸ್ಯಗಳು ಹುಟ್ತಾವ. ಯಾವುದಾದರೂ ತಮ್ಮ ಹುಟ್ಟುಹಬ್ಬ ಮಾಡಿಕೊಂಡಾವೇನು? ಹೂವು ಹಣ್ಣು ಬಿಡ್ತಾವಲ್ಲ ಯಾವುದಾದರೂ ಬ್ಯಾಂಡ್ ಬಾರಿಸ್ಯಾವೇನು? ತುತ್ತೂರಿ ಊದ್ಯಾವೇನು? ಪ್ರತಿ ನಿತ್ಯ ಸೂರ್ಯ ಚಂದ್ರ ಉದಯಿಸುತ್ತಾರಲ್ಲ, ಅವರೇನು ಮೆರವಣಿಗೆ ಮಾಡಿಕೊಂಡಾರೇನು? ನಾವು 30–40ರ ಸೈಟಿನಲ್ಲಿ ಮನೆ ಕಟ್ಟಿಸಿ ಅದರೊಳಗೊಂದು ದೇವರ ಕೋಣೆ ಮಾಡಿ ಎಲ್ಲಾ ನಾನೇ ಮಾಡಿದೆ ಅಂತ ಅಹಂಕಾರ ಪಡ್ತೀವಿ. ಮನುಷ್ಯನಿಗೆ ಅಹಂಕಾರ ಇರಬಾರದು.

ಕವಿ ರವೀಂದ್ರರು ಹೇಳ್ತಾರೆ, ‘ನೀನು ದೇವರ ಮುಂದೆ ಹೋಗಿ ತಲೆ ಬಾಗಬೇಡ. ನೀನು ತಲೆ ಬಾಗಬೇಕು ಅಂದರ ನಿನ್ನ ತಂದೆ ತಾಯಿ, ಸ್ನೇಹಿತರಿಗೆ ತಲೆಬಾಗು. ಈ ಜಗತ್ತಿಗೆ ತಲೆ ಬಾಗು. ಯಾಕಂದರ ನಮ್ಮ ಮೇಲೆ ಈ ಜಗತ್ತಿನ ಋಣ ಬಹಳ ಐತಿ. ಸುಂಟರಗಾಳಿ ಬಂದರ ಮರ ಬೀಳತೈತೆ ವಿನಾ ಹುಲ್ಲು ಬೀಳೋದಿಲ್ಲ. ಯಾಕೆಂದರ ಹುಲ್ಲು ಬಾಗತೈತಿ. ನಿಮ್ಮ ಜೀವನದಲ್ಲಿ ನೀವು ಬಹಳ ತಪ್ಪುಗಳನ್ನು ಮಾಡೀರಿ. ಅದನ್ನು ನೆನೆಸಿಕೊಂಡು ನಿಮ್ಮ ಕಣ್ಣಲ್ಲಿ ಪ್ರಾಯಶ್ಚಿತ್ತದ ಕಣ್ಣೀರು ಬರಲಿ. ಈ ಭೂಮಿ ಏನೆಲ್ಲ ಕೊಟ್ಟೈತಿ, ಆದರೆ ನಾವು ಅದರೊಳಗೆ ವಿಷ ಹಾಕತೀವಿ. ಆಕಳು ಹಾಲು ಕೊಡಬೇಕು ಅಂತ ಅದರ ಕರವನ್ನು ತೋರಿಸಿ ಹಾಲು ಕರಕೊಂಡೇವಿ, ಎತ್ತು ಹೊಲ ಊಳ್ತೈತಿ. ಆದರೆ ಜೋಳ ನಾವು ತಿಂದು ದಂಟು ಅದಕ್ಕೆ ಹಾಕಿದ್ದೇವೆ. ಇದು ಮೋಸ ಅಲ್ಲೇನು? ಅದಕ್ಕೆ ನಾವು ಕ್ಷಮೆ ಕೇಳಬೇಕು. ತಂದೆ ತಾಯಿಗೆ ಕ್ಷಮೆ ಕೇಳು.

ಅಪ್ಪನ ಆಸ್ತಿಯಲ್ಲಿ ಪಾಲು ಕೇಳುವವ ನಿಜವಾದ ಮಗನಲ್ಲ. ಅಪ್ಪನ ಆದರ್ಶದಲ್ಲಿ ಯಾರು ಪಾಲು ಕೇಳ್ತಾರಲ್ಲ ಅವರು ನಿಜವಾದ ಮಕ್ಕಳಾಗ್ತಾರ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಡಿಸೆಂಬರ್ 5, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಚತುರ್ಥಿ ಗಂ. 12-50 ನಕ್ಷತ್ರ: ಉತ್ತರಾಷಾಢ ಗಂ. 17-27 ಯೋಗ: ವೃದ್ಧಿ ಗಂ. 12-28 ಕರಣ: ವಿಷ್ಟಿ ಗಂ. 12-50, ವೃಶ್ಚಿಕ ಮಾಸದ 19 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 1.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-44 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 02 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 3, 8

ಮೇಷ: ತೆಗೆದುಕೊಳ್ಳುವ ಮೌನವೆಂಬ ಅಸ್ತ್ರವು ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ. ಆಂಜನೇಯನ ಸೇವೆಯಿಂದ ಗೊಂದಲ ನಿವಾರಣೆಯಾಗುತ್ತದೆ. ವೈದ್ಯರು ನೀಡಿದ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸಿ.

ವೃಷಭ: ಕಾರ್ಯಗಳ ಅಭಿವೃದ್ಧಿಯ ಬಗ್ಗೆ ಯೋಚಿಸಲು ಮತ್ತು ಹೊಸ ಹೊಂದಾಣಿಕೆಗಳ ಬಗ್ಗೆ ಕೆಲಸ ಮಾಡಲು ಸೂಕ್ತ ದಿನ. ದೇಹದಲ್ಲಿ ಉತ್ಸಾಹವಿರುವುದರಿಂದ ಎಲ್ಲ ಕಾರ್ಯಗಳಲ್ಲಿ ಯಶಸ್ಸು ಸಿಗಲಿದೆ.

ಮಿಥುನ: ಯಾವುದೇ ಕಾರಣಕ್ಕೂ ಉದ್ವೇಗಕ್ಕೆ ಒಳಗಾಗಬೇಡಿ. ಯಶಸ್ಸು ನಿಮ್ಮದಾಗಲಿದೆ. ಭಾವನೆಗಳಿಗೆ ಗೆಳೆಯರ ಸೂಕ್ತ ಪ್ರತಿಕ್ರಿಯೆ ದೊರೆಯಲಿದೆ. ಅವಶ್ಯಕತೆ ಇರುವಾಗ ಧನ ಪ್ರಾಪ್ತಿಯಾಗಲಿದೆ.

ಕರ್ಕಾಟಕ: ಹಿರಿಯ ಅಧಿಕಾರಿಗಳ ಆಕಸ್ಮಿಕ ಭೇಟಿಯ ಫಲವಾಗಿ ಹುದ್ದೆ, ಅಧಿಕಾರ ಪ್ರಾಪ್ತಿ. ಯಾವುದೇ ಲೆಕ್ಕಚಾರವಿಲ್ಲದ ಆರ್ಥಿಕ ಜೀವನ ಸಮಸ್ಯೆಯನ್ನು ಸೃಷ್ಟಿ ಮಾಡುವುದು.

ಸಿಂಹ: ಮಗನ ಆರೋಗ್ಯದಲ್ಲಿ ಉಂಟಾದ ವ್ಯತ್ಯಾಸದಿಂದ ಸಾಂಸಾರಿಕ ಜವಾಬ್ದಾರಿ ಹೆಚ್ಚಾಗುವುದು. ಕುಟುಂಬ ಸದಸ್ಯರ ಆರೋಗ್ಯ ವಿಷಯದಲ್ಲಿನ ಚಿಂತೆ ತಪ್ಪಿದ್ದಲ್ಲ. ಆತ್ಮವಿಶ್ವಾಸವೇ ಶ್ರೀರಕ್ಷೆಯಾಗಿರುತ್ತದೆ.

ಕನ್ಯಾ: ಮನೋಭಿಲಾಷೆಗೆ ಪೆಟ್ಟು ಬೀಳುವ ಕಾರಣದಿಂದಾಗಿ ಪ್ರೀತಿ ಪಾತ್ರರು ದೂರವಾಗುವ ಸಂಭವವಿದೆ. ವಾಹನಗಳ ಬಿಡಿ ಭಾಗಗಳ ಮಾರಾಟಗಳಿಂದ ಲಾಭ ಪಡೆಯುವಿರಿ. ಒತ್ತಡಗಳಿಂದ ಹೊರಬರಲು ವಿಶ್ರಾಂತಿ ಬಯಸುವಿರಿ.

ತುಲಾ: ನೂತನ ಯೋಚನೆ ಖರ್ಚಿನದ್ದಾದರೂ ಮುಂದಿನ ದಿನದಲ್ಲಿ ಉಪಕಾರಿಯಾಗಿರುತ್ತದೆ. ಕೀರ್ತಿ ಎಲ್ಲ ಕಡೆಗೆ ಪಸರಿಸುವುದು. ರಾಜಕೀಯ ವಿಷಯಗಳಲ್ಲಿ ಮೌನ ವಹಿಸುವುದು ಲೇಸು.

ವೃಶ್ಚಿಕ: ಕ್ರಿಯಾಶೀಲ ಉದ್ಯೋಗದಿಂದ ತೃಪ್ತಿ ಕಾಣುವಿರಿ. ಬದುಕಿನಲ್ಲಿ ಆಸೆಗಳು ಬಹುಮಟ್ಟಿಗೆ ಈಡೇರುವುದರಿಂದ ಹೊಸ ಹುರುಪು ಮೂಡಲಿದೆ. ದೈನಂದಿನ ಕೆಲಸಗಳಲ್ಲಿ ಬದಲಾವಣೆಗಳಿಲ್ಲ.

ಧನು: ರೀತಿ ನೀತಿಗಳು ಕುಟುಂಬದ ಗೌರವಕ್ಕೆ ಧಕ್ಕೆ ತರುವಂತಾಗುವುದು. ಸ್ನೇಹಿತರ ಸಹಾಯ, ಸಹಕಾರ ಸರಾಗವಾಗಿ ನಡೆಯಲಿದೆ. ಮೂಳೆಗೆ ಸಂಬಂಧಿಸಿದಂತೆ ಆರೋಗ್ಯದಲ್ಲಿ ಗಮನವಿರಲಿ.

ಮಕರ: ಹಣಕಾಸಿನ ವ್ಯವಹಾರಗಳೆಲ್ಲ ಸುಗಮವಾಗಿ ಸಾಗುತ್ತಿರುವುದರಿಂದ ಮನಸ್ಸು ನಿರಾಳವಾಗಿರುವುದು. ವಿಶೇಷ ವ್ಯಕ್ತಿಗಳ ಭೇಟಿಯು ಸಂತೋಷ ತರುವುದಲ್ಲದೆ, ಯೋಜನೆಗಳಿಗೆ ಚೈತನ್ಯ ತುಂಬುವುದು.

ಕುಂಭ: ಅಹಂಕಾರದ ನಡವಳಿಕೆ ಸೋಲು, ನಷ್ಟ, ನಿರಾಸೆಗೆ ನೇರ ಕಾರಣವಾಗುವುದು. ಅತ್ತೆ-ಸೊಸೆ ಬಾಂಧವ್ಯಗಳಲ್ಲಿ ಅಭಿಪ್ರಾಯ ಉಂಟಾಗಬಹುದು. ವಾಹನದಲ್ಲಿ ಚಲಿಸುವಾಗ ಜಾಗ್ರತೆ ಇರಲಿ.

ಮೀನ: ದೇಹದಲ್ಲಿ ರಕ್ತ ಸಂಬಂಧ ತೊಂದರೆಗಳು ಎದುರಾಗಬಹುದು. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸಾಧ್ಯವಾದಷ್ಟು ಉಳಿತಾಯ ಮಾಡುವ ಪ್ರಯತ್ನ ರೂಢಿಸಿಕೊಳ್ಳಿ. ಮಾಧ್ಯಮ ಸಂಸ್ಥೆಗಳಲ್ಲಿ ಇರುವವರಿಗೆ ಉತ್ತಮ ದಿನ.

ಪದಬಂಧ 5882


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

5.ತಾಪದ ಹೊತ್ತಿನಲ್ಲಿ ತೋರಬಹುದಾದ ಶೌರ್ಯ (3)
6.ಒಡೆಯನು ತೋರಿದ ಹೊಟ್ಟೆಕಿಚ್ಚು (4)
7.ಪರಪುರುಷನಲ್ಲ! ಪರಮಾತ್ಮ! (6)
11.ಪೇಮಿಗಳ ಹುಸಿ ಜಗಳ (6)
16.ಒತ್ತಾಯವನ್ನು ಹೀಗೆನ್ನಿ (4)
18.ಸಣ್ಣ ಸಣ್ಣ ಗೆಜ್ಜೆಗಳಿಂದ ಕೂಡಿದ ಕಾಲಿನ ಕಡಗ (3)

ಮೇಲಿಂದ ಕೆಳಕ್ಕೆ

1.ಸುಂದರವಾದ ಅರುಣೋದಯ (4)
2.ಅಪ್ಪನ ಈ ರೂಪ ಬಹಳ ವಿರಳ! (3)
3.ಪುಂಡರೀಕ ಹಿಡಿದಿರುವ ಈತ ತಂಟೆಕೋರ! (2)
4.ಹರಿದಂತ ನೋಡುವಾಗ ಹಸಿರು ಬಣ್ಣ ಕಾಣುತ್ತಿದೆಯಲ್ಲಾ! (3)
6.ನೆನಪು ಮಾಡಿಕೊಂಡು ತೋರಿದ ಬಿನ್ನಾಣ (3)
8.ದಶಕದಿಂದಲೂ ಕಾಟ ಕೊಡುತ್ತಿರುವ ಸೊಳ್ಳೆ (3)
9.ದಾಖಲೆಗಳ ಕೊನೆಯಲ್ಲಿ ಸೇರಿಸುವ ವಿಶೇಷಾಂಶ (2)
10.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)
12.ಮಗನಿಲ್ಲಿ ತಿರುಗಿದ್ದಾನೆ (3)
13.ನಡುವೆ ಗರ ತಿರುಗಿಸಿ ಸಾಗುವಳಿ ಮಾಡುವಿಕೆ (4)
14.ಹಣಕ್ಕಾಗಿ ನಡೆದ ಗೊಂದಲ (4)
15.ಒನಕೆಯನ್ನು ಆಯುಧವನ್ನಾಗಿ ಮಾಡಿಕೊಂಡು ಶತ್ರುಗಳನ್ನು ಮೆಟ್ಟಿಸಿದ ಧೈರ್ಯವಂತೆ! (3)
17.ವಂದಿಸುವಾಗ ಹೊಗಳುಭಟ್ಟ ಕಾಣಿಸಿದನಲ್ಲಾ! (2)



5881ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಮನ್ವಂತರ 3.ಪಿಳ್ಳಂಗೋವಿ 5.ತಿರುಕ 7.ಮಿತ್ರ 9.ಹುಸಿಕಾಳಗ 12.ಸ್ಥಳಪುರಾಣ 14.ತರಿ 17.ಗಾಯಕ 19.ಸಮಾಧಾನ 20.ಸರಿತ್ಪತಿ

ಮೇಲಿಂದ ಕೆಳಕ್ಕೆ:
1.ಮರುಭೂಮಿ 2.ರತಿ 3.ಪಿಕ 4.ವಿದ್ವಾಂಸ 6.ರುಬುಸಿ 8.ತ್ರಯಸ್ತ 9.ಹುರುಪು 10.ಕಾರಣ 11.ಗಣಿತ 13.ರಾಧೇಯ 15.ರಿಯಾಯಿತಿ 16.ಪ್ರಯಾಸ 17.ಗಾನ 18.ಕಸ

ಸುಡೊಕು 6267

	7	9			3		8	
	4	3		8			5	9
8			2	6		7		4
	8			2		1		5
		2	8		5		6	
5				3			2	
9		7	5					6
						9	4	
4	3		6		1		7	2


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6266 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,457
ಇಂದಿನ ಅಂತ್ಯ	24,467
▲	10
ದಿನದ ಗರಿಷ್ಠ	24,573

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹635
12 ಕ್ಕೆ	₹82
ಮೈಸೂರು	
100ಕ್ಕೆ	₹637

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕಿ.ಗ್ರಾ)	₹511-672
ದ್ವಿತಳಿ (ಕಿ.ಗ್ರಾ)	₹500-850

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹194
ಆರ್‌ಎಸ್‌ಎಸ್-5	₹187
ಗುಡ್ ಲಾಟ್	₹182

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹20250
ಎಸಿ	₹10800
ಆರ್‌ಪಿ	₹18000
ಆರ್‌ಸಿ	₹10140

ಯುಪಿಐ ಲೈಟ್ ವ್ಯಾಲೆಟ್ ಮಿತಿ ಹೆಚ್ಚಳ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬುಧವಾರ ಯುಪಿಐ ಲೈಟ್‌ನ ವ್ಯಾಲೆಟ್ ಮಿತಿಯನ್ನು ₹5 ಸಾವಿರಕ್ಕೆ ಹಾಗೂ ಪ್ರತಿ ವಹಿವಾಟಿನ ಮಿತಿಯನ್ನು ₹1 ಸಾವಿರಕ್ಕೆ ಹೆಚ್ಚಿಸಿದೆ. ಇದರಿಂದ ತ್ವರಿತ ಪಾವತಿ ವ್ಯವಸ್ಥೆಗೆ ಅನುಕೂಲವಾಗಲಿದೆ.

ಈ ಮೊದಲು ಆಫ್‌ಲೈನ್ ಮೂಲಕ ಪ್ರತಿ ವಹಿವಾಟಿನ ಮಿತಿ ₹500 ಇದ್ದರೆ, ವ್ಯಾಲೆಟ್ ಮಿತಿಯನ್ನು ₹2 ಸಾವಿರಕ್ಕೆ ನಿಗದಿಪಡಿಸಲಾಗಿತ್ತು.

ಆಫ್‌ಲೈನ್ ವಹಿವಾಟಿಗೆ ಸಂಬಂಧಿಸಿದಂತೆ 2022ರ ಜನವರಿಯಲ್ಲಿ ರೂಪಿಸಿದ್ದ ನಿಯಮಾವಳಿಗಳನ್ನು ಪರಿಷ್ಕರಿಸಲಾಗಿದೆ. ಇದರಿಂದ ಸಾಕಷ್ಟು ಯುಪಿಐ ಬಳಕೆದಾರರಿಗೆ ಅನುಕೂಲವಾಗಲಿದೆ.

ಮುಂಬೈ ಧಾರಣೆ

ಶೇಂಗಾ

04-12-2024

ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರೆಗೆ ಬಿಟ್ಟ)	1500 (1470)
ಒಂದು ಬಾರಿ ಶುದ್ಧ ತೈಲ	1495 (1465)
ಪಾಮ್ ಬಾರಿ ಶುದ್ಧ ತೈಲ	1408 (1378)
ಸೂರ್ಯಕಾಂತಿ ಎಣ್ಣೆ ಕಚ್ಚಾ	1345 (1330)

ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿ)

ಅಪರಂಜಿ ಚಿನ್ನ 10ಗ್ರಾಂ
₹76,000 (76,200)
ಬೆಳ್ಳಿ ಕೆ.ಜಿ ₹90,000 (90,100)
ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹5000-6600
ಮಧ್ಯಮ	₹3000-5000
ಸಣ್ಣ	₹2000-3000

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14000-14000
ಮಧುಗಿರಿ	₹6500-8500

ಸರ್ಫೇಸಿ ಕಾಯ್ದೆ ವ್ಯಾಪ್ತಿಗೆ ಕಾಫಿ ಬೆಳೆ ಬರಲ್ಲ: ಕೇಂದ್ರ ಸರ್ಕಾರ ಹೇಳಿಕೆ

ಕಾಫಿ ಉತ್ಪಾದನೆ ಹೆಚ್ಚಳ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ 2024–25ನೇ ಸಾಲಿನಲ್ಲಿ ಕಾಫಿ ಉತ್ಪಾದನೆಯು ಹೆಚ್ಚಳವಾಗುವ ನಿರೀಕ್ಷೆಯಿದೆ ಎಂದು ಕೇಂದ್ರ ಸರ್ಕಾರವು ಬುಧವಾರ ಲೋಕಸಭೆಗೆ ತಿಳಿಸಿದೆ.

2023–24ರಲ್ಲಿ 3.60 ಲಕ್ಷ ಟನ್ ಉತ್ಪಾದನೆಯಾಗಿತ್ತು. ಈ ಬಾರಿ 3.63 ಲಕ್ಷ ಟನ್ ಉತ್ಪಾದನೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ದೇಶದಲ್ಲಿ ಕಾಫಿ ವಲಯದ ಅಭಿವೃದ್ಧಿಗಾಗಿ ಕಾಫಿ ಮಂಡಳಿಯು ಹಲವು ಕ್ರಮಗಳನ್ನು ಕೈಗೊಂಡಿದೆ. ಇದಕ್ಕೆ ಪೂರಕವಾಗಿ ಸಮಗ್ರ ಕಾಫಿ ಅಭಿವೃದ್ಧಿ ಯೋಜನೆಯನ್ನು (ಐಸಿಡಿಪಿ) ಅನುಷ್ಠಾನಗೊಳಿಸಿದೆ ಎಂದು ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು, ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ.

ಈ ಯೋಜನೆಯಡಿ ಕಾಫಿ ಗಿಡಗಳ ಮರು ನೆಡುವಿಕೆ, ಗುಣಮಟ್ಟವನ್ನು ಮೇಲ್ದರ್ಜೆಗೇರಿಸುವುದು, ಜಲ ಮರು ಪೂರಣ, ಕಾಫಿ ಬೆಳೆಯುವ ಪ್ರದೇಶದ ವಿಸ್ತರಣೆ ಸೇರಿದೆ. ದೇಶದಲ್ಲಿ ಕಾಫಿಯ ಗುಣಮಟ್ಟ ಹಾಗೂ ಉತ್ಪಾದಕತೆ ಹೆಚ್ಚಳಕ್ಕೆ ಒತ್ತು ನೀಡಲಾಗುತ್ತಿದೆ ಎಂದು ಹೇಳಿದ್ದಾರೆ.



ಭಾರತದ ಕಾಫಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಪ್ರಾತಿನಿಧ್ಯ ಕಲ್ಪಿಸಲು ಮಂಡಳಿಯು ಮುಂದಾಗಿದೆ. ಜಾಗತಿಕ ಮಟ್ಟದಲ್ಲಿ ನಡೆಯುವ ಪ್ರದರ್ಶನಗಳಲ್ಲಿ ಇಲ್ಲಿನ ಕಾಫಿಯನ್ನು ಪ್ರದರ್ಶಿಸಲಾಗುತ್ತಿದೆ. ಕಾಫಿಯ ಮೌಲ್ಯವರ್ಧನೆ ಮೂಲಕ ಅದರ ಪ್ರಮಾಣದ ಹೆಚ್ಚಳಕ್ಕೆ ಒತ್ತು ನೀಡಲಾಗಿದೆ ಎಂದು ಹೇಳಿದ್ದಾರೆ.

ಬೆಳೆಗಾರರ ಹಿತದೃಷ್ಟಿಯಿಂದ ಕಾಫಿಗೆ ಶೇ 30ರಷ್ಟು ಚಿಕೋರಿ ಮಿಶ್ರಣ ಮಾಡುವ ಬಗ್ಗೆ ಸರ್ಕಾರವು ನಿಯಮಾವಳಿ ರೂಪಿಸಲು ಮುಂದಾಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿರುವ ಸಚಿವರು, 'ಕಾಫಿ–ಚಿಕೋರಿ ಮಿಶ್ರಣ ಸಂಬಂಧ ಭಾರತದ ಆಹಾರ ಸುರಕ್ಷತೆ ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ನಿಯಮಾವಳಿ ರೂಪಿಸಿದೆ' ಎಂದು ತಿಳಿಸಿದ್ದಾರೆ.

2011ರ ಆಹಾರ ಸುರಕ್ಷತೆ ಮತ್ತು ಮಾನದಂಡಗಳನ್ನು (ಆಹಾರ ಪದಾರ್ಥಗಳ ಮಾನದಂಡಗಳು ಮತ್ತು ಆಹಾರ ಸೇರ್ಪಡೆ) ಪಾಲಿಸಬೇಕಿದೆ. ಇದರ ಅನ್ವಯ ಕಾಫಿಗೆ ಮಿಶ್ರಣ ಮಾಡುವ ಪದಾರ್ಥಗಳ ಪ್ರಮಾಣವು ಶೇ 51ಕ್ಕಿಂತ ಕಡಿಮೆ ಇರಬೇಕಿದೆ ಎಂದು ಹೇಳಿದ್ದಾರೆ.

ಕಾಫಿ ಬೆಳೆಯು ಆರ್ಥಿಕ ಸ್ವತ್ತುಗಳ ಸ್ವರೀಕರಣ, ಪುನರ್‌ರಚನೆ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ (ಸರ್ಫೇಸಿ) ವ್ಯಾಪ್ತಿಗೆ ಬರುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಸಾಲ ಮರುಪಾವತಿ ಮಾಡದ ಕಾಫಿ ಬೆಳೆಗಾರರ ತೋಟಗಳನ್ನು ಕೆಲವು ಬ್ಯಾಂಕ್‌ಗಳು ಈ ಕಾಯ್ದೆ ನಡಿಯಲ್ಲಿ ಹರಾಜು ಹಾಕಿರುವ ಪ್ರಕರಣಗಳು ಕರ್ನಾಟಕದಲ್ಲಿ ವರದಿಯಾಗಿವೆ.

ಬೆಂಬಲ ಬೆಲೆ: ಮನವಿ ಸ್ವೀಕಾರ

ಚಹ ಮತ್ತು ಕಾಫಿಯನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ (ಎಂಎಸ್‌ಪಿ) ಸೇರ್ಪಡೆಗೊಳಿಸುವ ಬಗ್ಗೆ ಮನವಿಗಳನ್ನು ಸ್ವೀಕರಿಸಲಾಗಿದೆ ಎಂದು ತಮಿಳುನಾಡು ಸಂಸದ ರಾಜಾ ಎ. ಅವರು ಕೇಳಿರುವ ಪ್ರಶ್ನೆಗೆ, ಸಚಿವ ಪಿಯೂಷ್ ಗೋಯಲ್ ಉತ್ತರಿಸಿದ್ದಾರೆ.

ಆದರೆ, ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು (ಸಿಎಸಿಪಿ) ಶಿಫಾರಸು ಮಾಡಿರುವ 22 ಕೃಷಿ ಹುಟ್ಟುವಳಿಗಳಿಗಷ್ಟೇ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ಇದರ ಪ್ರಮುಖವಾಗಿ ಭತ್ತ, ಜೋಳ, ಮೆಕ್ಕೆಜೋಳ, ರಾಗಿ, ತೊಗರಿ, ಹೆಸರು, ಉದ್ದು, ಸೂರ್ಯಕಾಂತಿ ಸೇರಿವೆ ಎಂದು ವಿವರಿಸಿದ್ದಾರೆ.

ಸುದ್ದಿ 2 ನಿಮಿಷ

ಆರ್‌ಬಿಐ ಎಂಪಿಸಿ ಸಭೆ ಆರಂಭ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ಬುಧವಾರ ಆರಂಭಗೊಂಡಿದೆ.

ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರವು ಆರ್‌ಬಿಐ ನಿಗದಿತ ಗುರಿಗಿಂತಲೂ ಹೆಚ್ಚು ದಾಖಲಾಗಿದೆ. ಹಾಗಾಗಿ, ಈ ಬಾರಿಯೂ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ನಿರೀಕ್ಷೆಯಿದೆ ಎಂದು ಹೇಳಲಾಗಿದೆ. ಡಿಸೆಂಬರ್ 6ರಂದು ಗವರ್ನರ್ ಶಕ್ತಿಕಾಂತ ದಾಸ್ ಅವರು, ಸಭೆಯ ನಿರ್ಣಯವನ್ನು ಘೋಷಿಸಲಿದ್ದಾರೆ.

ಡಿಸೆಂಬರ್ 10ರಂದು ಶಕ್ತಿಕಾಂತ ದಾಸ್ ಅವರ ಅಧಿಕಾರಾವಧಿ ಮುಕ್ತಾಯಗೊಳ್ಳಲಿದ್ದು, ಇದು ಅವರಿಗೆ ಕೊನೆಯ ಸಭೆಯಾಗಿದೆ.

ಪ್ರಸ್ತುತ ರೆಪೊ ದರ ಶೇ 6.5ರಷ್ಟಿದೆ. 2023ರ ಫೆಬ್ರುವರಿಯಿಂದಲೂ ಪರಿಷ್ಕರಣೆ ಮಾಡಿಲ್ಲ. ಮುಂದಿನ ವರ್ಷದ ಫೆಬ್ರುವರಿಯಲ್ಲಿ ನಡೆಯಲಿರುವ ಎಂಪಿಸಿ ಸಭೆಯಲ್ಲಿ ರೆಪೊ ದರ ಪರಿಷ್ಕರಿಸುವ ನಿರೀಕ್ಷೆಯಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.



'ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆರ್‌ಬಿಐ ರೆಪೊ ದರ ಕಡಿಗೊಳಿಸುವ ಮುನ್ಸೂಚನೆ ಇಲ್ಲ. 2025ರ ಏಪ್ರಿಲ್‌ನಿಂದ ರೆಪೊ ದರ ಕಡಿತಕ್ಕೆ ಸಂಬಂಧಿಸಿದಂತೆ ಹಣಕಾಸು ನೀತಿ ಸಮಿತಿ ಸಭೆಯ ನಿಲುವು ಬದಲಾಗುವ ಸಾಧ್ಯತೆಯಿದೆ' ಎಂದು ಎಸ್‌ಬಿಐ ರಿಸರ್ಚ್ ವರದಿ ತಿಳಿಸಿದೆ.

ಸೇವಾ ವಲಯ ಪ್ರಗತಿ: ಅಲ್ಪ ಇಳಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಪ್ರಗತಿ ನವೆಂಬರ್ ತಿಂಗಳಲ್ಲಿ ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ವರದಿ ಬುಧವಾರ ತಿಳಿಸಿದೆ.

ಸೇವಾ ವಲಯದ ಚಟುವಟಿಕೆಗಳನ್ನು ಸೂಚಿಸುವ ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಬ್ಯುಸಿನೆಸ್ ಸೂಚ್ಯಂಕವು, ಅಕ್ಟೋಬರ್‌ನಲ್ಲಿ 58.5 ದಾಖಲಾಗಿತ್ತು. ನವೆಂಬರ್‌ನಲ್ಲಿ 58.4ಕ್ಕೆ ಇಳಿದಿದೆ. ಕಳೆದ ವರ್ಷದ ನವೆಂಬರ್‌ನಲ್ಲಿ 56.9 ದಾಖಲಾಗಿತ್ತು ಎಂದು ತಿಳಿಸಿದೆ.

'ಸೇವಾ ವಲಯದ ಬೆಳವಣಿಗೆಯು ಅಕ್ಟೋಬರ್‌ಗೆ ಹೋಲಿಸಿದರೆ, ನವೆಂಬರ್‌ನಲ್ಲಿ ಸ್ವಲ್ಪ ಇಳಿಕೆಯಾಗಿದೆ. ಆದರೆ, ಈ ವಲಯದಲ್ಲಿನ ನೇಮಕಾತಿಯು ಏರಿಕೆಯಾಗಿದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ.

ನೇಮಕಾತಿ ಹೆಚ್ಚಳವು ಹೊಸ ಆರ್ಡರ್‌ಗಳು ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿನ ಹೆಚ್ಚಿದ ಬೇಡಿಕೆಗೆ ಕನ್ನಡಿ ಹಿಡಿದಿದೆ ಎಂದು ಹೇಳಿದ್ದಾರೆ.

ಅಡಿಕೆ ಆರೋಗ್ಯಕ್ಕೆ ಹಾನಿ: ಕೇಂದ್ರ ಅಧ್ಯಯನ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಡಿಕೆಯಿಂದ ಆರೋಗ್ಯದ ಮೇಲೆ ಆಗುವ ಪರಿಣಾಮಗಳ ಕುರಿತು ನಿರ್ಣಾಯಕ ಪುರಾವೆಗಳನ್ನು ಒದಗಿಸಲು 'ಅಡಿಕೆ ಮತ್ತು ಮಾನವನ ಆರೋಗ್ಯ' ಕುರಿತ ಸಾಕ್ಷ್ಯ ಆಧರಿತ ಸಂಶೋಧನೆ ನಡೆಸಲು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಯೋಜಿಸಿದೆ.

ಅಖಿಲ ಭಾರತ ವೈದ್ಯಕೀಯ ಸಂಸ್ಥೆ (ಏಮ್ಸ್), ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ ಸೇರಿ ರಾಷ್ಟ್ರ ಮತ್ತು ರಾಜ್ಯಮಟ್ಟದ 16 ಸಂಸ್ಥೆಗಳ ತಜ್ಞರು ಮಾನವನ ಆರೋಗ್ಯದ ಮೇಲೆ ಅಡಿಕೆಯ ಪರಿಣಾಮ ಕುರಿತು ವಿವರವಾದ ಸಂಶೋಧನೆ ನಡೆಸಲಿದ್ದಾರೆ.

ಅಡಿಕೆ ಕುರಿತು ವಿಶ್ವ ಆರೋಗ್ಯ ಸಂಸ್ಥೆ ಇತ್ತೀಚೆಗೆ ಪ್ರಕಟಿಸಿರುವ ವರದಿ ಕುರಿತು ಸಂಸದ ರಾಜ್‌ಮೋಹನ್ ಉನ್ನಿತಾನ್ ಅವರು ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಗೆ ಕೃಷಿ ಮತ್ತು ರೈತರ ಕಲ್ಯಾಣ ಖಾತೆಯ ರಾಜ್ಯ ಸಚಿವ ಭಗೀರಥ ಚೌಧರಿ ಅವರು ಲಿಖಿತ ಉತ್ತರ ನೀಡಿದ್ದಾರೆ.

'ಅಡಿಕೆ ಕ್ಯಾನ್ಸರ್‌ಕಾರಕ ಉತ್ಪನ್ನ ಎಂದು ಬಿಂಬಿಸುವ ಉದ್ದೇಶದಿಂದ



ಸಂಶೋಧನಾ ವರದಿಗಳನ್ನೇ ತಿರುಚಿ ಪ್ರಕಟಿಸಿರುವ ವಿಶ್ವ ಆರೋಗ್ಯ ಸಂಸ್ಥೆ ಮತ್ತು ಇಂಟರ್‌ನ್ಯಾಷನಲ್ ಏಜೆನ್ಸಿ ಫಾರ್ ರಿಸರ್ಚ್ ಆನ್ ಕ್ಯಾನ್ಸರ್ (ಐಎಆರ್‌ಸಿ) ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ಕ್ಯಾಂಪ್ಕೊ ಅಧ್ಯಕ್ಷ ಕಿಶೋರ್ ಕುಮಾರ್ ಕೊಡ್ಗಿ ಅವರು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರಿಗೆ ಇತ್ತೀಚೆಗೆ ಪತ್ರ ಬರೆದಿದ್ದರು.

ಜತೆಗೆ, ಉತ್ತರ ಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ನೇತೃತ್ವದಲ್ಲಿ ರಾಜ್ಯದ ಸಂಸದರು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಕಳೆದ ವಾರ ಭೇಟಿ ಮಾಡಿ ಮನವಿ ಸಲ್ಲಿಸಿದ್ದರು.

'ಅಡಿಕೆ ಬೆಳೆಗಾರರು ಎದುರಿಸು-ತ್ತಿರುವ ಸವಾಲುಗಳ ಬಗ್ಗೆ ಸರ್ಕಾರಕ್ಕೆ ಅರಿವಿದೆ. ಅಡಿಕೆಯಿಂದಾಗುವ ಆರೋಗ್ಯ ಪರಿಣಾಮಗಳ ಕುರಿತು ವಿಶ್ವ ಆರೋಗ್ಯ ಸಂಸ್ಥೆ ನಡೆಸಿರುವ ಕೆಲವು ಸಂಶೋಧನೆಗಳು ಮಿತಿಯಿಂದ ಕೂಡಿವೆ. ಹೀಗಾಗಿ, ಈ ಅಧ್ಯಯನಗಳು ಅಪೂರ್ಣವಾಗಿವೆ' ಎಂದು ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ.

'ಈ ಅಧ್ಯಯನಗಳಲ್ಲಿ ಹೆಚ್ಚಿನವು ಅಗಿಯುವ ಮಿಶ್ರಣಗಳ ಆರೋಗ್ಯದ ಪರಿಣಾಮಗಳ ಮೇಲೆ ಕೇಂದ್ರೀಕರಿಸಿದೆ. ಈ ಅಧ್ಯಯನಗಳು ಮಾನವನ ಆರೋಗ್ಯದ ಮೇಲೆ ಅಡಿಕೆ ಸೇವನೆಯ ನಿರ್ದಿಷ್ಟ ಪರಿಣಾಮಗಳನ್ನು ಸೂಚಿಸಿಲ್ಲ' ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	44000-50000
ಕುಮಟ	
ಚಾಲಿ	33019-36599
ಚಿಪ್ಪು	16811-26699
ಕೋಕ	6099-23999
ಫ್ಯಾಕ್ಟರಿ	4019-20469
ಹಳೆಚಾಲಿ	35599-38999
ಹೊಸಚಾಲಿ	21501-27369
ಶಿವಮೊಗ್ಗ	
ಬೆಟ್ಟೆ	48200-54399
ಗೊರಬಲು	18000-32163
ಹೊಸತು	44566-50109
ರಾಶಿ	40001-50309
ಸರಕು	45009-84500
ಶಿರಸಿ	
ಬೆಟ್ಟೆ	29199-40699
ಬಿಳಿಗೋಟು	24009-30200
ಚಾಲಿ	34308-38088
ಕೆಂಪುಗೋಟು	12400-21299
ರಾಶಿ	44199-47089
ಸಿದ್ದಾಪುರ	
ಬಿಳಿಗೋಟು	24989-28709
ಚಾಲಿ	32109-37139
ಕೋಕ	20019-24419
ಕೆಂಪುಗೋಟು	21319-21819
ರಾಶಿ	42699-47699
ತಟ್ಟಿಬೆಟ್ಟೆ	26819-35099
ಯಲ್ಲಾಪುರ	
ಬಿಳಿಗೋಟು	15710-28010
ಚಾಲಿ	33300-37860
ಕೋಕ	4609-17699
ಕೆಂಪುಗೋಟು	15499-28319
ರಾಶಿ	45190-55699
ತಟ್ಟಿಬೆಟ್ಟೆ	28390-36816

ಕೆಪಿಎಸ್‌ಸಿ ಅಕ್ರಮ: ಪ್ರಾಸಿಕ್ಯೂಷನ್‌ಗೆ ತಯಾರಿ

ಒಂದನೇ ಪುಟದಿಂದ...

ಏನಿದು ಪ್ರಕರಣ? :2011ರ ಸಾಲಿನ ಆಯ್ಕೆಯಲ್ಲಿ ಅಕ್ರಮ ನಡೆದಿದೆ ಎಂದು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ದೂರಿನ ಮೇಲೆ ಸಿಐಡಿ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಕರಡು ದೋಷಾರೋಪ ಪಟ್ಟಿಯನ್ನೂ ತನಿಖಾಧಿಕಾರಿ ಸಿದ್ಧಪಡಿಸಿದ್ದರು. ಆರೋಪಿಗಳನ್ನು ವಿವಿಧ ಕಲಂಗಳಡಿ ಪ್ರಾಸಿಕ್ಯೂಷನ್‌ಗೆ ಒಳಪಡಿಸುವುದಕ್ಕಾಗಿ ರಾಷ್ಟ್ರಪತಿಯ ಅನುಮೋದನೆ ಪಡೆಯಲು 2019ರ ಮೇ 28ರಂದು ಸರ್ಕಾರಕ್ಕೆ ಸಿಐಡಿ ಪ್ರಸ್ತಾವ ಸಲ್ಲಿಸಿತ್ತು. 2021ರ ಮೇ 27ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಪ್ರಾಸಿಕ್ಯೂಷನ್‌ಗೆ ಮಂಜೂರಾತಿ ನೀಡದಿರಲು ಮತ್ತು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಮಂಜೂರಾತಿಗಾಗಿ ರಾಷ್ಟ್ರಪತಿಗೆ ಕಳುಹಿಸಲು ನಿರ್ಣಯಿಸಲಾಗಿತ್ತು.

ಸಚಿವ ಸಂಪುಟ ಸಭೆಯ ನಿರ್ಣಯದಂತೆ ಪ್ರಾಸಿಕ್ಯೂಷನ್ ಮಂಜೂರಾತಿಗೆ ಪ್ರಸ್ತಾವನ್ನು ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ (ಡಿಒಪಿಟಿ) 2021ರ ಜೂನ್ 15ರಂದು ಕಳುಹಿಸಲಾಗಿತ್ತು. ಆದರೆ, ಜೂನ್ 21ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮೇ 27ರ ಸಭೆಯ ನಿರ್ಣಯವನ್ನು ಬದಲಿಸಿ, ರಾಷ್ಟ್ರಪತಿಯಿಂದ ಮಂಜೂರಾತಿ ಪಡೆಯಲು ಸಿಐಡಿಯೇ ಸೂಕ್ತ ಕ್ರಮ ತೆಗೆದುಕೊಳ್ಳಬಹುದು ಎಂದು ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಅದರಂತೆ, ಆರೋಪಿಗಳ ಮೇಲೆ ಪ್ರಾಸಿಕ್ಯೂಷನ್‌ಗೆ ರಾಷ್ಟ್ರಪತಿಯಿಂದ ಅನುಮತಿ ಕೋರಿ ಜುಲೈ 9ರಂದು ಡಿಒಪಿಟಿಗೆ ಸಿಐಡಿ ಪತ್ರ ಬರೆದಿತ್ತು. ಆದರೆ, ರಾಜ್ಯಪಾಲರ ಮೂಲಕ ಕಳುಹಿಸಿಲ್ಲವೆಂಬ ಕಾರಣ ನೀಡಿ ಡಿಒಪಿಟಿ ಅದನ್ನು ಹಿಂದಿರುಗಿಸಿತ್ತು.

ಯಾರೆಲ್ಲ ಆರೋಪಿಗಳು ?

ಕೆಪಿಎಸ್‌ಸಿ ಅಧ್ಯಕ್ಷರಾಗಿದ್ದ ಗೋನಾಳ್ ಭೀಮಪ್ಪ ಅವರನ್ನು ಒಂದೇ ಆರೋಪಿ ಎಂದು ಕರಡು ದೋಷಾರೋಪ ಪಟ್ಟಿಯಲ್ಲಿ ಸಿಐಡಿ ಹೇಳಿದೆ. ಸದಸ್ಯರಾಗಿದ್ದ ಮಂಗಳಾ ಶ್ರೀಧರ್ 4ನೇ, ಡಾ. ಬಿ.ಎಸ್. ಕೃಷ್ಣಪ್ರಸಾದ್, ಎಸ್.ಆರ್. ರಂಗಮೂರ್ತಿ, ಎನ್. ಮಹದೇವ್, ಎಚ್.ವಿ.ಪಾರ್ಶ್ವನಾಥ್, ಎಸ್.ದಯಾಶಂಕರ್, ಎಚ್.ಡಿ. ಪಾಟೀಲ, ಎನ್. ರಾಮಕೃಷ್ಣ, ಬಿ.ಟಿ. ಕನಿರಾಮ್ 9ರಿಂದ 16ನೇ ಆರೋಪಿಗಳು ಎಂದು ಪಟ್ಟಿ ಮಾಡಿದೆ. ಎಲ್ಲರೂ ಈಗ ನಿವೃತ್ತರು.

ಪ್ರಾಸಿಕ್ಯೂಷನ್: ಸಿಐಡಿಯಿಂದ ಮತ್ತೆ ಪತ್ರ

2023ರ ಸೆ. 20ರಂದು ಸರ್ಕಾರಕ್ಕೆ ಪತ್ರ ಬರೆದಿದ್ದ ಸಿಐಡಿಯ ಡಿಜಿಪಿ, '2011ನೇ ಸಾಲಿನ ಆಯ್ಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮದಲ್ಲಿ ಆರೋಪಿಗಳ ಪ್ರಾಸಿಕ್ಯೂಷನ್‌ಗೆ ಅನುಮತಿ ಪಡೆದ ನಂತರ ದೋಷಾರೋಪ ಪಟ್ಟಿ ಸಲ್ಲಿಸುವಂತೆ ಹೈಕೋರ್ಟ್ 2017ರಲ್ಲಿಯೇ ಆದೇಶಿಸಿದೆ. ಹೀಗಾಗಿ, ಪ್ರಾಸಿಕ್ಯೂಷನ್‌ಗೆ ಅನುಮತಿ ಕುರಿತು ಸದ್ಯದ ಮಾಹಿತಿ ನೀಡುವಂತೆ' ಕೋರಿದ್ದರು. ಈ ಕಾರಣಕ್ಕೆ, ಸಿಐಡಿ ಸಲ್ಲಿಸಿದ್ದ ತನಿಖಾ ವರದಿ ಸಹಿತ ರಾಷ್ಟ್ರಪತಿಯಿಂದ ಮಂಜೂರಾತಿ ಪಡೆಯುವ ಪೂರ್ವದಲ್ಲಿ ರಾಜ್ಯಪಾಲರ ಅನುಮೋದನೆಗೆ ಕಡತವನ್ನು ಮರು ಮಂಡಿಸಲು ಮತ್ತು ಅದಕ್ಕೆ ಮುಖ್ಯಮಂತ್ರಿಯ ಅನುಮೋದನೆ ಪಡೆಯಲು 2023ರ ನ. 11ರಂದು ಡಿಪಿಎಆರ್ ಕಡತ ಸಿದ್ಧಪಡಿಸಿತ್ತು ಎಂದು ಸರ್ಕಾರದ ಮೂಲಗಳು ಹೇಳಿವೆ.

'ಬಾಂಗ್ಲಾ ದಂಗೆ: ಭಾರತ ವಾಸ್ತವ ಒಪ್ಪಿಕೊಳ್ಳಲಿ'

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಜುಲೈ–ಆಗಸ್ಟ್‌ನಲ್ಲಿ ಯಾಕಾಗಿ ದಂಗೆ ನಡೆದಿತ್ತು ಎನ್ನುವುದನ್ನು ಭಾರತ ತನ್ನ ಧೋರಣೆ ಬದಲಿಸಿಕೊಂಡು, ಒಪ್ಪಿಕೊಳ್ಳಬೇಕಿದೆ. ಹೀಗಾದಲ್ಲಿ ಮಾತ್ರ ಎರಡೂ ದೇಶಗಳ ನಡುವೆ ಹೊಸದಾಗಿ ದ್ವಿಪಕ್ಷೀಯ ಮಾತುಕತೆ ಸಾಧ್ಯವಾಗಲಿದೆ ಎಂದು ಮಧ್ಯಂತರ ಸರ್ಕಾರದ ಪ್ರಮುಖ ಸಲಹೆಗಾರ ಮಹಫುಜ್ ಆಲಮ್ ಹೇಳಿದ್ದಾರೆ.

ಈ ಹಿಂದಿನ ಪ್ರಧಾನಿ ಶೇಖ್ ಹಸೀನಾ ಅವರನ್ನು ಪದಚ್ಯುತಗೊಳಿಸಿದ ದಂಗೆಯ ನಿಜ ಸ್ವರೂಪವನ್ನು ಭಾರತ ಒಪ್ಪಿಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

'ಭಾರತವು ಜುಲೈ ದಂಗೆಯನ್ನು ಭಯೋತ್ಪಾದನೆ, ಹಿಂದೂ ವಿರೋಧಿ ಮತ್ತು ಇಸ್ಲಾಮಿಸ್ಟ್ ಪ್ರಭುತ್ವದ ಹೇರಿಕೆ ಎಂಬಂತೆ ಪರಿಗಣಿಸುತ್ತಿದೆ. ತನ್ನ ಈ ದೃಷ್ಟಿಕೋನವನ್ನು ಬದಲಿಸಿಕೊಂಡು, ಬಾಂಗ್ಲಾದೇಶದ ವಾಸ್ತವಗಳನ್ನು ಅರಿಯಬೇಕಿದೆ' ಎಂದು ಮಧ್ಯಂತರ ಸರ್ಕಾರದ ಸಚಿವ, ವಿದ್ಯಾರ್ಥಿ ಚಳವಳಿಯ ನಾಯಕ ಮಹಫುಜ್ ಆಲಮ್ 'ಫೇಸ್‌ಬುಕ್'ನಲ್ಲಿ ಬರೆದುಕೊಂಡಿದ್ದಾರೆ.

'70 ಉಗ್ರರು ಜೈಲಿನಿಂದ ಪರಾರಿಯಾಗಿದ್ದರು': ಪ್ರಧಾನಿ ಶೇಖ್ ಹಸೀನಾ ಪದಚ್ಯುತಿಗೆ ಕಾರಣವಾದ ವಿದ್ಯಾರ್ಥಿ ದಂಗೆಯ ಸಂದರ್ಭ, 70 ಉಗ್ರರು ಹಾಗೂ ಮರಣದಂಡನೆಗೆ ಒಳಗಾಗಿದ್ದ ಕೈದಿಗಳು ಸೇರಿದಂತೆ 2,200ಕ್ಕೂ ಹೆಚ್ಚು ಮಂದಿ ಜೈಲಿನಿಂದ ಪರಾರಿಯಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಂಗೆಯ ಸಂದರ್ಭ ಪರಾರಿಯಾಗಿದ್ದವರನ್ನು ಪತ್ತೆಹಚ್ಚಿ ಮತ್ತೆ ಬಂಧಿಸಿ ಜೈಲಿಗಟ್ಟಲಾಗಿದ್ದು, 700ಕ್ಕೂ ಹೆಚ್ಚು ಕೈದಿಗಳು ಈಗಲೂ ಕಾರಾಗೃಹ ಬಂಧನದಿಂದ ತಪ್ಪಿಸಿಕೊಂಡು ಹೊರಗಿದ್ದಾರೆ ಎಂದು ಕಾರಾಗೃಹಗಳ ಐಜಿ ಜನರಲ್ ಬ್ರಿಗೇಡಿಯರ್ ಸೈಯದ್ ಮೊತಾಹರ್ ಹುಸೇನ್ ಹೇಳಿದ್ದಾರೆ.

ಜಸ್ಲೀನ್ ಕೌರ್‌ಗೆ ಪ್ರತಿಷ್ಠಿತ ಟರ್ನರ್ ಪ್ರಶಸ್ತಿ



ಲಂಡನ್ (ಪಿಟಿಐ): ಗ್ಲಾಸ್ಗೋ ಮೂಲದ ಸ್ಕಾಟಿಷ್ ಸಿಖ್ ಕಲಾವಿದೆ ಜಸ್ಲೀನ್ ಕೌರ್ ಅವರು ಬ್ರಿಟನ್‌ನ ಪ್ರತಿಷ್ಠಿತ ಟರ್ನರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕೌರ್ ಅವರು ವೈಯಕ್ತಿಕ, ರಾಜಕೀಯ ಮತ್ತು ಅಧ್ಯಾತ್ಮಿಕ ಪರಂಪರೆಯನ್ನು ದೃಶ್ಯ ಕಲೆಯ ಮೂಲಕ ಅದ್ಭುತವಾಗಿ ಒಂದು ಸೂತ್ರಕ್ಕೆ ಒಳಪಡಿಸಿ ಪ್ರಸ್ತುತಪಡಿಸಿದ್ದನ್ನು ಪರಿಗಣಿಸಿ ಪ್ರಶಸ್ತಿ ನೀಡಲಾಗಿದೆ. ಪ್ರಶಸ್ತಿಯು ₹26.84 ಲಕ್ಷ ನಗದನ್ನು ಒಳಗೊಂಡಿದೆ.

ಲಂಡನ್‌ನ ಟೆಟ್ ಬ್ರಿಟನ್‌ನಲ್ಲಿ ಮಂಗಳವಾರ ರಾತ್ರಿ ನಡೆದ ಕಾರ್ಯಕ್ರಮದಲ್ಲಿ ಕೌರ್‌ಗೆ ಪ್ರಶಸ್ತಿ ವಿತರಿಸಲಾಯಿತು.

ಕೌರ್ ಅವರು 'Alter Altar' (Alter ಎಂದರೆ ಬದಲಾವಣೆಯನ್ನು ಸೂಚಿಸುವ ಕ್ರಿಯಾಪದ. Altar ಎನ್ನುವುದು ಧಾರ್ಮಿಕ ಕಟ್ಟಡದ ವಿನ್ಯಾಸವನ್ನು ಸೂಚಿಸಲು ಬಳಸುವ ನಾಮಪದ. ಎರಡೂ ಪದಗಳನ್ನು 'ಆಲ್ಟರ್' ಎಂದೇ ಉಚ್ಚರಿಸಲಾಗುತ್ತದೆ) ಎಂಬ ಪ್ರದರ್ಶನದಲ್ಲಿ ದಿನಬಳಕೆಯ ವಸ್ತುಗಳಿಗೆ ಧ್ವನಿ ಮತ್ತು ಬೆಳಕಿನ ಮೂಲಕ ಅನಿಮೇಶನ್ ಸ್ಪರ್ಶ ನೀಡಿದ್ದರು.

'ದಿನಬಳಕೆಯ ವಸ್ತುಗಳಿಗೆ ಅನಿಮೇಶನ್ ಮಾಡುವ ಮೂಲಕ ಭಾರತೀಯ ಸಮುದಾಯ ಮತ್ತು ಸಂಸ್ಕೃತಿಯ ಮೌಲ್ಯವನ್ನು ಪ್ರತಿಬಿಂಬಿಸಿದಕ್ಕಾಗಿ ಕೌರ್ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು' ಎಂದು ತೀರ್ಪುಗಾರರು ಹೇಳಿದ್ದಾರೆ. ಟರ್ನರ್ ಪ್ರಶಸ್ತಿಯು ದೃಶ್ಯ ಕಲಾ ಕ್ಷೇತ್ರದಲ್ಲಿ ನೀಡುವ ವಿಶ್ವದ ಪ್ರತಿಷ್ಠಿತ ಬಹುಮಾನಗಳಲ್ಲಿ ಒಂದಾಗಿದೆ.

ಖಾಸಗಿ ಕಚೇರಿ ತೆರೆಯಲು ಸುನಕ್ ದಂಪತಿ ಚಿಂತನೆ



ಲಂಡನ್ (ಪಿಟಿಐ): ಬ್ರಿಟನ್‌ನ ಮಾಜಿ ಪ್ರಧಾನಿ ರಿಷಿ ಸುನಕ್ ಮತ್ತು ಅವರ ಪತ್ನಿ ಅಕ್ಷತಾ ಮೂರ್ತಿ ಅವರು ದೇಶಕ್ಕೆ ಸೇವೆ ಸಲ್ಲಿಸಲು ನೂತನ ಖಾಸಗಿ ಕಚೇರಿ ತೆರೆಯುವ ಬಗ್ಗೆ ಚಿಂತನೆ ನಡೆಸುತ್ತಿದ್ದಾರೆ ಎಂದು ಬ್ರಿಟನ್‌ನ ಮಾಧ್ಯಮಗಳು ಬುಧವಾರ ವರದಿ ಮಾಡಿವೆ.

ಕಚೇರಿಗೆ ಇಬ್ಬರೂ ಹಣ ಹೂಡಿಕೆ ಮಾಡಲಿದ್ದಾರೆ ಎಂದು 'ದಿ ಟೈಮ್ಸ್' ವರದಿ ಮಾಡಿದೆ.

ತಂತ್ರಜ್ಞಾನ ಮತ್ತು ಶಿಕ್ಷಣ ಕ್ಷೇತ್ರಕ್ಕೆ ದಂಪತಿ ಕೊಡುಗೆ ನೀಡುವ ನಿರೀಕ್ಷೆಯನ್ನು ವರದಿಗಳು ವ್ಯಕ್ತಪಡಿಸಿವೆ.

ಮಿಲಿಟರಿ ಆಡಳಿತ ಹೇರಿಕೆ ಅಸಿಂಧು ಎಂದ ದಕ್ಷಿಣ ಕೊರಿಯಾ ಸ್ಪೀಕರ್

ಮಿಲಿಟರಿ ಆಡಳಿತ ಹಿಂತೆಗೆತ

ಸೋಲ್ (ಉತ್ತರ ಕೊರಿಯಾ) (ಎಪಿ): ದೇಶದ ಮೇಲೆ ಹೇರಿದ್ದ ಮಿಲಿಟರಿ ಆಡಳಿತವನ್ನು ದಕ್ಷಿಣ ಕೊರಿಯಾ ಅಧ್ಯಕ್ಷ ಯೂನ್ ಸುಕ್ ಯೋಲ್ ನೇತೃತ್ವದ ಸರ್ಕಾರವು ಬುಧವಾರ ನಸುಕಿನಲ್ಲಿ ಹಿಂಪಡೆದಿದೆ. ದೇಶದ ಸಂಸದರು, ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಸಭೆ ಸೇರಿ ಮಿಲಿಟರಿ ಆಡಳಿತವನ್ನು ತಿರಸ್ಕರಿಸುವುದರ ಪರವಾಗಿ ಮತ ಚಲಾಯಿಸಿದ್ದರು.

ಇದಾದ ನಂತರದಲ್ಲಿ ಪೊಲೀಸರು ಮತ್ತು ಮಿಲಿಟರಿ ಸಿಬ್ಬಂದಿ ಸಂಸತ್ತಿನಿಂದ ವಾಪಸ್ಸಾದರು. ನಸುಕಿನ 4.30ರ ಸುಮಾರಿಗೆ ಸಭೆ ಸೇರಿದ ಸಂಪುಟವು, ಮಿಲಿಟರಿ ಆಡಳಿತವನ್ನು ಹಿಂಪಡೆಯುವ ಘೋಷಣೆ ಮಾಡಿತು.

ಯೂನ್ ಅವರು, ರಾಷ್ಟ್ರವಿರೋಧಿ ಶಕ್ತಿಗಳನ್ನು ಹೊರಹಾಕುವ ಶಪಥ ಮಾಡಿ, ಮಂಗಳವಾರ ರಾತ್ರಿ ಮಿಲಿಟರಿ ಆಡಳಿತ ಹೇರಿದ್ದರು. ವಿರೋಧ ಪಕ್ಷವು ಕಮ್ಯುನಿಸ್ಟ್ ಉತ್ತರ ಕೊರಿಯಾ ಜೊತೆ ಅನುಕಂಪ ಹೊಂದಿದೆ ಎಂದು ಯೂನ್ ಆರೋಪಿಸಿದ್ದರು.

ಮಿಲಿಟರಿ ಆಡಳಿತ ಹೇರಿದ ಮೂರು ತಾಸಿಗೂ ಮೊದಲೇ ಘೋಷಣೆಯೊಂದನ್ನು ಹೊರಡಿಸಿದ ದೇಶದ ರಾಷ್ಟ್ರೀಯ ಅಸೆಂಬ್ಲಿಯ ಸ್ಪೀಕರ್ ವೂ ವೊನ್ ಶಿಕ್ ಅವರು, ಮಿಲಿಟರಿ ಆಡಳಿತ ಹೇರಿದ ಕ್ರಮ ಅಸಿಂಧು ಎಂದರು. ದೇಶದ ಶಾಸನ ಸಭೆಯ ಸದಸ್ಯರು ಜನರ ಜೊತೆಯಾಗಿ ನಿಂತು ಪ್ರಜಾತಂತ್ರವನ್ನು ರಕ್ಷಿಸಲಿದ್ದಾರೆ ಎಂದರು.

ಮಿಲಿಟರಿ ಆಡಳಿತ ಹೇರಿದ್ದ ಕ್ರಮವನ್ನು ವಿರೋಧ ಪಕ್ಷ ಹಾಗೂ ಯೂನ್ ಅವರ ಪಕ್ಷದ ನಾಯಕರು ಖಂಡಿಸಿದ್ದರು. ಅಧ್ಯಕ್ಷ ಯೂನ್ ಅವರು ಮಿಲಿಟರಿ ಆಡಳಿತ ಹೇರಿಕೆಯನ್ನು ಅಧಿಕೃತವಾಗಿ ಹಿಂಪಡೆಯುವವರೆಗೆ ತಮ್ಮ ಪಕ್ಷದ ಸಂಸದರು ಅಸೆಂಬ್ಲಿಯ ಪ್ರಧಾನ ಸಭಾಂಗಣದಲ್ಲಿಯೇ ಇರಲಿದ್ದಾರೆ ಎಂದು ಡೆಮಾಕ್ರಟಿಕ್ ಪಕ್ಷದ ನಾಯಕ ಲೀ ಜೆ ಮಯುಂಗ್ ಅವರು ಹೇಳಿದ್ದರು.

ಮತದಾನದ ನಂತರ ಮಿಲಿಟರಿ ಸಿಬ್ಬಂದಿ ಅಸೆಂಬ್ಲಿಯನ್ನು ತೆರವು ಮಾಡಿದ ಕ್ರಮವನ್ನು ಸ್ಪೀಕರ್ ವೂ ಶ್ಲಾಘಿಸಿದ್ದಾರೆ.

ಯೂನ್ ಅವರು ಮಿಲಿಟರಿ ಆಡಳಿತ ಹೇರಿದ ನಂತರ ಮಿಲಿಟರಿ ಸಿಬ್ಬಂದಿಯ ಚಲನವಲನವು, 'ಅವರು ಲೀ, ವೂ ಮತ್ತು ಆಡಳಿತಾರೂಢ ಪೀಪಲ್ ಪವರ್ ಪಕ್ಷದ ನಾಯಕ ಹಾನ್ ಡಾಂಗ್‌–ಹೂನ್ ಅವರನ್ನು ಬಂಧಿಸಲು ಯತ್ನಿಸುತ್ತಿದ್ದಾರೆ ಎಂಬುದನ್ನು ಸೂಚಿಸುವಂತಿತ್ತು' ಎಂದು ಡೆಮಾಕ್ರಟಿಕ್ ಪಕ್ಷದ ಸಂಸದ ಜೊ ಸಿಯುಂಗ್‌–ಲೆ ಆರೋಪಿಸಿದ್ದಾರೆ.

ಅಸೆಂಬ್ಲಿಯ ಎದುರು ಜಮಾಯಿಸಿದ್ದ ನೂರಾರು ಮಂದಿ ಪ್ರತಿಭಟನಕಾರರು, ಯೂನ್ ಅವರನ್ನು ವಾಗ್ದಂಡನೆಗೆ ಗುರಿಪಡಿಸಿ ಪದಚ್ಯುತಗೊಳಿಸಬೇಕು ಎಂದು ಒತ್ತಾಯಿಸಿದರು.

ದಕ್ಷಿಣ ಕೊರಿಯಾದ ಸಂವಿಧಾನದ ಪ್ರಕಾರ, 'ಯುದ್ಧದ ಸಂದರ್ಭದಲ್ಲಿ, ಯುದ್ಧದಂತಹ ಪರಿಸ್ಥಿತಿ ಇದ್ದಾಗ ಅಥವಾ ಅದಕ್ಕೆ ಹೋಲಿಸಬಹುದಾದ ರಾಷ್ಟ್ರೀಯ ತುರ್ತು ಪರಿಸ್ಥಿತಿ ಇದ್ದಾಗ' ಮಿಲಿಟರಿ ಆಡಳಿತವನ್ನು ಅಧ್ಯಕ್ಷರು ಜಾರಿಗೊಳಿಸಬಹುದು. ಮಿಲಿಟರಿ ಆಡಳಿತ ಜಾರಿಯಾದಾಗ ಪತ್ರಿಕಾ ಸ್ವಾತಂತ್ರ್ಯ, ನ್ಯಾಯಾಲಯಗಳ ಅಧಿಕಾರವನ್ನು ನಿರ್ಬಂಧಿಸಲು ವಿಶೇಷ ಕ್ರಮಗಳನ್ನು ಕೈಗೊಳ್ಳಬಹುದು.

ಆದರೆ, ರಾಷ್ಟ್ರೀಯ ಅಸೆಂಬ್ಲಿಯು ಮಿಲಿಟರಿ ಆಡಳಿತವನ್ನು ಹಿಂಪಡೆಯಬೇಕು ಎಂದು ಬಹುಮತದೊಂದಿಗೆ ಮತ ಚಲಾಯಿಸಿದರೆ, ಅದನ್ನು ಅಧ್ಯಕ್ಷರು ಒಪ್ಪಲೇಬೇಕಾಗುತ್ತದೆ.



ದಕ್ಷಿಣ ಕೊರಿಯಾ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ರಾಷ್ಟ್ರೀಯ ಅಸೆಂಬ್ಲಿಗೆ ಸಾಗುವ ಮೆಟ್ಟಿಲುಗಳ ಮೇಲೆ ಕುಳಿತು ಸಾರ್ವಜನಿಕರು ಪ್ರತಿಭಟನೆ ನಡೆಸಿದರು —ಎಎಫ್‌ಪಿ ಚಿತ್ರ

ಕಾಂಗ್ರೆಸ್–ಎಸ್‌ಪಿ ಮಧ್ಯೆ ಬಿರುಕು?

ನವದೆಹಲಿ: ಅದಾನಿ ಲಂಚ ಹಗರಣ ವಿಚಾರವಾಗಿ ವಿಪಕ್ಷಗಳ ಒಕ್ಕೂಟ 'ಇಂಡಿಯಾ' ಸಂಸತ್ತಿನ ಹೊರಗೆ ಬುಧವಾರ ನಡೆಸಿದ ಎರಡನೇ ದಿನದ ಪ್ರತಿಭಟನೆಯಿಂದಲೂ ಸಮಾಜವಾದಿ ಪಕ್ಷ (ಎಸ್‌ಪಿ) ದೂರ ಉಳಿದಿತ್ತು. ಇದು ಕಾಂಗ್ರೆಸ್–ಎಸ್‌ಪಿ ನಡುವೆ ಬಿರುಕು ಮೂಡಿದೆ ಎಂಬ ಶಂಕೆ ಮೂಡಿಸಿದೆ.

ಕಾಂಗ್ರೆಸ್ ಪಕ್ಷದ ಅದಾನಿ ಕೇಂದ್ರಿತ ರಣತಂತ್ರದಿಂದ ಟಿಎಂಸಿ ಈಗಾಗಲೇ ಅಂತರ ಕಾಯ್ದುಕೊಂಡಿದೆ. ರಾಜ್ಯಸಭೆಯ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಕರೆದಿದ್ದ ಸಭೆಗೂ ಗೈರಾಗಿದ್ದ ಪಕ್ಷ ಯಾವುದೇ ಪ್ರತಿಭಟನೆಯಲ್ಲೂ ಪಾಲ್ಗೊಂಡಿಲ್ಲ.

ಅಧಿವೇಶದಲ್ಲಿ ಪ್ರಸ್ತಾಪಿಸಬೇಕಾದ ವಿಚಾರಗಳ ಕುರಿತ ರಣತಂತ್ರಗಳ ಬಗ್ಗೆ ಕಾಂಗ್ರೆಸ್ ಕಡೆಯಿಂದ ಸಹಕಾರ ದೊರೆಯುತ್ತಿಲ್ಲ ಎಂದು ಸಮಾಜವಾದಿ ಪಕ್ಷ ಅಸಮಾಧಾನ ಹೊರಹಾಕಿದೆ.

'ಸಂಭಲ್ ಹಿಂಸಾಚಾರ ಕುರಿತು ಗಮನಸೆಳೆಯಲು ಸಮಾಜವಾದಿ ಪಕ್ಷ ಬಯಸುತ್ತಿದೆ. ಆದರೆ, ಕಾಂಗ್ರೆಸ್ 'ಅದಾನಿ' ವಿಷಯ ಉಲ್ಲೇಖಿಸುತ್ತಿದೆ. ನಮ್ಮದು ಪ್ರಾದೇಶಿಕ ಪಕ್ಷ. ನಮ್ಮ ಸಮಸ್ಯೆ ಸಂಭಲ್. ಹೀಗಾಗಿ ಕಲಾಪಕ್ಕೆ ಅಡ್ಡಿ ಮಾಡಲು ನಮಗೆ ಇಷ್ಟವಿಲ್ಲ' ಎಂದು ಮುಖಂಡರೊಬ್ಬರು ತಿಳಿಸಿದರು.

ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದ ನಿಯೋಗದ ಸಂಭಲ್ ಭೇಟಿಗೆ ತಡೆ ನೀಡಿದ ವಿಚಾರವಾಗಿ ಕಾಂಗ್ರೆಸ್ ಸಭಾತ್ಯಾಗ ಮಾಡಿದಾಗ ಡಿಂಪಲ್ ಯಾದವ್ ನೇತೃತ್ವದಲ್ಲಿ ಎಸ್‌ಪಿ ಸಂಸದರು ಸಹ ಹೊರ ನಡೆದರು ಎಂದು ಹೇಳಿದರು.

ಅದಾನಿ ವಿರುದ್ಧ ಪ್ರತಿಭಟನೆಯಲ್ಲಿ ಪಾಲ್ಗೊಳ್ಳದ ಪ್ರಶ್ನೆಗೆ ಪಕ್ಷದ ರಾಜ್ಯಸಭೆ ಸದಸ್ಯ ರಾಮಗೋಪಾಲ್ ಯಾದವ್ ಅವರು, 'ಸಂಭಲ್ ಮಾತ್ರ ನಮ್ಮ ಸಮಸ್ಯೆ' ಎಂದರು.

ರಾಜ್ಯಸಭೆಯಲ್ಲಿ ಸಂಭಲ್ ಕುರಿತು ಎಸ್‌ಪಿ ಹೊರನಡೆದಾಗ ಕಾಂಗ್ರೆಸ್ ಕೈಜೋಡಿಸಲಿಲ್ಲ. 'ಕಾಂಗ್ರೆಸ್‌ನಿಂದ ಹೆಚ್ಚಿನ ಸಹಕಾರ ದೊರೆಯುತ್ತಿಲ್ಲ' ಎಂದು ಎಸ್‌ಪಿ ದೂರಿದೆ.

ಅಧಿವೇಶನದಲ್ಲಿ ಚರ್ಚಿಸುವ ವಿಷಯ ಕುರಿತು 'ಇಂಡಿಯಾ' ಒಕ್ಕೂಟದ ಯಾವುದೇ ಸಭೆಯಲ್ಲಿ ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಭಾಗಿಯಾಗಿಲ್ಲ.

ವಿಧಾನಸಭೆ ಉಪಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಸರಿಯಾಗಿ ಪ್ರಚಾರ ನಡೆಸಿಲ್ಲ ಎಂದು ಎಸ್‌ಪಿ ಅಸಮಾಧಾನಗೊಂಡಿದೆ.

ರೈತರ ಬೇಡಿಕೆಗಳ ಪ್ರಸ್ತಾಪ: ರಾಜ್ಯಸಭೆಯಲ್ಲಿ ಕಾಂಗ್ರೆಸ್, ಎಎಪಿ, ಶಿವಸೇನೆ, ಎನ್‌ಸಿಪಿ ಆಗ್ರಹ

ಚರ್ಚೆಗೆ ಸಿಗದ ಅವಕಾಶ, ಸಭಾತ್ಯಾಗ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಹೆಚ್ಚಿಸುವ ಭರವಸೆಯನ್ನು ಈಡೇರಿಸದ ಸರ್ಕಾರದ ಧೋರಣೆಯನ್ನು ಖಂಡಿಸಿ ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳ ಇತರ ಸದಸ್ಯರು ಬುಧವಾರ ರಾಜ್ಯಸಭೆಯಲ್ಲಿ ಸಭಾತ್ಯಾಗ ಮಾಡಿದರು.

ಚಂಡಮಾರುತ 'ಫೆಂಜಲ್' ಪರಿಣಾಮಗಳಿಂದ ತತ್ತರಿಸಿರುವ ರೈತರ ಸಮಸ್ಯೆಗಳು, ಅದಾನಿ ಪ್ರಕರಣ, ಸಂಭಲ್ ಹಿಂಸಾಚಾರ ವಿಷಯಗಳ ಚರ್ಚೆಗೆ ಅವಕಾಶ ಕೋರಿ ಕಾಂಗ್ರೆಸ್‌ನ ಐವರು ಸದಸ್ಯರು ನೋಟಿಸ್ ಸಲ್ಲಿಸಿದ್ದರು. ಆದರೆ, ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ಇದಕ್ಕೆ ಸಮ್ಮತಿಸಲಿಲ್ಲ.

ಚರ್ಚೆಗೆ ಅವಕಾಶ ನೀಡುವಂತೆ ಕೋರಿದ್ದ ಕಾಂಗ್ರೆಸ್ ಸದಸ್ಯರು ಸದನದಲ್ಲಿ ಪ್ರತಿಭಟನೆ ನಡೆಸಿದರು. ಇದಕ್ಕೆ ಎಎಪಿ, ಎನ್‌ಸಿಪಿ (ಶರದ್ ಬಣ), ಶಿವಸೇನೆ (ಉದ್ಧವ್ ಬಣ) ಸದಸ್ಯರು ಬೆಂಬಲಿಸಿದರು. ಕೃಷಿಕರ ಸಮಸ್ಯೆಗಳ ಚರ್ಚೆಗೆ ತಕ್ಷಣ ಅವಕಾಶವನ್ನು ಕಲ್ಪಿಸಬೇಕು ಎಂದು ಹಕ್ಕೊತ್ತಾಯ ಮಾಡಿದರು.

ಉತ್ತರಪ್ರದೇಶ ಮತ್ತು ವಿವಿಧ ರಾಜ್ಯಗಳ ರೈತರು ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದೆಹಲಿ–ನೊಯಿಡಾ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಮಂಗಳವಾರ ಇದನ್ನು ಮುಂಬೈನಲ್ಲಿ ಪ್ರಸ್ತಾಪಿಸಿದ್ದ ಧನಕರ್, 'ಪ್ರತಿಭಟನನಿರತ ರೈತರ ಜೊತೆ ಏಕೆ ಚರ್ಚಿಸುತ್ತಿಲ್ಲ' ಎಂದು ಪ್ರಶ್ನಿಸಿದ್ದರು.

ಬುಧವಾರ ರೈತರ ವಿಷಯ ಪ್ರಸ್ತಾಪಿಸಿ ಪ್ರತಿಭಟನೆಗಿಳಿದಿದ್ದ ಪ್ರತಿಪಕ್ಷಗಳ ಸದಸ್ಯರು ಘೋಷಣೆ ಕೂಗಿದರು. ಚರ್ಚೆಗೆ ಅವಕಾಶ ನಿರಾಕರಿಸಿದ ಧನಕರ್, ಶೂನ್ಯವೇಳೆ ಕಲಾಪ ಕೈಗೆತ್ತಿಕೊಂಡರು.

'ಘೋಷಣೆ ಕೂಗುವುದರಿಂದ ಹಾಗೂ ಮೊಸಳೆ ಕಣ್ಣೀರು ಸುರಿಸುವುದರಿಂದ ರೈತರ ಸಮಸ್ಯೆಗಳು ಬಗೆಹರಿಯುವುದಿಲ್ಲ' ಎಂದು ಧನಕರ್ ಇದೇ ವೇಳೆ ವಿರೋಧ ಪಕ್ಷದವರಿಗೆ ಹೇಳಿದರು.

ನಂತರ ಕಾಂಗ್ರೆಸ್‌ನ ಉಪ ನಾಯಕ ಪ್ರಮೋದ್ ತಿವಾರಿ ಅವರಿಗೆ ಕೃಷಿಕರ ಸಮಸ್ಯೆಗಳ ಕುರಿತು ಮಾತನಾಡಲು ಅವಕಾಶ ಕಲ್ಪಿಸಿದರು.

ವಿಷಯ ಪ್ರಸ್ತಾಪಿಸಿದ ತಿವಾರಿ, 'ಎಂಎಸ್‌ಪಿಗೆ ಕಾಯ್ದೆಯ ಬೆಂಬಲ ನೀಡಬೇಕು. ಸರ್ಕಾರ ಎಂಎಸ್‌ಪಿ ಹೆಚ್ಚಿಸುವ ಭರವಸೆ ಈಡೇರಿಸುತ್ತಿಲ್ಲ. ನಮ್ಮ ಬೇಡಿಕೆಗೆ ಈಗ ಸಾಂವಿಧಾನಿಕ ಸ್ಥಾನದಲ್ಲಿ ಇರುವವರು ದನಿಗೂಡಿಸಿದ್ದೀರಿ. ಭರವಸೆ ಈಡೇರಿಸಲು ಸರ್ಕಾರಕ್ಕೆ ನಿರ್ದೇಶಿಸಿ' ಎಂದು ಕೋರಿದರು.

ಇತರ ಕೆಲ ಸದಸ್ಯರು ಕೃಷಿಕರ ಸಮಸ್ಯೆಗಳ ಕುರಿತು ಮಾತನಾಡಲು ಬಯಸಿದರು. ಸಭಾಪತಿ ಇದಕ್ಕೆ ಅವಕಾಶ ಕಲ್ಪಿಸಲಿಲ್ಲ. ಇದನ್ನು ಖಂಡಿಸಿ ಕಾಂಗ್ರೆಸ್, ಶಿವಸೇನೆ, ಎನ್‌ಸಿಪಿ ಸದಸ್ಯರು ಸಭಾತ್ಯಾಗ ಮಾಡಿದರು.

ಮುಂಬೈನಲ್ಲಿ ಮಂಗಳವಾರ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಧನಕರ್ ಅವರು, 'ಪ್ರತಿಭಟನಾನಿರತ ಕೃಷಿಕರ ಜೊತೆಗೆ ಯಾಕೆ ಯಾರೊಬ್ಬರೂ ಮಾತನಾಡುತ್ತಿಲ್ಲ. ಕೃಷಿ ಸಚಿವರು ಈ ಬಗ್ಗೆ ಉತ್ತರಿಸಬೇಕು. ರೈತರಿಗೆ ನೀಡಲಾಗಿದ್ದ ಭರವಸೆಗಳನ್ನು ಏಕೆ ಈಡೇರಿಸಿಲ್ಲ' ಎಂದು ಪ್ರಶ್ನಿಸಿದ್ದರು.

'ನಿವೃತ್ತಿ ವಯಸ್ಸು ಬದಲಾವಣೆ ಇಲ್ಲ'

- ಕೇಂದ್ರ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಬದಲಾವಣೆ ಮಾಡುವ ಕುರಿತು ಸರ್ಕಾರದ ಮುಂದೆ ಯಾವುದೇ ಪ್ರಸ್ತಾವ ಇಲ್ಲ ಎಂದು ಕೇಂದ್ರ ಸಿಬ್ಬಂದಿ ಸಚಿವಾಲಯದ ರಾಜ್ಯ ಖಾತೆ ಸಚಿವ ಜಿತೇಂದ್ರ ಸಿಂಗ್ ತಿಳಿಸಿದರು
- ರೈಲುಗಳಲ್ಲಿ ಎಸಿ1, ಎಸಿ2 ಹಾಗೂ ಎಸಿ3ಗಿಂತ ಸಾಮಾನ್ಯ ಕೋಚ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ರೈಲ್ವೆ ಇಲಾಖೆಯು ಹೆಚ್ಚಿನ ಒತ್ತು ನೀಡಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಬುಧವಾರ ತಿಳಿಸಿದರು. ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, '10,000 ಸಾಮಾನ್ಯ ಕೋಚ್‌ಗಳು ಡಿಸೆಂಬರ್ ವೇಳೆಗೆ ಇವುಗಳ ಸೇರ್ಪಡೆಯಾಗಲಿದೆ' ಎಂದರು
- ನೂರು ವರ್ಷ ಹಳೆಯದಾದದ 1923ರ ಬಾಯಿಲರ್ಸ್ ಕಾಯ್ದೆಯ ಬದಲಿಗೆ ಬಾಯಿಲರ್ಸ್ ಮಸೂದೆ, 2024 ಅನ್ನು ರಾಜ್ಯಸಭೆಯಲ್ಲಿ ಬುಧವಾರ ಕೇಂದ್ರ ಸರ್ಕಾರ ಮಂಡಿಸಿತು. ಧ್ವನಿ ಮತದ ಮೂಲಕ ಈ ಮಸೂದೆಯು ಅಂಗೀಕಾರವೂ ಆಯಿತು. ಇದೇ ವರ್ಷದ ಆಗಸ್ಟ್ 2ರಂದು ನಡೆದಿದ್ದ ಕೇಂದ್ರ ಸಂಪುಟ ಸಭೆಯಲ್ಲಿ ಈ ಮಸೂದೆಗೆ ಒಪ್ಪಿಗೆ ನೀಡಲಾಗಿತ್ತು. ವಿರೋಧ ಪಕ್ಷಗಳು ಈ ಕಾಯ್ದೆಯನ್ನು ತೀವ್ರವಾಗಿ ವಿರೋಧಿಸಿವೆ

> ನೀವು (ವಿರೋಧಪಕ್ಷಗಳು) ರಾಜಕಾರಣ ಮಾಡುತ್ತಿದ್ದೀರಿ. ಕೃಷಿಕರ ಸಮಸ್ಯೆಗಳಿಗೆ ನಿಮಗೆ ಪರಿಹಾರ ಬೇಕಿಲ್ಲ. ಕೃಷಿಕರು ಎಂದಿಗೂ ನಿಮಗೆ ಕೊನೆಯ ಆದ್ಯತೆ
>
> **ಜಗದೀಪ್ ಧನಕರ್,** ಸಭಾಪತಿ

> ಕೃಷಿಕರ ಸಮಸ್ಯೆ ಬಗ್ಗೆ ನಾವು ಎತ್ತಿರುವ ಪ್ರಶ್ನೆಗಳನ್ನೇ ಧನಕರ್ ಕೇಳಿದ್ದಾರೆ. ಸದನದ ಪೋಷಕರಾಗಿ ಅವರು ಸಂವಿಧಾನ ರಕ್ಷಿಸಬೇಕು. ಚರ್ಚೆಗೆ ಅವಕಾಶ ನೀಡಬೇಕು
>
> **ಜೈರಾಮ್ ರಮೇಶ್,** ಕಾಂಗ್ರೆಸ್ ಸದಸ್ಯ, ರಾಜ್ಯಸಭೆ

ಸ್ಪಷ್ಟನೆ ಕೇಳಲೂ ಅವಕಾಶ ನಿರಾಕರಣೆ ವಿರೋಧ ಪಕ್ಷಗಳ ಕಿಡಿ


ವಿದೇಶಾಂಗ ಸಚಿವರ ಹೇಳಿಕೆ ಬಳಿಕ ಭಾರತ–ಚೀನಾ ಬಾಂಧವ್ಯ ಕುರಿತು ಸ್ಪಷ್ಟನೆ ಕೇಳಲು ಅವಕಾಶ ನೀಡದ ರಾಜ್ಯಸಭೆಯ ಸಭಾಪತಿ ನಡೆ ಖಂಡಿಸಿ ವಿರೋಧ ಪಕ್ಷಗಳ ಸದಸ್ಯರು ರಾಜ್ಯಸಭೆಯಲ್ಲಿ ಬುಧವಾರ ಸಭಾತ್ಯಾಗ ಮಾಡಿದರು.

'ಭಾರತ–ಚೀನಾ ಬಾಂಧವ್ಯ ಕುರಿತ ಈಚಿನ ಬೆಳವಣಿಗೆ' ಕುರಿತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿಕೆ ನೀಡಿದರು. ಮಂಗಳವಾರ ಕೆಳಮನೆಯಲ್ಲೂ ಹೇಳಿಕೆ ನೀಡಿದ್ದರು.

ನಿಯಮ ಉಲ್ಲೇಖಿಸಿದ ಧನಕರ್, ಸ್ಪಷ್ಟನೆ ಕೇಳಲು ವಿಪಕ್ಷದವರಿಗೆ ಅವಕಾಶ ನೀಡಲಿಲ್ಲ. ಮತ್ತೊಂದು ಮಸೂದೆ ಕುರಿತು ಚರ್ಚೆಗೆ ಅವಕಾಶ ನೀಡಿದರು. ಇದನ್ನು ಖಂಡಿಸಿ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

ಸಂಸದರ ನಡೆಯನ್ನು ಇಡೀ ದೇಶ ಗಮನಿಸುತ್ತಿದೆ. ಅವರ ವರ್ತನೆಯು ಸಂಸತ್ತಿನ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿದೆ ಎಂದು ಧನಕರ್ ಕಿಡಿಕಾರಿದರು.

ಹೇಳಿಕೆ ನೀಡಿದ್ದ ಜೈಶಂಕರ್ ಅವರು, 'ಭಾರತ ಚೀನಾ ಬಾಂಧವ್ಯ ಹಲವು ಆಯಾಮದಿಂದ ಸುಧಾರಿಸುತ್ತಿದೆ. ಬರುವ ದಿನಗಳಲ್ಲಿ ಸೇನೆ ವಾಪಸಾತಿ, ಗಡಿಯಲ್ಲಿ ನಮ್ಮ ಚಟುವಟಿಕೆಗಳ ಪರಿಣಾಮಕಾರಿ ಮೇಲ್ವಿಚಾರಣೆ ಕುರಿತಂತೆಯೂ ಪರಸ್ಪರ ಚರ್ಚಿಸಲಿದ್ದೇವೆ' ಎಂದರು.



ಸಿದ್ಧತೆ... ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುವ 'ಮಹಾಕುಂಭ ಮೇಳ' ಹಿನ್ನೆಲೆಯಲ್ಲಿ ಗಂಗಾ ನದಿಗೆ ಅಡ್ಡಲಾಗಿ ತೇಲುವ ಸೇತುವೆ ನಿರ್ಮಿಸುವ ಕಾರ್ಯದಲ್ಲಿ ಬುಧವಾರ ಕಾರ್ಮಿಕರು ತೊಡಗಿದ್ದರು – ಪಿಟಿಐ ಚಿತ್ರ

ವಿಶೇಷ ನ್ಯಾಯಾಲಯಕ್ಕೆ ಮುಂಬೈ ಪೊಲೀಸರ ಹೇಳಿಕೆ

ಸಿದ್ದೀಕಿ ಹತ್ಯೆ: ಅನ್ಮೋಲ್ ಸಂಚುಕೋರ

ಮುಂಬೈ (ಪಿಟಿಐ): ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿಯ ಕಿರಿಯ ಸಹೋದರ ಅನ್ಮೋಲ್ ಬಿಷ್ಣೋಯಿ ಅವರು ಎನ್‌ಸಿಪಿ ನಾಯಕ ಬಾಬಾ ಸಿದ್ದೀಕಿ ಹತ್ಯೆಯ ಪ್ರಮುಖ ಸೂತ್ರಧಾರ ಎಂದು ಮುಂಬೈ ಪೊಲೀಸರು ಇಲ್ಲಿನ ವಿಶೇಷ ನ್ಯಾಯಾಲಯಕ್ಕೆ ಹೇಳಿಕೆ ನೀಡಿದ್ದಾರೆ.

ಮಹಾರಾಷ್ಟ್ರ ಸಂಘಟಿತ ಅಪರಾಧಗಳ ನಿಯಂತ್ರಣ ಕಾಯ್ದೆಯ (ಎಂಸಿಒಸಿಎ) ನಿಬಂಧನೆ ಉಲ್ಲೇಖಿಸಿ, ಪ್ರಕರಣದ 8 ಆರೋಪಿಗಳನ್ನು ಕಸ್ಟಡಿಗೆ ನೀಡುವಂತೆ ಪೊಲೀಸರು ಮಂಗಳವಾರ ಕೋರ್ಟ್‌ಗೆ ಮನವಿ ಸಲ್ಲಿಸಿದರು.

ಅಮೆರಿಕದಲ್ಲಿ ಬಂಧನಕ್ಕೆ ಒಳಗಾಗಿ ಅಲ್ಲಿನ ಜೈಲಿನಲ್ಲಿರುವ ಅನ್ಮೋಲ್ ಬಿಷ್ಣೋಯಿಯನ್ನು ಈ ಪ್ರಕರಣದಲ್ಲಿ ಬೇಕಾಗಿರುವ ಆರೋಪಿ ಎಂದು ಮುಂಬೈ ಪೊಲೀಸರು ಪರಿಗಣಿಸಿದ್ದಾರೆ. ಅಲ್ಲದೆ, ಮತ್ತೊಬ್ಬ ಆರೋಪಿ ಶುಭಂ ಲೋಂಕರ್ ಕೂಡ ಬೇಕಾಗಿರುವ ಪಟ್ಟಿಯಲ್ಲಿದ್ದಾನೆ.

ಆರೋಪಿಗಳಿಗೆ ಅನ್ಮೋಲ್ ಹಣಕಾಸಿನ ನೆರವು ನೀಡುತ್ತಿದ್ದ. ಹಣದ ಮೂಲ ಮತ್ತು ಬಳಕೆ ಖಚಿತ ಪಡಿಸಿಕೊಳ್ಳಲು ಇನ್ನಷ್ಟು ತನಿಖೆಯ ಅಗತ್ಯವಿದೆ. ಅಲ್ಲದೆ, ಅನ್ಮೋಲ್ ಸಹ ಆರೋಪಿಗಳನ್ನು ಸಂವಹನ ಅಪ್ಲಿಕೇಶನ್ ಮೂಲಕ ಸಂಪರ್ಕಿಸಿದ್ದಾನೆ. ಈ ಅಂಶದ ಬಗ್ಗೆಯೂ ಮಾಹಿತಿ ಸಂಗ್ರಹಿಸಬೇಕಾಗಿದೆ. ಹಾಗಾಗಿ, ಬಂಧಿತ ಆರೋಪಿಗಳನ್ನು ಕಸ್ಟಡಿಗೆ ಪಡೆಯುವ ಅಗತ್ಯವಿದೆ ಎಂದು ಪೊಲೀಸರು ಕೋರ್ಟ್‌ಗೆ ಅರುಹಿದರು.

ವಿಶೇಷ ಮೋಕಾ ನ್ಯಾಯಾಲಯದ ನ್ಯಾಯಾಧೀಶ ಎ.ಎಂ. ಪಾಟೀಲ್ ಅವರು ಪ್ರಮುಖ ಶೂಟರ್ ಶಿವಕುಮಾರ್ ಗೌತಮ್ ಸೇರಿದಂತೆ ಎಂಟು ಆರೋಪಿಗಳನ್ನು ಡಿಸೆಂಬರ್ 6ರವರೆಗೆ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದರು. ಉಳಿದ ಆರೋಪಿಗಳಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿದರು.

ಪತ್ರಕರ್ತರು ಹೊರಕ್ಕೆ

ನ್ಯಾಯಾಲಯದ ಕಲಾಪ ಪ್ರಾರಂಭವಾಗುವ ಮೊದಲು, ಪ್ರಾಸಿಕ್ಯೂಷನ್ ಆಕ್ಷೇಪಣೆ ಸಲ್ಲಿಸಿದ ನಂತರ ನ್ಯಾಯಾಧೀಶರು ನ್ಯಾಯಾಲಯದಲ್ಲಿ ಹಾಜರಿದ್ದ ಪತ್ರಕರ್ತರನ್ನು ಹೊರಹೋಗುವಂತೆ ಹೇಳಿದರು. ರಿಮಾಂಡ್ ಅರ್ಜಿಯು ಸೂಕ್ಷ್ಮ ಮಾಹಿತಿಯನ್ನು ಹೊಂದಿದೆ ಎಂದು ಪ್ರಾಸಿಕ್ಯೂಷನ್ ಹೇಳಿದೆ.

'ಮರಳು ಅಕ್ರಮ ಗಣಿಗಾರಿಕೆ: ಕಡಿವಾಣ ಹೇರಿ'

ಕೋರ್ಟ್ ಸುದ್ದಿಗಳು



ನವದೆಹಲಿ (ಪಿಟಿಐ): ಮರಳು ಅಕ್ರಮ ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದ್ದು, ಇದೊಂದು ಗಂಭೀರ ವಿಷಯ. ಇದಕ್ಕೆ ಕಡಿವಾಣ ಹಾಕುವ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಮರಳು ಅಕ್ರಮ ಗಣಿಗಾರಿಕೆ ತಡೆಯಲು ಕೈಗೊಂಡ ಕ್ರಮಗಳ ಕುರಿತು ಅಂಕಿ–ಅಂಶಗಳ ಸಮೇತ ಮಾಹಿತಿ ಒದಗಿಸುವಂತೆ ತಮಿಳುನಾಡು, ಪಂಜಾಬ್, ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಈ ವಿಷಯ ಕುರಿತು ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಯನ್ನು ಮುಖ್ಯನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯ ಕುಮಾರ್ ಅವರು ಇದ್ದ ನ್ಯಾಯಪೀಠ ನಡೆಸಿತು.

ಈ ಐದು ರಾಜ್ಯಗಳಲ್ಲಿನ ನದಿಗಳಲ್ಲಿ ಹಾಗೂ ನದಿ ತೀರಗಳಲ್ಲಿ ಮರಳು ಅಕ್ರಮ ಗಣಿಗಾರಿಕೆ ವ್ಯಾಪಕವಾಗಿದ್ದು, ಈ ಕುರಿತು ಸಿಬಿಐನಿಂದ ತನಿಖೆ ನಡೆಸಬೇಕು ಎಂದು ಕೋರಿ ಎಂ. ಅಳಗರಸ್ವಾಮಿ ಎಂಬುವವರು 2018ರಲ್ಲಿ ಪಿಐಎಲ್ ಸಲ್ಲಿಸಿದ್ದರು.

ವಿಚಾರಣೆ ವೇಳೆ, ಅರ್ಜಿದಾರರ ಪರ ಹಿರಿಯ ವಕೀಲ ಪ್ರಶಾಂತ ಭೂಷಣ್, 'ಅಕ್ರಮ ಗಣಿಗಾರಿಕೆ ಕುರಿತು ಕ್ರಮ ಕೈಗೊಳ್ಳುವ ಬದಲು ಈ ರಾಜ್ಯಗಳು ಅದನ್ನು ಮುಚ್ಚಿ ಹಾಕಲು ಯತ್ನಿಸುತ್ತಿವೆ' ಎಂದು ಆರೋಪಿಸಿದರು.

'ಇದು ಗಂಭೀರ ವಿಷಯ. ಇಂಥದೇ ಅರ್ಜಿಯೊಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ಸಲ್ಲಿಕೆಯಾಗಿದ್ದು, ಅದರ ವಿಚಾರಣೆ ಬಾಕಿ ಇದೆಯೇ ಎಂಬುದನ್ನು ಪರಿಶೀಲಿಸಬೇಕಿದೆ' ಎಂದು ಸಿಜೆಐ ಖನ್ನಾ ಹೇಳಿದರು.

'ಮುಂದಿನ ವಿಚಾರಣೆ ವೇಳೆ ಸಮಗ್ರ ಮಾಹಿತಿಯೊಂದಿಗೆ ಹಾಜರಾಗಬೇಕು' ಎಂದು ಐದೂ ರಾಜ್ಯಗಳ ಪರ ವಕೀಲರಿಗೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಮುಂದಿನ ಜನವರಿ 27ಕ್ಕೆ ಮುಂದೂಡಿತು.

ಕಲ್ಲಿದ್ದಲು ಹಗರಣ: ಆದೇಶ ಮರುಪರಿಶೀಲಿಸಲಿರುವ ಕೋರ್ಟ್

ಅಕ್ರಮ ಕಲ್ಲಿದ್ದಲು ಗಣಿ ಹಂಚಿಕೆ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯಗಳು ನೀಡಿದ ಆದೇಶಗಳನ್ನು ಪ್ರಶ್ನಿಸಿ ಸಲ್ಲಿಸಲಾಗುವ ಮೇಲ್ಮನವಿಗಳನ್ನು ಹೈಕೋರ್ಟ್‌ಗಳು ವಿಚಾರಣೆಗೆ ಕೈಗೆತ್ತಿಕೊಳ್ಳುವಂತಿಲ್ಲ ಎಂದು ತಾನು ಈ ಹಿಂದೆ ನೀಡಿರುವ ಆದೇಶದ ಮರುಪರಿಶೀಲನೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಪರಿಗಣಿಸುವುದಾಗಿ ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

2014ರಿಂದ 2017ರ ನಡುವೆ ಎರಡು ಆದೇಶಗಳನ್ನು ಹೊರಡಿಸಿದ್ದ ಸುಪ್ರೀಂ ಕೋರ್ಟ್, ಆರೋಪಿ ಸ್ಥಾನದಲ್ಲಿ ಇರುವವರು ಹೈಕೋರ್ಟ್‌ಗಳಲ್ಲಿ ಮೇಲ್ಮನವಿ ಸಲ್ಲಿಸುವಂತಿಲ್ಲ, ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯದಲ್ಲಿನ ಪ್ರಕ್ರಿಯೆ ಪ್ರಶ್ನಿಸುವ ಮೇಲ್ಮನವಿಗಳನ್ನು ಸುಪ್ರೀಂ ಕೋರ್ಟ್‌ನಲ್ಲಿ ಮಾತ್ರ ಸಲ್ಲಿಸಬಹುದು ಎಂದು ಹೇಳಿತ್ತು. ವಿಚಾರಣೆಗಳನ್ನು ತ್ವರಿತಗೊಳಿಸುವುದು ಈ ಆದೇಶಗಳ ಉದ್ದೇಶ ಆಗಿತ್ತು.

ಕಲ್ಲಿದ್ದಲು ಹಗರಣದ ಪ್ರಕರಣಗಳಿಗೆ ಸಂಬಂಧಿಸಿದ ಮೇಲ್ಮನವಿಗಳನ್ನು ದೆಹಲಿ ಹೈಕೋರ್ಟ್‌ನಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಬೇಕು ಎಂಬ ಮನವಿ ಇರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇರುವ ವಿಭಾಗೀಯ ಪೀಠವು ಪರಿಶೀಲಿಸಿತು.

'ಎಲ್ಲವೂ ನಮ್ಮ ಮುಂದೆಯೇ ಬರಬೇಕು ಎಂಬುದು ಸಿಬಿಐ ನಿಲುವೇ' ಎಂದು ಪೀಠವು ಸಿಬಿಐ ಪರ ವಕೀಲರಾದ ಆರ್. ಎಸ್. ಚೀಮಾ ಅವರನ್ನು ಕೇಳಿತು. ಮೇಲ್ಮನವಿಗಳನ್ನು ಆಲಿಸದಂತೆ ಹೈಕೋರ್ಟ್‌ಗಳಿಗೆ ನಿರ್ಬಂಧ ಹೇರಲಾಗದು ಎಂದು ಅರ್ಜಿದಾರರೊಬ್ಬರ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ ಹೇಳಿದರು.

'ಅನಗತ್ಯ ಹೇಳಿಕೆ ಸ್ವೀಕರಿಸಲು ಸಿದ್ಧವಾಗಿರಬೇಕು'

'ರಾಜಕೀಯದಲ್ಲಿರುವವರು ಎಲ್ಲ ರೀತಿಯ ಅನಪೇಕ್ಷಿತ ಮತ್ತು ಅನಗತ್ಯ ಹೇಳಿಕೆಗಳನ್ನು ಸ್ವೀಕರಿಸಲು ಸಿದ್ಧರಿರಬೇಕು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕೇಂದ್ರ ಸಚಿವ ಎಲ್.ಮುರುಗನ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಕೆ.ವಿ.ವಿಶ್ವನಾಥನ್ ಅವರಿದ್ದ ಪೀಠ ನಡೆಸಿತು.

2020ರಲ್ಲಿ ಮುರುಗನ್ ಸುದ್ದಿಗೋಷ್ಠಿ ನಡೆಸಿ, ಚೆನ್ನೈನ ಮುರಸೋಳಿ ಟ್ರಸ್ಟ್ ವಿರುದ್ಧ ಕೆಲ ಆರೋಪಗಳನ್ನು ಮಾಡಿದ್ದರು. ಅವರ ವಿರುದ್ಧ ಟ್ರಸ್ಟ್ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಹೂಡಿತ್ತು. ಅರ್ಜಿ ವಿಚಾರಣೆ ನಡೆಸಿದ ಪೀಠ, 'ನೀವು ರಾಜಕೀಯದಲ್ಲಿ ಇರಬೇಕಾದಲ್ಲಿ ದಪ್ಪ ಚರ್ಮದವರಾಗಿರಬೇಕು ಎಂಬ ಮಾತೊಂದು ಮಹಾರಾಷ್ಟ್ರದಲ್ಲಿ ಚಾಲ್ತಿಯಲ್ಲಿದೆ' ಎಂದಿತು. ಪ್ರತಿಕ್ರಿಯೆ ಸಲ್ಲಿಸಲು ಟ್ರಸ್ಟ್‌ಗೆ ಗುರುವಾರ ತನಕ ಸಮಯಾವಕಾಶ ನೀಡಿ, ವಿಚಾರಣೆಯನ್ನು ಡಿ.5ಕ್ಕೆ ಮುಂದೂಡಿತು.

ಸುಳ್ಳು ಪ್ರಕರಣ: ಮೂವರು ಪೊಲೀಸರ ವಿರುದ್ಧ ಎಫ್‌ಐಆರ್‌ಗೆ ಸೂಚನೆ

ಗೋಧ್ರಾ (ಪಿಟಿಐ): ಗೋವುಗಳ ಕಳ್ಳಸಾಗಾಟ ನಡೆಸುತ್ತಿದ್ದಾರೆ ಎಂಬ ಸುಳ್ಳು ದೂರಿನಲ್ಲಿ ಇಬ್ಬರನ್ನು ಸಿಲುಕಿಸಿದ ಪ್ರಕರಣ ಸಂಬಂಧ ಮೂವರು ಪೊಲೀಸ್ ಸಿಬ್ಬಂದಿ ಮತ್ತು 'ಗೋ ರಕ್ಷಕ' ಸೇರಿ ಇತರ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಲು ಗುಜರಾತ್‌ನ ನ್ಯಾಯಾಲಯವೊಂದು ಆದೇಶಿಸಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಪರ್ವೇಜ್ ಅಹಮ್ಮದ್ ಮಾಳವೀಯ ಅವರು ಮಂಗಳವಾರ, ಗೋವುಗಳ ಮಾಲೀಕ ಇಲಿಯಾಸ್ ದೇವಾಳ್ ಮತ್ತು ಚಾಲಕ ನಾಜಿರ್ ಮಲಿಕ್ ಅವರನ್ನು ಖುಲಾಸೆಗೊಳಿಸಿದರು.

ಆರೋಪಿಗಳು ಗೋವುಗಳನ್ನು ಕಸಾಯಿಖಾನೆಗೆ ಕೊಂಡೊಯ್ಯುತ್ತಿದ್ದರು ಎಂದು ಸಾಬೀತು ಮಾಡುವ ಯಾವುದೇ ಸಾಕ್ಷ್ಯಗಳನ್ನು ಪ್ರಾಸಿಕ್ಯೂಷನ್ ಒದಗಿಸಿಲ್ಲ ಎಂದು ಕೋರ್ಟ್ ಈ ಸಂದರ್ಭದಲ್ಲಿ ಹೇಳಿತು.

ಸುಳ್ಳು ಪ್ರಕರಣ ದಾಖಲಿಸಿರುವುದಕ್ಕಾಗಿ ಪೊಲೀಸ್ ಹೆಡ್ ಕಾನ್‌ಸ್ಟೆಬಲ್‌ಗಳಾದ ರಮೇಶ್ ನರ್ವತ್ ಸಿನ್ಹ ಮತ್ತು ಶಂಕರ್ ಸಿನ್ಹ ಮತ್ತು ಸಬ್–ಇನ್‌ಸ್ಪೆಕ್ಟರ್ ಎಂ.ಎಸ್.ಮುನಿಯಾ ಮತ್ತು ಸಾಕ್ಷಿದಾರರಾದ ಮರ್ಗೇಶ್ ಸೋನಿ ಮತ್ತು ದರ್ಶನ್ ಸೋನಿ ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 248ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲು ಕೋರ್ಟ್ ಸೂಚಿಸಿತು.

ಪ್ರಕರಣದಲ್ಲಿ ಭಾಗಿಯಾದ ಪೊಲೀಸ್ ಅಧಿಕಾರಿಗಳ ವಿಚಾರಣೆ ನಡೆಸುವಂತೆ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ನಿರ್ದೇಶನ ನೀಡಿತು.

2022ರ ಜುಲೈನಲ್ಲಿ ಎಮ್ಮೆ, ಕರು ಮತ್ತು ಜರ್ಸಿ ದನವನ್ನು ಸಾಗಣೆ ಮಾಡುತ್ತಿದ್ದ ಪ್ರಕರಣದಲ್ಲಿ ದೇವಾಳ್ ಮತ್ತು ಮಲಿಕ್ ಅವರನ್ನು ಆರೋಪಿಗಳನ್ನಾಗಿಸಲಾಗಿತ್ತು. ಅವರು ಗೋವುಗಳ ಜಾತ್ರೆಗೆ ಅವುಗಳನ್ನು ಕೊಂಡೊಯ್ಯುತ್ತಿದ್ದರು ಎಂಬುದು ವಿಚಾರಣೆ ವೇಳೆ ದೃಢಪಟ್ಟಿದೆ.

ಸಾರ್ವಜನಿಕ ಸ್ಥಳ: ದನದ ಮಾಂಸ ನಿಷೇಧ

ನವದೆಹಲಿ (ಪಿಟಿಐ): ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ದನದ ಮಾಂಸ ಬಡಿಸುವುದನ್ನು ಮತ್ತು ಸೇವಿಸುವುದನ್ನು ನಿಷೇಧಿಸಲು ಅಸ್ಸಾಂ ಸರ್ಕಾರ ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಬುಧವಾರ ಪ್ರಕಟಿಸಿದರು.



ಹಿಮಂತ

ದನದ ಮಾಂಸ ಸೇವನೆಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿಗೆ ತಿದ್ದುಪಡಿ ತಂದು ಹೊಸ ನಿಬಂಧನೆಗಳನ್ನು ಸೇರಿಸಲು ರಾಜ್ಯ ಸಚಿವ ಸಂಪುಟ ನಿರ್ಧಾರ ತೆಗೆದುಕೊಂಡಿದೆ ಎಂದು ಅವರು ಹೇಳಿದರು.

'ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ದನದ ಮಾಂಸ ಸೇವನೆಯನ್ನು ನಿಷೇಧಿಸಲು ನಾವು ನಿರ್ಧರಿಸಿದ್ದೇವೆ' ಎಂದು ಶರ್ಮ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಅವರು ಸಚಿವ ಸಂಪುಟ ಸಭೆಗೆ ವರ್ಚುವಲ್ ಆಗಿ ಭಾಗಿಯಾಗಿದ್ದರು.

ದನದ ಮಾಂಸಕ್ಕೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಕಾನೂನು ಬಲಿಷ್ಠವಾಗಿದೆಯಾದರೂ, ರೆಸ್ಟೋರೆಂಟ್, ಹೋಟೆಲ್ ಮತ್ತು ಧಾರ್ಮಿಕ ಅಥವಾ ಸಾಮಾಜಿಕ ಸಭೆಗಳಲ್ಲಿ ಅದರ ಸೇವನೆಗೆ ನಿಷೇಧ ಇಲ್ಲ ಎಂದು ಅವರು ವಿವರಿಸಿದರು.

'ಇದೀಗ, ನಾವು ಈ ಕಾನೂನನ್ನು ಇನ್ನಷ್ಟು ಬಲಪಡಿಸುವ ಮೂಲಕ ರಾಜ್ಯದ ಸಾರ್ವಜನಿಕ ಸ್ಥಳಗಳಲ್ಲಿ ದನದ ಮಾಂಸ ಸೇವನೆಯನ್ನು ಸಂಪೂರ್ಣವಾಗಿ ನಿಷೇಧಿಸಲು ನಿರ್ಧಾರ ತೆಗೆದುಕೊಂಡಿದ್ದೇವೆ' ಎಂದು ತಿಳಿಸಿದರು.

ಸೇನಾ ನೆಲೆ ಮೇಲೆ ಗ್ರೆನೇಡ್ ದಾಳಿ

ಜಮ್ಮು (ಪಿಟಿಐ): ಜಮ್ಮು– ಕಾಶ್ಮೀರದ ಪೂಂಛ್ ಜಿಲ್ಲೆಯ ಸುರಾನಕೋಟ್ ಸೇನಾ ನೆಲೆ ಮೇಲೆ ಭಯೋತ್ಪಾದಕರು ಬುಧವಾರ ಬೆಳಗಿನ ಜಾವ ಗ್ರೆನೇಡ್ ದಾಳಿ ನಡೆಸಿದ್ದಾರೆ.



ಉಗ್ರರು ಹಾರಿಸಿದ ಎರಡು ಗ್ರೆನೇಡ್‌ಗಳಲ್ಲಿ ಒಂದು ಸ್ಫೋಟಗೊಂಡಿದ್ದು, ಯಾವುದೇ ರೀತಿಯ ಹಾನಿ ಯಾಗಿಲ್ಲ. ಮತ್ತೊಂದನ್ನು ತಜ್ಞರು ನಿಷ್ಕ್ರಿಯಗೊಳಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದಾಳಿ ನಡೆಸಿ ಪರಾರಿಯಾದ ಭಯೋತ್ಪಾದಕರ ಪತ್ತೆಗಾಗಿ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ನಡೆಸಿವೆ.

ವಿರೋಧ ಪಕ್ಷದ ನಾಯಕನನ್ನು ತಡೆದ ಪೊಲೀಸರು


ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಹಾಗೂ ಸಂಸದ ಕೆ.ಸಿ. ವೇಣುಗೋಪಾಲ್ ಅವರನ್ನು ಒಳಗೊಂಡ ಕಾಂಗ್ರೆಸ್ ನಿಯೋಗವು ಉತ್ತರ ಪ್ರದೇಶದ ಹಿಂಸಾಚಾರ ಪೀಡಿತ ಸಂಭಲ್ ನಗರಕ್ಕೆ ತೆರಳಲು ಬುಧವಾರ ಹೊರಟಿತ್ತು. ಆದರೆ, ದೆಹಲಿ–ಗಾಜಿಯಾಬಾದ್ ಗಡಿಯಲ್ಲಿ ಉತ್ತರ ಪ್ರದೇಶದ ಪೊಲೀಸರು ಈ ನಿಯೋಗವನ್ನು ತಡೆದರು. ಸಂಭಲ್‌ಗೆ ತೆರಳಲು ಅನುಮತಿ ನೀಡುವಂತೆ ಕೋರಿ ಸತತ ಎರಡು ಗಂಟೆ ನಿಯೋಗವು ಪೊಲೀಸರೊಂದಿಗೆ ಮಾತುಕತೆ ನಡೆಸಿತು. ಆದರೆ, ಅನುಮತಿಯನ್ನು ನಿರಾಕರಿಸಲಾಯಿತು. ಮಧ್ಯಾಹ್ನ 12.30ರ ಸುಮಾರಿಗೆ ನಿಯೋಗವು ದೆಹಲಿಗೆ ವಾಪಸಾಯಿತು

'ನನ್ನ ಸಾಂವಿಧಾನಿಕ ಹಕ್ಕನ್ನು ಕಸಿಯಲಾಗಿದೆ'

ಸಂಭಲ್‌ಗೆ ಹೋಗಿ, ಅಲ್ಲಿನ ಜನರನ್ನು ಭೇಟಿ ಮಾಡಿ, ಅಲ್ಲೇನಾಗಿದೆ ಎಂದು ತಿಳಿದುಕೊಳ್ಳಬೇಕು. ಆದರೆ, ಅಲ್ಲಿಗೆ ಹೋಗಲು ಪೊಲೀಸರು ನಮಗೆ ಅನುಮತಿ ನೀಡುತ್ತಿಲ್ಲ. ವಿರೋಧ ಪಕ್ಷದ ನಾಯಕನಾಗಿ ಅಲ್ಲಿಗೆ ಹೋಗುವುದು ನನ್ನ ಹಕ್ಕು... ಒಬ್ಬನೇ ಹೋಗುವುದಕ್ಕೂ ನಾನು ತಯಾರಿದ್ದೇನೆ, ಪೊಲೀಸರ ಜೊತೆಯಲ್ಲಿ ಹೋಗುವುದಕ್ಕೂ ಸಿದ್ಧನಿದ್ದೇನೆ. ಆದರೆ, ಈ ಯಾವುದನ್ನೂ ಪೊಲೀಸರು ಒಪ್ಪುತ್ತಿಲ್ಲ. ಕೆಲವು ದಿನಗಳ ನಂತರ ಬಂದರೆ ಸಂಭಲ್‌ಗೆ ಹೋಗಲು ಅನುಮತಿ ನೀಡುವುದಾಗಿ ಹೇಳಿದ್ದಾರೆ. ಇದು ನನ್ನ ಹಕ್ಕನ್ನು ಕಸಿದುಕೊಳ್ಳುವಂಥ ನಡವಳಿಕೆ. ಪೊಲೀಸರು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ. ನೋಡಿ, ಇದು ನವ ಭಾರತ. ಸಂವಿಧಾನವನ್ನು ಅಂತ್ಯಗೊಳಿಸಲು ಇಲ್ಲಿ ಎಲ್ಲ ಯತ್ನಗಳೂ ನಡೆಯುತ್ತಿವೆ. ಆದರೆ, ನಾವು ಹೋರಾಡುತ್ತಲೇ ಇರುತ್ತೇವೆ

ರಾಹುಲ್ ಗಾಂಧಿ

ಲೋಕಸಭೆ ವಿರೋಧ ಪಕ್ಷದ ನಾಯಕ





ಕಾಂಗ್ರೆಸ್ ನಿಯೋಗವನ್ನು ಗಾಜಿಯಾಬಾದ್ ಗಡಿಯಲ್ಲಿ ಪೊಲೀಸರು ಬುಧವಾರ ತಡೆದರು – ಪಿಟಿಐ ಚಿತ್ರ

ಸಂಭಲ್ ಪ್ರವೇಶ ಯಾಕೆ ಸಾಧ್ಯವಿಲ್ಲ?

- ಸಂಭಲ್‌ನಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 163 ಜಾರಿಯಲ್ಲಿದೆ. ಸಮಸ್ಯೆ ಉಂಟಾಗಬಹುದು ಅಥವಾ ಅಪಾಯ ಎದುರಾಗಬಹುದು ಎಂಬ ಶಂಕೆಯ ಸಂದರ್ಭದಲ್ಲಿ ತುರ್ತಾಗಿ ಈ ಆದೇಶ ಹೊರಡಿಸುವ ಅಧಿಕಾರವನ್ನು ಮ್ಯಾಜಿಸ್ಟ್ರೇಟ್‌ಗೆ ನೀಡಲಾಗಿದೆ. ಹೊರಗಿನವರು ಸಂಭಲ್ ಪ್ರವೇಶಕ್ಕೆ ನಿಷೇಧದ ಆದೇಶವಿದ್ದು, ಇದು ಡಿ.31ರವರೆಗೆ ಜಾರಿಯಲ್ಲಿರಲಿದೆ
- 'ರಾಹುಲ್ ಅವರು ಪ್ರವೇಶಿಸುವುದನ್ನು ತಡೆಯಿರಿ' ಎಂದು ಸಂಭಲ್‌ನ ಮ್ಯಾಜಿಸ್ಟ್ರೇಟರ್ ರಾಜೇಂದ್ರ ಪೇಸಿಯಾ ಅವರು ಗೌತಮ್ ಬುದ್ಧ ನಗರ, ಗಾಜಿಯಾಬಾದ್ ಪೊಲೀಸ್ ಆಯುಕ್ತರಿಗೆ ಮತ್ತು ಅಮರೋಹ ಹಾಗೂ ಬುಲಂದ್‌ಶಹರ್ ಜಿಲ್ಲೆಗಳ ಪೊಲೀಸ್ ಮುಖ್ಯಸ್ಥರಿಗೆ ಲಿಖಿತವಾಗಿ ಮಂಗಳವಾರವೇ ಆದೇಶ ನೀಡಿದ್ದರು

> ನನ್ನನ್ನು ಗೃಹಬಂಧನದಲ್ಲಿ ಇರಿಸಲಾಗಿದೆ. ಈ ಕ್ರಮವು ಸರ್ಕಾರದ ಗೂಂಡಾಗಿರಿಯನ್ನು ತೋರಿಸುತ್ತದೆ. ರಾಜ್ಯದಲ್ಲಿ ಅರಾಜಕತೆ ಇದೆ
>
> **ಆರಾಧನಾ ಮಿಶ್ರಾ ಮೋನಾ,** ಉತ್ತರ ಪ್ರದೇಶದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕಿ

> ಸಂವಿಧಾನವನ್ನು ಹರಿದು ಚೂರು ಮಾಡಿ, ತಮ್ಮ ವಿಭಜನಕಾರಿ ಕಾರ್ಯಸೂಚಿಯನ್ನು ಊರುವಲ್ಲಿ ಬಿಜೆಪಿ–ಆರ್‌ಎಸ್‌ಎಸ್ ನಿರತವಾಗಿದೆ. ಸಂಭಲ್ ಸಂತ್ರಸ್ತರನ್ನು ಭೇಟಿ ಮಾಡದಂತೆ ವಿರೋಧ ಪಕ್ಷದ ನಾಯಕನನ್ನು ತಡೆದಿರುವುದು ಅವರ ಕಾರ್ಯಸೂಚಿಗೆ ಸಾಕ್ಷ್ಯದಂತಿದೆ
>
> **ಮಲ್ಲಿಕಾರ್ಜುನ ಖರ್ಗೆ,** ಕಾಂಗ್ರೆಸ್ ಅಧ್ಯಕ್ಷ

'ಕೋರ್ ವೋಟ್' ಸೆಳೆಯುವ ಸ್ಪರ್ಧೆ'

ನಿಮಗೆ ಸಂಭಲ್‌ಗೆ ಹೋಗಲೇಬೇಕು ಎಂದಿದ್ದರೆ, ಆ ಕುರಿತು ಪೊಲೀಸರಿಗೆ ಮುಂಚಿತವಾಗಿಯೇ ಮಾಹಿತಿ ನೀಡುತ್ತಿದ್ದೀರಿ. ನೀವು ವಿರೋಧ ಪಕ್ಷದ ನಾಯಕ. ನಿಮಗೆ ಬಿಗಿ ಭದ್ರತೆ ನೀಡಬೇಕಾಗುತ್ತದೆ. ಆದರೆ, ನೀವು ಮುಂಚೆಯೇ ಮಾಹಿತಿ ನೀಡಿಲ್ಲ. ಕೋರ್ ವೋಟ್ (ಮುಸ್ಲಿಂ ಮತಗಳನ್ನು ಉಲ್ಲೇಖಿಸಲು ಬಿಜೆಪಿ ಇತ್ತೀಚೆಗೆ ಈ ಪದವನ್ನು ಬಳಸುತ್ತಿದೆ) ಪಡೆದುಕೊಳ್ಳಲು ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷದ ಮಧ್ಯೆ ಸ್ಪರ್ಧೆ ಇದೆ. ಸಂಭಲ್ ಜನರ ಕುರಿತು ನಿಮಗೇನೂ ಅನುಕಂಪ ಇಲ್ಲ. ಉತ್ತಮ ಫೋಟೊಶೂಟ್‌ಗಾಗಿ ತೆರಳಿದ್ದೀರಿ ಅಷ್ಟೆ


ಬಿಜೆಪಿ

- ದೆಹಲಿ–ಮೀರತ್ ಎಕ್ಸ್‌ಪ್ರೆಸ್‌ವೇನಲ್ಲಿ ಭಾರಿ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿತ್ತು. ಈ ಹೆದ್ದಾರಿಯಲ್ಲಿ ಸಂಚರಿಸಿದ ಎಲ್ಲ ವಾಹನಗಳನ್ನು ಪೊಲೀಸರು ತಪಾಸಣೆಗೆ ಒಳಪಡಿಸಿದರು. ಹೆದ್ದಾರಿಯಲ್ಲಿ ಭಾರಿ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಜಮಾವಣೆಗೊಂಡಿದ್ದರು. ತಪಾಸಣೆಯ ಕಾರಣದಿಂದ ನಿಧಾನಗತಿಯಲ್ಲಿ ವಾಹನಗಳು ಸಂಚರಿಸಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು
- ಸಂಭಲ್ ಹಿಂಸಾಚಾರಕ್ಕೆ ಸಂಬಂಧಿಸಿ ವಿಕ್ರಮ್ ಸಿಂಗ್ ಯಾದವ್ ಹಾಗೂ ಪ್ರವೀಣ್ ಸಿಂಗ್ ಅವರನ್ನು ಬಂಧಿಸಿ ಮುರಾದಾಬಾದ್ ಜಿಲ್ಲಾ ಕಾರಾಗೃಹದಲ್ಲಿ ಇಡಲಾಗಿದೆ. ಸಮಾಜವಾದಿ ಪಕ್ಷದ ಕೆಲವು ಮುಖಂಡರು ಇವರನ್ನು ಸೋಮವಾರ ಭೇಟಿಯಾಗಿದ್ದರು. ಭೇಟಿ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಪೊಲೀಸರು ತಮಗೆ ಹಿಂಸೆ ನೀಡುತ್ತಿದ್ದಾರೆ ಎಂದು ಬಂಧಿತರು ಹೇಳುತ್ತಿದ್ದಾರೆ' ಎಂದಿದ್ದರು. ಆರೋಪಿಗಳ ಭೇಟಿಗೆ ಅನುಮತಿ ನೀಡಿದ್ದಕ್ಕಾಗಿ ಜೈಲರ್, ಉಪಜೈಲರ್ ಅನ್ನು ಸರ್ಕಾರ ಬುಧವಾರ ಅಮಾನತು ಮಾಡಿದೆ

ಅಡಿಲೇಡ್ ಟೆಸ್ಟ್ ಪಂದ್ಯದಲ್ಲಿ ಕನ್ನಡಿಗನಿಗೆ ಕಾದಿರುವ ಕ್ರಮಾಂಕ ಯಾವುದು?

ದಶಕದ ಹೊಸ್ತಿಲಲ್ಲಿ ರಾಹುಲ್ 'ಟೆಸ್ಟ್'

• ಮಧು ಜವಳಿ



ಕೆ.ಎಲ್ ರಾಹುಲ್

ಅಡಿಲೇಡ್: ಕನ್ನಡಿಗ ಕೆ.ಎಲ್. ರಾಹುಲ್ ಅವರು ಮೊದಲ ಬಾರಿಗೆ ಆಸ್ಟ್ರೇಲಿಯಾ ಪ್ರವಾಸ ಮಾಡಿದಾಗ ಸಣ್ಣ ಕೂದಲಿನ ಕೇಶಶೈಲಿ ಹೊಂದಿದ್ದರು. ಈಗ ಆ ಜಾಗದಲ್ಲಿ ನೀಳಕೇಶ ಆವರಿಸಿದೆ. ಆಗ ಚಿಗುರು ಮೀಸೆಯಿದ್ದ ಮುಖವನ್ನು ಈಗ ಕಪ್ಪು ಗಡ್ಡ ಅಲಂಕರಿಸಿದೆ. ಮೈಮೇಲೆ ಹಲವು ಹಚ್ಚೆಗಳು ಅರಳಿವೆ.

ರಾಹುಲ್, ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿ ದಶಕ ತುಂಬಲು ಇನ್ನೂ ಮೂರು ವಾರಗಳು ಉಳಿದಿವೆ. 2014ರ ಡಿಸೆಂಬರ್‌ನಲ್ಲಿ ಅವರು 'ಬಾಕ್ಸಿಂಗ್ ಡೇ' ಟೆಸ್ಟ್‌ನಲ್ಲಿ ಪದಾರ್ಪಣೆ ಮಾಡಿದ್ದರು. ಇದೀಗ ಅವರು ನಾಲ್ಕನೇ ಸಲ ಆಸ್ಟ್ರೇಲಿಯಾಕ್ಕೆ ಬಂದಿದ್ದಾರೆ. ಆದರೆ ಈ ನೆಲದಲ್ಲಿ ಅವರು ಇದುವರೆಗೂ ಆಡಿರುವುದು 6 ಟೆಸ್ಟ್‌ಗಳಲ್ಲಿ ಮಾತ್ರ!

ಅಂದು ಮೆಲ್ಬರ್ನ್‌ನಲ್ಲಿ ರಾಹುಲ್ ತಮ್ಮ ಚೊಚ್ಚಲ ಪಂದ್ಯ ಆಡಿದ್ದರು. ಅದರ ಎರಡೂ ಇನಿಂಗ್ಸ್‌ಗಳಲ್ಲಿ ಅವರು 6 ಮತ್ತು 3ನೇ ಕ್ರಮಾಂಕದಲ್ಲಿ ಆಡಿದ್ದರು. ಹೆಚ್ಚು ರನ್ ಗಳಿಸಲು ಅವರಿಗೆ ಸಾಧ್ಯವಾಗಿರಲಿಲ್ಲ. ಆದರೆ ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಆಡಿದ್ದ ಎರಡನೇ ಟೆಸ್ಟ್‌ನಲ್ಲಿ ತಮ್ಮ ನೆಚ್ಚಿನ ಆರಂಭಿಕ ಕ್ರಮಾಂಕಕ್ಕೆ ಮರಳಿದ್ದರು. ಅದರಲ್ಲಿ ಚೆಂದದ ಶತಕ ಹೊಡೆದಿದ್ದರು. ಆಗ ಕ್ರಿಕೆಟ್ ವಲಯದಲ್ಲಿ ರಾಹುಲ್ ದ್ರಾವಿಡ್ ಸ್ಥಾನ ತುಂಬುವ ಮತ್ತೊಬ್ಬ ರಾಹುಲ್ ಉದಯಿಸಿದರು ಎಂಬ ಮಾತುಗಳು ಕೇಳಿಬಂದಿದ್ದವು. ಕೆ.ಎಲ್. ರಾಹುಲ್ ಅವರ ಶೈಲಿ ಅಷ್ಟು ಉತ್ಕೃಷ್ಟವಾಗಿತ್ತು.

ಅಲ್ಲಿಂದ ಇಲ್ಲಿಯವರೆಗೆ ರಾಹುಲ್ 54 ಟೆಸ್ಟ್‌ಗಳಲ್ಲಿ 3084 ರನ್ ಗಳಿಸಿದ್ದಾರೆ. 34.26ರ ಸರಾಸರಿಯಲ್ಲಿ ರನ್‌ಗಳನ್ನು ಕಲೆಹಾಕಿದ್ದಾರೆ. ಅವರ ಸಾಮರ್ಥ್ಯ ಹಾಗೂ ಪ್ರತಿಭೆಗೆ ಹೋಲಿಸಿದರೆ ಇಷ್ಟು ಸಾಲದು.

'ಎಲ್ಲರಿಗೂ ಇದೇ ತರಹದ ಆಸೆ ಇರುವಂತೆ; ನನಗೂ ಬಹಳಷ್ಟು ರನ್‌ಗಳನ್ನು ಗಳಿಸಬೇಕು. ಕ್ರೀಡಾಂಗಣದ ಸ್ಟ್ಯಾಂಡ್ ಮೇಲೆ ನನ್ನ ಹೆಸರು ಬರುವಷ್ಟು ರನ್‌ಗಳನ್ನು ಕಲೆಹಾಕಬೇಕು' ಎಂದು ರಾಹುಲ್ ಹೇಳಿದರು. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಸ್ಟ್ಯಾಂಡ್‌ಗಳಿಗೆ ರಾಜ್ಯದ ದಿಗ್ಗಜರ ಹೆಸರುಗಳನ್ನು ನಾಮಕರಣ ಮಾಡುತ್ತಿರುವ ಕುರಿತು ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು.

'ಹೌದು. ಹತ್ತು ವರ್ಷಗಳ ಹಿಂದೆ ನಾನು ಮೊದಲ ಬಾರಿಗೆ ಟೆಸ್ಟ್ ಸರಣಿಯಲ್ಲಿ ಆಡಿದ್ದೆ. ಬಾಲ್ಯದಿಂದಲೂ ಭಾರತ–ಆಸ್ಟ್ರೇಲಿಯಾ ಸರಣಿಗಳನ್ನು ಟಿ.ವಿಯಲ್ಲಿ ನೋಡುತ್ತ ಬೆಳೆದಿದ್ದೆ. ಬೆಳಗಿನ ಜಾವ 5 ಗಂಟೆಗೆ ಎದ್ದು ಟಿ.ವಿಯಲ್ಲಿ ಉಭಯ ತಂಡಗಳ ಪಂದ್ಯಗಳನ್ನು ಅಪ್ಪನೊಂದಿಗೆ ವೀಕ್ಷಿಸುತ್ತಿದ್ದೆ' ಎಂದು ರಾಹುಲ್ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ನೆನಪಿಸಿಕೊಂಡರು.

'ಹತ್ತು ವರ್ಷಗಳ ಹಿಂದೆ ನನ್ನ ತಲೆಯಲ್ಲಿ ಬಹಳಷ್ಟು ಯೋಚನೆಗಳಿದ್ದವು. ಈಗಿನಷ್ಟು ಖಚಿತತೆ ಆಗಿರಲಿಲ್ಲ. ಬ್ಯಾಟಿಂಗ್, ಸಮಯಕ್ಕೆ ಅಗತ್ಯವಿರುವುದನ್ನು ಮಾಡುವ ಕಾರ್ಯ, ರನ್ ಗಳಿಸುವ ವಿಧಾನಗಳು, ಒತ್ತಡ ನಿರ್ವಹಣೆ, ಗೌಜಿ, ಗದ್ದಲಗಳು ಮತ್ತು ಟೀಕೆಗಳಿಂದ ದೂರವಿರುವುದು ಹೇಗೆಂದೂ ತಿಳಿದಿರಲಿಲ್ಲ. ಆದರೆ ಕಳೆದ ಒಂದು ದಶಕದಲ್ಲಿ ಬಹಳಷ್ಟನ್ನು ಕಲಿತಿದ್ದೇನೆ. ನಾನು ನಡೆದು ಬಂದ ಹಾದಿಗೆ ಆಭಾರಿಯಾಗಿರುವೆ. ಏರಿಳಿತಗಳು, ಒಳ್ಳೆಯದು ಮತ್ತು ಕೆಟ್ಟದು ಸೇರಿದಂತೆ ಎಲ್ಲದಕ್ಕೂ ಕೃತಜ್ಞನಾಗಿರುವೆ. ಹತ್ತು ವರ್ಷದ ಹಿಂದೆ ಇದೇ ಆಸ್ಟ್ರೇಲಿಯಾದಲ್ಲಿ ಪಯಣ ಆರಂಭವಾಗಿತ್ತು. ನನ್ನ ಭವಿಷ್ಯಕ್ಕೂ ಈಗ ಮತ್ತೆ ಉತ್ತಮ ಆರಂಭ ದೊರೆಯುವ ವಿಶ್ವಾಸವಿದೆ' ಎಂದರು.

'ಪ್ರಾಮಾಣಿಕವಾಗಿ ಹೇಳುತ್ತೇನೆ. ಈ ದಶಕವು 25 ವರ್ಷಗಳಂತೆ ಭಾಸವಾಗಿದೆ' ಎಂದು ರಾಹುಲ್ ಹೇಳಿದರು.

ಈ ಸರಣಿಯ ಮೊದಲ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಅವರು ಅರ್ಧಶತಕ ಗಳಿಸಿದ್ದರು. ಆ ಮೂಲಕ ತಮ್ಮ ಪ್ರತಿಭೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದರು. ತಮ್ಮ ಅಭಿಮಾನಿಗಳಲ್ಲಿ ಹಲವಾರು ನಿರೀಕ್ಷೆಗಳನ್ನು ಮೂಡಿಸಿದ್ದಾರೆ. 31 ವರ್ಷದ ರಾಹುಲ್ ತಮ್ಮ ವೃತ್ತಿಜೀವನದಲ್ಲಿ ಮತ್ತೆ ವೈಭವಕ್ಕೆ ಮರಳುವ ನಿರೀಕ್ಷೆಯಲ್ಲಿದ್ದಾರೆ. ಮುಂದಿನ ಪಂದ್ಯದಲ್ಲಿ ಅವರು ಇನಿಂಗ್ಸ್ ಆರಂಭಿಸುವರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಮೊದಲ ಪಂದ್ಯದಲ್ಲಿ ಗೈರುಹಾಜರಾಗಿದ್ದ ರೋಹಿತ್ ಶರ್ಮಾ ತಂಡಕ್ಕೆ ಮರಳಿದ್ದಾರೆ. ಆದ್ದರಿಂದ ಅವರೇ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ಗುರುವಾರ ರೋಹಿತ್ ಅವರೇ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಸ್ಪಷ್ಟಪಡಿಸಬಹುದು. ಅಲ್ಲಿಯವರೆಗೂ ಈ ಬ್ಯಾಟಿಂಗ್ ಕ್ರಮಾಂಕವು ನಿಗೂಢವಾಗಿಯೇ ಉಳಿಯಲಿದೆ. ಆದರೆ ರಾಹುಲ್ ಮಾತ್ರ ತಮ್ಮ ಪಯಣದಲ್ಲಿ ಎಂದಿಗೂ ಸೋಲು ಒಪ್ಪದ ಮನೋಭಾವ ಬೆಳೆಸಿಕೊಂಡಿದ್ದಾರೆ. ಆದ್ದರಿಂದ ಸಿಕ್ಕ ಅವಕಾಶದಲ್ಲಿ ತಮ್ಮ ಸಾಮರ್ಥ್ಯ ಪಣಕ್ಕೊಡ್ಡಲು ಸಿದ್ಧರಾಗಿದ್ದಾರೆ.

ಅಭ್ಯಾಸ ವೀಕ್ಷಣೆ: ಪ್ರೇಕ್ಷಕರಿಗೆ ನಿರ್ಬಂಧ

ಅಡಿಲೇಡ್ (ಪಿಟಿಐ): ಭಾರತ ತಂಡವು ಅಭ್ಯಾಸ ನಡೆಸುವ ವೇಳೆಯಲ್ಲಿ ಪ್ರೇಕ್ಷಕರಿಗೆ ವೀಕ್ಷಿಸಲು ಅವಕಾಶ ನೀಡದಿರಲು ನಿರ್ಧರಿಸಲಾಗಿದೆ.

ಅಡಿಲೇಡ್ ಓವಲ್‌ನಲ್ಲಿ ಮಂಗಳವಾರ ಭಾರತದ ಆಟಗಾರರ ಅಭ್ಯಾಸವನ್ನು ನೋಡಲು ಜನರಿಗೆ ಅವಕಾಶ ನೀಡಲಾಗಿತ್ತು. ಆದರೆ ಅದರಲ್ಲಿದ್ದ ಕೆಲವು ಪ್ರೇಕ್ಷಕರು ಆಟಗಾರರ ವಿರುದ್ಧ 'ಅಸಭ್ಯ'ವಾಗಿ ಕೂಗಾಡಿದ್ದರು.

'ಆಸ್ಟ್ರೇಲಿಯಾ ಆಟಗಾರರು ಅಭ್ಯಾಸ ಮಾಡುವಾಗ 70 ಜನಕ್ಕಿಂತ ಹೆಚ್ಚು ಇರಲಿಲ್ಲ. ಆದರೆ ಭಾರತದ ಆಟಗಾರರು ಅಭ್ಯಾಸ ಮಾಡುವಾಗ 3 ಸಾವಿರಕ್ಕಿಂತಲೂ ಹೆಚ್ಚು ಮಂದಿ ಸೇರಿದ್ದರು. ಇದು ಅನಿರೀಕ್ಷಿತವಾಗಿತ್ತು' ಎಂದು ಬಿಸಿಸಿಐನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಕೆಲವು ಪ್ರೇಕ್ಷಕರು ಆಟಗಾರರನ್ನು ವ್ಯಂಗ್ಯ ಮಾಡಿದರು. ಮೊಬೈಲ್‌ನಲ್ಲಿ ಫೇಸ್‌ಬುಕ್ ಲೈವ್ ಮಾಡುತ್ತಿದ್ದ ಕೆಲವರು ಜೋರಾಗಿ ಕೂಗಾಡುತ್ತ, ಆಟಗಾರರ ಏಕಾಗ್ರತೆಗೆ ಭಂಗ ತರುತ್ತಿದ್ದರು' ಎಂದು ಹೇಳಿದರು.

ಪಿಂಕ್ ಬಾಲ್ ಟೆಸ್ಟ್‌ಗೆ ಮಳೆ ಅಡ್ಡಿ: ಕ್ಯುರೇಟರ್

ಶುಕ್ರವಾರ ಅಡಿಲೇಡ್ ಓವಲ್‌ನಲ್ಲಿ ಶುರುವಾಗಲಿರುವ ಪಿಂಕ್ ಬಾಲ್ ಟೆಸ್ಟ್ ಪಂದ್ಯಕ್ಕೆ ಮಳೆ ಅಡ್ಡಿಯಾಗುವ ಸಾಧ್ಯತೆ ಹೆಚ್ಚಿದೆ ಎಂದು ಕ್ರೀಡಾಂಗಣದ ಪಿಚ್ ಕ್ಯುರೇಟರ್ ಡೇಮಿಯನ್ ಹಾಗ್ ಹೇಳಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಂದ್ಯದ ಮೊದಲ ದಿನ 7 ಮಿ.ಮಿ. ಮಳೆಯಾಗುವ ಸಾಧ್ಯತೆ ಇದೆ' ಎಂದರು.

'ಮಳೆಯಾಗುವ ಸಮಯ ಬಗ್ಗೆ ನಿಖರವಾಗಿ ಗೊತ್ತಿಲ್ಲ. ಶುಕ್ರವಾರ ಮಳೆ ಬರುವ ಸಾಧ್ಯತೆ ದಟ್ಟವಾಗಿದೆ. ಆದರೆ ಶನಿವಾರ ಮಳೆ ಮುನ್ಸೂಚನೆ ಇಲ್ಲ' ಎಂದಿದ್ದಾರೆ.

ಯೋಧಾಸ್ ಗೆಲುವು: ಗಗನ್ ಮಿಂಚು



ತೆಲುಗು ಟೈಟನ್ಸ್ ರೇಡರ್‌ನನ್ನು ಹಿಡಿದೆಳೆದ ಯುಪಿ ಯೋಧಾಸ್ ರಕ್ಷಣೆ ಆಟಗಾರರು.

ಪುಣೆ: ಯುಪಿ ಯೋಧಾಸ್ ತಂಡ, ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿಯ ಪಂದ್ಯದಲ್ಲಿ ಬುಧವಾರ ತೆಲುಗು ಟೈಟನ್ಸ್ ತಂಡವನ್ನು 36–33 ಅಂಕಗಳಿಂದ ಸೋಲಿಸಿತು. ವಿಜೇತ ಯೋಧಾಸ್ ಪರ ಕನ್ನಡಿಗ ರೇಡರ್ ಗಗನ್ ಗೌಡ 15 ಅಂಕ ಗಳಿಸಿ ಪ್ರಾಬಲ್ಯ ಮೆರೆದರು.

ಬಾಲೇವಾಡಿ ಕ್ರೀಡಾ ಕಾಂಪ್ಲೆಕ್ಸ್‌ನ ಬ್ಯಾಡ್ಮಿಂಟನ್ ಹಾಲ್‌ನಲ್ಲಿ ನಡೆಯುತ್ತಿರುವ ಈ ಲೀಗ್‌ನಲ್ಲಿ ತೆಲುಗು ಟೈಟನ್ಸ್ ಪರ ವಿಜಯ್ (11) ಸೂಪರ್ ಟೆನ್ ಸಾಧಿಸಿದರು.ಯೋಧಾಸ್ ಈ ಗೆಲುವಿನಿಂದ ಐದನೇ ಸ್ಥಾನಕ್ಕೇರಿತು. ಯೋಧಾಸ್ 15 ಪಂದ್ಯಗಳಿಂದ (8 ಗೆಲುವು, 6 ಸೋಲು, 1 ಟೈ) 48 ಅಂಕ ಗಳಿಸಿದೆ. ತೆಲುಗು ಟೈಟನ್ಸ್ 16 ಪಂದ್ಯಗಳಿಂದ 9 ಗೆದ್ದು, ಏಳು ಸೋತು 49 ಅಂಕ ಸಂಗ್ರಹಿಸಿ ನಾಲ್ಕನೇ ಸ್ಥಾನದಲ್ಲಿ ಮುಂದುವರಿದಿದೆ

ಬೆಂಗಾಲ್ ವಾರಿಯರ್ಸ್ ಇನ್ನೊಂದು ಪಂದ್ಯ ದಲ್ಲಿ ಅಗ್ರಸ್ಥಾನದಲ್ಲಿರುವ ಹರಿಯಾಣ ಸ್ಟೀಲರ್ಸ್ ತಂಡವನ್ನು 39–32 ಅಂಕಗಳಿಂದ ಸೋಲಿಸಿ ಗಮನ ಸೆಳೆಯಿತು. ವಾರಿಯರ್ಸ್ ಪರ ರೇಡರ್‌ಗಳಾದ ಮಣಿಂದರ್ ಸಿಂಗ್ (11) ಮತ್ತು ಪ್ರಣಯ್ (6) ಗಮನ ಸೆಳೆದರು. ಹರಿಯಾಣ ಪರ ವಿನಯ್ (10) ಮತ್ತು ಶಿವಂ ಪತಾರೆ (8) ಹೆಚ್ಚಿನ ಅಂಕ ಗಳಿಸಿದರು. ಹರಿಯಾಣ ತಂಡಕ್ಕೆ ಇದು 16 ಪಂದ್ಯಗಳಲ್ಲಿ ನಾಲ್ಕನೇ ಸೋಲು. ಈ ತಂಡವು 62 ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಸಂಕ್ಷಿಪ್ತ ಸುದ್ದಿ

ಆರ್ಚರಿ: 8ರಂದು ಆಯ್ಕೆ ಟ್ರಯಲ್ಸ್

ಬೆಂಗಳೂರು: ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆಯು ಇದೇ 8ರಂದು ರಾಜ್ಯ ಜೂನಿಯರ್ ಆರ್ಚರ್‌ಗಳ ಆಯ್ಕೆ ಟ್ರಯಲ್ಸ್ ಏರ್ಪಡಿಸಿದೆ.

ಜನವರಿ 3ರಿಂದ 10ರವರೆಗೆ ಜೈಪುರದಲ್ಲಿ ನಡೆಯಲಿರುವ 41ನೇ ಎನ್‌ಟಿಪಿಸಿ ಸಬ್ ಜೂನಿಯರ್ ಬಾಲಕ ಮತ್ತು ಬಾಲಕಿಯರ ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಈ ತಂಡಗಳು ಸ್ಪರ್ಧಿಸಲಿವೆ. 2007ರ ಜನವರಿ 1ರ ನಂತರ ಜನಿಸಿದವರು ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸಬಹುದು. ಕಂಠೀರವ ಕ್ರೀಡಾಂಗಣದಲ್ಲಿ ಟ್ರಯಲ್ಸ್ ನಡೆಯಲಿದೆ. ವಿವರಗಳಿಗೆ ಡಿ.7ರೊಳಗೆ ಕಾರ್ಯದರ್ಶಿ ಟಿ. ಅನಂತರಾಜು (080–22275656) ಸಂಪರ್ಕಿಸಿ.

ಹ್ಯಾಂಡ್‌ಬಾಲ್: ಇರಾನ್‌ಗೆ ಜಯ

ನವದೆಹಲಿ (ಪಿಟಿಐ): ಅನುಭವಿ ಗೋಲ್‌ಕೀಪರ್ ನೀನಾ ಶಿಲ್ ವೀರೋಚಿತ ರಕ್ಷಣೆ ಪ್ರದರ್ಶಿಸಿದರೂ, ಭಾರತ ತಂಡ, 20ನೇ ಏಷ್ಯನ್ ಮಹಿಳೆಯರ ಹ್ಯಾಂಡ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಇರಾನ್ ಎದುರು ಬುಧವಾರ 30–32ರಲ್ಲಿ ಸೋಲನುಭವಿಸಿತು.

'ಬಿ' ಗುಂಪಿನ ಮೊದಲ ಪಂದ್ಯದಲ್ಲಿ ಭಾರತ ಮಂಗಳವಾರ ಹಾಂಗ್‌ಕಾಂಗ್ ಮೇಲೆ ಜಯಗಳಿಸಿತ್ತು. ಇನ್ನೊಂದು ಪಂದ್ಯದಲ್ಲಿ ಪ್ರಬಲ ಚೀನಾ 47–10 ರಿಂದ ಸಿಂಗಪುರ ತಂಡವನ್ನು ಸೋಲಿಸಿತು.

ಭಾರತ ಮೊದಲ ಬಾರಿ ಈ ಚಾಂಪಿಯನ್‌ಷಿಪ್‌ನ ಆತಿಥ್ಯ ವಹಿಸಿದ್ದು, ಇಂದಿಗಾ ಗಾಂಧಿ ಅರೇನಾದಲ್ಲಿ ಪಂದ್ಯಗಳು ನಡೆಯುತ್ತಿವೆ.

ಕ್ರಿಕೆಟ್: ವೃಂದಾ ಅರ್ಧ ಶತಕ

ಬೆಂಗಳೂರು: ವೃಂದಾ ದಿನೇಶ್ (66; 48ಎಸೆತ) ಅವರ ಅರ್ಧಶತಕದ ಬಲದಿಂದ ಕರ್ನಾಟಕ ತಂಡವು ಹರಿಯಾಣದ ಲಾಹ್ಲಿಯಲ್ಲಿ ನಡೆಯುತ್ತಿರುವ ಮಹಿಳೆಯರ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮೇಘಾಲಯ ವಿರುದ್ಧ 8 ವಿಕೆಟ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಮೇಘಾಲಯ: 46 ಓವರ್‌ಗಳಲ್ಲಿ 85 (ಮೋನಿಕಾ ಪಾಟೀಲ 23ಕ್ಕೆ2, ಅದಿತಿ ರಾಜೇಶ್ 22ಕ್ಕೆ3, ಅನನ್ಯ ಹೆಗಡೆ 24ಕ್ಕೆ2) ಕರ್ನಾಟಕ: 13.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 86 (ವೃಂದಾ ದಿನೇಶ್ ಔಟಾಗದೆ 66) ಫಲಿತಾಂಶ: ಕರ್ನಾಟಕ ತಂಡಕ್ಕೆ 8 ವಿಕೆಟ್‌ಗಳ ಜಯ.



ಅಮೂಲ್ಯ ಪೂಜಾರಿ, ಪ್ರೀತಿ ಹಳಬರ

ಸೈಕ್ಲಿಂಗ್: ಅಮೂಲ್ಯ ಪ್ರೀತಿ ಆಯ್ಕೆ

ಬೆಳಗಾವಿ: ಒಡಿಶಾದಲ್ಲಿ ಡಿಸೆಂಬರ್ 7ರಿಂದ 10ರವರೆಗೆ ನಡೆಯುವ 29ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ಗೆ ಜಿಲ್ಲೆಯ ಅಮೂಲ್ಯ ಪೂಜಾರಿ ಮತ್ತು ಪ್ರೀತಿ ಹಳಬರ ಆಯ್ಕೆ ಆಗಿದ್ದಾರೆ.

'ಇಲ್ಲಿನ ಕ್ರೀಡಾ ಹಾಸ್ಟೆಲ್‌ನಲ್ಲಿ ತರಬೇತಿ ಪಡೆಯುತ್ತಿರುವ ಅಮೂಲ್ಯ ಪೂಜಾರಿ 16ರ ವಯೋಮಿತಿ ವಿಭಾಗದ ಸ್ಪರ್ಧೆಯಲ್ಲಿ ಹಾಗೂ ಪ್ರೀತಿ ಹಳಬರ ಅವರು 18ರ ವಯೋಮಿತಿ ವಿಭಾಗದ ಸ್ಪರ್ಧೆಯಲ್ಲಿ ಕರ್ನಾಟಕ ತಂಡ ಪ್ರತಿನಿಧಿಸುವರು' ಎಂದು ಜಿಲ್ಲಾ ಸೈಕ್ಲಿಂಗ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಆರ್.ಎಚ್. ಪೂಜಾರಿ ತಿಳಿಸಿದ್ದಾರೆ.

ಚೆನ್ನೈನಲ್ಲಿ ನವೆಂಬರ್ 15ರಿಂದ 19ರವರೆಗೆ ನಡೆದ 76ನೇ ಸೀನಿಯರ್, 53ನೇ ಜೂನಿಯರ್ ಮತ್ತು 39ನೇ ಸಬ್ ಜೂನಿಯರ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಶಿಪ್‌ನ 4 ಕಿ.ಮೀ. ವಿಭಾಗದ ಸ್ಪರ್ಧೆಯಲ್ಲಿ ಪ್ರೀತಿ ಹಳಬರ ಕಂಚಿನ ಪದಕ ಗಳಿಸಿದ್ದರು.

ಟೆಕ್ವಾಂಡೊ ಟೂರ್ನಿ ಇಂದು, ನಾಳೆ

ಹಾವೇರಿ: ಇಲ್ಲಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜುಗಳ ಟೆಕ್ವಾಂಡೊ ಟೂರ್ನಿಗೆ ಚಾಲನೆ ನೀಡಲಾಯಿತು. ಡಿಸೆಂಬರ್ 5 ಮತ್ತು 6ರಂದು ಸ್ಪರ್ಧೆ ನಡೆಯಲಿವೆ.

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ವತಿಯಿಂದ ಆಯೋಜಿಸಲಾಗಿರುವ ಈ ಟೂರ್ನಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸುವರು.

ಸೆಮಿಫೈನಲ್‌ಗೆ ದಕ್ಷಿಣ ಕನ್ನಡ

ಬೆಂಗಳೂರು: ಶಶಾಂಕ್ ರೈ ಅವರ ಅಮೋಘ ಆಟದ ನೆರವಿನಿಂದ ದಕ್ಷಿಣ ಕನ್ನಡ ತಂಡವು ಇಲ್ಲಿ ನಡೆಯುತ್ತಿರುವ ರಾಜ್ಯ ಅಸೋಸಿಯೇಷನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಜಯಸಾಧಿಸಿ ಸೆಮಿಫೈನಲ್ ಪ್ರವೇಶಿಸಿತು.

ನಗರದಲ್ಲಿ ನಡೆದ ಪುರುಷರ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ದಕ್ಷಿಣ ಕನ್ನಡ ತಂಡ ಜಿಎಸ್‌ಟಿ ಅಂಡ್ ಕಸ್ಟಮ್ಸ್ ತಂಡವನ್ನು ಮಣಿಸಿತು. ಇಂದು ಸೆಮಿಫೈನಲ್ ಪಂದ್ಯಗಳು ನಡೆಯಲಿವೆ.

ಪುರುಷರ ವಿಭಾಗ: ದಕ್ಷಿಣ ಕನ್ನಡ ಜಿಲ್ಲೆ 100–88ರಿಂದ ಜಿಎಸ್‌ಟಿ ಮತ್ತು ಕಸ್ಟಮ್ಸ್ ವಿರುದ್ಧ; ಜೆಎಸ್‌ಸಿ ತಂಡ 89–83ರಿಂದ ಬ್ಯಾಂಕ್ ಆಫ್ ಬರೋಡಾ ವಿರುದ್ಧ; ಕೆಎಸ್‌ಪಿ 97–63ರಿಂದ ಬೀಗಲ್ಸ್ ವಿರುದ್ಧ; ಎಂಇಜಿ ಅಂಡ್ ಸೆಂಟರ್ 78– 65 ಡಿವೈಇಎಸ್ ಬೆಂಗಳೂರು ವಿರುದ್ಧ ಜಯಿಸಿತು.

ಮಹಿಳಾ ವಿಭಾಗ: ಮೈಸೂರು ಜಿಲ್ಲೆ ಎ 59– 45 ರಿಂದ ಸದರ್ನ್ ಬ್ಲೂಸ್ ವಿರುದ್ಧ, ಯಂಗ್ ಒರಿಯನ್ 64–54 ರಿಂದ ರಾಜ್ ಮಹಲ್ ವಿರುದ್ಧ ಗೆದ್ದುಕೊಂಡಿತು.

ಬ್ಯಾಟಿಂಗ್ 'ವೈಭವ': ಸೆಮಿಗೆ ಭಾರತ

19 ವರ್ಷದೊಳಗಿನವರ ಏಷ್ಯಾ ಕಪ್: ಗುಹಾ, ಶರ್ಮಾ ಉತ್ತಮ ಬೌಲಿಂಗ್



ಭಾರತದ ವೈಭವ್ ಸೂರ್ಯವಂಶಿ ಬ್ಯಾಟಿಂಗ್ ಎಪಿ/ಪಿಟಿಐ ಚಿತ್ರ

ಶಾರ್ಜಾ (ಪಿಟಿಐ): ಹದಿಮೂರು ವರ್ಷದ ಪೋರ ವೈಭವ್ ಸೂರ್ಯವಂಶಿ ತಮ್ಮ ಪ್ರತಿಭೆಯನ್ನು ಸಾಬೀತು ಪಡಿಸಿದರು. ಅವರ ಸಾಮರ್ಥ್ಯದ ಕುರಿತು ಅಚ್ಚರಿ, ಅನುಮಾನ ವ್ಯಕ್ತಪಡಿಸಿದವರಿಗೆ ಇಲ್ಲಿ ತಕ್ಕ ಉತ್ತರ ನೀಡಿದರು.

ಇಲ್ಲಿ ನಡೆಯುತ್ತಿರುವ 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವು ಸೆಮಿಫೈನಲ್ ಪ್ರವೇಶಿಸಲು ವೈಭವ್ (ಔಟಾಗದೆ 76; 46ಎ, 4X3, 6X6) ಅರ್ಧಶತಕದ ಕಾಣಿಕೆ ನೀಡಿದರು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 10 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದ್ದ ಯುಎಇ ತಂಡವು 44 ಓವರ್‌ಗಳಲ್ಲಿ 137 ರನ್ ಗಳಿಸಿತು. ರಯಾನ್ ಖಾನ್ (35; 48ಎ, 4X3, 6X1) ಮತ್ತು ಅಕ್ಷತ್ ರಾಯ್ (26; 52ಎ) ಅವರುತಂಡಕ್ಕೆ ಆಸರೆಯಾದರು.

ಭಾರತ ತಂಡದ ಯುದ್ಧಜೀತ್ ಗುಹಾ (15ಕ್ಕೆ3), ಚೇತನ್ ಶರ್ಮಾ (27ಕ್ಕೆ2) ಮತ್ತು ಕರ್ನಾಟಕದ ಹುಡುಗ ಹಾರ್ದಿಕ್ ರಾಜ್ (28ಕ್ಕೆ2)ಅವರು ಯುಎಇ ತಂಡದ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಿದರು.

ಗುರಿ ಬೆನ್ನಟ್ಟಿದ ಭಾರತ ತಂಡವು 16.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 143 ರನ್ ಗಳಿಸಿ ಜಯಿಸಿತು.

ವೈಭವ್ ಮತ್ತು ಆಯುಷ್ ಮಾತ್ರೆ (ಔಟಾಗದೆ 67, 51ಎ, 4X4, 6X4) ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಈಚೆಗೆ ನಡೆದಿದ್ದ ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ₹ 1.10 ಕೋಟಿ ನೀಡಿ ಬಿಹಾರ ಮೂಲದ ವೈಭವ್ ಸೂರ್ಯವಂಶಿಯನ್ನು ಖರೀದಿಸಿತ್ತು. ಐಪಿಎಲ್‌ನಲ್ಲಿ ಆಯ್ಕೆಯಾದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ ಅವರಾಗಿದ್ದಾರೆ.

ಸಂಕ್ಷಿಪ್ತ ಸ್ಕೋರು: ಯುಎಇ: 44 ಓವರ್‌ಗಳಲ್ಲಿ 137 (ಮೊಹಮ್ಮದ್ ರಯಾನ್ 35, ಯುದ್ಧಜೀತ್ ಗುಹಾ (15ಕ್ಕೆ3, ಚೇತನ್ ಶರ್ಮಾ 27ಕ್ಕೆ2, ಹಾರ್ದಿಕ್ ರಾಜ್ 28ಕ್ಕೆ2) ಭಾರತ: 16.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 143 (ವೈಭವ್ ಸೂರ್ಯವಂಶಿ ಔಟಾಗದೆ 76, ಆಯುಷ್ ಮಾತ್ರೆ ಔಟಾಗದೆ 67) ಫಲಿತಾಂಶ ಭಾರತ ತಂಡಕ್ಕೆ 10 ವಿಕೆಟ್‌ಗಳ ಜಯ.

ಭಾರತ ವನಿತೆಯರಿಗೆ ಸತ್ವಪರೀಕ್ಷೆ

ಬ್ರಿಸ್ಬೇನ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಮೊದಲ ಏಕದಿನ ಪಂದ್ಯ ಇಂದು



ಹರ್ಮನ್‌ಪ್ರೀತ್ ಕೌರ್

ಬ್ರಿಸ್ಬೇನ್ (ಪಿಟಿಐ): ಬ್ಯಾಟಿಂಗ್ ಅಸ್ಥಿರತೆಗೆ ಪರಿಹಾರ ಕಂಡುಕೊಂಡು ಮುಂದಿನ ವಿಶ್ವಕಪ್ ಕ್ರಿಕೆಟ್ ವೇಳೆಗೆ ಕ್ರಮಾಂಕ ಸಂಯೋಜನೆ ಅಂತಿಮಗೊಳಿಸುವ ಗುರಿಯೊಡನೆ ಭಾರತ ತಂಡ, ಗುರುವಾರ ಆಸ್ಟ್ರೇಲಿಯಾ ವಿರುದ್ಧ ಮಹಿಳೆಯರ ಏಕದಿನ ಸರಣಿಯ ಮೊದಲ ಪಂದ್ಯವನ್ನು ಆಡಲಿದೆ.

ನ್ಯೂಜಿಲೆಂಡ್ ವಿರುದ್ಧ ತವರಿನಲ್ಲಿ 2–1 ಗೆಲುವು ಪಡೆದ ನಂತರ ಭಾರತ ತಂಡ ಈಗ ಆಸ್ಟ್ರೇಲಿಯಾಕ್ಕೆ ಬಂದಿಳಿದಿದೆ. ಆದರೆ ಬ್ಯಾಟಿಂಗ್ ವಿಭಾಗದಲ್ಲಿ ತಂಡ ಸ್ಥಿರ ಪ್ರದರ್ಶನ ನೀಡುತ್ತಿಲ್ಲ ಎಂಬುದು ಕಳೆದ ಕೆಲವು ಪಂದ್ಯಗಳಲ್ಲಿ ವ್ಯಕ್ತವಾಗಿದೆ. ಲಯಕ್ಕೆ ಪರದಾಡುತ್ತಿರುವ ಅನುಭವಿ ಆರಂಭ ಆಟಗಾರ್ತಿ ಶಫಾಲಿ ವರ್ಮಾ ಅವರನ್ನು ತಂಡದಿಂದ ಕೈಬಿಟ್ಟಿದೆ.

ಇತಿಹಾಸ ಗಮನಿಸಿದರೆ 50 ಓವರುಗಳ ಪಂದ್ಯದಲ್ಲಿ ಆಸ್ಟ್ರೇಲಿಯಾ, ಭಾರತದ ವಿರುದ್ಧ ಅತ್ಯುತ್ತಮ ದಾಖಲೆ ಹೊಂದಿದೆ ಹೀಗಾಗಿ, ಆ ತಂಡದ ವಿರುದ್ಧ ಗೆಲುವು ಸುಲಭವಲ್ಲ ಎಂಬುದು ಹರ್ಮನ್‌ಪ್ರೀತ್ ಕೌರ್ ಬಳಗಕ್ಕೆ ಗೊತ್ತಿಲ್ಲದ ವಿಷಯವೇನಲ್ಲ. ಆಸ್ಟ್ರೇಲಿಯಾ ನೆಲದಲ್ಲಂತೂ ಭಾರತದ ಪ್ರದರ್ಶನ ಕಳಪೆಯಾಗಿದೆ.

ಕಾಂಗರೂ ನಾಡಿನಲ್ಲಿ ಆಡಿರುವ 16 ಏಕದಿನ ಪಂದ್ಯಗಳಲ್ಲಿ ಕೇವಲ ನಾಲ್ಕರಲ್ಲಷ್ಟೇ ಭಾರತ ಜಯಗಳಿಸಿದೆ. 2021ರಲ್ಲಿ ಆಸ್ಟ್ರೇಲಿಯಾ, ಪ್ರವಾಸಿ ತಂಡದ ವಿರುದ್ಧ 2–1 ರಿಂದ ಜಯಗಳಿಸಿತ್ತು.

ಸದವಕಾಶ: ಮುಂದಿನ ವರ್ಷ ತವರಿನಲ್ಲಿ ನಡೆಯುವ ವಿಶ್ವಕಪ್‌ಗೆ ಸಿದ್ಧತೆ ನಡೆಸಲು ಈ ಪ್ರವಾಸವು ನಾಯಕಿ ಹರ್ಮನ್‌ಪ್ರೀತ್ ಮತ್ತು ಕೋಚ್ ಅಮೋಲ್ ಮಜುಂದಾರ್ ಅವರಿಗೆ ಪರಿಪೂರ್ಣ ಅವಕಾಶ ಒದಗಿಸಿದೆ ಆಸ್ಟ್ರೇಲಿಯಾ ತಂಡವು, ಪೂರ್ಣಾವಧಿ ನಾಯಕಿ ಅಲಿಸಾ ಹೀಲಿ ಅವರಿಲ್ಲದೇ ಆಡಬೇಕಾಗಿದೆ. ಅಲಿಸಾ ಮೊಣಗಂಟಿನ ನೋವಿನಿಂದ ಬಳಲುತ್ತಿದ್ದಾರೆ.

ತಾಹಿಲಾ ಮೆಕ್‌ಗ್ರಾ ತಂಡವನ್ನು ಮುನ್ನಡೆಸುತ್ತಿದ್ದಾರೆ. ಮಾರ್ಚ್ ನಂತರ ಆತಿಥೇಯರು ಈ ಮಾದರಿಯಲ್ಲಿ ಆಡಿಲ್ಲ.

ಜೂನಿಯರ್ ಏಷ್ಯಾ ಕಪ್ ಹಾಕಿ: ಅರೈಜಿತ್ 4 ಗೋಲು

ಭಾರತ ತಂಡಕ್ಕೆ 5ನೇ ಪ್ರಶಸ್ತಿ



ಅರೈಜಿತ್ ಸಿಂಗ್ ಹುಂದಾಲ್

ಮಸ್ಕತ್ (ಪಿಟಿಐ): ನಾಲ್ಕು ಗೋಲು ಗಳಿಸಿದ ಅರೈಜಿತ್ ಸಿಂಗ್ ಹುಂದಾಲ್ ಅವರ ನೆರವಿನಿಂದ ಭಾರತ ತಂಡವು ಜೂನಿಯರ್ ಪುರುಷರ ಹಾಕಿ ಏಷ್ಯಾ ಕಪ್ ಗೆದ್ದುಕೊಂಡಿತು. ಭಾರತ ತಂಡಕ್ಕೆ ಇದು ಸತತ ಮೂರನೇ ಮತ್ತು ಒಟ್ಟಾರೆ ಐದನೇ ಪ್ರಶಸ್ತಿಯಾಗಿದೆ.

ಬುಧವಾರ ನಡೆದ ಫೈನಲ್‌ನಲ್ಲಿ ಭಾರತ ತಂಡವು 5–3ರಿಂದ ಪಾಕಿಸ್ತಾನ ವಿರುದ್ಧ ಜಯಿಸಿತು.

ಭಾರತವು 2004, 2008, 2015, 2023 ಹಾಗೂ ಈ ವರ್ಷ ಪ್ರಶಸ್ತಿ ಗೆದ್ದಿದೆ. ಕೋವಿಡ್ ಕಾರಣದಿಂದ 2021ರಲ್ಲಿ ಟೂರ್ನಿ ನಡೆದಿರಲಿಲ್ಲ.

ಈ ಪಂದ್ಯದಲ್ಲಿ ಅರೈಜಿತ್ ಅವರು 4, 18 ಮತ್ತು 54ನೇ ನಿಮಿಷಗಳಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಲ್ಲಿ ಪರಿವರ್ತಿಸಿದರು. 47ನೇ ನಿಮಿಷದಲ್ಲಿಯೂ ಅರೈಜಿತ್ ಫೀಲ್ಡ್ ಗೋಲು ಹೊಡೆದರು.

ದಿಲ್ರಾಜ್ ಸಿಂಗ್ (19ನೇ ನಿಮಿಷ) ಗೋಲು ಹೊಡೆದರು.

ಪಾಕಿಸ್ತಾನದ ಸೂಫಿಯಾನ್ ಖಾನ್ (30ನಿ, 39ನಿ) ಎರಡು ಗೋಲು ಗಳಿಸಿದರು. ಅವರು ಎರಡು ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ಹೊಡೆದರು. ಹನಾನ್ ಶಾಹೀದ್ ಅವರು ಮೂರನೇ ನಿಮಿಷದಲ್ಲಿ ಒಂದು ಗೋಲು ದಾಖಲಿಸಿದರು.

ಪಂದ್ಯದಲ್ಲಿ ಪಾಕ್ ತಂಡವು ಮೊದಲ ಗೋಲು ಹೊಡೆದು ಖಾತೆ ತೆರೆಯಿತು. ಅದರ ನಂತರ ಅರೈಜಿತ್ ತಮ್ಮ ಕೈಚಳಕ ಮೆರೆದರು. ಅವರ ಚಾಕಚಕ್ಯತೆಯ ಆಟದ ಮುಂದೆ ಎದುರಾಳಿಗಳು ಮಂಕಾದರು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಜಪಾನ್ ತಂಡವು 2–1ರಿಂದ ಮಲೇಷ್ಯಾ ವಿರುದ್ಧ ಜಯಿಸಿತು.

ಅಂತರ ವಿ.ವಿ. ಮಹಿಳಾ ಟೆನಿಸ್ ಟೂರ್ನಿ 7ರಿಂದ

ಉಡುಪಿ: ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್‌ನಲ್ಲಿ (ಮಾಹೆ) ಇದೇ 7ರಿಂದ 10ರ ವರೆಗೆ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳಾ ಟೆನಿಸ್ ಟೂರ್ನಿ ಹಾಗೂ ಡಿ. 13ರಿಂದ 16ರ ವರೆಗೆ ಅಖಿಲ ಭಾರತ ಅಂತರ ವಿ.ವಿ. ಮಹಿಳಾ ಟೆನಿಸ್ ಟೂರ್ನಿ ಹಮ್ಮಿಕೊಳ್ಳಲಾಗಿದೆ ಎಂದು ಮಾಹೆಯ ಸಹ ಕುಲಾಧಿಪತಿ ಡಾ.ಎಚ್.ಎಸ್. ಬಲ್ಲಾಳ್ ಬುಧವಾರ ತಿಳಿಸಿದರು.

ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳಾ ಟೆನಿಸ್ ಟೂರ್ನಿಯಲ್ಲಿ 38 ತಂಡಗಳು ಸ್ಪರ್ಧಿಸಿದರೆ, ಅಖಿಲ ಭಾರತ ಅಂತರ ವಿ.ವಿ. ಮಹಿಳಾ ಟೆನಿಸ್ ಟೂರ್ನಿಯಲ್ಲಿ ದೇಶದ ನಾಲ್ಕು ವಲಯಗಳಿಂದ ಒಟ್ಟು 16 ತಂಡಗಳು ಪಾಲ್ಗೊಳ್ಳಲಿವೆ ಎಂದು ಹೇಳಿದರು.

ಗೋವಾದ ಚರ್ಚಿಲ್ ಬ್ರದರ್ಸ್‌ಗೆ ಮಣಿದ ಬೆಂಗಳೂರು

ಬೆಂಗಳೂರು (ಪಿಟಿಐ): ಗೋವಾದ ಚರ್ಚಿಲ್ ಬ್ರದರ್ಸ್ ತಂಡ, ಬುಧವಾರ ನಡೆದ ಐ ಲೀಗ್ ಪಂದ್ಯದಲ್ಲಿ 3–1 ಗೋಲುಗಳಿಂದ ಎಸ್‌ಸಿ ಬೆಂಗಳೂರು ತಂಡವನ್ನು 3–1 ಗೋಲುಗಳಿಂದ ಸೋಲಿಸಿತು.

ಇದು ಚರ್ಚಿಲ್ ಬ್ರದರ್ಸ್ ತಂಡಕ್ಕೆ ಋತುವಿನ ಮೊದಲ ಜಯ. ಆ ತಂಡ ಮೂರು ಪಂದ್ಯಗಳಿಂದ ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿದೆ.

ಬೆಂಗಳೂರು ತಂಡ ಆಡಿದ ಎಲ್ಲ ಪಂದ್ಯಗಳಲ್ಲಿ ಸೋಲನುಭವಿಸಿ ತಳದಲ್ಲಿದೆ.

ಐ ಲೀಗ್‌ಗೆ ಬಡ್ತಿ ಪಡೆದಿದ್ದ ಬೆಂಗಳೂರು ತಂಡಕ್ಕೆ ಸ್ಪೇನ್‌ನ ಜೋರ್ಡನ್ ಲಮೆಲಾ (12ನೇ ನಿಮಿಷ) ಅವರು ಮುನ್ನಡೆ ಒದಗಿಸಿದ್ದರು. ಆದರೆ ಗೋವಾದ ತಂಡ ಪುಟಿದೆದ್ದಿತು. 25ನೇ ಇಮಿಷ ಕೊಲಂಬಿಯಾದ ಸೆಬಾಸ್ಟಿಯನ್ ಗುಟಿರೆಝ್ ಸ್ಕೋರ್ ಸಮ ಮಾಡಿದರು. 38ನೇ ನಿಮಿಷ ಸೆನೆಗಲ್‌ನ ಮಿಡ್‌ಫೀಲ್ಡರ್ ಪೇಪ್ ಅಲಸಾನೆ ಗಾಸ್ಸಮಾ ಮುನ್ನಡೆ ಒದಗಿಸಿದರು. 81ನೇ ನಿಮಿಷ ವೇಡ್ ಲೇಕೆ ಅವರು 'ರೆಡ್ ಮಷೀನ್ಸ್' ಗೆಲುವಿನ ಅಂತರ ಹೆಚ್ಚಿಸಿದರು.

ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್ಸ್ ಎಂಟನೇ ಪಂದ್ಯ

ಮುಂದುವರಿದ ಡ್ರಾ; 4–4 ಸಮಬಲ



ಭಾರತದ ಗುಕೇಶ್ ವಿರುದ್ಧ ಬುಧವಾರ ನಡೆದ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನ ಎಂಟನೇ ಪಂದ್ಯದ ವೇಳೆ ನಡೆಯೊಂದನ್ನು ಇರಿಸಲು ಚೀನಾದ ಡಿಂಗ್ ಲಿರೆನ್ ಸಜ್ಜಾದರು.

ಸಿಂಗಪುರ (ಎಎಫ್‌ಪಿ): ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ಮತ್ತು ಹದಿಹರೆಯದ ಚಾಲೆಂಜರ್ ಗುಕೇಶ್ ದೊಮ್ಮರಾಜು ನಡುವಣ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನ ಎಂಟನೇ ಪಂದ್ಯ ಕೂಡ ಬುಧವಾರ 'ಡ್ರಾ' ಆಯಿತು. ಇದು ಫೈನಲ್‌ನಲ್ಲಿ ಸತತ ಐದನೇ ಡ್ರಾ ಆಗಿದೆ.

ಮೊತ್ತಮೊದಲ ಸಲ ಏಷ್ಯಾದ ಇಬ್ಬರು ಆಟಗಾರರ ನಡುವಣ ಫೈನಲ್ ನಡೆಯುತ್ತಿದ್ದು ಈಗ ಸ್ಕೋರ್ 4–4ರಲ್ಲಿ ಸಮಬಲವಾಗಿದೆ. ಇನ್ನೂ ಆರು ಪಂದ್ಯಗಳು ಉಳಿದಿವೆ. ಮೊದಲು 7.5 ಪಾಯಿಂಟ್ಸ್ ತಲುಪುವ ಆಟಗಾರ ಚಾಂಪಿಯನ್ ಆಗಲಿದ್ದಾರೆ. ಒಂದು ವೇಳೆ ಸ್ಕೋರ್ 7–7 ಸಮಬಲ ಆದಲ್ಲಿ ಆಗ ಚಾಂಪಿಯನ್ ಆಟಗಾರನನ್ನು ನಿರ್ಧರಿಸಲು ಟೈಬ್ರೇಕ್ ಗೇಮ್ (ಅಲ್ಪಾವಧಿಯ ಆಟ) ಆಡಿಸಲಾಗುತ್ತದೆ.

ಫೈನಲ್ ₹21 ಕೋಟಿ ಬಹುಮಾನ ಹಣ ಹೊಂದಿದೆ.

ಇದುವರೆಗಿನ ಎಂಟು ಪಂದ್ಯಗಳಲ್ಲಿ ಲಿರೆನ್ ಮೊದಲ ಪಂದ್ಯ ಗೆದ್ದರೆ, ಗುಕೇಶ್ ಮೂರನೇ ಪಂದ್ಯ ಜಯಿಸಿದ್ದಾರೆ. ಉಳಿದ ಆರು (2, 4, 5, 6, 7 ಮತ್ತು ಎಂಟನೇ ಪಂದ್ಯಗಳು) ಡ್ರಾ ಆಗಿವೆ.

ಗುಕೇಶ್ ಎಂಟನೇ ಪಂದ್ಯದಲ್ಲಿ ಕಪ್ಪು ಕಾಯಿಗಳಲ್ಲಿ ಆಡಿದರು. ಪಂದ್ಯ 51 ನಡೆಗಳನ್ನು ಕಂಡ ನಂತರ ಇಬ್ಬರೂ 'ಡ್ರಾ' ಕರಾರಿಗೆ ಸಹಿಹಾಕಿದರು. 32 ವರ್ಷ ವಯಸ್ಸಿನ ಲಿರೆನ್ 41ನೇ ನಡೆಯಲ್ಲಿ ಡ್ರಾಕ್ಕೆ ಆಸಕ್ತಿ ತೋರಿದ್ದರು. ನಡೆಗಳ ಪುನರಾವರ್ತನೆಯಿಂದ ಪಂದ್ಯ ಡ್ರಾ ಆಗುವಂತೆ ಕಂಡಿತ್ತು. ಗುಕೇಶ್ ಮೂರನೇ ಯತ್ನದಲ್ಲಿ ಬೇರೊಂದು ನಡೆ ಇರಿಸುವ ಮೂಲಕ ಆ ಕೊಡುಗೆ ಒಪ್ಪದೇ ಆಟ ಮುಂದುವರಿಸಿದರು. ಆದರೆ ಹತ್ತು ನಡೆಗಳ ನಂತರ ನಿರ್ಣಾಯಕ ಫಲಿತಾಂಶದ ಸಾಧ್ಯತೆ ಕರಗಿ ಇಬ್ಬರೂ ಪಾಯಿಂಟ್ ಹಂಚಿಕೊಂಡರು.

'ನನ್ನ ಸ್ಥಿತಿ ಉತ್ತಮವಾಗಿಲ್ಲದಿದ್ದರೆ ನಾನು ಮೊದಲೇ ಡ್ರಾಕ್ಕೆ ಒಪ್ಪುತ್ತಿದ್ದೆ. ಆದರೆ ಈ ಮಧ್ಯೆ ಒಂದು ಸಲ ಎದುರಾಳಿಯ ಪ್ರಬಲ ಪಡೆ ತೆಗೆದುಹಾಕುವ ಅವಕಾಶ ಕಳೆದುಕೊಂಡೆ. ಆ ಪರಿಸ್ಥಿತಿಯಲ್ಲಿ ತುಂಬಾ ಲೆಕ್ಕಾಚಾರ ಹಾಕಬೇಕಾಗಿತ್ತು. ಅದು ಕೈಗೂಡಲಿಲ್ಲ' ಎಂದು ಗುಕೇಶ್ ಪಂದ್ಯದ ನಂತರ ವಿಶ್ಲೇಷಿಸಿದರು.

'ಎದುರಾಳಿಯ (ಲಿರೆನ್) ರಾಜನ ಸುತ್ತ ರಕ್ಷಣೆಯಿರಲಿಲ್ಲ. ಜೊತೆಗೆ ನನ್ನ 'ಬಿ3' (ಚೌಕದಲ್ಲಿದ್ದ) ಕಾಲಾಳು ಸುಸ್ಥಿತಿಯಲ್ಲಿತ್ತು. ಹೀಗಾಗಿ ಅವಕಾಶ ನೋಡಲು ನಾನು ಆಟ ಮುಂದುವರಿಸಿದೆ. ಆದರೆ ಪಂದ್ಯ ನಾನು ಅಂದುಕೊಂಡ ರೀತಿ ಮುಂದುವರಿಯಲಿಲ್ಲ' ಎಂದು ಹೇಳಿದರು.

'ಇಂದಿನ ಆಟದಲ್ಲಿ ಗೆಲ್ಲುವ ಅವಕಾಶವಿತ್ತು ಎಂದು ಯಾವ ಹಂತದಲ್ಲೂ ನನಗೆ ಅನಿಸಿರಲಿಲ್ಲ' ಎಂದು ಚೀನಾದ ಆಟಗಾರ ಲಿರೆನ್ ಪ್ರತಿಕ್ರಿಯಿಸಿದರು.

ಪಂದ್ಯದ ಕೊನೆಯಲ್ಲಿ ಇಬ್ಬರ ಬಳಿ ವಿರುದ್ಧ ವರ್ಣಗಳ ಬಿಷಪ್, ಗುಕೇಶ್ ಬಳಿ ಮೂರು ಕಾಲಾಳುಗಳು, ಲಿರೆನ್ ಬಳಿ ನಾಲ್ಕು ಕಾಲಾಳುಗಳು ಇದ್ದವು. ಗುಕೇಶ್ ಮುಂದಿನ (ಒಂಬತ್ತನೇ) ಪಂದ್ಯವನ್ನು ಬಿಳಿ ಕಾಯಿಗಳಲ್ಲಿ ಆಡಲಿದ್ದಾರೆ.